ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಆಗಸ್ಟ್, ೨೦೧೮ (ವಾರ್ಷಿಕ ವಿಶೇಷ ಸಂಚಿಕೆ)

ನಮ್ಮ ಕಾಲದ ಧರ್ಮ ಸಂಕಟಗಳು
ಗಾಂಧಿ ಮತ್ತು ಭಗವದ್ಗೀತೆಯ ರಾಜಕಾರಣ
ಬಹುತ್ವ ಭಾರತ : ಒಂದು ವಿವೇಚನೆ
ಸಮುದಾಯಗಳು ಉಳಿದರೆ ಮಾತ್ರ ಭಾಷೆಗಳು ಉಳಿದಾವು!

ಗಣೇಶ್ ಎನ್. ದೇವಿ
ಸಂಜಯ್ ಪಲ್ಶೀಕರ್
ಲಕ್ಷ್ಮೀಶ ತೋಳ್ಪಾಡಿ
ವೈದೇಹಿ
ಹನೂರು ಕೃಷ್ಣಮೂರ್ತಿ
ಎಚ್.ಎಸ್. ಶಿವಪ್ರಕಾಶ
ಜಯಂತ ಕಾಯ್ಕಿಣಿ
ಕೆ ಸತ್ಯನಾರಾಯಣ
ಜಿ.ಪಿ. ಬಸವರಾಜು
ಎಂ.ಆರ್. ಕಮಲ
ಸತೀಶ ಕುಲಕರ್ಣಿ
ರಾಜೇಂದ್ರ ಚೆನ್ನಿ
ಅರವಿಂದ ಮಾಲಗತ್ತಿ
ಸವಿತಾ ನಾಗಭೂಷಣ
ಕೆ.ವಿ. ಅಕ್ಷರ
ವಿವೇಕ ಶಾನಭಾಗ
ವಿನಯಾ ಒಕ್ಕುಂದ
ತಾರಿಣಿ ಶುಭದಾಯಿನಿ
ದು. ಸರಸ್ವತಿ
ಎಸ್. ಸಿರಾಜ್ ಅಹಮದ್
ಮಲ್ಲಿಕಾರ್ಜುನ ಮೇಟಿ
ವೆಂಕಟೇಶ ಮಾಚಕನೂರ
ವಿಜಯೇಂದ್ರ ಪಾಟೀಲ
ಗೀತಾ ವಸಂತ
ಸಬಿತಾ ಬನ್ನಾಡಿ
ಹೊನ್ನಾಳಿ ಚಂದ್ರಶೇಖರ್
ಬಿ.ವಿ. ಸುರೇಂದ್ರ
ರೂಪ ಹಾಸನ
ಎಂ. ರಾಜು
ಟಿ.ಎಲ್ ರೇಖಾಂಬ
ಚರಿತಾ
ಸಂಘಮಿತ್ರೆ





ಬೆಲೆ: ರೂ.೭೫/-















ಪುಸ್ತಕ ಪ್ರಕಾಶನ

91, 9ನೇ ಮುಖ್ಯ ರಸ್ತೆ
ಸರಸ್ವತಿಪುರಂ,
ಮೈಸೂರು – 570 009
ಫೋನ್: 0821-2545 774

ಅಂಚೆ ಮೂಲಕ ತರಿಸಿಕೊಳ್ಳುವವರಿಗೆ:
ಪುಸ್ತಕ ಪ್ರಕಾಶನ
ಬುಕ್‌ಪೋಸ್ಟ್ ಸರ್ವೀಸ್, ಪಿ.ಬಿ.ನಂ.58
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ-577 132
ಫೋನ್: 08263-228353,240202,
ಮೊಬೈಲ್: 94482 03730
e-mail: raghu202@bsnl.in

ಪುಸ್ತಕ ಬೆಲೆ ಪಟ್ಟಿ – 2018

ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ:

ಕಿರಗೂರಿನ ಗಯ್ಯಾಳಿಗಳು 90.00
ಕರ್ವಾಲೊ 105.00
ಚಿದಂಬರ ರಹಸ್ಯ ...165.00
ಸಹಜ ಕೃಷಿ 60.00
ಪರಿಸರದ ಕತೆ 105.00
ಮಿಸ್ಸಿಂಗ್ ಲಿಂಕ್ 87.00
ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್ ...114.00
ಜುಗಾರಿ ಕ್ರಾಸ್ ...165.00
ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು 63.00
ಫ್ಲೈಯಿಂಗ್ ಸಾಸರ್ಸ್ (1) 75.00
ಫ್ಲೈಯಿಂಗ್ ಸಾಸರ್ಸ್ (2) 81.00
ಕಾಡಿನ ಕತೆಗಳು (1) 72.00
ಕಾಡಿನ ಕತೆಗಳು (2) 72.00
ಕಾಡಿನ ಕತೆಗಳು (3) 75.00
ಕಾಡಿನ ಕತೆಗಳು (4) 75.00
ರುದ್ರಪ್ರಯಾಗದ ಭಯಾನಕ ನರಭಕ್ಷಕ 105.00
ಕನ್ನಡನಾಡಿನ ಹಕ್ಕಿಗಳು(1)–ಮಿಂಚುಳ್ಳಿ 81.00
ಕನ್ನಡನಾಡಿನ ಹಕ್ಕಿಗಳು(2)– 81.00
ಹೆಜ್ಜೆ ಮೂಡದ ಹಾದಿ 90.00
ಹಕ್ಕಿ – ಪುಕ್ಕ ...369.00
ಅಣ್ಣನ ನೆನಪುಗಳು ...180.00
ಪುಲಿಯೂರಿನ ಸರಹದ್ದು 105.00
ಅಬಚೂರಿನ ಪೋಸ್ಟಾಫೀಸು 90.00
ಮಿಲನಿಯಮ್(1) – ಹುಡುಕಾಟ 81.00
ಮಿಲನಿಯಮ್(2) – ಜೀವನ ಸಂಗ್ರಾಮ 72.00
ಮಿಲನಿಯಮ್(3) – ಪೆಸಿಫಿಕ್ ದ್ವೀಪಗಳು 78.00
ಮಿಲನಿಯಮ್(4) – ಚಂದ್ರನ ಚೂರು 81.00
ಮಿಲನಿಯಮ್(5) – ನೆರೆಹೊರೆಯ ಗೆಳೆಯರು 81.00
ಮಿಲನಿಯಮ್(6) – ಮಹಾಯುದ್ಧ(1) 87.00
ಮಿಲನಿಯಮ್(7) – ಮಹಾಯುದ್ಧ(2) 87.00
ಮಿಲನಿಯಮ್(8) – ಮಹಾಯುದ್ಧ(3) 81.00
ಮಿಲನಿಯಮ್(9) – ದೇಶ ವಿದೇಶ(1) 81.00
ಮಿಲನಿಯಮ್(10) – ದೇಶ ವಿದೇಶ(2) 81.00
ಮಿಲನಿಯಮ್(11) – ದೇಶ ವಿದೇಶ(3) 81.00
ಮಿಲನಿಯಮ್(12) – ದೇಶ ವಿದೇಶ(4) 81.00
ಮಿಲನಿಯಮ್(13) – ವಿಸ್ಮಯ ವಿಶ್ವ(1) 72.00
ಮಿಲನಿಯಮ್(14) – ಮಹಾ ಪಲಾಯನ 87.00
ಮಿಲನಿಯಮ್(15) – ವಿಸ್ಮಯ ವಿಶ್ವ(2) 72.00
ಮಿಲನಿಯಮ್(16) – ಅಡ್ವೆಂಚರ್ 72.00
ಮಾಯಾಲೋಕ–1 ....216.00
The Stories of my environment 144.00
ಪಾಕ ಕ್ರಾಂತಿ ಮತ್ತು ಇತರ ಕತೆಗಳು 72.00
ವ್ಯಕ್ತಿ ವಿಶಿಷ್ಟ ಸಿದ್ಧಾಂತ ಮತ್ತು ಯಮಳ ಪ್ರಶ್ನೆ 60.00

ಬೃಹನ್ನಳೆ ಸೋಮುವಿನ ಸ್ವಗತ ಲಹರಿ ಮತ್ತು ಇತರ ಕವನಗಳು 60.00
ವಿಮರ್ಶೆಯ ವಿಮರ್ಶೆ 162.00
ಮಾಯೆಯ ಮುಖಗಳು(ಚಿತ್ರ ಲೇಖನ) 600.00
ಹೊಸ ವಿಚಾರಗಳು 450.00
ಕಾಡು ಮತ್ತು ಕ್ರೌರ್ಯ ಬರಲಿದೆ
ಹಕ್ಕಿಗಳ ಗ್ರೀಟಿಂಗ್ ಕಾರ್ಡ್ (6 ಬಗೆಯವು)
ಒಂದು ಕಾರ್ಡಿನ ಬೆಲೆ 15.00

ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಶ್ರೀ ಪ್ರದೀಪ ಕೆಂಜಿಗೆ:

ವಿಸ್ಮಯ(1), (2), (3) ಪ್ರತಿಯೊಂದು 78.00
ಪ್ಯಾಪಿಲಾನ್(1),(2) ಪ್ರತಿಯೊಂದು 147.00

ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಡಾ. ವಿ.ವಿ. ಬೆಳವಾಡಿ

ನಡೆಯುವ ಕಡ್ಡಿ! ಹಾರುವ ಎಲೆ! 63.00

ಶ್ರೀ ಪ್ರದೀಪ ಕೆಂಜಿಗೆ: ಬರ್ಮುಡಾ ಟ್ರ್ಯಾಂಗಲ್ 72.00
ಅದ್ಭುತ ಯಾನ 108.00
ಹೆಬ್ಬಾವಿನೊಡನೆ ಹೋರಾಟ 120.00

ಶ್ರೀ ಎಂ. ಶಿವಕುಮಾರ್: ಸೈಕಲ್‌ಪಾಲ 40.00
ಕಂಪ್ಯೂಟರ್ ಕಲಿಯಿರಿ 147.00
ಗಡಿಯಾರ ವಿಕಾಸದ ಹಾದಿಯಲ್ಲಿ 66.00

ವಿದ್ವಾನ್ ಶ್ರೀ ಕೋಳಂಬೆ ಪುಟ್ಟಣ್ಣ ಗೌಡರು

ಅಚ್ಚಗನ್ನಡ ನುಡಿಕೋಶ 360.00

ಶ್ರೀ ನರೇಂದ್ರ ರೈ ದೇರ್ಲ: ಕಾಣೆಯಾದ ಕೃಷಿ 51.00

ಶ್ರೀ ಕೃಪಾಕರ – ಸೇನಾನಿ

ಸೆರೆಯಲ್ಲಿ ಕಳೆದ ಹದಿನಾಲ್ಕು ದಿನಗಳು 93.00

ಶ್ರೀ ಕೃಷ್ಣ ಆಲನಹಳ್ಳಿ: ಗೋಡೆ 66.00

ಡಾ. ಎಸ್.ಎಂ.ವೃಷಭೇಂದ್ರ ಸ್ವಾಮಿ:

ತರಗತಿಗಳಲ್ಲಿ ಕುವೆಂಪು 198.00

ಶ್ರೀ ದೇವನೂರು ಮಹಾದೇವ:

ಕುಸುಮಬಾಲೆ 60.00
ದ್ಯಾವನೂರು ಹಾಗೂ ಒಡಲಾಳ 96.00

ಶ್ರೀಮತಿ ತಾರಿಣಿ ಚಿದಾನಂದ:

ಮಗಳು ಕಂಡ ಕುವೆಂಪು 330.00

ಶ್ರೀಮತಿ ಪದ್ಮಾ ಶ್ರೀರಾಮ:

ಗಿಡಗಂಟೆಯ ಕೊರಳು 78.00

ಡಾ. ಕೆ.ಚಿದಾನಂದ ಗೌಡ:

ಬದುಕು.. ಬೆಳಕು... ಚುಟುಕು....! ಭಾಗ1 ....89.00
ಬದುಕು.. ಬೆಳಕು... ಚುಟುಕು....! ಭಾಗ2 ....90.00

ಶ್ರೀಮತಿ ರಾಜೇಶ್ವರಿ ತೇಜಸ್ವಿ:

ನನ್ನ ತೇಜಸ್ವಿ 369.00

*ಹೊಸ ಆವೃತ್ತಿ(Edition) ಬಿಡುಗಡೆಗೊಂಡಾಗ್ಯೂ ಮುಖಪುಟ ಬೆಲೆಯಲ್ಲಿ ವ್ಯತ್ಯಾಸವಿರುವುದು.

ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಆಗಸ್ಟ್, ೨೦೧೮ (ವಾರ್ಷಿಕ ವಿಶೇಷಾಂಕ) ಸಂಪಾದಕ :ಡಿ.ಎಸ್.ನಾಗಭೂಷಣ

ಸಂಪುಟ: ೭ ಸಂಚಿಕೆ: ೭

ಬೆಲೆ (ವಿಶೇಷಾಂಕ): ರೂ. ೭೫/- ಪುಟ: ೭೪

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,



ನಮ್ಮ ಪತ್ರಿಕೆಯ ಏಳನೇ ವರ್ಷದ ಏಳನೇ ಸಂಚಿಕೆಯಿದು. ನಾವು ಓದುಗರಿಗೆ ನೀಡುತ್ತಿರುವ ಆರನೇ ವಿಶೇಷಾಂಕ. ಕಳೆದ ವರ್ಷ ಕೆಲವು ಅನಿವಾರ್ಯ ಕಾರಣಗಳಿಂದಾಗಿ ಪತ್ರಿಕೆ ಆರು ತಿಂಗಳ ಕಾಲ ಸ್ಥಗಿತಗೊಂಡಿದ್ದುದರಿಂದಾಗಿ ಏಳನೇ ಸಂಪುಟದ ಮುಗಿತಾಯದ ವಾರ್ಷಿಕ ಸಂಚಿಕೆಯಾಗಿ ಬರಬೇಕಿದ್ದ ಇದು ಏಳನೇ ವರ್ಷದ ಮಧ್ಯದಲ್ಲಿ ಬಂದಂತಾಗಿದೆ. ಆದರೆ ವಿಶೇಷಾಂಕದ ಯಾವ ವಿಶೇಷಗಳನ್ನೂ ಕಳೆದುಕೊಳ್ಳದೆ ಇದು ಹೊರಬಂದಿದೆ ಎಂಬುದು ಓದುಗರಿಗೆ ಒಮ್ಮೆ ಈ ಸಂಚಿಕೆಯನ್ನು ತಿರುವು ಹಾಕಿದರೇ ಗೊತ್ತಾಗುತ್ತದೆ. ಸಮಕಾಲೀನವಾದ ಜ್ವಲಂತ ವಿಚಾರಗಳ ವಿಶೇಷ ಚರ್ಚೆಗಳ ಜೊತೆಗೇ ಸಮೃದ್ಧ ಸಾಹಿತ್ಯಿಕ-ಸಾಂಸ್ಕೃತಿಕ ಹೂರಣವೂ ಇದೆ.

ಪತ್ರಿಕೆಯನ್ನು ನಾವು ಸಮಾಜವಾದಿ ಮಾಸಿಕ ಎಂದು ಕರೆದಿದ್ದರೂ, ಲೋಹಿಯಾ ವಿಚಾರಗಳನ್ನು ನಮ್ಮ ಚರ್ಚೆಗಳಿಗೆ ಸ್ಫೂರ್ತಿ ಎಂದು ಗುರುತಿಸಿಕೊಂಡಿದ್ದರೂ, ಕಳೆದ ಏಳು ವರ್ಷಗಳಲ್ಲಿ ಪತ್ರಿಕೆ ಇವುಗಳ ಸ್ಥಾವರ ರೂಪಗಳಿಗೆ ಕಟ್ಟುಬೀಳದೆ ಅವನ್ನು ಕಾಲದ ಹೊಸ ಸವಾಲುಗಳ ಎದುರಿನಲ್ಲಿ ಚಲನಶೀಲಗೊಳಿಸುತ್ತಾ, ಜೀವಂತಗೊಳಿಸುತ್ತಾ ಬಂದಿರುವುದನ್ನು ಓದುಗರು ಗಮನಿಸಿರಬಹುದು. ಜಾಗತಿಕ ಸಮಾಜವಾದದ ಸ್ಫೂರ್ತಿಯಾಗಿದ್ದ ಸಮಾನತೆಗೆ ಲೋಹಿಯಾ ಗಾಂಧಿ ಪ್ರಭಾವದಲ್ಲಿ ಆರ್ಥಿಕ ಮತ್ತು ಸಾಮಾಜಿಕತೆಯ ಆವರಣಗಳನ್ನು ಮೀರಿದ 'ಅದು ಬಾಹ್ಯ ಬಂಧುತ್ವದ ಜೊತೆಗೇ ಆಂತರಿಕ ಪ್ರಶಾಂತಿಯನ್ನೂ ಸಾಧಿಸಬೇಕು' ಎಂಬ ಅರ್ಥವನ್ನೂ ನೀಡಿದ್ದರು ಎಂಬುದನ್ನು ನಾವು ಗಮನಿಸಬೇಕು. ಈ ಎರಡರಲ್ಲಿ ಮೊದಲನೆಯದು ಸಾಧ್ಯವಾದರೆ ಎರಡನೆಯದು ತಾನೇ ತಾನಾಗಿ ಸಾಧ್ಯವಾಗುವುದು ಎಂದು ಸಾಂಪ್ರದಾಯಿಕ ಸಮಾಜವಾದ ಹೇಳುವ ತರ್ಕವನ್ನು ಅವರು ಒಪ್ಪಿರಲಿಲ್ಲ. ಅವರೆಡೂ ಒಂದೇ ಆಗಿದ್ದು ಎರಡರ ಕಡೆ ಒಟ್ಟಿಗೇ ಗಮನ ನೀಡಿ ಸಾಧಿಸಬೇಕಾಗಿದೆ ಎಂದು ಅವರು ಭಾವಿಸಿದ್ದರು. ಇದಕ್ಕೆ ಕಾರಣ ಮನುಷ್ಯ ಬದಲಾವಣೆಯ ಉಪಕರಣ ಮಾತ್ರವಾಗಿರದೆ ಅದರ ಮಾಧ್ಯಮವೂ ಆಗಿದ್ದು, ಅದನ್ನು ಬಹು ಸೂಕ್ಷ್ಮವಾಗಿ ಒಟ್ಟಿಗೆ ನಿರ್ವಹಿಸಬೇಕಾಗಿದೆ ಎಂದು ಅವರು ನಂಬಿದ್ದುದು. ಹಾಗಾಗಿ ಪತ್ರಿಕೆ ಯಾವುದೇ ಸೈದ್ಧಾಂತಿಕ ಪರಿಭಾಷೆಯ ಹುದಲಲ್ಲಿ ಸಿಕ್ಕಿಕೊಳ್ಳದಂತೆ ಎಚ್ಚರ ವಹಿಸುತ್ತಾ ತನ್ನದೇ ಸೃಜನಶೀಲತೆಯ ದಾರಿಯಲ್ಲಿ ಸಮಕಾಲೀನ ಸವಾಲುಗಳನ್ನು ಎದುರುಗೊಳ್ಳುವ ಸಾಹಸ ಮಾಡುತ್ತಿದೆ. ಇದರಿಂದಾಗಿ ಅದು ಹಲವು ಕಡೆಯಿಂದ ಹಲವು ತೆರನ ಟೀಕೆಗಳನ್ನು ಎದುರಿಸುತ್ತಲೇ ಮುನ್ನಡೆದಿದೆ. ಸಮಾಜವಾದ ಎಂಬುದು ಪ್ರವಾದಿಯೊಬ್ಬನ ಕೊನೆಯ ಸತ್ಯವಲ್ಲ; ನಿಂತ ನೀರಲ್ಲ ಎಂಬುದೇ ಪತ್ರಿಕೆಯ ನಂಬಿಕೆಯಾಗಿದೆ.

ಹತ್ತೊಂಬನೇ ಶತಮಾನದ ಆಧುನಿಕತೆಯ ಹುರುಪು ಇಪ್ಪತ್ತನೇ ಶತಮಾನದಲ್ಲಿ ಪ್ರಗತಿ ಎಂಬ ಶಬ್ದಕ್ಕೆ ದಾರಿ ಮಾಡಿಕೊಟ್ಟು ಈಗ ಅಭಿವೃದ್ಧಿ ಎಂಬ ಹೆಸರಿನಲ್ಲಿ ಘನೀಕೃತವಾಗಿ ನಮ್ಮ ಕಾಲದ ಎಲ್ಲ ಸಮಸ್ಯೆಗಳಿಗೂ ಒಂದು ಸಿದ್ಧೌಷಧವಾಗಿ ಸಾರ್ವಜನಿಕ ಪರಿಭಾಷೆಯಲ್ಲಿ ನಿತ್ಯ ಚಲಾವಣೆಗೆ ಬಂದಿದೆ. ಆದರೆ ಈ ಎಲ್ಲ ಸಮಸ್ಯೆಗಳಲ್ಲಿನ ಬಹುಪಾಲು ಉದ್ಭವವಾದದ್ದು ಆ ಆಧುನಿಕತೆಯ ಹುರುಪು 'ಅಭಿವೃದ್ಧಿ' ಎಂದು ಘನೀಕೃತವಾದುದದರ ಹಾದಿಯಲ್ಲೇ ಎಂಬುದು ನಮ್ಮ ಗಮನಕ್ಕೆ ಬಾರದೇ ಹೋಗಿದೆ. ಇದೇ ಇಂದಿನ ಸಾರ್ವಜನಿಕ ಜೀವನದ ಎಲ್ಲ ವೈರುಧ್ಯಗಳಿಗೆ ಕಾರಣವಾಗಿದೆ. ಅದು ಇಂದಿನ ಅಸಾಮಾನ್ಯ ರೂಪ ತಾಳಿರುವ ಲೈಂಗಿಕ ಅತ್ಯಾಚಾರವಾಗಿರಬಹುದು, ಕೋಮು ಹಿಂಸಾಚಾರವಾಗಿರಬಹುದು, ಸಾರ್ವಜನಿಕ ಭ್ರಷ್ಟಾಚಾರವಾಗಿರಬಹುದು, ಆಡಳಿತ ಮುಟ್ಟಿರುವ ಪರಮ ಅದಕ್ಷತೆ ಇರಬಹುದು-ನಮ್ಮ ರಾಜ್ಯದಲ್ಲೇ ಈಗ ದಿನನಿತ್ಯ ಬಯಾಗುತ್ತಿರುವ ಸರ್ಕಾರಿ ನೇಮಕಾತಿ ಮತ್ತು ಬಡ್ತಿಗಳ ಹಾಗೂ ಕೋಟ್ಯಾತರ ರೂಪಾಯಿಗಳ ಮೌಲ್ಯದ ಅಕ್ರಮ ಬಿಲ್ ಪಾವತಿಗಳ ಹಗರಣಗಳನ್ನು ನೋಡಿ- ಅಥವಾ ಸರ್ಕಾರಿ ಶಾಲೆಗಳ ನಿರ್ನಾಮದ ಆತಂಕ ಇರಬಹುದು.

ಇವೆಲ್ಲವನ್ನೂ ಪ್ರತ್ಯೇಕ ಸಮಸ್ಯೆಗಳೆಂಬಂತೆ ಪ್ರತಿಯೊಂದಕ್ಕೂ ಒಂದು ಪರಿಹಾರ ಹುಡುಕುವ ಇಂದಿನ ಆಡಳಿತ ರೀತಿ ನೀತಿಗಳು ಅವನ್ನು ಮತ್ತಷ್ಟು ತೀವ್ರಗೊಳಿಸುವಲ್ಲೇ ಕೊನೆಗೊಳ್ಳುತ್ತಿರುವುದಕ್ಕೆ ಇದೇ ಕಾರಣವಾಗಿದೆ. ನಾವು ಕಳೆದ ನೂರು ವರ್ಷಗಳಲ್ಲಿ, ವಿಶೇಷವಾಗಿ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ಸಮಾಜ, ರಾಷ್ಟ್ರ ಮತ್ತು ಜಗತ್ತನ್ನು ಅಭಿವೃದ್ಧಿಯ ಹೆಸರಿನಲಿ ಹೇಗೆ ಎಷ್ಟು ಬಿಗಿದು ಕಟ್ಟಿದ್ದೇವೆಂದರೆ, ಯಾವುದೂ, ಯಾರ ಅಳತೆಗಾಗಲೀ, ನೋಟಕ್ಕಾಗಲೀ ಅರಿವಿಗಾಲೀ, ನಿರ್ವಹಣೆಗಾಗಲೀ ಸಿಗದಂತಾಗಿದೆ. ಸ್ಥಳ, ಸಮುದಾಯ, ಸಮಾಜ ಎಂಬುವೆಲ್ಲ ಅರ್ಥ ಕಳೆದುಕೊಂಡಿವೆ. ಅವುಗಳ ನಾಯಕರೂ ಇಲ್ಲವಾಗಿದ್ದಾರೆ. ಈಗ ನಮ್ಮ ಅಸ್ತಿತ್ವಕ್ಕೆ ಮೂರೇ ಕೇಂದ್ರಗಳು : ಬೆಂಗಳೂರು, ದೆಹಲಿ ಮತ್ತು ವಾಷಿಂಗಟನ್. ಎಲ್ಲರೂ ತಮ್ಮ ಅಸ್ತಿತ್ವಗಳನ್ನು ಈ ಕೇಂದ್ರಗಳಿಗೆ ಕಟಿ ಹಾಕಿ ಬದುಕು ನಡೆಸಬೇಕು. ಏಕೆಂದರೆ ಎಲ್ಲವೂ ತೀರ್ಮಾನವಾಗುವುದು ಅಲ್ಲೇ. ಜೊತೆಗೆ ಈ ಮೂರು ಪ್ರತ್ಯೇಕ ಕೇಂದ್ರಗಳೇನಲ್ಲ. ಅವೂ ಒಂದಕ್ಕೊಂದು ಬಂಧಿತವಾಗಿರುವ ಕೇಂದ್ರಗಳು.

ಹೀಗೆ ಎಲ್ಲವನ್ನೂ ಬಂಧಿಸಿರುವ ಶಕ್ತಿಯಾದರೂ ಯಾವುದು? ಅದು 'ಅಭಿವೃದ್ಧಿ'ಯ ಹುಚ್ಚು. ಮೊದಲಾದರೆ ಎಲ್ಲವನ್ನೂ ಬಂಧಿಸಿದ್ದುದು ಮಾನವತೆ ಎಂಬ ಅಂತಃಕರಣಪೂರ್ವಕವಾದ ಪರಿಕಲ್ಪನೆಯಾಗಿತ್ತು. ಆದರೆ ಈ ಅಭಿವೃದ್ಧಿ ಈ ಅಂತಃಕರಣಪೂರ್ವಕತೆಯನ್ನೆಲ್ಲ ಹಿಂಡಿ ಹಿಪ್ಪೆ ಮಾಡಿದೆ. ಮಾನವರನ್ನು ಮಾನವರನ್ನಾಗಿ ಮಾಡಿದ್ದ ಮತ್ತು ತಮ್ಮ ಅಸ್ತಿತ್ವದ ಭಾಗಗಳೇ ಆಗಿದ್ದ ಊರು, ಕೇರಿ, ಮನೆ ಮಠ, ತಂದೆ-ತಾಯಿ, ಕುಟುಂಬ, ಕೆರೆ ಕಟ್ಟೆ ಮಣ್ಣು ತೊರೆ ಮರ ಗಾಳಿಗಂಧಗಳನ್ನೆಲ್ಲ ಬಿಟ್ಟು ಅಭಿವೃದ್ಧಿ ಎಂಬ ಅಧುನಿಕ ವಿಶ್ವಾಮಿತ್ರ ಸೃಷ್ಟಿಯ ಸೆಳೆತಕ್ಕೆ ಸಿಕ್ಕು ತ್ರಿಶಂಕು ಸ್ವರ್ಗವಾಸಿಗಳಾಗಲು ಹಪಹಪಿಸುತ್ತಿದ್ದಾರೆ. ಈ ಅರ್ಥದಲ್ಲೇ ನಾನೊಮ್ಮೆ ಹಿಂದೆ ಆಧುನಿಕ ವಿದ್ಯಾಭ್ಯಾಸ ಎಂದರೆ ಮಕ್ಕಳನ್ನು ತಂದೆ ತಾಯಿಗಳಿಂದ ಮತ್ತು ತಂತಮ್ಮ ಊರುಗಳಿಂದ ದೂರ ಮಾಡುವ ಹುನ್ನಾರವೇ ಆಗಿದೆ ಎಂದು ಬರೆದಿದ್ದುದು. ಇಲ್ಲಿ 'ದೂರ' ಎಂಬುದು ಬಹುಮುಖ್ಯ ಶಬ್ದ. ಅದಕ್ಕೆ ಮರೆವು ಎಂಬ ಅರ್ಥವೂ ಇದೆ ಎಂಬುದನ್ನು ನಾವು ಗಮನಿಸಬೇಕು. ಅಭಿವೃದ್ಧಿಯ ತರ್ಕ ಇಂದು ಇದನ್ನು ಮಾನವತೆಯ ಮರೆವು ಎಂಬ ತನ್ನ ಆತ್ಯಂತಿಕ ಅರ್ಥಕ್ಕೂ ಕೊಂಡೊಯ್ದಿದೆ. ಇದೇ ಇಂದಿನ ಎಲ್ಲ ಸಮಸ್ಯೆಗಳ ಮೂಲವಾಗಿದೆ ಮತ್ತು ನನ್ನ ಈ ಮಾತುಗಳ ಆರಂಭದಲ್ಲಿ ಉಲ್ಲೇಖಿಸಿದ ಅತ್ಯಾಚಾರ, ಹಿಂಸಾಚಾರ, ಭ್ರಷ್ಟಾಚಾರ, ಅದಕ್ಷತೆ, ಮಾತೃಭಾಷೆಗಳ ನಿರ್ಲಕ್ಷ್ಯ ಇತ್ಯಾದಿಗಳನ್ನೆಲ್ಲ ಈ ಅಭಿವೃದ್ಧಿಯ ಹಾದಿಯ ಅನಿವಾರ್ಯ ಅನಿಷ್ಟಗಳು ಎಂಬಂತೆ ಸಹಿಸಿಕೊಳ್ಳುವಂತೆ, ನಿಧಾನವಾಗಿ ಕೊಸರಾಡಿ ಒಪ್ಪಿಕೊಳ್ಳುವಂತೆ ಒತ್ತಾಯಿಸುವ ಮಾಯಾಶಕ್ತಿಯೂ ಅಗಿದೆ. ಕಳ್ಳನನ್ನು ಅಟ್ಟಿಸಿಕೊಂಡು ಓಡತೊಡಗಿದ ಪೋಲೀಸು ತನ್ನ ವೇಗಕ್ಕೆ ತಾನೇ ಬಲಿಯಾಗಿ ಕಳ್ಳನನ್ನು ದಾಟಿ ಹೋದುದ್ದರ ಅರಿವೇ ಇಲ್ಲದವನಾದಂತೆ ನಾವು ಇದಾವುದರ ಪರಿವೆಯೇ ಇಲ್ಲದಂತೆ ಓಡುತ್ತಿದ್ದೇವೆ, ಬಹುಶಃ ಕುಸಿದು ಬೀಳತೊಡಗುವವರೆಗೆ. ಮೇಲೆ ಸೂಚಿಸಿದ 'ಅನಿಷ್ಟ'ಗಳೆಲ್ಲ ಈ ಕುಸಿತದ ರೋಗಲಕ್ಷಣಗಳೇ ಆಗಿವೆ ಎಂಬುದೂ ನಮ್ಮ ಗಮನಕ್ಕೆ ಬಾರದೇ ಹೋಗಿದೆ.

ಇದಕ್ಕೆ ಸೂಚಕವಾದ ಬಹು ಸೂಕ್ಷ್ಮವಾದ ಒಂದು ಉದಾಹರಣೆ ಎಂದರೆ ಇಂದು ಕರ್ನಾಟಕದಲ್ಲಿ ಒಂದೇ ಸಮನೆ ಸರ್ಕಾರಿ/ಕನ್ನಡ ಶಾಲೆಗಳು–ಈ ವರ್ಷ ಒಟ್ಟಿಗೇ ಸುಮಾರು ೨೯ ಸಾವಿರ ಶಾಲೆಗಳು ಮುಚ್ಚಿಹೋಗುತ್ತಿವೆ ಎಂಬುದು ಕನ್ನಡಿಗರಿಗೆ ಚಿಂತೆಯ ವಿಷಯವೇ ಆಗಿಲ್ಲದಿರುವುದು. ಇದನ್ನು ತಡೆಯಲು ಹಂತಾನುಹಂತವಾಗಿ ಈ ಶಾಲೆಗಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸುವ ಆಲೋಚನೆ ಸಮಸ್ಯೆಯ ತಳಕ್ಕೆ ಕೈಹಾಕಲೊಲ್ಲದ–ಕನ್ನಡ ಶಾಲೆಗಳು ಏಕೆ ಮುಚ್ಚತೊಡಗಿವೆ ಎಂಬುದರ ಅಮೂಲಾಗ್ರ ಶೋಧನೆ ಮಾಡಲೊಲ್ಲದ–ದದ್ದುಬಿದ್ದ ವ್ಯವಸ್ಥೆಯೊಂದರ ಲಕ್ಷಣವೇ ಆಗಿದೆ. ಈ ಸಮಸ್ಯೆ ಸರ್ಕಾರಕ್ಕೆ ಹಣಕಾಸಿನ ಜವಾಬ್ದಾರಿಯ ಮತ್ತು ಕ ಇಷ್ಟೇ ದದ್ದುಬಿದ್ದು ಹೋದ ಕೆಲ ಸಾಹಿತಿ–ಬುದ್ಧಿಜೀವಿಗಳ ಔಪಚಾರಿಕ ಕೂಗು ರೇಗುಗಳನ್ನು ನಿವಾರಿಸಿಕೊಳ್ಳಲು ತೋರಬೇಕಾದ ಕನ್ನಡಾಭಿಮಾನ ಪ್ರದರ್ಶನದ ಪ್ರಶ್ನೆ ಮಾತ್ರವಾಗಿದೆ. ಆದರೆ ಕನ್ನಡ ಶಾಲೆಯ ಪ್ರಶ್ನೆ ನಿಜವಾಗಿಯೂ ನಾವು ಹಿಡಿದಿರುವ 'ಅಭಿವೃದ್ಧಿ'ಯ ಹಾದಿಯ ಸರಿ ತಪ್ಪುಗಳನ್ನು ಒಳಗೊಂಡ ಬಹು ಆಳದ ಸಮಸ್ಯೆಯಾಗಿದೆ. ನಮ್ಮ ಸಂವಿಧಾನವೂ ಈ 'ಅಭಿವೃದ್ಧಿ'ಯ ಹಾದಿಯ ಒಂದು ಫಲವೇ ಆಗಿರುವುದರಿಂದ ನಮ್ಮ ನ್ಯಾಯಾಂಗವೂ ನಮ್ಮ ಸಂವಿಧಾನದ ಮಕ್ಕೀಕಾ ಮಕ್ಕಿ ಓದಿನ ಅನ್ವಯ ಮಾತೃಭಾಷಾ ಶಿಕ್ಷಣದ ಪ್ರಶ್ನೆಯನ್ನು ಮೂಲಭೂತ ಹಕ್ಕುಗಳ ಪ್ರಶ್ನೆಗೆ ತಳುಕುಹಾಕಿ ಕೈತೊಳೆದುಕೊಂಡಿದೆ. ಮಾತೃಭಾಷಾ/ಸ್ಥಳೀಯ ಭಾಷಾ ಶಿಕ್ಷಣ ಈ ದೇಶದ ಪ್ರತಿ ಮಗುವಿನ ಸಹಜ ಮೂಲಭೂತ ಹಕ್ಕು ಎಂಬ ಅರಿವೇ ಈ ಅಭಿವೃದ್ಧಿ ಪಥದಲ್ಲಿ ಸಾಗಿ ಎದುರಿಸುತ್ತಿರುವ ಅನಾಹುತಗಳ ಹೊರತಾಗಿಯೂ ನಮಗೆ ಆಗಿಲ್ಲ ಎಂದ ಮೇಲೆ ಕನ್ನಡ ಶಾಲೆಗಳು ಹೇಗೆ ಉಳಿದಾವು? ಈ ಅಭಿವೃದ್ಧಿಯ ಭಾಷೆ, ಮಾಧ್ಯಮವೇ ಇಂಗ್ಲಿಷ್ ಆಗಿರುವಾಗ ಮತ್ತು ನಮನ್ನು ನಾವು ಇಡಿಯಾಗಿ ಈ ಅಭಿವೃದ್ಧಿಗೆ ತೆತ್ತುಕೊಂಡಿರುವಾಗ ಮಕ್ಕಳನ್ನು ಇಂಗ್ಲಿಷ್ ಶಾಲೆಗಳಿಗೆ ಕಳಿಸಬೇಡಿ ಎಂದು ಹೇಳುವುದು ಅಸಂಬದ್ಧ ಮತ್ತು ಮೂರ್ಖತನದ ಮಾತು ಮಾತ್ರವಾಗುತ್ತದೆ. ಹಾಗಾಗಿಯೇ ಕಳೆದ ರಾಜ್ಯೋತ್ಸವ ಸಂದರ್ಭದಲ್ಲಿ ನನಗೆ ರಾಜ್ಯ ಸರ್ಕಾರ ನೀಡಿದ್ದ ರಾಜ್ಯೋತ್ಸವ ಪ್ರಶಸ್ತಿಯನ್ನು ಈ ವಿಷಯಕ್ಕೆ ಸಂಬಂಧಿಸಿದಂತೆಯೇ ಸ್ವೀಕರಿಸಲು ನಿರಾಕರಿಸಿದ್ದ ನಾನು ಮತ್ತು ನನ್ನ ಸಹ ಮನಸ್ಕ ಗೆಳೆಯರು ಈಗ ಮಾತಾಡಿ ಪ್ರಯೋಜನವಿಲ್ಲವೆಂದು ಸುಮ್ಮನಾಗಿದ್ದೇವೆ. ಸಂವಿಧಾನ ತಿದ್ದುಪಡಿಯ ಹೊರತಾಗಿ ಈ ಸಮಸ್ಯೆ ಬಗೆಹರಿಯದೆಂಬ ಅರಿವು ಇಲ್ಲದ ಕನ್ನಡ ಶಾಲೆಗಳ ಉಳಿವು ಹೋರಾಟ ತಾತ್ಕಾಲಿಕ ತೇಪೆ ಕೆಲಸ ಮಾತ್ರವಾದೀತು. ಆಗರೂ ಈ ಪ್ರಯತ್ನದಲ್ಲಿರುವವರಿಗೆ ಪತ್ರಿಕೆ ಶುಭ ಹಾರೈಸುತ್ತದೆ. ಏಕೆಂದರೆ, ಇಂತಹ ಪ್ರಯತ್ನಗಳು ದೂರದಲ್ಲಾದರೂ ಒಂದು ದೊಡ್ಡ ಬದಲಾವಣೆಗೆ ಕಾರಣವಾದೀತೆಂಬ ಸಣ್ಣ ಆಶೆ.

ಸಮಸ್ಯೆಯ ತಳಕ್ಕೆ ಕೈ ಹಾಕುವ, ಒಂದು ವಿಷಯದ ಅಮೂಲಾಗ್ರ ಶೋಧನೆಯ ಮಾತನ್ನಾಡಿದೆ. ಇದು ಇಂದು ನಮ್ಮಲ್ಲಿ ಕಾಣದಾಗಿರುವುದಕ್ಕೆ ಎಲ್ಲ ರಂಗಗಳಲ್ಲೂ ನಮ್ಮ ನಾಯಕತ್ವದ ಗುಣಮಟ್ಟ ಕುಸಿಯುತ್ತಿರುವುದೇ ಕಾರಣವಾಗಿದೆ. ವಿಜ್ಞಾನದಿಂದ ಹಿಡಿದು ಸಾರ್ವಜನಿಕ ಜೀವನದ ವಿಷಯಗಳವರೆಗೆ ಮೂಲ ವಿಷಯದ ಪರಿಣಿತಿ ಯಾರಿಗೂ ಬೇಕಾಗಿಲ್ಲ. ಎಲ್ಲರೂ ಅನ್ವಯ ಶಾಸ್ತ್ರಗಳ ಪರಿಣಿತರೇ. ರಾಜಕಾರಣದಲ್ಲೂ ಹಾಗೆ. ಜಗತ್ತಿನ, ನಾಡಿನ, ಇತಿಹಾಸ–ಪರಂಪರೆಗಳ ಕನಿಷ್ಠ ಮಟ್ಟದ ಜ್ಞಾನವಾಗಲೀ, ರಾಜಕಾರಣದ ಮೂಲ ತತ್ವ ಸಿದ್ಧಾಂತಗಳ ಪರಿಚಯವಾಗಲೀ ಇಲ್ಲದ ನಾಯಕರೇ ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ನಮ್ಮನ್ನು ಆಳುವಂತಾಗಿದೆ. ಹಾಗಾಗಿಯೇ ಉರುಟುರುಟಾದ ಅಭಿವೃದ್ಧಿಯ ಕೂಗೇ ನಮ್ಮ ರಾಜಕಾರಣದ ಹೆಗ್ಗುರುತಾಗಿದೆ. ಮನುಷ್ಯ ಪರಿವರ್ತನೆಯ ಉಪಕರಣ ಹೇಗೋ ಅದರ ಮಾಧ್ಯಮ ಅಥವಾ ಮಾರ್ಗವೂ ಆಗಿದ್ದಾನೆ ಎಂಬ ಅರಿವೇ ಇಲ್ಲದ ಈ ಅಭಿವೃದ್ಧಿಯ ಹರಿಕಾರರು ಮೂಲತಃ ಗುತ್ತಿಗೆದಾರರ, ಮಧ್ಯವರ್ತಿಗಳ ಸಾಮ್ರಾಜ್ಯವನ್ನಷ್ಟೇ ನಿರ್ಮಿಸುತ್ತಿದ್ದಾರೆ. ಜನರೂ ಒಂದಲ್ಲ ಒಂದು ರೂಪದಲ್ಲಿ ಈ 'ವೃತ್ತಿ'ಗಳ ಸ್ವಭಾವಗಳನ್ನು ಆವಾಹಿಸಿಕೊಳ್ಳತೊಡಗಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ರಾಜ್ಯ ಮತ್ತು ರಾಷ್ಟ್ರದಲ್ಲಿ ಎಷ್ಟು ಖಾಸಗಿ ಸೇನೆಗಳು, ಬ್ರಿಗೇಡ್‌ಗಳು, ದಳಗಳು ಸೃಷ್ಟಿಯಾಗಿವೆ ಪರಿಶೀಲಿಸಿ. ನಮ್ಮ ಬುದ್ಧಿಜೀವಿ–ಲೇಖಕರೂ ಇದಕ್ಕೆ ಹೊರತಲ್ಲ. ಸರ್ಕಾರಗಳ ಪರವಾಗಿ, ನಾಯಕರುಗಳ ಪರವಾಗಿ, ಜಾತಿ–ಮತಗಳ ಪರವಾಗಿ ಪ್ರಚಾರಕ್ಕಿಳಿದಿರುವ ಇಂತಹ ಗುಂಪುಗಳು ಇಂದು ಎಷ್ಟಿಲ್ಲ?

ನಮ್ಮ ನಾಯಕತ್ವದ ಕ್ರಿಯಾಶೀಲತೆ ಬುದ್ಧಿಪ್ರಧಾನವೂ ಆಗಿ ಬೆಳೆದಿದ್ದರೆ ಅದು ಈ ಅಭಿವೃದ್ಧಿಯ ದಾರಿಯನ್ನೊಮ್ಮೆ ಹಿಂದಕ್ಕೆ ನೋಡುತ್ತಿತ್ತು. ಈ ಅಭಿವೃದ್ಧಿ ಎಂತಹ ಮನುಷ್ಯನನ್ನು, ಸಮಾಜವನ್ನು ಸೃಷ್ಟಿಸುತ್ತಿದೆ ಎಂದು ಯೋಚಿಸುತ್ತಿತ್ತು. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಆಗಿರುವ ಕಣ್ಣು ಕುಕ್ಕುವ ಬದಲಾವಣೆಗಳು ಎಂತಹ ಮಾನವ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸಿವೆ ಎಂಬುದರ ಒಂದು ಸಾರ್ವಜನಿಕ ಚರ್ಚೆಯನ್ನು ಹುಟ್ಟು ಹಾಕುತ್ತಿತ್ತು. ಆದರೆ ರಾಷ್ಟ್ರೀಯ ಹೋರಾಟದ ಉದಾರವಾದಿ ಮೌಲ್ಯಗಳ ನಾಯಕತ್ವದ ಪರಂಪರೆಯಿಂದ ನಿಧಾನವಾಗಿ ಸಂಬಂಧ ಕಳೆದುಕೊಂಡ ರಾಜಕೀಯ ನಾಯಕತ್ವ ಮೌಲ್ಯಗಳಿಗಿಂತ ಹೆಚ್ಚಾಗಿ ಶಕ್ತಿ ಆಧಾರಿತ ರಾಜಕಾರಣವನ್ನು ಕಟ್ಟತೊಡಗಿತು. ಇದಕ್ಕೆ ಯಾವ ರಾಜಕೀಯ ನಾಯಕತ್ವವೂ ಹೊರತಾಗಿಲ್ಲ. ಇಂತಹ ನಾಯಕತ್ವ ತನ್ನ ಶಕ್ತಿ ರಾಜಕಾರಣಕ್ಕೆ ಇಂಬು ಕೊಡುವ ಅಭಿವೃದ್ಧಿಯ ವಿರುದ್ಧ ಯೋಚಿಸಲಾದರೂ ಹೇಗೆ ಸಾಧ್ಯ? ಹಾಗೆ ಯೋಚಿಸಿದ್ದರೆ ಗೊತ್ತಾಗುತ್ತಿದ್ದ ತಳ ಸತ್ಯವೆಂದರೆ, ಈ ಅಭಿವೃದ್ಧಿ ಮನುಷ್ಯನನ್ನು ನಿಧಾನವಾಗಿ ಪ್ರಕೃತಿಯಿಂದ ಕತ್ತರಿಸಿಕೊಂಡು ಬಹುದೂರ ಒಯ್ದಿದೆ ಮತ್ತು ಇದರಿಂದಾಗಿ ಪ್ರಕೃತಿಯ ಶಿಶುವೇ ಆದ ಮನುಷ್ಯ ಅದರಿಂದ ಪಡೆದ ಮುಖ್ಯವಾಗಿ ಸಹಿಸುವ, ಪೊರೆವ ಗುಣಗಳನ್ನು ಕಳೆದುಕೊಂಡು ಅಭಿವೃದ್ಧಿ ಎಂಬ ಯಂತ್ರ ವ್ಯವಸ್ಥೆಯ ಬಿಡಿ ಬಾಗವಾಗುತ್ತಿದ್ದಾನೆ ಎಂಬುದು. ಇದರ ಜೊತೆಗೇ ಗೊತ್ತಾಗುತ್ತಿದ್ದ ಇನ್ನೊಂದು ಸತ್ಯವೆಂದರೆ ಮನುಷ್ಯನನ್ನು ಇಂತಹ ಹೊರಗಿನ ಅನಾಹುತಗಳಿಂದ ಕಾಪಾಡಲು ಪ್ರಕೃತಿಯಿಂದಲೇ ಸ್ಫೂರ್ತವಾಗಿದ್ದ ಧರ್ಮ ಎಂ'ಬದೂ ಅಭಿವೃದ್ಧಿಯ ರಾಜಕೀಯ ಆಟದ ಕೈವಶವಾಗಿದೆ ಎಂಬುದು.

ಹಾಗಾಗಿಯೇ ಅಸಹನೆ, ದ್ವೇಷ, ಹಿಂಸೆಗಳು ಧರ್ಮಗಳ ಸಹಜವೆನ್ನಿಸುವಷ್ಟು ಅವಿಭಾಜ್ಯ ಭಾಗವಾಗಿ ಹೋಗಿವೆ. ರಕ್ತ ಚೆಲ್ಲಿರಿ, ಕೊಲ್ಲಿರಿ ಎಂದು ಸಾರ್ವಜನಿಕವಾಗಿ ಅರಚುವ ಮಾತ್ರವಲ್ಲ ರಕ್ತ ಚೆಲ್ಲುವ, ಕೊಲ್ಲುವ ಜನ ಮತ್ತು ಗುಂಪುಗಳನ್ನು ಜನರೇ ಆಯ್ಕೆ ಮಾಡತೊಡಗಿದ್ದಾರೆ. ಇಂತಹವರಿಗೆ ಛೀಮಾರಿ ಹಾಕುವ ನೈತಿಕ ಸ್ಥೈರ್ಯವೂ ಈ ಜನರ ಗುಂಪುಗಳ ನಾಯಕತ್ವಕ್ಕಿಲ್ಲವಾಗಿದೆ. ಏಕೆಂದರೆ ಮೂಲತಃ ಇವುಗಳ ರಾಜಕೀಯ ಸಂಘಟನೆಯ ಅಡಿಪಾಯವೇ ದ್ವೇಷ ಮತ್ತು ಪ್ರತೀಕಾರಗಳ ಮೇಲೆ ನಿಂತಿದೆ. ನಿಜವಾಗಿಯೂ ಇದು ದೇಶ ಅಪಾಯಕಾರಿ ಕವಲುದಾರಿಯಲ್ಲಿರುವ ದಿನಗಳಾಗಿವೆ.

ಇದಕ್ಕೆ ಮುಖ್ಯ ಕಾರಣ ಇಂತಹ ರಾಜಕಾರಣವನ್ನು ಅಪ್ರಸ್ತುತಗೊಳಿಸಿದ್ದ ರಾಷ್ಟ್ರೀಯ ಹೋರಾಟದ ಪರಂಪರೆಯ ರಾಜಕೀಯ ನಾಯಕತ್ವ ತತ್ವದರಿದ್ರವಾಗಿ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವುದೇ ಆಗಿದೆ. ಇನ್ನು ಇದಕ್ಕೆ ಪರ್ಯಾಯವಾಗಬಹುದಾಗಿದ್ದ ಎಡಪಂಥೀಯತೆಯು ಭಾರತೀಯ ಸಮಾಜದ ಮೂಲ ಸ್ವಭಾವಕ್ಕೆ ಒಲ್ಲದ; ಇತಿಹಾಸವನ್ನು ಸಂಘರ್ಷದ ಪರಿಭಾಷೆಯಲ್ಲೇ ನಿರೂಪಿಸುವ ಐರೋಪ್ಯ ಭೌತವಾದಿ ಲೋಕದೃಷ್ಟಿಯ ಮಾರ್ಕ್ಸ್‌ವಾದಿ ಅಡಿಪಾಯವನ್ನು ತೊರೆಯದಾಗಿದೆ. ಹಾಗಾಗಿ ಅದೂ ಈ 'ಅಭಿವೃದ್ಧಿ'ಯ ಮತ್ತು ಹಿಂಸೆಯ ಇನ್ನೊಂದು ವಾಣಿಯೇ ಆಗಿ ಸಮಸ್ಯೆಯಯನ್ನು ಇನ್ನಷ್ಟು ಜಟಿಲಗೊಳಿಸಿದೆ.

ಹಿಂಸೆ ಎನ್ನುವುದು ಅದರೆಲ್ಲ ಮೂರ್ತ ಮತ್ತು ಅಮೂರ್ತ ರೂಪಗಳೆರಡರಲ್ಲೂ ಈ 'ಅಭಿವೃದ್ಧಿ'ಯ ಒಡಲಲ್ಲಿ ಅಂತರ್ಗತವಾಗಿವೆ. ಇದನ್ನು ಗಾಂಧಿ ಅರಿತಿದ್ದರು. ಹಾಗಾಗಿಯೇ ಅವರು ತಮ್ಮ ಇಡೀ ಲೋಕದೃಷ್ಟಿಗೆ ಅಹಿಂಸೆಯನ್ನು ಕೇಂದ್ರವಾಗಿರಿಸಿಕೊಂಡಿದ್ದರು. ಆದುದರಿಂದ ಗಾಂಧಿ ಮತ್ತು ಅವರ ವೈವಿಧ್ಯಮಯ ಶಿಷ್ಯ ಬಳಗ ಕಳೆದು ಹೋಗಿದೆ. ಅವರನ್ನು ನಮ್ಮ ಮಧ್ಯೆ ಮರು'ಸಂಪಾದಿಸಿ'ಕೊಳ್ಳುವುದೇ ಬಹುಶಃ ನಮ್ಮ ಮುಂದಿರುವ ಏಕೈಕ ದಾರಿಯಾಗಿದೆ.

***

ನಮ್ಮ ಈ ವಿಶೇಷಾಂಕ ಹೀಗೆ ಸುಂದರ ಮತ್ತು ಸಮೃದ್ಧವಾಗಿ ಹೊರಬರಲು ನನ್ನ ಹಲವು ಗೆಳೆಯ–ಗೆಳತಿಯರು ಕಾರಣರಾಗಿದ್ದಾರೆ. ಮೊದಲಿಗೆ, ನಾನು ಕೇಳಿದ ಬರಹಗಳನ್ನು ಸಕಾಲದಲ್ಲಿ ಬರೆದುಕೊಟ್ಟ ಲೇಖಕ–ಲೇಖಕಿಯರಿಗೆ ಮತ್ತು ಚಿತ್ರ ಕಲಾವಿದೆಯರಿಗೂ ನನ್ನ ಕೃತಜ್ಞತೆಗಳು. ಇನ್ನು ಪ್ರೀತಿ ವಿಶ್ವಾಸಗಳಿಂದ ಜಾಹೀರಾತು ಒದಗಿಸಿದ ಮಿತ್ರರಿಗೆ ಮತ್ತು ಹಲವು ರೀತಿಗಳಲ್ಲಿ ನೆರವಾಗಿರುವ ಎಂ. ರಾಜು, ಟಿ.ಎಲ್ ರೇಖಾಂಬ, ಬಿ.ವಿ.ಸುರೇಂದ್ರ, ಜಿ.ಬಿ. ಶಿವಗಾಜು, ಎಂ.ಸಿ. ನರೇಂದ್ರ ಮತ್ತು ಎಸ್. ಸಿರಾಜ್ ಅಹಮದ್ ಅವರಿಗೆ ನನ್ನ ವಿಶೇಷ ವಂದನೆಗಳು ಸಲ್ಲುತ್ತವೆ.

–ಸಂಪಾದಕ

ಈ ಸಂಚಿಕೆ

ರಕ್ಷಾ ಪುಟ ವಿನ್ಯಾಸ : **ಚರಿತಾ ಮೈಸೂರು**

ಮುಖಪುಟ ಕಲಾಕೃತಿ : **ನಭಾ ಒಕ್ಕುಂದ**

ಪುಟ ವಿನ್ಯಾಸ ಮತ್ತು ಸಂಪಾದನೆ"

ಡಿ.ಎಸ್. ನಾಗಭೂಷಣ

ನಿಮ್ಮ ಪತ್ರ

ಪತ್ರಿಕೆಯ ಆರನೇ ವಿಶೇಷಾಂಕವನ್ನು ಹೊರತರುತ್ತಿರುವ ಈ ಸಂದರ್ಭದಲ್ಲಿ ನಮ್ಮ ಕೆಲವು ಮುಖ್ಯ ಓದುಗರಿಂದ ಪತ್ರಿಕೆ ಕುರಿತು ಅಭಿಪ್ರಾಯಗಳನ್ನು ಆಹ್ವಾನಿಸಿದೆವು. ನಮ್ಮ ಈ ಆಹ್ವಾನವನ್ನು ಮನ್ನಿಸಿ ಬರೆದ ಪತ್ರಗಳು ಇಲ್ಲಿವೆ.–ಸಂ.

ಪ್ರಿಯ ಸಂಪಾದಕರೇ,

'ನಿಜ್ಜಂ ಪೊಸತು'

ಹಲವು ವರ್ಷಗಳಿಂದ ನನ್ನ ನಿಗದಿ ಓದಿನ ಭಾಗವೇ ಆಗಿರುವ 'ಹೊಸ ಮನುಷ್ಯ 'ಎಷ್ಟು ಮುಖ್ಯ ಅನ್ನುವುದು ಅದು ಒಮ್ಮೆ ಕೆಲ ತಿಂಗಳು ಸ್ಥಗಿತಗೊಂಡಿದ್ದಾಗ ಮತ್ತು ಒಂದೆರಡು ಬಾರಿ ನನ್ನ ಕೈಗೆ ಸಿಗದಿದ್ದ ಸಂದರ್ಭಗಳಲ್ಲಿ ಮನಸ್ಸಿಗೆ ಬಂದಿದೆ. ನಾನು ಗ್ರಹಿಸಿರುವ ಹಾಗೆ ಈ ಪತ್ರಿಕೆಗೆ ಎರಡು ಆಯಾಮಗಳಿವೆ, ಎರಡೂ ಪರಸ್ಪರ ಸಂಬಂಧ ಹೊಂದಿವೆ: ಇನ್ನೂ ಕಾಣಬೇಕಾಗಿರುವ ನಿಜವಾದ ಹೊಸ ಮನುಷ್ಯನ ಸೃಷ್ಟಿಯ ಬಯಕೆ ಒಂದು ಆಯಾಮ; ಇನ್ನೊಂದು, ಈ ಕಾಲದ ಆಧ್ಯಾತ್ಮಿಕ, ರಾಜಕೀಯ ಮೌಢ್ಯಗಳ ಕಿಲುಬು ವಿಚಾರಗಳ ಕಾರಣದಿಂದ ಬದುಕಿನ ಲವಲವಿಕೆಯನ್ನು ಕಳಕೊಂಡಿರುವ ಓದುಗರನ್ನು ಹೊಸಬರನ್ನಾಗಿಸುವ ಘನವಾದ ಉದ್ದೇಶ. ಕಿಲುಬು ತೊಳೆಯಲು ವಿಮರ್ಶೆ, ನಿರ್ಭೀತ ವಿಚಾರಮಂಡನೆ, ಪ್ರಾಮಾಣಿಕ ಅಭಿವ್ಯಕ್ತಿ ಇವುಗಳಿಂದ ಮನಸ್ಸನ್ನು ಬೆಳಗಬೇಕು. ಹೊಸ ಮನುಷ್ಯರಾಗುವುದೆಂದರೆ ದಿನವೂ ಹೊಸಬರಾಗುವುದು ಎಂದು ಅರ್ಥ. ಮೋಕ್ಷ ಅಥವ ಬಿಡುಗಡೆ ಎಂದರೆ ನಮ್ಮನ್ನು ಕವಿದಿರುವ ವಿಚಾರ, ನಂಬಿಕೆ, ಭ್ರಮೆಗಳಿಂದ ಬಿಡುಗಡೆ ಎಂದರ್ಥ. ಎರಡೂ ನಿರಂತರ ಚಟುವಟಿಕೆಗಳು.

ಸದ್ಯದ ವಾಸ್ತವವನ್ನು ಮರೆತ ಆಧ್ಯಾತ್ಮ ಅನ್ನುವುದಿಲ್ಲ. 'ಹೊಸ ಮನುಷ್ಯ' ಹಾಗೆ ಆಯಾ ಹೊತ್ತಿನ ರಾಜಕೀಯ ಘಟನೆಗಳಿಗೆ, ಸಮಾಜದ ಪ್ರಮುಖರ ಇಬ್ಬಂದಿತನಕ್ಕೆ, ಕನ್ನಡ ಭಾಷೆ, ಸಂಸ್ಕೃತಿಗಳ ವಿಚಾರಕ್ಕೆ ಜೀವಂತ ಪ್ರತಿಕ್ರಿಯೆ ತೋರುತ್ತಲೇ ಬಂದಿದೆ. ಸಂಪಾದಕರ ಬರಹಗಳನ್ನು (ಅವುಗಳಲ್ಲಿ ಅನೇಕವು ಈಗ ಪುಸ್ತಕರೂಪದಲ್ಲಿ ಲಭ್ಯವಿವೆ) ಗಮನಿಸಿದರೆ ಕಳೆದ ದಶಕಗಳ ಕರ್ನಾಟಕದ, ಭಾರತದ ಬದುಕಿಗೆ ನಮ್ಮಲ್ಲಿ ಅನೇಕ ಸೂಕ್ಷ್ಮಜ್ಞರು ತೋರಬಯಸುವ; ಆದರೆ ತೋರದಿದ್ದ ಪ್ರತಿಕ್ರಿಯೆಗಳೇ, ತೀರ್ಮಾನಗಳೇ ಅಲ್ಲಿವೆ ಅನಿಸುತ್ತದೆ. ಭಾರತದ, ಕರ್ನಾಟಕದ ಹೋರಾಟಗಾರರು, ಸಮಾಜವಾದಿಗಳು, ಚಳವಳಿಗಾರರ ಪರಿಚಯ ಮತ್ತು ವಿಶ್ಲೇಷಣೆಗಳು, ಸ್ಥಳೀಯ ಚರಿತ್ರೆಯ, ಚಿಂತನೆಯ ಚರಿತ್ರೆಯ ರಚನೆಗೆ ಸಮೃದ್ಧ ಮಾಹಿತಿ ಒದಗಿಸುತ್ತವೆ. ಸಮಾಜವಾದ ಅನ್ನುವುದನ್ನು ಸೀಮಿತ ಅರ್ಥದ ರಾಜಕೀಯ ಸಂಘಟನೆಯ ನಿಲುವೆಂದು ಪರಿಗಣಿಸುವುದು 'ಹೊಸ ಮನುಷ್ಯ'ದ ವಿಷಯದಲ್ಲಿ ತಪ್ಪಾಗುತ್ತದೆ. ಇಲ್ಲಿ ಸಾಹಿತ್ಯ, ಕವಿತೆ, ಆಧ್ಯಾತ್ಮದ ಜೀವಂತ ಕಥೆಗಳು ಹೀಗೆ ಬದುಕಿನ ವಿವಿಧ ವಲಯಗಳನ್ನು ಹೊಸತು ಮಾಡುವ ಆಕಾಂಕ್ಷೆ ಕಾಣುತ್ತದೆ.

ಹೇಳಲೇಬೇಕಾದ ಇನ್ನೊಂದು ಮಾತೆಂದರೆ ಡಿಎಸ್ಎನ್ ಅವರ ಛಲ, ಪ್ರಾಮಾಣಿಕತೆ, ನಿಷ್ಠೆಗಳು ಪುಟ್ಟದಾದರೂ ಜೀವಂತವಾದ ಗೆಳೆಯರ ಗುಂಪನ್ನು ನಿರ್ಮಿಸಿದೆ, 'ಹೊಸ ಮನುಷ್ಯ'ನ ಹೊಸತನಕ್ಕೂ ಕಾರಣವಾಗಿವೆ. ಡಿಎಸ್ಎನ್ ವಿಶ್ಲೇಷಣೆಯಲ್ಲಿ ಲಾಭದ, ಪದವಿಯ, ಮನ್ನಣೆಯ ಅಪೇಕ್ಷೆಯ ಸುಳಿವೂ ಇಲ್ಲದಿರುವುದರಿಂದ ಅವರ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸುವ, ಕೆಲವೊಮ್ಮೆ ಒಪ್ಪದಿದ್ದರೂ ತಿರಸ್ಕರಿಸಲಾಗದ, ಒಮ್ಮೊಮ್ಮೆ ಆಕ್ರೋಶಗೊಂಡರೂ ಅದು ಸಮಾಜದ, ವ್ಯಕ್ತಿಗಳ ಓರೆಕೋರೆ ಕಪಟಗಳನ್ನು ಕಂಡು ಮೂಡಿದ ಸಿಟ್ಟೇ ಹೊರತು ವೈಯಕ್ತಿಕ ಕೋಪವಲ್ಲ ಅನಿಸುವಂಥ ಬರವಣಿಗೆ, ಶೈಕಿಲ್ಲಿ ರೂಪುಗೊಂಡಿವೆ.

ಪಂಪನ ಬನವಾಸಿಯ ಹಾಗೇ ಆದಿಪುರಾಣದಲ್ಲಿ ಬರುವ 'ಉತ್ತಮ ಭೋಗಭೂಮಿ'ಯೂ ಒಂದು ಆದರ್ಶ ರಾಜ್ಯ. ಅದನ್ನು ವರ್ಣಿಸುತ್ತ 'ಅಲ್ಲಿ ಅರಸನ ಅರಮನೆಯಾಗಲೀ ಜಿನಾಲಯವಾಗಲೀ ಇರಲಿಲ್ಲ' ಅನ್ನುತ್ತಾನೆ. ಅದೇ ಕಾವ್ಯದ ಇನ್ನೊಂದು ಭಾಗದಲ್ಲಿ 'ಅರಿವನ್ನು ಹೊಸತುಗೊಳಿಸುವುದು ಧರ್ಮ, ಹಾಗೆ ಆಗದಂತೆ ತಡೆಯುವುದು ಅಧರ್ಮ' ಎನ್ನುತ್ತಾನೆ. 'ಹೊಸ ಮನುಷ್ಯ' ಅರಿವನ್ನು ಹೊಸತುಗೊಳಿಸುವ ಈ ಕಾರ್ಯದಲ್ಲಿ, ಅಧಿಕಾರ ಮತ್ತು ಪ್ರಭುತ್ವವಾಗಲೀ ಮನುಷ್ಯರ ಮನಸ್ಸನ್ನು ಮುರುಟಿಸುವ ಧರ್ಮವಾಗಲೀ ಇರದಪ್ರಾಮಾಣಿಕತೆಯನ್ನೇ ನೆಚ್ಚಿ ಲೋಕವನ್ನು ನೋಡುವ ನಮ್ಮನ್ನೇ ನೋಡಿಕೊಳ್ಳುವಂತಹ ಹೊಸಮನುಷ್ಯರಾದೇವೇ ನಾವು?

–ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಮೈಸೂರು

(ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕ ಮತ್ತು ಕನ್ನಡದ ಹಿರಿಯ ಲೇಖಕ ಮತ್ತು ಚಿಂತಕರು)

'one man army'

ಇದು ಸಣ್ಣ ಪತ್ರಿಕೆಗಳಿಗೆ ಪೂರಕವಾದ ಮತ್ತು ಪ್ರೋತ್ಸಾಹದಾಯಕವಾದ ಕಾಲವಲ್ಲ. ಹೇಗೋ ಸಾಹಸಮಾಡಿ ಹೊರತರುತ್ತಿರುವ ನಿರ್ದಿಷ್ಟ ತತ್ವ ಸಿದ್ಧಾಂತಗಳಿಗೆ ಬದ್ಧವಾದ ಪತ್ರಿಕೆಗಳಿಗೆ ಸಂಪಾದಕರು ಲೇಖಕರ ಬೆನ್ನುಬಿದ್ದು ಲೇಖನಗಳನ್ನು ಬರೆಸಬೇಕಾಗಿದೆ. ಇಂತಹ ಪತ್ರಿಕೆಗಳಿಗೆ ಓದುಗರ ಸಾರ್ವತ್ರಿಕ ಬೆಂಬಲ ಯಾವತ್ತೂ ಕಡಿಮೆಯೇ. ಈ ಮಾತು ಖ್ಯಾತ ಸಮಾಜವಾದಿಗಳೂ ಸಾಹಿತ್ಯ ವಿಮರ್ಶಕರೂ ಆಗಿರುವ ಡಿಎಸ್ ನಾಗಭೂಷಣ ಅವರು ಸಂಪಾದಿಸಿ ಪ್ರಕಟಿಸುತ್ತಿರುವ 'ಹೊಸ ಮನುಷ್ಯ' ಪತ್ರಿಕೆಗೂ ಅನ್ವಯಿಸುವುದು. ಅದು ಈಗಾಗಲೇ ಒಮ್ಮೆ ಮರುಹುಟ್ಟು ಪಡೆದಿದ್ದರೂ ನಿಯತವಾಗಿ ಸಕಾಲದಲ್ಲಿ ಓದುಗರ ಕೈಸೇರುತ್ತಿದೆ. ನಾಗಭೂಷಣ ಅವರು 'one man army'ಯಂತೆ ಸಮಾಜದ ಸ್ವಾಸ್ಥ್ಯವನ್ನು ರಕ್ಷಿಸುವ ಕೆಲಸ ಮಾಡುತ್ತಿದ್ದು ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಈ ಪತ್ರಿಕೆಯು ಲೋಹಿಯಾ ಸಮಾಜವಾದಕ್ಕೆ ಬದ್ಧವಾದ ಪತ್ರಿಕೆಯಾಗಿದ್ದರೂ ಅಲ್ಲಿ ಗಾಂಧಿ ಇದ್ದಾರೆ; ಅಂಬೇಡ್ಕರ್ ಕೂಡ ಇದ್ದಾರೆ. ಸಮಾಜ ಪರಿವರ್ತನೆಯ ಧ್ಯೇಯವನ್ನು ಎದೆಯಲ್ಲಿ ಇಟ್ಟುಕೊಂಡು ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಒಳಹರಿವಿನಲ್ಲಿ ಹೊಂದಿರುವ 'ಹೊಸಮನುಷ್ಯ' ಪತ್ರಿಕೆ ಹೊಸಹೊಸ ಚರ್ಚೆಗಳಿಗೆ ವೇದಿಕೆಯಾಗಿದೆ. ಆದರೂ ಅದು ಸಮಾಜವಾದದ ತುತ್ತೂರಿಯಾಗಿಲ್ಲ. ಅಲ್ಲದೆ, ಪ್ರತಿ ವರ್ಷ ತಮ್ಮ ಅಧ್ಯಕ್ಷತೆಯ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಡಿಯಲ್ಲಿಲು ಲೋಹಿಯಾ/ಗಾಂಧಿ ವಿಚಾರಕಮ್ಮಟ ನಡೆಸುವ ಮೂಲಕ ಪತ್ರಿಕೆಗೆ ಒಂದು ವಿಸ್ತರಣೆಯನ್ನೂ ನೀಡಿದ್ದಾರೆ.

ಹೊಸ ಮನುಷ್ಯ ಪತ್ರಿಕೆಯು ಗಾತ್ರದಲ್ಲಿ ಚಿಕ್ಕದು, ನಿಜ. ಆದರೆ ಅಲ್ಲಿ ಎಷ್ಟೊಂದು ವೈವಿಧ್ಯಮಯ ಅಂಕಣಗಳಿವೆ! ಸಂಪಾದಕರ ಟಿಪ್ಪಣಿಗಳು, ಹಳೆಯ ಸಮಾಜವಾದಿಗಳ ಪರಿಚಯ, ಸಾಹಿತ್ಯ–ಸಂಸ್ಕೃತಿ–ಭಾಷೆ ಕುರಿತು ಚರ್ಚೆ, ಶಿಕ್ಷಣ, ರಾಜಕೀಯ, ಪ್ರಸ್ತುತ ವಿದ್ಯಮಾನಗಳು ಕುರಿತ ಲೇಖನಗಳು ಹೊಸ ವಿಚಾರಗಳಿಂದ ಓದುಗರ ಅರಿವನ್ನು ವಿಸ್ತರಿಸುತ್ತವೆ. ಕನ್ನಡದಲ್ಲಿ ಪ್ರಕಟಗೊಂಡ ಗಮನಾರ್ಹ ಹೊಸ ಪುಸ್ತಕಗಳ ಪರಿಚಯ/ವಿಮರ್ಶೆಯ ಅಂಕಣ ಸಾಹಿತ್ಯ ಪರಿಚಾರಿಕೆಯ ಕೆಲಸ ಮಾಡುತ್ತಿದೆ. ಮುಖ್ಯವಾಗಿ ಸಂಪಾದಕರ ಟಿಪ್ಪಣಿಗಳು ನಿಷ್ಠುರವೂ ದಾಕ್ಷಿಣ್ಯರಹಿತವೂ ಆಗಿರುತ್ತವೆ. ಸಾಮಾನ್ಯವಾಗಿ ನಮ್ಮ ಬಹುತೇಕ ವಿಮರ್ಶಕರು ಸಹಲೇಖಕರನ್ನು ಕುರಿತು ಬರೆಯುವಾಗ ಅಳುಕಿನಿಂದ ಇಲ್ಲವೇ 'ಮಾರ್ಜಿನ್' ಕೊಟ್ಟು ಬರೆಯುತ್ತಾರೆ. ಆದರೆ ನಾಗಭೂಷಣ ಅವರು ಯಾವ ಮುಲಾಜೂ ಇಲ್ಲದೆ ಬರೆಯಬಲ್ಲರು: '...ನಮ್ಮ ರಾಜ್ಯದಲ್ಲಿ ಲೇಖಕ–ಚಿಂತಕ–ಬುದ್ಧಿಜೀವಿ–ಪ್ರಗತಿಪರರೆನಿಸಿಕೊಂಡವರು ಹಿಂಡುಹಿಂಡಾಗಿ ಒಂದು ರಾಜಕೀಯ ಪಕ್ಷದ ವಕ್ತಾರರಂತೆ ಆ ಪಕ್ಷದ ಸೇವೆಯಲ್ಲಿ ತೊಡಗಿಕೊಂಡು ಜನಸಾಮಾನ್ಯರ ವ್ಯಂಗ್ಯ–ವಿಡಂಬನೆಗಳಿಗೆ ಒಳಗಾಗಿರುವುದು ಸುಳ್ಳಲ್ಲ....' ಹಾಗೆಯೇ ಕಳೆದ ಐದು ವರ್ಷಗಳಲ್ಲಿ ಅಹಿಂದ ಕಾರ್ಯಕ್ರಮಗಳನ್ನು ಕುರಿತು ವಂದಿಮಾಗಧರ ಹೊಗಳಿಕೆಯ ಮಹಾಪೂರವೇ ಹರಿಯುತ್ತಿದ್ದಾಗ ನಾಗಭೂಷಣ ಅವರು ಆ ಬಗ್ಗೆ ತೆಗೆದುಕೊಂಡ ನಿಲುವು ಸಮಾಜವಾದಿ ತತ್ವ ಕುರಿತ ಅವರು ಹೊಂದಿದ್ದ ಸ್ಪಷ್ಟತೆಗೆ ಸಾಕ್ಷಿಯಂತಿತ್ತು:/: ' ಸಿದ್ಧರಾಮಯ್ಯ ವಿವಿಧ ಭಾಗ್ಯಗಳಂತಹ ಜನಕಲ್ಯಾಣ ಕಾರ್ಯಕ್ರಮಗಳ ಜೊತೆ ಜೊತೆಗೇ ಸಂಘಟಿಸಿದ ಜಾತಿ ಸಮ್ಮೇಳನಗಳು, ಜಾತಿಗೊಬ್ಬ ಪೌರಾಣಿಕ/ಐತಿಹಾಸಿಕ ನಾಯಕನನ್ನು ಗುರುತಿಸಿ ಸಾಲು ಸಾಲಾಗಿ ಸರ್ಕಾರದ ವತಿಯಿಂದ ಆಚರಿಸತೊಡಗಿದ ಜಯಂತಿಗಳು ಮತ್ತು ಜಾತಿ ಹೆಸರಿನಲ್ಲಿ ಅಭಿವೃದ್ಧಿ ನಿಗಮಗಳ ಸ್ಥಾಪನೆ... ಯಾರಾದರೂ ಹೇಸುವ ರಾಜಕಾರಣವಾಗಿತ್ತು.'

ಹೀಗೆ ನಿಷ್ಠುರವಾಗಿ ಇದ್ದರೂ ನೊಂದವರ ಬಗ್ಗೆ ಆರ್ದ್ರವಾಗಿರುವ ಅವರ ಹೃದಯವಂತಿಕೆ ಪತ್ರಿಕೆಯ ಶಕ್ತಿ ಎಂದು ನಾನು ತಿಳಿಯುತ್ತೇನೆ. ಸ್ವಜನಪಕ್ಷಪಾತ, ಕುಟುಂಬ ರಾಜಕಾರಣ, ಕೋಮುವಾದದ ಕಡು ವಿರೋಧಿ ಇವರು. ಹಾಗೆಯೇ ಕನ್ನಡ ಶಾಲೆ ಉಳಿಸುವ ಬಗ್ಗೆ ಅವರಿಗಿರುವ ನಿಷ್ಠೆಯು ಅವರನ್ನು ರಾಜ್ಯೋತ್ಸವ ಪ್ರಶಸ್ತಿಯನ್ನು ಒಪ್ಪಿಕೊಳ್ಳದಂತೆ ತಡೆಯಿತು. ಎಲ್ಲವನ್ನೂ ವಿಮರ್ಶೆಯ ಮೂಸೆಯಲ್ಲಿ ಅದ್ದಿ ಉಜ್ಜಿ ನೋಡುವ ಇವರನ್ನು ಈಚಿನ ಕೆಲವು ಬೆಳವಣಿಗೆಗಳು– ಎಡ ಮತ್ತು ಬಲ ಪಂಥೀಯರಲ್ಲಿ ಹೆಚ್ಚುತ್ತಿರುವ ಮೂಲಭೂತವಾದವು ವಿಚಲಿತರನ್ನಾಗಿ ಮಾಡಿದೆ. ಹೀಗಾಗಿ ಕೆಲವು ಕಹಿಸತ್ಯಗಳು ಪತ್ರಿಕೆಯಲ್ಲಿ ಬೆಳಕು ಕಾಣುತ್ತಿಲ್ಲ.

ಅದೇನೇ ಇರಲಿ, ನಮ್ಮನ್ನು ಸದಾ ಎಚ್ಚರಿಸುವ ಕೆಲಸ ಮಾಡುತ್ತಿರುವ ಹೊಸ ಮನುಷ್ಯ ಪತ್ರಿಕೆ ಬಹುಕಾಲ ನಮ್ಮ ಸಂಗಾತಿಯಾಗಿರಲೆಂದು ಆಶಿಸುತ್ತೇನೆ.

–ಪ್ರೊ. ಎಂ.ಜಿ. ಚಂದ್ರಶೇಖರಯ್ಯ, ದೊಡ್ಡಬಳ್ಳಾಪುರ

(ನಿವೃತ್ತ ಕನ್ನಡ ಅಧ್ಯಾಪಕರು ಮತ್ತು ಲೇಖಕರು)

ಒಳನೋಟಗಳನ್ನು ಕಾಣಿಸುವ ಕಿಟಕಿಗಳು

ಎಲ್ಲಕ್ಕಿಂತ ಮೊದಲು, ಸಮಾಜವಾದದ ನೆಲೆಯಲ್ಲಿ ಹೊಸ ಮನುಷ್ಯರನ್ನು ಹುಟ್ಟು ಹಾಕುವ ಕೈಂಕರ್ಯದಲ್ಲಿ ನಿರತರಾಗಿರುವ ಡಿಎಸ್ಎನ್ ಅವರ ಸಾಸಕ್ಕೆ ನನ್ನ ಅಭಿನಂದನೆಗಳು. ಇಂತಹ ಕಿರುಪತ್ರಿಕೆಯನ್ನು ತರುವ ಸ್ವಾನುಭೌದ ಹಿನ್ನೆಲೆಯಲ್ಲಿ ಹೇಳುವುದಾದದರೆ, ಅವರು ನಡೆಸುತ್ತಿರುವ ಸಾಹಸ ಸ್ತುತ್ಯಾರ್ಹವೇ ಸರಿ.

ಪತ್ರಿಕೆಯ ಸಂಚಿಕೆಗಳನ್ನು ಇನ್ನೊಮ್ಮೆ ತಿರುವಿ ಹಾಕುತ್ತಿರುವಾಗ ನನ್ನನ್ನು ಸೆಳೆದದ್ದು ಡಿಎಸ್ನೆನ್ ಅವರ ಸಂಪಾದಕೀಯ ಬರಹಗಳು. ಅವು ಕೇವಲ ಮೇಲ್ಪದರದ , ಸಾಮದರ್ಭಿಕ ಟಿಪ್ಪಣಿಗಳಾಗಿರದೆ, ವಿಷಯದ ಹಿನ್ನೆಲೆಯನ್ನು ತಾರ್ಕಿಕವಾಗಿ ವಿಶ್ಲೇಷಿಸುವ, ಒಳನೋಟಗಳನ್ನು ಕಾಣಿಸುವ ಕಿಟಕಿಗಳಾಗಿವೆ. ಎಂಟನೇ ತರಗತಿಯ 'ಪದವಿ' ಪಡೆದಿರುವ ಜಿ.ಟಿ. ದೇವೇಗೌಡರಿಗೆ ಉನ್ನತ ಶಿಕ್ಷಣ ಖಾತೆ ವಹಿಸಿರುವ ಬಗ್ಗೆ ಪ್ರಸ್ತಾಪಿಸುತ್ತಾ, ಅವರು ಖಾತೆ ಬೇಡವೆನ್ನಲು ಹೇಳುವ ಕಾರಣಗಳನ್ನು ಭಾಷೆಯ ಮೊನಚಿನಿಂದ ತಿವಿಯುವ ರೀತಿ ಮನಸ್ಸಿನಲ್ಲಿ ಹುರಿಗಟ್ಟುತ್ತದೆ. ಹಾಗೆಯೇ ಸಿದ್ಧರಾಮಯ್ಯನವರ ಸೋಲಿನ ಸಂದರ್ಭವನ್ನು ತಿಳಿಹೇಳುತ್ತಾ ಅವರು ಮಾಡಿದ 'ಅಗ್ಗದ ರಾಜಕಾರಣ' ಮತ್ತು ಅದರ ಫಲವಾದ ಮಾನಸಿಕ ಗಾಯಗಳನ್ನು ಅವರ ವಿಶ್ರಾಂತಿಯ ಕಾಲದಲ್ಲಿ ನೆಕ್ಕಿಕೊಳ್ಳುವ ಹೊತ್ತಿನಲ್ಲಿ ಎನ್ನುವಾಗ ಬಳಸುವ ಅವರ ಮಾತಿನ ಪ್ರಹಾರವನ್ನು ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಚುನಾವಣೆಗಳ ಪೂರ್ವದಲ್ಲಿ ಸಿದ್ಧರಾಮಯ್ಯ ಸರ್ಕಾರ ಪ್ರಚಾರ ಜಾಹೀರಾತುಗಳ ಮಹಾಪೂರವನ್ನೇ ಹರಿಸಿದಾಗ ಅದರಿಂದ ಜನರ ಮನಸ್ಸಿನಲ್ಲಿ ಪ್ರತಿಕೂಲ ಪರಿಣಾಮ ಉಂಟಾಗುವುದೆಂಬ ಎಚ್ಚರಿಕೆಯ ಘಂಟೆ ಡಿಎಸ್ನೆನ್ ಅವರ ಮುಂಗಾಣ್ಕೆಗೆ ಸಾಕ್ಷಿಯಾಗಿದೆ. ಹೀಗಾಗಿ ಪ್ರತಿ ಸಂಚಿಕೆಯ ನಂತರವೂಹೊಸ ಮನುಷ್ಯ'ದ ಮುಂದಿನ ಸಂಚಿಕೆಯನ್ನು ಎದುರು ನೋಡುವ ಕುತೂಹಲ ಉಂಟಾಗುತ್ತದೆ.

ಎಸ್.ಎಸ್. ಹಿರೇಮಠ, ಬೆಂಗಳೂರು

(ಬೆಂಗಳೂರು ಆಕಾಶವಾಣಿ ಕೇಂದ್ರದ ನಿವೃತ್ತ ನಿರ್ದೇಶಕರು)

'ಎಚ್ಚರದ ಓದು ಎತ್ತರದ ಅನುಭವ'

ಕಾಲ ನಿಂತ ನೀರಲ್ಲ, ಸರಿ ತಪ್ಪುಗಳನ್ನು, ಬೇಕು ಬೇಡಗಳನ್ನು ಗಣನೆಗೆ ತೆಗೆದುಕೊಳ್ಳದೇ ನಿರಂತರವಾಗಿ ತನ್ನ ಪರಿದಿಯಲ್ಲಿ ಚಲನೆಯಲ್ಲಿರುವ ಕ್ರಿಯೆಯಾಗಿದೆ. ಹಾಗಾಗಿ ಮಾನವಾಯಾ ಕಾಲದ ನಡೆಯನ್ನು ತನ್ನ ವಿವೇಚನೆಯಿಂದ ಅರ್ಥೈಸಿಕೊಂಡು ತನ್ನ ಜೀವನವನ್ನು ಅರ್ಥಪೂರ್ಣಗೊಳಿಸಿಕೊಳ್ಳುವುದು ಹಿಂದಿನಿಂದ ನಡೆದು ಬಂದ ಸಂಗತಿಯಾಗಿದೆ. ಆದರೆ ಇಂದು ಆಧುನಿಕ ಯುಗದಲ್ಲಿ ಮಾನವ ಕಾಲದ ಚಕ್ರವ್ಯೂಹದಲ್ಲಿ ಸಿಲುಕಿ ದಾರಿ ತಿಳಿಯದೇ ಆತಂಕಿತನಾಗಿದ್ದಾನೆ. ಎಲ್ಲೆಲ್ಲೂ ಜಾಹೀರಾತುಗಳ ಅಬ್ಬರ, ಸಿದ್ದಾಂತ–ಮೌಲ್ಯಗಳ ಕುರಿತು ಘೋಷಣೆಗಳ ಕಿರಿಚಾಟದಲ್ಲಿ ಪ್ರಕೃತಿದತ್ತವಾದ ತನ್ನ ವಿವೇಚನೆಯನ್ನೇ ಮಂಕಾಗಿಸಿಕೊಂಡು ದಾರಿ ಕಾಣದೇ ಪರಿತಪಿಸುತ್ತಿದ್ದಾನೆ. ಇಂತಹ ಸಂದರ್ಭದಲ್ಲಿ 'ಹೊಸ ಮನುಷ್ಯ' ಮಾಸಿಕ ಪತ್ರಿಕೆ ಆಧುನಿಕ ಮಾನವರಿಗೆ ಖಂಡಿತವಾಗಿ ದಾರಿದೀಪವಾಗಿದೆ.

ಪ್ರತಿ ತಿಂಗಳು ಪತ್ರಿಕೆಯಲ್ಲಿ ಬರುತ್ತಿರುವ ಲೇಖನಗಳು ಪೂರ್ವಾಶ್ರಮದ ಸಿದ್ದಾಂತ, ಮೌಲ್ಯಗಳನ್ನು ಮೀರಿ ಇಂದಿನ ಸಂದರ್ಭದ ಮಾನವನ ಬದುಕನ್ನು ಸಹ್ಯಗೊಳಿಸುವ ಹಾಗೂ ಸ್ಥಗಿತದ ಹಂತ ತಲುಪಿರುವ ಆತನ ವಿವೇಚನೆಯನ್ನು ಚಿವುಟಿಬ್ಬಿಸುವುದು ಪತ್ರಿಕೆಯ ಹಿರಿಮೆಯಾಗಿದೆ. ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಕ್ಷೇತ್ರಗಳ ಕುರಿತು ಜಾಗತಿಕ ಮಟ್ಟದ ಚಿಂತಕರ ಸಂವಾದಗಳನ್ನು ಕನ್ನಡದ ಜನತೆಗೆ ಉಣಬಡಿಸುತ್ತಿರುವ ಸಂಪಾದಕರ ಪ್ರಯತ್ನಕ್ಕೆ ಬೆಲೆ ಕಟ್ಟಲಾಗದು.

ಪತ್ರಿಕೆಯ ಆತ್ಮದಂತಿರುವ ಸಂಪಾದಕರ ಟಿಪ್ಪಣಿಗಳು, ಒಳ ಪುಟದಲ್ಲಿ ಮೂಡಿ ಬರುತ್ತಿರುವ ವೈವಿದ್ಯಮಯ ಬರಹಗಳು ವಿಷಯದ ಅಧ್ಯಯನಶೀಲತೆಯ ಜೊತೆಗೆ ಅಧ್ಯಾತ್ಮಿಕ ನೆಲೆಯಲ್ಲಿ ಪಡೆದ ಪ್ರಾಕೃತಿಕ ತಿಳುವಳಿಕೆಯ ಅರಿವಿನಿಂದ ಪ್ರಫುಲ್ಲಿತವಾಗಿ, ಪತ್ರಿಕೆಯನ್ನು ಎತ್ತರದ ಸ್ಥಾನದಲ್ಲಿ ನಿಲ್ಲಿಸಿದೆ. ಸಂಪಾದಕರು ವಿವಿಧ ವಿಷಯಗಳ ಕುರಿತು ಆಕ್ರೋಶಭರಿತವಾಗಿ ಪ್ರತಿಪಾದಿಸುವ ರೀತಿ ಜನಪರ_ ಕಳಕಳಿಯಲ್ಲಿ ಅವರಿಗಿರುವ ಕಾತುರತೆಯೇ ಹೊರತು ಅನ್ಯವಲ್ಲ.

'ಎಚ್ಚರದ ಓದು ಎತ್ತರದ ಅನುಭವ' ಎಂಬ ಧ್ಯೇಯದಲ್ಲಿ ಪತ್ರಿಕೆಯನ್ನು ನೀಡುತ್ತಿರುವ ಸಂಪಾದಕರ ಶ್ರಮ ಹೊಗಳಿಕೆ ತೆಗಳಿಕೆ ಗಳನ್ನು ಮೀರಿದ್ದಾಗಿದೆ. ಪತ್ರಿಕೆ ತನ್ನ ಧ್ಯೇಯದಲ್ಲಿ ನಿರಂತರ ಮುಂದುವರೆಯಲಿ ಎಂದು ಆಶಿಸುವೆ.

–ಅಜ್ಜಪ್ಪ ಬಿರಡಿ, ಗೋಕಾಕ

(ರೈತರು ಮತ್ತು ಕೃಷಿ ಪತ್ತಿನಸಹಕಾರಿ ಸಂಘದ ನಿವೃತ್ತ ಕಾರ್ಯದರ್ಶಿ)

'ಓದುವ ಸುಖ' ಸಾಕೆ?

ಕಳೆದ ಏಳು ವರ್ಷಗಳಿಂದ ಒಂದು ವ್ರತದಂತೆ ಪತ್ರಿಕೆಯನ್ನು ಹೊರತರುತ್ತಿರುವುದಕ್ಕಾಗಿ ಪ್ರಥಮವಾಗಿ ಸಂಪಾದಕ ಡಿ.ಎಸ್. ನಾಗಭೂಷಣ ಅವರನ್ನು ಮನಸಾರೆ ಅಭಿನಂದಿಸುತ್ತೇನೆ. ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ ಸಮಾಜದ ಆರೋಗ್ಯದ ಬಗೆಗಿನ ಕಾಳಜಿಗಳಿಂದ ನಿಷ್ಠುರ ಬರವಣಿಗೆಯ ಮೂಲಕ ಎಚ್ಚರಿಸುತ್ತಿರುವುದು ಓದುಗರನ್ನು ಚಿಂತನೆಗೆ ಹಚ್ಚುತ್ತಿದೆ. ವಿವಿಧ ಸಂಚಿಕೆಗಳಲ್ಲಿನ ಗಾಂಧಿ, ಲೋಹಿಯಾ, ಅಂಬೇಡ್ಕರ್ ಮತ್ತು ಮಾರ್ಕ್ಸ ಕುರಿತ ಲೇಖನಗಳು ಯುವಜನರಿಗೆ ಮಾರ್ಗದರ್ಶನ ಮಾಡುವಷ್ಟು ಪರಿಣಾಮಕಾರಿಯಾಗಿವೆ. ಚುನಾವಣಾ ವಿಶ್ಲೇಷಣೆ ಮತ್ತು ಸಂಪಾದಕೀಯ ಟಿಪ್ಪಣಿಗಳಂತೂ ರಾಜಕಾಶರಣಿಗಳ ಜೊತೆಗೆ ಪ್ರಭುತ್ವಕ್ಕೆ ಹತ್ತಿರವಿರುವ ಚಿಂತಕರ ಚಾವಡಿಯುವರಿಗೆ ಮುಟ್ಟಿನೋಡಿಕೊಳ್ಳುವಷ್ಟು ಚುರುಕಾಗಿವೆ.

ಸಮಕಾಲೀನ ಸಮಸ್ಯೆಗಳ ವಸ್ತುನಿಷ್ಠ ವಿಶ್ಲೇಷಣೆ, ಪ್ರಚಲಿತ, ಯುವ ಲಹರಿ, ನವಿಲುಗರಿ, ಭಾಷೆ–ಸಾಹಿತ್ಯ–ಸಂಸ್ಕೃತಿ ಕುರಿತ ಟಿಪ್ಪಣಿಗಳು, ಕತೆ, ಲಲಿತ ಪ್ರಬಂಧ, ಪುಸ್ತಕಾವಲೋಕನ ಮತ್ತು ವಿಶೇಷ ಲೇಖನಗಳು ಇಷ್ಟೂ ಇಪ್ಪತ್ತು ಪುಟಗಳಲ್ಲಿ ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳುವಷ್ಟು ಸಮೃದ್ಧ ಓದು ಪ್ರತಿ ತಿಂಗಳೂ ನಮಗೆ ದೊರಕುತ್ತದೆ. ಇದೆಲ್ಲ ಸರಿ. ಆದರೆ...

ಈ ಹಿಂದೆ ಸಂಪಾದಕರೇ ಬರೆದಂತೆ, ಈ ಎಲ್ಲವನ್ನೂ ಓದುವ ಸುಖಕ್ಕಾಗಿ ಓದುವವರೇ ಹೆಚ್ಚು. ಎಲ್ಲೋ ಒಂದು ಕಡೆ ಗೊತ್ತಿರುವ ವಿಷಯವನ್ನೇ ಗೊತ್ತಿರುವ ಜನರಿಗೆ ಗೊತ್ತಿರುವವರೇ ಬರೆದಂತೆನಿಸುತ್ತದೆ. ಬರಹಗಾರರು ಮತ್ತು ಓದುಗರಲ್ಲಿ ಬಹಳಷ್ಟು ಜನ ಆಜುಬಾಜು ನಮ್ಮ ಓರಿಗೆಯವರೇ ಇದ್ದಾರೆ ಎಂದು ನನ್ನ ಅನಿಸಿಕೆ. ಇವರೆಲ್ಲರೂ ನವ ನಾಗರೀಕತೆಯ ಎಲ್ಲ ಐಹಿಕ ಸಮೃದ್ಧತೆಯಿಂದ ತುಂಬಿ ತುಳುಕಾಡುತ್ತಿದ್ದಾರೆ.ಲ್ಲಾದರೆ ಮನಸ್ಸು ಆರೋಗ್ಯಪೂರ್ಣವಾಗಿರಬೇಕಾದರೆ ಅಭದ್ರತೆ ಕಾಡುತ್ತಿರಬೇಕು. ಇದಕ್ಕೆ ಉತ್ತರ ನಮ್ಮ ಕನ್ನಡ ಅಸ್ಮಿತೆಯಲ್ಲೇ ಇದೆ. ಆಯ್ದಕ್ಕಿ ಲಕ್ಕಮ್ಮ ನಮಗೆ ಮಾದರಿಯಾಗಬೇಕು. ಗಾಂಧಿ ನಮಗೆ ಆದರ್ಶವಾಗಬೇಕು. ಯುವಪೀಳಿಗೆಯಲ್ಲಿ ಬಹುಪಾಲು ಈ ವಿಷಯಗಳಲ್ಲಿ ಆಸಕ್ತಿ ತೋರುತ್ತಿಲ್ಲ. ಅವರ ಆದ್ಯತೆಗಳೇ ಬೇರೆಯಾಗಿವೆ. ಅವರಲ್ಲಿ ಬಹುತೇಕರು ಹಣದ ಗಿರಣಿಗಳ ಕಡೆ ಮುಖ ಮಾಡಿ ನಿಂತಿದ್ದಾರೆ. ಹಿರಿಯರೆಲ್ಲ ಗಂಭೀರವಾಗಿ ಪ್ರಯತ್ನಿಸಿದರೆ ಈಗಲೂ ಅವರನ್ನು ಸರಿದಾರಿಗೆ ತರಬಹುದು. ಈ ಹಿರಿಯರೆಲ್ಲ ಹನ್ನೆರಡನೇ ಶತಮಾನದಲ್ಲಿ ಜ್ಞಾನದ ಸಂಕೇತದಂತಿದ್ದ ಚನ್ನಬಸವಣ್ಣನ ಮಾದರಿಗೆ ಬದಲಾಗಿ ಕ್ರಿಯೆಯ ಸಂಕೇತವಾದ ಸಿದ್ಧರಾಮರಾಗಿ ಕ್ರಿಯೆಗೆ ಇಳಿದರೆ ಮಾತ್ರ ಪರಿಣಾಮ ಸಾಧ್ಯ. ಅವರ ಮುಂದಿನ ಪೀಳಿಗೆಯವರಾದರೂ ನಮ್ಮ ಹೆಮ್ಮೆಯ ಪರಂಪರೆಯ ಅಸ್ಮಿತೆಯ ಹಳಿಗೆ ಬರಬಹುದೆಂಬುದು ನನ್ನ ಆಶಯ.

–ಸಿ. ಚನ್ನಬಸವಣ್ಣ, ಬಳ್ಳಾರಿ

(ಹಿರಿಯ ಸಮಾಜವಾದಿ ಮತ್ತು ಖ್ಯಾತ ಪುಸ್ತಕ ಪ್ರಕಾಶಕರು)

'ಸಮಗ್ರ ಸತ್ಯ'ದತ್ತ ಲಕ್ಷ್ಯ

ಷೂಮಾಕರ್ 'Small is beautiful' (ಸಣ್ಣದು ಸುಂದರ) ಎಂದು ಪ್ರತಿಪಾದಿಸುತ್ತ ಬೃಹತ್ ಆಣೆಕಟ್ಟುಗಳಿಗಿಂತ ಸಣ್ಣ ಸಣ್ಣ ಒಡ್ಡುಗಳು ವಿಹಿತ ಅನ್ನುತ್ತಾನೆ. ಹಾಗೆಯೇ, 'ಹೊಸ ಮನುಷ್ಯ'ದಂಥಹ ಕಿರುಪತ್ರಿಕೆಗಳೇ ಪ್ರಜಾಪ್ರಭುತ್ವದ ಮೌಲ್ಯಗಳ ಸಂರಕ್ಷಣೆಗೆ ವಹಿತ ಎಂದು ನಾನು ಭಾವಿಸಿದ್ದೇನೆ.

ಪತ್ರಿಕೆ ಸಾಮಾಜಿಕ, ರಾಜಕೀಯ ಎಚ್ಚರವನ್ನುಂಟುಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಯಾವುದೇ ಒಂದು ಪಕ್ಷ, ಪಂಗಡ ಪರ ವಕಾಲತ್ತು ವಹಿಸದೆ, ಜನಪರವಾದ ಕಾರ್ಯಕ್ರಮಗಳನ್ನು ಬೆಂಬಲಿಸುತ್ತ, ಜನವಿರೋಧಿ ನಿಲುವುಗಳನ್ನು, ಕಾರ್ಯಸೂಚಿಗಳನ್ನು ನಿಷ್ಠುರವಾಗಿ ಖಂಡಿಸುತ್ತ ಬಂದಿದೆ. ಒಮ್ಮೊಮ್ಮೆ ಏಕಮುಖವಾಗಿ ಖಾರವಾಗಿ ಪ್ರತಿಕ್ರಿಯಸಿರಲೂಬಹುದು. ಆದರೆ ಇಲ್ಲಿಯ ತೀಕ್ಷ್ಣ ಮಾತುಗಳ ಹಿಂದೆ ತೀವ್ರವಾದ ಸಾಮಾಜಿಕ, ರಾಜಕೀಯ ಕಾಳಜಿಗಳಿವೆ.

ಈ ಕಿರುಪತ್ರಿಕೆಯಲ್ಲಿ ಏನಿಲ್ಲ? ಇದು ಸಮಾಜ, ರಾಜಕೀಯ, ಸಂಸ್ಕೃತಿ, ಸಾಹಿತ್ಯ, ಕಲೆ, ನಾಟಕ, ರಂಗಭೂಮಿ, ಅನುಭಾವ – ಎಲ್ಲವನ್ನೂ ಒಳಗೊಳ್ಳುವ ಪ್ರಯತ್ನದಲ್ಲಿದೆ. ಪತ್ರಿಕೆಗೆ ಗಾಂಧಿ, ಲೋಹಿಯಾ, ಅಂಬೇಡ್ಕರ್, ಬುದ್ಧ, ಬಸವರ ಚಿಂತನೆಗಳ ಅಸ್ತಿವಾರ ಇದೆ. ಪತ್ರಿಕೆ 'ಸಮಗ್ರ ಸತ್ಯ'ವನ್ನು ಲಕ್ಷದಲ್ಲಿಟ್ಟುಕೊಂಡು ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಪ್ರಯತ್ನಿಸುತ್ತಿರಲಿ ಎಂದು ಆಶಿಸುತ್ತೇನೆ.

– ಮಲ್ಲಿಕಾರ್ಜುನ ಹಿರೇಮಠ, ಧಾರವಾಡ

(ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಹಿರಿಯ ಲೇಖಕರು)

ಸಾಮಾಜಿಕ ಪ್ರಜ್ಞೆಯ ಮೂಲಕ ಸಾಮಾಜಿಕ ಜವಾಬ್ದಾರಿ

ನಾನು 'ಹೊಸಮನುಷ್ಯ' ಪತ್ರಿಕೆಯನ್ನು ಅದರ ಮೂಲ ರೂಪ ಎನ್ನಬಹುದಾದ 'ನವಮಾನವ'ದ ಮೊದಲ ಸಂಚಿಕೆಯಿಂದಲೂ ಓದಿಕೊಂಡು ಬರುತ್ತಿರುವ ಸಾಮಾನ್ಯ ಓದುಗ. ಈ ಪತ್ರಿಕೆ ಎಲ್ಲ ಪತ್ರಿಕೆಗಳಿಗಿಂತಲೂ ಭಿನ್ನವಾಗಿದ್ದು, ಇದರ ಓದಿನಿಂದ ಎಲ್ಲರಲ್ಲೂ ಒಂದು ಹೊಸ ಚಿಂತನೆ ಉದ್ದೀಪನವಾಗುವುದರಲ್ಲಿ ಸಂಶಯವಿಲ್ಲ. ಈ ಪತ್ರಿಕೆಯನ್ನು ಓದಲು, ಅರ್ಥಮಾಡಿಕೊಳ್ಳಲು ಸ್ವಲ್ಪ ಕ್ಲಿಷ್ಟ, ಆತುರಾತುರವಾಗಿ ಓದಿ ಮುಗಿಸಲು ಸಾಧ್ಯವಿಲ್ಲ. ಆದರೆ ನಿಧಾನ ಓದು ಖಂಡಿತವಾಗಿಯೂ ನಮ್ಮಲ್ಲಿ ಒಂದು ನಿರ್ಣಾಯಕ ಬದಲಾವಣೆಯನ್ನು ತರುತ್ತದೆ.

ಈ ಪತ್ರಿಕೆ ವಿಶೇಷವಾಗಿ ನನ್ನ ಗಮನ ಸೆಳೆದಿದ್ದು ಈ ಕೆಳಕಂಡ ಕಾರಣಗಳಿಗಾಗಿ:

೧. ಇದು ನಿಜಕ್ಕೂ ಅತ್ಯಂತ ಅಂತರ್ಯದಿಂದ ಓದುಗರ ವ್ಯಕ್ತಿತ್ವ ವಿಕಸನಗೊಳಿಸಿ, ಬದುಕನ್ನು ಇನ್ನೂ ಸಮರ್ಪಕವಾಗಿ, ಅರ್ಥಪೂರ್ಣವಾಗಿ ನಡೆಸಲು ಸಹಾಯ ಮಾಡುವ ಲೇಖನಗಳಿಂದ ಕೂಡಿರುತ್ತದೆ.

೨. ಪ್ರಚಲಿತ ವಿದ್ಯಮಾನಗಳ ಸಮಗ್ರ ವಿಶ್ಲೇಷಣೆಯನ್ನು ತಲುಪಿಸುವ ಮೂಲಕ ಓದುಗರಲ್ಲಿ ತೀವ್ರ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿ, ಹೆಚ್ಚು ಸಾಮಾಜಿಕ ಜವಾಬ್ದಾರಿಯಿಂದ ಬದುಕು ನಡೆಸುವಂತೆ ಪ್ರೇರೇಪಿಸುತ್ತದೆ.

೩. ಇಂದಿನ ಎಲ್ಲೆಲ್ಲೂ ಹಿಂಸೆ, ಅಶಾಂತಿ, ದ್ವೇಷ, ಕಲಹಗಳ ಮಧ್ಯೆ ಬದುಕುತ್ತಿರುವ ನಮಗೆ ಲೌಕಿಕ ನೆಲೆಯಲ್ಲಿದ್ದುಕೊಂಡೇ ಆಧ್ಯಾತ್ಮಿಕ ಸ್ಪರ್ಶವಿರುವ ವಿಶಿಷ್ಟ ಅಂಕಣ (ಉದಾ: ಧರ್ಮವಿಚಾರ ಪುಟ) ಮತ್ತು ಬರಹಗಳ ಮೂಲಕ ಆದಷ್ಟೂ ನೆಮ್ಮದಿಯ ಬದುಕು ನಡೆಸಲು ಮಾರ್ಗದರ್ಶನ ನೀಡುತ್ತಿದೆ.

ಕೊನೆಯದಾಗಿ, ಕಳೆದ ಸಂಚಿಕೆಯಲ್ಲಿನ ಸಾಹಿತ್ಯಿಕ-ಸಾಂಸ್ಕೃತಿಕ ಅಂಕಣದಲ್ಲಿನ ಸಂಪಾದಕರು ವಿವೇಕ್ ಹೇಳಿದ ಆದರ್ಶ' ಎಂಬ ಟಿಪ್ಪಣಿಯಲ್ಲಿ ನಮ್ಮ ದಿನ ಪತ್ರಿಕೆಗಳಲ್ಲಿ ತಮ್ಮ ಪುಸ್ತಕಗಳ ವಿಮರ್ಶೆಗೆ ಅವಕಾಶವೇ ಇಲ್ಲದಿರುವಂತಹ ಇಂದಿನ 'ಸ್ಥಿತಿ'ಯ ಬಗ್ಗೆ ಬರೆದಿದ್ದಾರೆ. ಆದರೆ ಡಿ.ಎಸ್.ನಾಗಭೂಷಣರ ಬಹುಶಃ ಎಲ್ಲ ಪುಸ್ತಕಗಳ ಓದುಗನಾಗಿ ನಾನು ಹೇಳಬಯಸುವುದೇನೆಂದರೆ, ಇವರ ಪುಸ್ತಕಗಳ ವಿಮರ್ಶೆಗೆ ಇವರಿಗಿರುವಷ್ಟೇ ವೈವಿಧ್ಯಮಯ ಕ್ಷೇತ್ರಗಳ ತಿಳುವಳಿಕೆ ಮತ್ತು ವ್ಯಾಪಕ ಓದಿನ ಸಿದ್ಧತೆ ಬೇಕಾಗುತ್ತದೆ. ಬಹುಶಃ ಈ ಕಾರಣದಿಂದಲೋ ಏನೋ ಅವರ ಪುಸ್ತಕಗಳು ಬೇರೆಯವರ ಪುಸ್ತಕಗಳಂತೆ, ಬೇಗನೆ ವಿಮರ್ಶೆಗಾಗಲಿ ಅಥವಾ ಪರಿಚಯಕ್ಕಾಗಲಿ ದಕ್ಕುತ್ತಿಲ್ಲ ಎಂದು ನನ್ನ ಅನಿಸಿಕೆ.

–ಎನ್. ಆರ್ ಬಾಲಸುಬ್ರಮಣ್ಯ, ನೆರಳೂರು
(ಇಂಡಿಯನ್ ಬ್ಯಾಂಕ್‌ನ ಮುಖ್ಯ ಪ್ರಬಂಧಕರು)

ಪತ್ರಿಕೆಯ ಪುನರಾರಂಭ ನಮ್ಮೆಲ್ಲರ ಭಾಗ್ಯ

ಐದಾರು ವರ್ಷಗಳಹಿಂದೆ ನಾನು ಮೈಸೂರಿನಲ್ಲಿ ಓದುತ್ತಿರುವಾಗ ಒಮ್ಮೆ 'ನವಕರ್ನಾಟಕ' ಪುಸ್ತಕ ಮಳಿಗೆಗೆ ಹೋದಾಗ ಅಲ್ಲಿ 'ಹೊಸ ಮನುಷ್ಯ' ಪತ್ರಿಕೆಯನ್ನು ಕಂಡೆ. ಡಿ ಎಸ್ ಎನ್ ಅದರ ಸಂಪಾದಕರು! ಕೂಡಲೆ ಅದನ್ನು ಕೊಂಡೆ. ಯಾಕೆಂದರೆ ನಾನು ಆ ಹೊತ್ತಿಗಾಗಲೇ ಅವರ ಹಲವಾರು ಪುಸ್ತಕಗಳನ್ನು ಓದಿದ್ದೆ. ಅವರ ಪುಸ್ತಕಗಳ ಮೂಲಕವೇ ರಾಮಮನೋಹರ ಲೋಹಿಯಾರವರಂಥ ಮೇರು ಪ್ರತಿಭೆ ಮತ್ತು ಇತರೆ ಸಮಾಜವಾದಿ ವಿಚಾರಗಳುನನಗೆ ಪರಿಚಯವಾದದ್ದು.

ಪತ್ರಿಕೆಯು ತೀರಾ ಶಾಸ್ತ್ರೀಯವೂ ಅನಿಸದ ಮತ್ತು ತೀರಾ 'ಜನಪ್ರಿಯ'ವೂ ಅನಿಸದ ರೀತಿಯಲ್ಲಿ ತನ್ನದೇ ಗಾಂಭೀರ್ಯದೊಂದಿಗೆಹಲವು ವಿಷಯಗಳ ಬಗ್ಗೆ ಯಾವುದೇ ದಾಕ್ಷಿಣ್ಯ ಇಟ್ಟುಕೊಳ್ಳದೆ, ಯಾವುದೇ ಎಡ-ಬಲಗಳ 'ಇಸಂ'ಗಳಿಗೆ ಬಲಿಯಾಗದೆ ನಿಷ್ಪಕ್ಷಪಾತವಾಗಿ ತನ್ನ ಸಮಾಜವಾದಿ ನಿಲುವುಗಳನ್ನು ಗಟ್ಟಿಯಾಗಿ ಪ್ರಕಟಿಸುತ್ತಿರುವುದು ನನಗೆ ತುಂಬಾ ಮೆಚ್ಚುಗೆಯಾಗಿದೆ. ಈ ನಡುವೆ ಐದಾರು ತಿಂಗಳು ಪತ್ರಿಕೆಯು ನಿಂತಿದ್ದನ್ನು ಕಂಡು ತುಂಬಾ ಬೇಜಾರು ಕೂಡ ಆಗಿತ್ತು. ಸ್ವತಃ ಡಿಎಸ್‌ಎನ್ ಅವರೇ ಅದಕ್ಕೆ ಕಾರಣಗಳನ್ನು ಒಮ್ಮೆ ಕುಪ್ಪಳಿಯಲ್ಲಿ ನಡೆದ ಶಿಬಿರದಲ್ಲಿ ತಿಳಿಸಿದ್ದರು. ಅಲ್ಲಿ ನೆರೆದಿದ್ದ ಶಿಬಿರಾರ್ಥಿಗಳ ಒತ್ತಾಯ ಮತ್ತು ನಾಡಿನ ನನ್ನಂಥ ಹಲವಾರು ಓದುಗರ ಪ್ರೀತಿ ಅವರನ್ನು ಪ್ರೇರೇಪಿಸಿದವೋ ಏನೋ ಗೊತ್ತಿಲ್ಲ; ಪತ್ರಿಕೆಯನ್ನು ಪುನರಾರಂಭಿಸಿ ಅಂದೇ ಪ್ರಕಟಿಸಿದರು.

ಇದು ನನ್ನಂಥ ಓದುಗರ ಭಾಗ್ಯವೆಂದೇ ನಾನು ಭಾವಿಸಿದ್ದೇನೆ. ಕಾರಣ, ನಾನು ಮೆಚ್ಚುವ ನಾಡಿನ ಎಲ್ಲಾ ವಿದ್ವಾಂಸರು, ಲೇಖಕರು ಪತ್ರಿಕೆಗೆ ಬರೆಯುತ್ತಾರೆ ಮತ್ತು ಲೇಖನಗಳು ವಿಷಯವೊಂದರ ಎಲ್ಲ ಆಯಾಮಗಳನ್ನೂ ಸವಿಸ್ತಾರವಾಗಿ ಮಂಡಿಸಲು ಅವಕಾಶವಿವುದರಿಂದ ಲೇಖಕರಿಗೂ ತೃಪ್ತಿ, ಓದುಗರಿಗೂ ಸಾರ್ಥಕ ಭಾವ ಉಂಟಾಗುವಂತಿದೆ.ತೆ ಸದ್ಯಕ್ಕೆ ಪತ್ರಿಕೆ ರಾಜಕಾರಣ, ಸಮಾಜ, ಭಾಷೆ, ಸಾಹಿತ್ಯ, ಸಂಸ್ಕೃತಿ, ಧರ್ಮ ಇವೆಲ್ಲವನ್ನೂ ತನ್ನ ಒಡಲಲ್ಲಿ ಒಳಗೊಂಡಿದ್ದರೂ, ಇಂದಿನ ತಂತ್ರಜ್ಞಾನಪ್ರಿಯ ಯುವ ಜನಾಂಗಕ್ಕೆ ಇವನ್ನೆಲ್ಲ ತಲುಪಿಸಲು ವಿಜ್ಞಾನ, ತಂತ್ರಜ್ಞಾನ, ಸಂಗೀತ ಸಂವಹನ ಇತ್ಯಾದಿ ವಿಷಯಗಳನ್ನು ಕುರಿತೂ ಶಾಸ್ತ್ರೀಯವಾಗಿ ಮತ್ತು ಸಮಾಜಮುಖಿಯಾಗಿ ರಚಿಸಲ್ಪಟ್ಟ ಲೇಖನಗಳ ಅಗತ್ಯ ತುಂಬಾ ಇದೆ. ಪತ್ರಿಕೆಯಲ್ಲಿ 'ನಿಮ್ಮ ಪತ್ರ'ದಂತೆಯೇ 'ನಿಮ್ಮ ಚರ್ಚೆ' ಅನ್ನೋದು ಇರಲಿ. ಪತ್ರಿಕೆ ಕಾಲಕ್ಕೆ ತಕ್ಕಂತೆ ಹೊಸ ಹೊಸ ವಿಚಾರಗಳಿಗೆ ತೆರೆದು ಕೊಳ್ಳುತ್ತಾ ತನ್ನ ಸಮಾಜವಾದಿ ಆಶಯವನ್ನು ನಾಡಿನ ಉದ್ದಗಲಕ್ಕೂ ತಲುಪಿಸುತ್ತಾ ಜನತೆಯ 'ಸಾಕ್ಷಿ ಪ್ರಜ್ಞೆ'ಯಾಗಿ ಕೆಲಸ ಮಾಡಲಿ ಅನ್ನೋದೇ ನನ್ನ ಹಾರೈಕೆ.

–ಡಾ. ನಾಗಭೂಷಣ ಪಟೇಲ್, ಬೆಂಗಳೂರು
(ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಕಿರಿಯ ವಿಜ್ಞಾನಿ)

ಜುಲೈ ಸಂಚಿಕೆಯಲ್ಲಿ ಟಿ.ಎಸ್.ವೇಣುಗೋಪಾಲ್ ಅವರ ಪ್ರವಾಸದ ಅನುಭವ ಓದಿದೆ. ಅವರು ತೊಂದರೆಯಲ್ಲಿದ್ದಾಗ ಸ್ವಿಟ್ಜರ್‌ಲೆಂಡಿನ ಜನರು ಹಾಗೂ ವೈದ್ಯ ಸಮುದಾಯ ನೀಡಿದ ಸಹಾಯವನ್ನು ನೆನೆದಿದ್ದಾರೆ, ಸಂತೋಷ. ಅದೇ ಸಮಯದಲ್ಲಿ ಶೀರ್ಷಿಕೆಯೂ ಸೇರಿದಂತೆ ಲೇಖನದ ಹಲವಾರು ಕಡೆ ಭಾರತವನ್ನು ಹೋಲಿಕೆ ಮಾಡಿ ಪರೋಕ್ಷವಾಗಿ ಟೀಕಿಸಿರುವುದು ಸಮಂಜಸವಲ್ಲ. ನಮ್ಮ ದೇಶದಲ್ಲಿ ಪರಿಸ್ಥಿತಿ ಹಾಗಿರುವುದು ನಿಜವೇ ಇರಬಹುದು. ಆದರೆ ಅದನ್ನೇ ಸಾರ್ವತ್ರೀಕರಣಗೊಳಿಸಲಾಗದು.

–ಮಲ್ಲಿಕಾರ್ಜುನ ಹೊಸಪಾಳ್ಯ, ತುಮಕೂರು

ಮಾರ್ಕ್ಸನ ಸಮಕಾಲೀನತೆಯ ಬಗ್ಗೆ ಬರೆದಿರುವ ವಿದ್ವಾಂಸ ಡಾ. ರಾಜಾರಾಮ ತೋಳ್ಪಾಡಿಯವರು ಬಹುಶಃ ಮಿಲೋವಿನ್ ಡಿ'ಜಿಲಾಸ್‌ನ 'ದ ನ್ಯೂಕ್ಲಾಸ್'ನ್ನು ಓದಿದ್ದರೆ ಮಾರ್ಕ್ಸ್‌ನ ಬಂಡವಾಳಶಾಹಿ ವಿಶ್ಲೇಷಣೆ ಎಷ್ಟು ಅಸಮಗ್ರ ಮತ್ತು ಅಸಮರ್ಪಕ ಎಂಬುದು ಗೊತ್ತಾಗುತ್ತಿತ್ತು.

–ಟಿ. ರಾಘವೇಂದ್ರ ಜೋಷಿ, ಬೆಂಗಳೂರು

ಮಾರ್ಕ್ಸ್-ಮಾರ್ಕ್ಸ್‌ವಾದ ಕುರಿತ ಚರ್ಚೆ : ಒಂದು 'ವಿನಮ್ರ ಭಿನ್ನಹ'

'ನಮ್ಮ ಸಮಕಾಲೀನ ಮಾರ್ಕ್ಸ್' ಎನ್ನುವ ಜೂನ್ ಸಂಚಿಕೆಯಲ್ಲಿನ ನನ್ನ ಲೇಖನಕ್ಕೆ ಜುಲೈ ಸಂಚಿಕೆಯಲ್ಲಿ ಬಂದಿರುವ ಟೀಕೆ ಟಿಪ್ಪಣಿಗಳಿಗೆ ಇದು ನನ್ನ ಪ್ರತಿಕ್ರಿಯೆ. ಮೊದಲನೆಯದಾಗಿ, ಮಾರ್ಕ್ಸ್‌ನ ಸಮಕಾಲೀನತೆಯ ಕುರಿತು ಜಿ. ರಾಜಶೇಖರ್ ಬರೆದ ಪುಟ್ಟ ಆದರೆ ಮಾರ್ಮಿಕವಾದ ಬರಹಕ್ಕೆ ಅವರಿಗೆ ಧನ್ಯವಾದ. ಎರಡನೇಯದಾಗಿ, ನನ್ನ ಲೇಖನಕ್ಕೆ ಬಂದ ಇತರ ಪ್ರತಿಕ್ರಿಯೆಗಳಿಗೂ ನಾನು ಕೃತಜ್ಞ. ಕನಿಷ್ಠ ನನ್ನ ಲೇಖನವನ್ನು ಪ್ರತಿಕ್ರಿಯೆಗೆ ಅರ್ಹವೆಂದು ಅವರು ಭಾವಿಸಿದ್ದಕ್ಕೆ ನನಗೆ ಸಂತೋಷವಾಗಿದೆ. ಆದರೆ, ನನ್ನ ಲೇಖನಕ್ಕೆ ಅವರು ತೋರಿಸಿದ ಅಸಮಾಧಾನ ಮತ್ತು ಆಕ್ಷೇಪಗಳಿಗೆ ನಾನು ಈ ಕೆಳಗಿನಂತೆ ವಿನಮ್ರವಾಗಿ ಭಿನ್ನವಿಸಿಕೊಳ್ಳುತ್ತೇನೆ.

• ಪತ್ರಿಕೆಯ ಸಂಪಾದಕರು ದಯಪಾಲಿಸಿದ ಶಬ್ದಮಿತಿಯಲ್ಲಿ ಲೇಖಕರು ತಮ್ಮ ವಿಚಾರಗಳನ್ನು ಮಂಡಿಸಬೇಕಾದ್ದರಿಂದ ಯಾವುದನ್ನು ವಿಸ್ತರವಾಗಿ ಚರ್ಚಿಸಲು ಸಾಧ್ಯವಿಲ್ಲ. ಅದು ವಿಶೇಷವಾಗಿ, ಮಾರ್ಕ್ಸ್ ಅಥವಾ ಮಾರ್ಕ್ಸ್‌ವಾದದಂತಹ ಅಗಾಧ ತತ್ವಶಾಸ್ತ್ರೀಯ ಚಿಂತನೆಯ ಕುರಿತು. ಹಾಗಾಗಿ, ಮಾರ್ಕ್ಸ್‌ನ ಚಿಂತನೆಯಲ್ಲಿ ಅತ್ಯಂತ ಪ್ರಮುಖವೆಂದು ನಾನು ತಿಳಿಯುವ ಇತಿಹಾಸ ತತ್ವದ ಇಂದಿನ ಮಹತ್ವದ ಕುರಿತು ಸಂಕ್ಷಿಪ್ತವಾಗಿ ಬರೆದಿದ್ದೇನೆ. ಇತಿಹಾಸದ ಅಂತ್ಯ, ಸಿದ್ಧಾಂತದ ಅಂತ್ಯ ಎನ್ನುವ ನಮ್ಮ ಕಾಲದ ಕಾರ್ಪೊರೇಟ್ ಪ್ರಣೀತ ಚಿಂತನೆಯ ನಡುವೆ ಇತಿಹಾಸದ ಕೊನೆಯನ್ನು ನೀತ್ಯಾತ್ಮಕವಾಗಿ ಗ್ರಹಿಸಿದ ಮಾರ್ಕ್ಸ್ ನನಗೆ ಮುಖ್ಯವಾಗುತ್ತಾರೆ.

• ೧೯ನೇ ಶತಮಾನದ ಬಂಡವಾಳಶಾಹಿಯನ್ನು ಅದರ ಎಲ್ಲ ಸಂಕೀರ್ಣತೆಯಲ್ಲಿ ಗ್ರಹಿಸಿದ ಮಾರ್ಕ್ಸ್‌ನ ವಿಧಾನ ಕ್ರಮ ಇಂದಿನ ಸಂಪೂರ್ಣವಾಗಿ ಬದಲಾದ ಬಂಡವಾಳಶಾಹಿಯನ್ನೂ ಅರಿಯಲು ಸಹಾಯಕ ಎನ್ನುವುದನ್ನುನನಗೆ ಹೇಳಬೇಕಾಗಿತ್ತು.

• ಅಂತೆಯೇ, ಬಂಡವಾಳಶಾಹಿ ಮನುಷ್ಯನನ್ನು ಆತನ ದುಡಿಮೆಯಿಂದ ಬೇರ್ಪಡಿಸಿ ಅವನನ್ನು ಹೇಗೆ ಅನಾಥನನ್ನಾಗಿಸುತ್ತದೆ ಎನ್ನುವುದನ್ನು ಗುರುತಿಸುವ ಮಾರ್ಕ್ಸ್‌ನ ಮಾನವಿಕ ಕಾಳಜಿ ನನಗೆ ಮುಖ್ಯ. ಇದನ್ನು ಬಿಟ್ಟು ಕಮ್ಯುನಿಸ್ಟ್ ವ್ಯವಸ್ಥೆಗಳು ಈ ಜಗತ್ತಿನಲ್ಲಿ ನಡೆಸಿದ ದಾಂಧಲೆಗಳ ಅಥವಾ ಭಾರತದಲ್ಲಿ ಕಮ್ಯುನಿಸ್ಟರು ಮತ್ತು ಸೋಶಿಯಲಿಸ್ಟರ ನಡುವಿನ ದಾಂಪತ್ಯ ಸಮಸ್ಯೆಗಳ ಕುರಿತಾಗಲಿ ಚರ್ಚಿಸುವುದು *ಈ ಲೇಖನದಲ್ಲಿ* ನನ್ನ ಉದ್ದೇಶವಾಗಿರಲಿಲ್ಲ. ಲೇಖನವನ್ನು ಕಬ್ಬಿಣದ ಕಡಲೆ ಎಂದು ತಿಳಿಯುವವರಿಗೆ ನಾನು ಮೃದುವಾದ ಹಸಿಗಡಲೆಯನ್ನು ಕೊಟ್ಟಿದ್ದೇನೆ ಎಂದು ಒಲೈಸುವ ಮನಸ್ಥಿತಿ ನನಗಿಲ್ಲ. ಧನ್ಯವಾದಗಳು.


–ಡಾ. ರಾಜಾರಾಮ ತೋಳ್ಪಾಡಿ, ಕೊಣಾಜೆ (ದ.ಕ.)

ಹೊಸ ಮನುಷ್ಯ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



ಮನುಷ್ಯ ಒಂದು ಗುರಿಯಾಗಿ ಎಲ್ಲರನ್ನೂ ಪ್ರೀತಿಸುವ ಸಂಕೇತ; ಮಾರ್ಗವಾಗಿ ಆತ ಕ್ರಾಂತಿಕಾರಿ ಸಿಟ್ಟಿನ ಮತ್ತು ದುಷ್ಟತನದ ವಿರುದ್ಧದ ಉಪಕರಣವೂ ಹೌದು.

–ರಾಮಮನೋಹರ ಲೋಹಿಯಾ




–ಡಾ. ರಾಮಮನೋಹರ ಲೋಹಿಯಾ ಟ್ರಸ್ಟ್

ಮೈಸೂರು

ಗುರಿಯತ್ತ ರಾಜಿರಹಿತ ದಿಟ್ಟ ಹೆಜ್ಜೆಗಳು: ಪತ್ರಿಕೆಯ ಒಂದು ವರ್ಷದ ಹಿನ್ನೋಟ


-ಬಿ.ವಿ. ಸುರೇಂದ್ರ



ಪತ್ರಿಕೆಯು ಮಾರ್ಚ್ -೨೦೧೬ರಿಂದ ಆರು ತಿಂಗಳ ಬಿಡುವನ್ನು ಪಡೆದು ಅಕ್ಟೋಬರ್-೨೦೧೭ ರಿಂದ ಪುನಃ ಆರಂಭವಾಗಿದ್ದು ಓದುಗರೆಲ್ಲರಿಗೂ ಸಂತಸದ ವಿಷಯವಾಗಿದೆ. ಕಳೆದ ಆರು ವರ್ಷಗಳಿಗೂ ಹೆಚ್ಚಿನ ಕಾಲದಿಂದ ಪತ್ರಿಕೆಯು ವರ್ತಮಾನದ ಸಾಮಾಜಿಕ ಮತ್ತು ಸಾರ್ವಜನಿಕ ಬದುಕಿಗೆ ತೀವ್ರವಾಗಿ ಸ್ಪಂದಿಸುತ್ತಾ ಓದುಗರಲ್ಲಿ ಹೊಸ ಜಾಗೃತಿಯನ್ನು ಮೂಡಿಸುತ್ತಾ ಬಂದಿದೆ. ಹಾಗಾಗಿಯೇ ನಮ್ಮ ಹಿರಿಯ ಚಿಂತಕ ಜಿ. ರಾಜಶೇಖರ ಅವರು 'ಹೊಸ ಮನುಷ್ಯದಂತಹ ಇನ್ನೊಂದು ಪತ್ರಿಕೆ ಕನ್ನಡದಲ್ಲಂತೂ ಇರಲಿಲ್ಲ' ಎಂದು ಹೇಳಿದ್ದು(ಆಗಸ್ಟ್, ೨೦೧೬) ಎಂದೆನಿಸುತ್ತದೆ. ತಮ್ಮ ಅನಾರೋಗ್ಯವನ್ನು ಲೆಕ್ಕಿಸದೆ ಓದುಗರ ಒತ್ತಾಸೆಯ ಮೇರೆಗೆ ಪತ್ರಿಕೆಯನ್ನು ಮತ್ತೆ ಪ್ರಾರಂಭಿಸಿದ್ದಕ್ಕೆ ಮತ್ತು ತನ್ಮೂಲಕ ಜನರ ವೈಚಾರಿಕ, ಸಾಹಿತ್ಯಕ ಸಂವಾದಗಳಿಗೆ ಮತ್ತು ತಿಳುವಳಿಕೆಗೆ ಒಂದು ವೇದಿಕೆ ಒದಗಿಸಿಕೊಟ್ಟಿದ್ದಕ್ಕೆ ಎಲ್ಲ ಓದುಗರ ಪರವಾಗಿ ಡಿಎಸ್ನೆನ್ ಅವರಿಗೆ ಮೊದಲಿಗೆ ಧನ್ಯವಾದವನ್ನು ತಿಳಿಸಲೇಬೇಕು.

ಆಧುನಿಕ ನಾಗರಿಕತೆ ಮತ್ತು ನವ ಉದಾರೀಕರಣದ ಆರ್ಥಿಕ ನೀತಿಯು ಜಗತ್ತೆಲ್ಲ ಆವರಿಸಿ ಮಿತಿ ಇಲ್ಲದ ಸುಖ ಮತ್ತು ಸಮೃದ್ಧಿಯನ್ನು ಕೊಡಮಾಡುವ ನೆಪದಲ್ಲಿ ಅತ್ಯಂತ ಸ್ವಾರ್ಥಮಯವೂ ಮತ್ತು ನಿರಂತರ ದಾಹದ ಸಂಸ್ಕೃತಿ ಮತ್ತು ಮಾನಸಿಕತೆಯನ್ನು ನಿರ್ಮಾಣ ಮಾಡುತ್ತಾ ಹೋಗಿ ಮನುಷ್ಯನ ಸಹಜ ವಿವೇಕವನ್ನೂ ಶಿಥಿಲಗೊಳಿಸಿ ಅವನ ಪ್ರಜ್ಞೆಯನ್ನು ಅದಃಪತನಕ್ಕೆ ಕೊಂಡೊಯ್ಯುತ್ತಿದೆ. ಪತ್ರಿಕೆಯ ಜೈನ ಕಥಾ ಸರಿತ್ಸಾಗರದ ಒಂದು ಕಥೆಯಲ್ಲಿ (ಜೂನ್, ೨೦೧೮) ನಿರೂಪಿಸಿದ ಹಾಗೆ ಈ ದಾಹ ಮತ್ತು ಸಮೃದ್ಧಿಯೇ ವಿನಾಶವನ್ನೂ ಅನಿವಾರ್ಯ ಮಾಡುತ್ತಿದೆ. ಇವೆಲ್ಲ ಸಂಗತಿಗಳನ್ನೂ ಪತ್ರಿಕೆಯು ಚಿಕಿತ್ಸಕ ನೋಟದಿಂದ ಗಮನಿಸುತ್ತಾ ಬಂದಿದ್ದು ಇಂಥ ಪರಿಸ್ಥಿತಿಯಲ್ಲಿ ಗಾಂಧಿ ದರ್ಶನದ ಸಮಕಾಲೀನ ಮರುನಿರೂಪಣೆ ನಿಜಕ್ಕೂ ಸಮರ್ಥ ಪರಿಹಾರವಾಗಬಲ್ಲದು ಎಂಬ ತಿಳುವಳಿಕೆಯಿಂದ ಅದರ ಪ್ರಯತ್ನಗಳಲ್ಲಿ ತೊಡಗಿದೆ.

ಇದರ ಭಾಗವಾಗಿಯೇ ವರ್ಷದ ಸಂಚಿಕೆಗಳಾದ್ಯಂತ ಗಾಂಧಿ ದರ್ಶನದ ಹಿನ್ನೆಲೆಯಲ್ಲಿ ಪರ್ಯಾಯ ಜೀವನ ಮಾದರಿ, ಶಿಕ್ಷಣ, ತಂತ್ರಜ್ಞಾನ, ರಾಜಕಾರಣದ ತಾತ್ವಿಕತೆಯನ್ನು ಶೋಧಿಸುವ ಲೇಖನಗಳು, 'ಸರ್ವೋದಯ ಆಂದೋಲನದ ಮರುಹುಟ್ಟಿನ ಸಾಧ್ಯತೆಗಳು', 'ಆತ್ಮಸಾಕ್ಷಿಯೇ ಭಿನ್ನ ಮತದ ಮೂಲ' ಎಂಬ ತ್ರಿದಿಪ್ ಸುಹೃದ್ ಅವರ ಲೇಖನ, (ಅಕ್ಟೋ_ನವೆಂ-ಡಿಸೆಂ ೨೦೧೬), ಗಾಂಧಿ ಅವರ ಅಯೋಧ್ಯೆ ಭೇಟಿಯ ಸಂದರ್ಭದಲ್ಲಿ ಹಿಂದೂ-ಮುಸ್ಲಿಂ ಐಕ್ಯತೆಗೆ ಪಟ್ಟ ಪ್ರಯತ್ನ ಮತ್ತು ತೋರಿದ ಮುತ್ಸದ್ದೀತನ(ಮೇ, ೨೦೧೮), ಗಾಂಧೀ ಅವರ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳು ಎಂಬ ಮಾಲಿಕೆಯಲ್ಲಿ ಪಶ್ಚಿಮದ ಚಿಂತಕರಾದ ಜಾನ್ ರಸ್ಕಿನ್, ಹೆನ್ರಿ ಥೋರೋ ಹಾಗೂ ಲಿಯೋ ಟಾಲ್ಸ್ಟಾಯ್ ಮತ್ತು ತಿಲಕ್, ಗೋಖಲೆಯಯರಂತಹ ಕೆಲ ಹಿರಿಯ ಕಾಂಗ್ರೆಸ್ ನಾಯಕರು ಹಾಗೂ ಜೆ.ಸಿ.ಕುಮಾರಪ್ಪ ಅವರ ಚಿಂತನೆಗಳು, 'ಗಾಂಧಿ ಚಿಂತನೆಯ ದ್ವಂದ್ವಗಳು- ಒಂದು ವಿವೇಚನೆ' ಎಂಬ ಎನ್.ಎಸ್.ಗುಂಡೂರ್ ಅವರ ವಿಶ್ಲೇಷಣೆ, ಮಧು ಲಿಮಯರ ಅವರ 'ಕ್ವಿಟ್ ಇಂಡಿಯಾ ಚಳುವಳಿ ಮುನ್ನ: ಗಾಂಧಿ ನೆಹರೂ ಸುತ್ತ ಮುತ್ತ' ಲೇಖನ (ಅಕ್ಟೋ-ನವೆಂ ೨೦೧೭), ಭಾರತದ



ಸಮಾಜವಾದಿಗಳು ಮತ್ತು ಅಂಬೇಡ್ಕರ್ ಅವರೊಡನೆಯ ಸಂವಾದದಿಂದ ಗಾಂಧಿ ಬೆಳೆದ ಪರಿ, 'ಗಾಂಧಿ-ಅಂಬೇಡ್ಕರ್ ಮತ್ತು ಬುದ್ಧ', 'ಚಂಪಾರಣ್ ತೋರಿದ ದಾರಿ' (ಡಿಸೆಂ.೧೭-ಜನ.೧೮) 'ಮಾನವ ಕೇಂದ್ರಿತ ಯುಗದ ದುರಂತಗಳು' (ಜನ-ಮಾರ್ಚ್, ೨೦೧೭) ಎಂಬ ಲೇಖನಗಳು ಗಾಂಧಿ ಜೀವನದ ಮುಖ್ಯ ಸಂದರ್ಭಗಳು ಮತ್ತು ಅವರ ನಡೆನುಡಿಗಳಿಂದ ಒದಗಿದ ಗಾಂಧಿ ದರ್ಶನದ ಆಳವಾದ ಪರಿಚಯವನ್ನು ಮಾಡಿಕೊಟ್ಟು ಜೀವನದ ಬಗೆಗಿನ ಹೊಸ ಒಳನೋಟಗಳು ಮತ್ತು ಚೆಲುವುಗಳನ್ನು ಕಟ್ಟಿಕೊಟ್ಟಿದೆ.


ಬಿಜೆಪಿ ಮತ್ತು ಅದರ ಪರಿವಾರವು ಕಳೆದ ನಾಲ್ಕು ವರ್ಷದ ತಮ್ಮ ಆಡಳಿತದ ವೈಫಲ್ಯತೆಯನ್ನು ಮರೆಮಾಚಿಕೊಳ್ಳಲು ಮತ್ತೆ ತನ್ನ ಕೋಮುವಾದಿ ಅಜೆಂಡಾವನ್ನು ಗೋರಕ್ಷಣೆ, ತಾಜ್ ವಿವಾದ, ಲವ್ ಜೆಹಾದ್ ಇತ್ಯಾದಿಗಳ ಮೂಲಕ ಹರಿಬಿಡುವ ಪ್ರಯತ್ನವನ್ನು ಮಾಡುತ್ತಿರುವುದನ್ನು ಪತ್ರಿಕೆ ನಮ್ಮ ಗಮನಕ್ಕೆ ತರುತ್ತಾ ಇರ್ಫಾನ್ ಇಂಜಿನಿಯರ್ ಮತ್ತು ರಾಜೇಶ ರಾಮಚಂದ್ರನ್ ಅವರ ಲೇಖನಗಳ (ಡಿಸೆಂ. ೧೭-ಜನ. ೧೮) ಮೂಲಕ ಆ ಪಕ್ಷದ ಇತಿಹಾಸವನ್ನು ತಿರುಚುವ ಚಾಳಿಯನ್ನು ಬಯಲು ಮಾಡಿದ್ದಾರೆ,


ಇಂದು ಎಲ್ಲ ಕಡೆಯೂ ಪ್ರಾಂತೀಯ, ಜಾತೀಯ, ಮತ್ತು ಮತೀಯ ಎಂಬ ವಿಭಜಿತ ಮನಸ್ಥಿತಿ ಗಟ್ಟಿಗೊಳ್ಳುತ್ತಿದ್ದು ಸಮಾಜವು ಛಿದ್ರವಾಗಿವಾಗಿ ಹೋಗುತ್ತಿರುವುದನ್ನು ಸಂಗೀತಗಾರ ಟಿ.ಎಂ.ಕೃಷ್ಣ (ಡಿಸೆಂ.೧೭-ಜನ.೧೮) ರಾಷ್ಟ್ರೀಯ ಭಾವೈಕ್ಯತೆ ಎಂಬ ಪರಿಕಲ್ಪನೆಯೇ ಮರೆಯಾಗುತ್ತಿರುವ ಸಂದರ್ಭವನ್ನು ಕಳವಳದಿಂದ ವಿಶ್ಲೇಷಿಸಿದ್ದಾರೆ. ಇಡೀ ವರ್ಷದ ತಮ್ಮ ಸಂಪಾದಕೀಯದಲ್ಲಿ ಡಿಎಸ್ನೆನ್ ಅವರು ರಾಜ್ಯ ಮತ್ತು ರಾಷ್ಟ್ರದ ರಾಜಕಾರಣವು ತಲುಪಿದ ಅಧೋಗತಿಯನ್ನು ತೀವ್ರವಾಗಿ ವಿಮರ್ಶಿಸುತ್ತಾ ಈ ರಾಜಕಾರಣವು ಪ್ರಜಾತಂತ್ರ ಮತ್ತು ಸಂವಿಧಾನಗಳನ್ನು ಕೇವಲ ತಾಂತ್ರಿಕ ವ್ಯವಸ್ಥೆಗಳನ್ನಾಗಿ ಪರಿವರ್ತಿಸಿ ಹಾಸ್ಯಾಸ್ಪದಗೊಳಿಸಿದ್ದಾರೆ ಎಂದು ಕಟುವಾಗಿ ಟೀಕಿಸುತ್ತಾ ಬಂದಿದ್ದಾರೆ. ಬಿಜೆಪಿಯ ರೂಕ್ಷ ಮತ್ತು ವಿಚ್ಛಿದ್ರಕಾರಕ ರಾಜಕಾರಣವನ್ನು ಎದುರಿಸುವಲ್ಲಿ ಕಾಂಗ್ರೆಸ್ ಮತ್ತು ತಥಾಕಥಿತ ಜಾತ್ಯಾತೀತ ಎಡ ಪಕ್ಷಗಳು ಸಂಪೂರ್ಣವಾಗಿ ಸೋತಿದ್ದು, ಇವರಾರೂ ತಮ್ಮ ದಯನೀಯ ಸೋಲಿನಿಂದಾಗಿಯೂ ಪಾಠ ಕಲಿತಿಲ್ಲದ ಕಾರಣ ದೇಶದ ಸಾಮಾಜಿಕ ಬದುಕು ದಿನೇ ದಿನೇ ಅಯೋಮಯವಾಗುತ್ತಿದೆ ಎಂದೂ ಕಳವಳ ವ್ಯಕ್ತಪಡಿಸಿದ್ದಾರೆ. ಜೊತೆಗೆ ತುರ್ತಾಗಿ ನಾವೆಲ್ಲಾ ಒಂದು ಗಟ್ಟಿಯಾದ ಪರ್ಯಾಯ ರಾಜಕಾರಣವನ್ನು ಹುಟ್ಟು ಹಾಕಿಕೊಳ್ಳಬೇಕಾದ ಅನಿವಾರ್ಯತೆಯನ್ನು ಒತ್ತಿ ಹೇಳುತಿದ್ದಾರೆ. ಈ ಸಂಬಂಧವಾಗಿ ಅವರು 'ಸ್ವರಾಜ್ ಇಂಡಿಯಾ' ಪಕ್ಷದ ಸಂಚಾಲಕ ದೇವನೂರ ಮಹಾದೇವ ಅವರೊಂದಿಗೆ ನಡೆಸಿರುವ ಸಂದರ್ಶನ (ಫೆಬ್ರ. ೨೦೧೮) ಗಮನಾರ್ಹವಾಗಿದೆ..


ಪತ್ರಿಕೆಯು ಬಹು ಮುಖ್ಯವೆನಿಸಿದ ಪ್ರಚಲಿತ ವಿದ್ಯಾಮಾನಗಳ ಬಗ್ಗೆ ಚರ್ಚೆಗಳುನ್ನು ಕಳೆದ ವರ್ಷದ ಸಂಚಿಕೆಗಳಾದ್ಯಂತ ಮಾಡುತ್ತಾ ಬಂದಿದೆ.











ಆಧಾರ್ ಬಯೊಮಿಟ್ರಿಕ್ಸ್ ನ ಹೇರುವಿಕೆಯು ಸರ್ಕಾರವು ತನ್ನದೇ ಜನತೆಯ ಖಾಸಗಿತನಕ್ಕೆ ಕೊರೆಯುತ್ತಿರುವ ಕನ್ನ ಮತ್ತು ಅದರ ಜಾಗತಿಕ ಮಟ್ಟದ ಪಿತೂರಿಯ ಸ್ವರೂಪವಾಗಲಿ, ಬಾಬ್ರಿ ಮಸೀದಿಯನ್ನು ಉರುಳಿಸಿದ್ದನ್ನು ಪ್ರತ್ಯಕ್ಷವಾಗಿ ನೋಡಿದ ಸಾಕ್ಷಿದಾರನ ನ್ಯಾಯಾಲಯದಲ್ಲಿನ ಪಡಿಪಾಟಲುಗಳು ಮತ್ತು ನ್ಯಾಯದಾನದ ನಿಧಾನ ಗತಿ ಕುರಿತ ಲೇಖನಗಳು ಮತ್ತು ಪ್ರತ್ಯೇಕ ಲಿಂಗಾಯತ ಧರ್ಮದ ಹೋರಾಟದ ಹಿಂದಿನ ತತ್ವರಹಿತ ರಾಜಕಾರಣ ಕುರಿತ ಓ.ಎಲ್.ನಾಗಭೂಷಣ ಸ್ವಾಮಿ ಅವರ ಲೇಖನ (ಫೆಬ್ರ–೨೦೧೮), ಮಾಧ್ಯಮದ ಔದ್ಯಮೀಕರಣ ಮತ್ತು ಲಾಭಕೋರತನವನ್ನು ಬಯಲು ಮಾಡುವ .ಪಿ. ಸಾಯಿನಾಥ್ ಅವರ 'ಸಂಪತ್ತು, ಮಾಧ್ಯಮ ಮತ್ತು ಮಾರುಕಟ್ಟೆ' ಲೇಖನ (ಅಕ್ಟೋ_ನವೆಂ–ಡಿಸೆಂ ೨೦೧೬), ಬಿಳಿ ಶ್ರೇಷ್ಠತಾವಾದ ಎಂಬ ಜಾಗತಿಕ ಬಲಪಂಥವು ಬೆಳೆಯುತ್ತಿರುವ ವಿದ್ಯಮಾನ (ಜೂನ್೨೦೧೮) ಎಂಬ ಲೇಖನಗಳು ನಾವು ಆಧುನಿಕತೆಯ ಹೆಸರಿನಲ್ಲಿ ಎಂಬ ಸ್ವವಿನಾಶಕ ಜಗತ್ತನ್ನು ಸೃಷ್ಟಿಸುವುದರಲ್ಲಿ ತೊಡಗಿದ್ದೇವೆ ಎಂಬುದನ್ನು ನಮಗೆ ಮನವರಿಕೆ ಮಾಡಿಕೊಡುವ ಪ್ರಯತ್ನಗಳನ್ನು ಮಾಡುತ್ತವೆ. ಇದಕ್ಕೆಲ್ಲ ಪರ್ಯಾಯಯವಾಗಿ ಪತ್ರಿಕೆಯು ತಾನು ಪ್ರತಿಪಾದಿಸುತ್ತಾ ಬಂದಿರುವ ತಾತ್ವಿಕತೆಯ ಪ್ರವರ್ತಕರಲ್ಲೊಬ್ಬರಾದ ಗಾಂಧಿಯ ಬಂಡುಕೋರ ಶಿಷ್ಯ ಡಾ.ರಾಮಮನೋಹರ ಲೋಹಿಯಾ ಆಧುನಿಕ ಮನಸ್ಸಿನ ರಾಜಕಾರಣದ ಒಂದು ಅಪಾಯವಾದ ಏಕರೂಪಿ ಮನಸ್ಸಿನ ಸೃಷ್ಟಿಯ ರಾಜಕಾರಣದ ಬಗ್ಗೆ ನೀಡಿದ್ದ ಎಚ್ಚರಿಕೆಗಳನ್ನು ವಿಷದವಾಗಿ ತಿಳಿಸುವ ನ್ಯಾ. ಸುದರ್ಶನ ರೆಡ್ಡಿಯವರ ಲೇಖನ ಮಾಲೆ (ಮಾರ್ಚ್–ಜೂನ್, ೨೦೧೮) ನಮ್ಮೆಲ್ಲರ ಮನ ತೆರೆಸುವಂತಿದೆ


ಕಾಶ್ಮೀರ ಸಮಸ್ಯೆಯ ಮೂಲ ಕಾರಣಗಳು ಭಾರತದ ಅಂದಿನ ಪ್ರಧಾನಿ 'ನೆಹರೂರವರು ತಳೆದ ತಪ್ಪು ನೀತಿಗಳು' ಎಂಬ ಬಿ. ವಿವೇಕಾನಂದ ಅವರ ಲೇಖನ (ಜನ.–ಮಾರ್ಚ್, ೨೦೧೭) ಮತ್ತು ದ್ವಿ–ರಾಷ್ಟ್ರ ಸಿದ್ಧಾಂತದ ಮೂಲ ಪ್ರತಿಪಾದಕರು ಜಿನ್ನಾ ಅಲ್ಲ, ಹಿಂದೂ ರಾಷ್ಟ್ರೀಯವಾದಿಗಳು ಎಂಬುದನ್ನು ಚಾರಿತ್ರಿಕ ದಾಖಲೆಗಳೊಂದಿಗೆ ವಿವರಿಸುವ ಪ್ರೊ. ಶಂಸೂಲ್ ಇಸ್ಲಾಂ ಅವರ ಲೇಖನಗಳು (ಜುಲೈ, ೨೦೧೮) ಇತಿಹಾಸದ ಬಗ್ಗೆ ಹೊಸ ಬೆಳಕನ್ನು ಚೆಲ್ಲಿ ನಮ್ಮ ಅಭಿಪ್ರಾಯಗಳಲ್ಲಿ ಬದಲಾವಣೆ ತರುವಂತಿವೆ. ಇವುಗಳ ಜೊತೆಗೇ ಗಾಂಧಿ–ಅಂಬೇಡ್ಕರ್ ಚಿಂತನೆಗಳ ಸಮೀಪೀಕರಣಕ್ಕೆ ಯತ್ನಿಸುತ್ತಿರುವ ಪುಣೆಯ 'ಸಮಾಸ್' ಸಮಾವೇಶ, ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಆಶ್ರಯದಲ್ಲಿ ಕುಪ್ಪಳ್ಳಿ, ಮೈಸೂರು ಮತ್ತು ಅರಸೀಕೆರೆಗಳಲ್ಲಿ ನಡೆದ ಸಮಾಜವಾದಿ ಅಧ್ಯಯನ ಶಿಬಿರಗಳ,' ಮತ್ತು ಪತ್ರಿಕೆಯ ವಿಚಾರಗಳಿಂದ ಪ್ರಚೋದಿತರಾಗಿ ಓದುಗ ನಾಗಭೂಷಣ ಪಟೇಲ್ ಮಾಡಿಕೊಂಡ 'ಮಂತ್ರ ಮಾಂಗಲ್ಯ' ವಿವಾಹ ಮತ್ತು ಹಾಸನ ಜಿಲ್ಲೆಯಲ್ಲಿ ಜನರೇ ನಡೆಸುತ್ತಿರುವ ಜಲಸಂವರ್ಧನೆ ಕಾರ್ಯಕ್ರಮಗಳನ್ನು ಕುರಿತು ರೂಪ ಹಾಸನ ಅವರ ವರದಿ/ಲೇಖನಗಳು ನಮ್ಮ ಅರಿವನ್ನು ಹೆಚ್ಚಿಸುವಂತಿವೆ.

ಜನ–ಮಾರ್ಚ್ ೨೦೧೭ ಮತ್ತು ಮಾರ್ಚ್ ೨೦೧೮ರ ಮಹಿಳಾ ವಿಶೇಷ ಸಂಚಿಕೆಗಳಂತೂ ಹೆಣ್ಣು, ಹೆಣ್ತನದ ಹಲವು ಆಯಾಮಗಳ ಗಂಭೀರ ಶೋಧನೆ ಮಾಡುತ್ತಾ ನಮ್ಮ ಮಹಿಳಾ ಸಂಕುಲದ ದುಃಖ–ದುಮ್ಮಾನಗಳ ಜೊತೆಗೇ ಅವರ ನಲಿವು ರೋಮಾಂಚನಗಳನ್ನೂ ಬಿಂಬಿಸುವ ಸಚಿತ್ರ ಮತ್ತು ಸಮೃದ್ಧ ಸಂಚಿಕೆಗಳಾಗಿವೆ. ಪತ್ರಿಕೆಯು ಮಹಿಳಾ ಸಂವೇದನೆಗಳಿಗೆ, ಅವರ ಅನುಭವ ಮತ್ತು ಅಭಿವ್ಯಕ್ತಿಗಳಿಗೆ ಸೂಕ್ತ ಗೌರವ ಮತ್ತು ಅವಕಾಶವನ್ನು ಕಲ್ಪಿಸಿದೆ. ಪ್ರತಿಭಾ ನಂದಕುಮಾರ್ ಅವರ ಕಾವ್ಯ ವಿಮರ್ಶೆ, ಡಾ. ಗೀತಾ ವಸಂತ ಅವರ 'ವಚನಕಾರ್ತಿಯರಲ್ಲಿ ಸ್ತ್ರೀತ್ವದ ಶೋಧ' ಲಕ್ಷ್ಮೀಶ ತೋಳ್ಪಾಡಿ ಅವರ 'ಅಂಟಿನ ನಂಟಿನ ಕೊನೆ ಬಲ್ಲವರಾರು' ಲೇಖನಗಳು ಮತ್ತು ವಿನಯಾ ಒಕ್ಕುಂದ ಅವರ ಕಥೆ 'ಒಡಲುಗೊಂಡವಳು ತುಂಬಾ ಆಪ್ತವೆನಿಸಿದವು.

ಇನ್ನು ಪತ್ರಿಕೆಯು ಸಾಹಿತ್ಯ, ಸಂಸ್ಕೃತಿ, ಮತ್ತು ಧರ್ಮವಿಚಾರ ಅಂಕಣಗಳ ಮೂಲಕ ತನ್ನ ವಿಚಾರ ವ್ಯಾಪ್ತಿ ಮತ್ತು ಸಂವೇದನೆಯ ನೆಲೆಗಳನ್ನು ಇನ್ನಷ್ಟು ವಿಸ್ತರಿಸಿಕೊಂಡು ತನ್ನ ಸೌಂದರ್ಯ ಮತ್ತು ಸಮೃದ್ಧತೆಯನ್ನು ಸಂಪನ್ನಗೊಳಿಸಿಕೊಂಡಿದೆ. ಇಂದಿನ ಕನ್ನಡ ಸಾಹಿತ್ಯದ ಅತಿಯಾದ ಸಾಮಾಜೀಕರಣದ ವಾತಾವರಣದ ಮಧ್ಯೆ ಪತ್ರಿಕೆ ಪ್ರತಿ ಸಂಚಿಕೆಯಲ್ಲೂ ಗುಣಮಟ್ಟದ ಕವಿತೆಗಳನ್ನು ಮತ್ತು ಒಂದು ಉತ್ತಮ ಕಥೆ ಅಥವಾ ನಾಟಕ ಭಾಗ ಅಥವಾ ಲಲಿತ ಪ್ರಬಂಧವನ್ನು ಪ್ರಕಟಿಸುವ ಮೂಲಕ ಕನ್ನಡ ಸೃಜನಶೀಲ ಸಾಹಿತ್ಯದ ಸಂವೇದನಾತ್ಮಲಕತೆಯನ್ನೂ ಜೀವಂತವಾಗಿಟ್ಟಿದೆ ಎಂದೇ ಹೇಳಬೇಕು. ಇವುಗಳ ಜೊತೆಗೇ ನಾಟಕ ವಿಮರ್ಶೆ, ಶ್ರದ್ಧಾಂಜಲಿಯ ಬರಹಗಳು, ಮತ್ತು ಚುರುಕಾದ ಮತ್ತು ಸಕಾಲಿಕವಾದ ಕೆಲವು ಸಾಂದರ್ಭಿಕ ಸಾಂಸ್ಕೃತಿಕ ಟಿಪ್ಪಣಿಗಳು ಮತ್ತು ಸಮರ್ಥ ವಿಮರ್ಶಕರಿಂದ ಬರೆಸಲ್ಪಟ್ಟ ಆಯ್ದ ಪುಸ್ತಕಗಳ ಅವಲೋಕನ ಪತ್ರಿಕೆಯ ಕಣ್ಣೋಟವನ್ನು ವಿಸ್ತರಿಸಿವೆ. ಡಿಎಸ್ಸೆನ್ ಅವರು ತಾವು ಕನ್ನಡವನ್ನು ಶಾಲಾ ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರುವಲ್ಲಿನ ರಾಜ್ಯ ಸರ್ಕಾರದ ಐದಾಸೀನ್ಯದ ವಿರುದ್ಧ ಪ್ರತಿಭಟನಾರ್ಥವಾಗಿ ೨೦೧೭ರ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸಕಲು ರಾಕರಿಸಿ ಸರ್ಕಾರಕ್ಕೆ ಬರೆದ ಪತ್ರಸಹಿತವಾದ ಟಿಪ್ಪಣಿಗಳು(ಅಕ್ಟೋ.–ನವೆಂ. ೨೦೧೭) ಕನ್ನಡ ಕುರಿತ ಅವರ ಸರ್ವಗ್ರಾಹಿ ಕಲ್ಪನೆಯನ್ನು ಬಿಚ್ಚಿಡುವಂತಿದೆ, ಕೊನೆಯದಾಗಿ ಪತ್ರಿಕೆಯ ಪ್ರತಿ ಸಂಚಿಕೆಯ ಕೊನೆಯ ಪುಟದಲ್ಲಿನ ಕೊನೆಯ ಸಾಲುಗಳು' ಶೀರ್ಷಿಕೆಯಡಿ ಜಗತ್ತಿನವಿವಿಧ ದಾರ್ಶನಿಕ ಪಂಥಗಳ ಸಾಹಿತ್ಯದಿಂದ ಆಯ್ದು ಪ್ರಕಟಿಸುವ ಸಚಿತ್ರ ಸೂಕ್ತಿಗಳು ನಮ್ಮನ್ನು ನಿಜವಾಗಿಯೂ ಚಿಂತನೆಯ ಆಳಕ್ಕೊಯ್ಯುತ್ತವೆ.

ಬಹು ಮುಖ್ಯವಾಗಿ ಗಾಂಧಿ, ಲೋಹಿಯಾ, ಅಂಬೇಡ್ಕರ್, ಕುವೆಂಪು ಅವರ ಬದುಕು ಮತ್ತು ಬರಹಗಳನ್ನು ಅರಗಿಸಿಕೊಂಡು, ಹಾಗೇ ತಮ್ಮದೇ ರೀತಿಯಲ್ಲಿ ಭಾರತೀಯ ಪರಂಪರೆಯ ಸಾರಸರ್ವಸ್ವರೆನಿಸಿರುವ ಬುದ್ಧ, ಅಲ್ಲಮ, ಬಸವ, ಅಕ್ಕ,ಪರಮಹಂಸ ರಮಣರ ಅನುಭಾವದ ಅರ್ಥಪೂರ್ಣತೆಯನ್ನು ಅರಿತುಕೊಂಡಿದ್ದರಿಂದಾಗಿ ರೂಪಿತಗೊಂಡ ಒಂದು ವಿಶ್ವಾತ್ಮಕ ವಿವೇಕ ಮತ್ತು ಪ್ರೀತಿ ಈ ಪತ್ರಿಕೆಯನ್ನು ಮುನ್ನೆಡುಸುತ್ತಿವೆ ಎಂದು ಹೇಳಬಹುದು. ಹಾಗಾಗಿಯೇ ಅದು ವರ್ತಮಾನದ ತಲ್ಲಣಗಳಿಗೆ ಸ್ಪಂದಿಸುತ್ತಾ ಒಂದು ಸರಳ, ಸಭ್ಯ, ಘನತೆಯ ಮತ್ತು ಮಿತಿಗಳುಳ್ಳ ಜೀವನ ಮಾದರಿಯನ್ನು ಪ್ರತಿಪಾದಿಸುತ್ತಾ, ಆ ಮೂಲಕ ಅರಳುವ ಸಮಾನತೆಯ ಸಮಾಜವನ್ನು ಮುನ್ನೋಡುವ ಗುರಿಯನ್ನು ಹೊಂದಿದಂತಿದೆ. ಈ ಗುರಿಯಲ್ಲೇ ಮನುಷ್ಯ ಲೌಕಿಕ ಅಭ್ಯುದಯದ ಜೊತೆಗೇ ಅಧ್ಯಾತ್ಮಿಕ ಉನ್ನತಿಯನ್ನೂ ಸಾಧಿಸಿ 'ಹೊಸ ಮನುಷ್ಯ'ನೊಬ್ಬ ಮೂಡುವ ಪತ್ರಿಕೆಯ ಕನಸೂ ಅಡಗಿದಂತಿದೆ. ಈ ಗುರಿ ಸಾಧನೆತೆಡೆಗೆ ಪತ್ರಿಕೆ ತಾತ್ವಿಕ ರಾಜಿ, ಅಗ್ಗದ ಜನಪ್ರಿಯತೆ ಮತ್ತು ವಾಣಿಜ್ಯೀಕರಣದ ಸೆಳೆತಗಳಿಗೆ ಬಲಿಯಾಗದೆ ದಿಟ್ಟ ಹೆಜ್ಜೆ ಹಾಕುತ್ತಿರುವುದೇ ಕನ್ನಡದ ಸೀಮಿತವಾರೂ ಪ್ರಬುದ್ಧವಾದ ಓದುಗರ ಬೆಂಬಲದಿಂದ ಎಂಬುದನ್ನೂ ಇಲ್ಲಿ ಹೇಳಬೇಕು.

ಅನುವಾದ ಲೇಖನಗಳಲ್ಲಿ ಕಂಡು ಬರುವ ಕೆಲವು ತೊಡಕುಗಳು, ಅಲ್ಲಲ್ಲಿ ಎದ್ದು ಕಾಣುವ ಮುದ್ರಣ ದೋಷಗಳುಗಳು ಮತ್ತು ತಾತ್ವಿಕತೆಯ ಪುನರಾವರ್ತನೆಯ ಕಿರಿಕಿರಿಗಳನ್ನು ಸಂಪಾದಕರು ಗಮನಿಸಿ ಅವನ್ನು ಪರಿಹರಿಸಲಿ ಎಂದು ಕೋರುತ್ತಾ ಅವರಿಗೆ ಈ ಸಾಹಸದಲ್ಲಿ ಓದುಗರ ಪೂರ್ಣ ಸಹಕಾರ ದೊರಕಲಿದೆ ಎಂಬ ವಿಶ್ವಾಸದೊಂದಿಗೆ ಈ ಸಮೀಕ್ಷೆಯನ್ನು ಮುಗಿಸಬಯಸುವೆ.





(ತತ್ವಶಾಸ್ತ್ರ–ಸಾಹಿತ್ಯ–ಸಂಸ್ಕೃತಿಗಳಲ್ಲಿ ಗಂಭೀರ ಆಸಕ್ತಿ ಹೊಂದಿರುವ ಬಿ.ವಿ. ಸುರೇಂದ್ರ ಕರ್ನಾಟಕ ಬ್ಯಾಂಕ್‌ನ ಶಾಖಾ ವ್ಯವಸ್ಥಾಪಕರಾಗಿ ಸ್ವಯಂನಿವೃತ್ತಿ ಪಡೆದು ಈಗ ಶಿವಮೊಗ್ಗದಲ್ಲಿ ಬೇಸಾಯದಲ್ಲಿ ತೊಡಗಿದ್ದಾರೆ)

ಪ್ರಚಲಿತ

ನಮ್ಮ ಕಾಲದ ಧರ್ಮಸಂಕಟಗಳು

–ಲಕ್ಷ್ಮೀಶ ತೋಳ್ಪಾಡಿ

ಹಿಂದೂ ಧರ್ಮವೆಂದರೆ–ನಮ್ಮ ದರ್ಶನ ಶಾಸ್ತ್ರಗಳನ್ನು ನೋಡಿದರೆ ತಿಳಿಯುತ್ತದೆ– ಭಿನ್ನಮತೀಯರೊಂದಿಗೆ ನಡೆಸಿದ ನಿರಂತರ ಸಂವಾದವಾಗಿದೆ! ಶಂಕರು ತಮ್ಮ ಬ್ರಹ್ಮ ಸೂತ್ರ ಭಾಷ್ಯಕ್ಕೆ ಬರೆದ ಮುನ್ನುಡಿಯಂತಿರುವ 'ಅಧ್ಯಾಸಭಾಷ್ಯ' ವನ್ನೋದಿದರೆ ತಿಳಿಯುತ್ತದೆ–ಅದರ ಪರಿಭಾಷೆಯೆ ಹೊಸತು! ಅಲ್ಲಿ ಉಪನಿಷತ್ತಿದ್ದಾಗಲೀ ಯಾವುದೇ ಆರ್ಷ ಸಾಹಿತ್ಯದ್ದಾಗಲಿ ಒಂದೇ ಒಂದು ಉಲ್ಲೇಖವಿಲ್ಲ. ತೀರ ಬೌದ್ಧಿಕವಾದ ಪರಿಭಾಷೆ, ಇದು ಬೌದ್ಧ ಪ್ರಭಾವವೇ ಸರಿ. ಇದು ಹೆಚ್ಚುಗಾರಿಕೆಯಲ್ಲವೆ? ಬೌದ್ಧಧರ್ಮವನ್ನು ನೆಚ್ಚಿದ ಅಂಬೇಡ್ಕರ್ ಇದನ್ನು ಗಮನಿಸುತ್ತಿದ್ದರೆ ಏನು ಹೇಳುತ್ತಿದ್ದರೋ! ಅದೊಂದು ಕುತೂಹಲದ ವಿಷಯ..... ಭಿನ್ನ ಮತೀಯರೊಂದಿಗೆ ಅಸಹನೆ ಹಿಂದೂ ಧರ್ಮದ ನಿಜವಾದ ಖಯಿಡುಣ ಅಲ್ಲವೇ ಅಲ್ಲ. ಖಯಿಡುಣ ಅನ್ನು ಕೊಂದು ಏನು ಹಿಂದೂಧರ್ಮ? ಬಸವಣ್ಣ ಹೇಳಿದಂತೆ– ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ ಎಂಬಂತಾಗಿದೆ ಇದು.



ಅಮೆರಿಕೆಯಲ್ಲಿ ವಾಸವಿರುವ ಕನ್ನಡಿಗ ಮಿತ್ರರೊಬ್ಬರು ಊರಿಗೆ ಬಂದಿದ್ದಾಗ ದಿನವಿಡೀ ಮಾತಿಗೆ ಸಿಕ್ಕಿದ್ದರು. ಈ ನಮ್ಮ ದೇಶದಲ್ಲಿ ಸ್ತ್ರೀಯರ ಮೇಲೆ ನಡೆಯುತ್ತಿರುವ ಅನೂಹ್ಯವಾದ ದೌರ್ಜನ್ಯ ನಮ್ಮಿಬ್ಬರನ್ನೂ ಕಂಗೆಡಿಸಿತ್ತು. ಹಾಲು ಹಸುಳೆಗಳ ಮೇಲೆ ಅತ್ಯಾಚಾರವೆಂದರೆ ಏನಾಗಿದೆ ಈ ದೇಶಕ್ಕೆ? ಅಮೆರಿಕೆಯೇ ವಾಸಿಯೇನೋ ಎಂದೆ. ಅವರು ಕೂಡಲೇ ಹಾಗೆನ್ನದಿರಿ, ನಿಮಗೆ ತಿಳಿದಿಲ್ಲ. ಅಮೆರಿಕೆ ವೈಜ್ಞಾನಿಕವಾಗಿ ಮುಂದುವರಿದ ದೇಶ; ಮುಕ್ತ ಚಿಂತನೆಯ ದೇಶ ಎಂದೆಲ್ಲ ಭಾವಿಸುತ್ತೇವೆ. ಒಂದು ಮಟ್ಟಿಗೆ ಅದು ನಿಜವೂ ಹೌದು. ಆದರೆ ಅತ್ಯಾಚಾರ ಪ್ರಕರಣಗಳು ಅಲ್ಲೂ ನಡೆಯುತ್ತವೆ. ವಿಚಿತ್ರವೆಂದರೆ ಅಲ್ಲಿನ ಕೆಥೋಲಿಕರು ಹೆಚ್ಚಿನ ಜನ ಇಂಥ ಅತ್ಯಾಚಾರಗಳಿಗೆ ಸ್ಪಂದಿಸುವ ರೀತಿ– ಅಂದರೆ ಇಂಥ ಪ್ರಕರಣಗಳಲ್ಲಿ ಮಹಿಳೆಯರದೇ ತಪ್ಪೆನ್ನುತ್ತಾರೆ ಅವರು. ಪ್ರಚೋದನೆ ಬರುವುದು ಮಹಿಳೆಯ ಕಡೆಯಿಂದಲೇ ಎನ್ನುತ್ತಾರೆ, ಎಂದರು. ನನಗೆ ಗಾಬರಿಯಾಯಿತು. ಅತ್ಯಾಚಾರಕ್ಕೆ ಒಳಗಾದ ನೋವು ಮಾತ್ರವಲ್ಲ ಈ ಆಪಾದನೆ ಬೇರೆ! ನಾನು ಕೇಳಿದೆ: ಏಕೆ ಹೀಗೆ ಯೋಚಿಸುತ್ತಾರೆ? ಹೌದು; ನಾನು ಗಂಡಸು; ನಾನು ಅತ್ಯಾಚಾರ ಮಾಡಬಲ್ಲೆ ಎಂಬ ರೀತಿಯ ಅತಿ ನೀಚ ಪುರುಷಾಹಂಕಾರವೂ ಅಲ್ಲವಿದು–ತಪ್ಪೆಲ್ಲವೂ ಮಹಿಳೆಯದು ಎಂಬ ರೀತಿ? ಮಿತ್ರರು ಹೇಳಿದರು: ಅಯ್ಯೋ ಅದನ್ನೇನು ಕೇಳುತ್ತೀರಿ? ಬೈಬಲ್ ಗ್ರಂಥದಲ್ಲಿ ಕಥೆಯೇ ಇಲ್ಲವೆ? ಈಡನ್ ಉದ್ಯಾನದಲ್ಲಿ ಮನುಷ್ಯಕುಲದ ಮೂಲ ಗಂಡು–ಹೆಣ್ಣುಗಳಾದ 'ಆಡಂ' ಮತ್ತು 'ಈವ್' ಇದ್ದರಲ್ಲ, ಅಲ್ಲಿ ದೇವರ ಆದೇಶವನ್ನು ಮೀರಿ ತಿನ್ನಬಾರದ ಹಣ್ಣನ್ನು ತಿನ್ನುವಂತೆ ಪ್ರೇರೇಪಿಸಿದವಳು 'ಈವ್' ಅಲ್ಲವೆ? ಆದುದರಿಂದ, ಎಲ್ಲ ಕೆಡುಕಿಗೂ, ಅವಳ ಮೇಲೇ ಆಗುವ ಕೆಡುಕಿಗೂ ಸ್ತ್ರೀಯರೇ ಹೊಣೆ ಎಂದು ಬೈಬಲ್ ಪ್ರಕಾರ ವಾದಿಸುವವರುಂಟು. ಆದರೆ ಅಲ್ಲಿನ ನ್ಯಾಯಾಲಯಗಳು ನ್ಯಾಯನಿಷ್ಠುರವಾಗಿವೆ. ಇಂಥ ಮಾತುಗಳಿಗೆಲ್ಲ ಕಿವಿಗೊಡುವುದಿಲ್ಲ. ಆ ಮಾತು ಬೇರೆ. ಆದರೆ ಈ ಕಾಲದಲ್ಲೂ ಇರುವ ಮಾನಸಿಕತೆ ಇದು–ಎಂದರು.

ಇದು ಆಘಾತಕಾರಿಯಾಗಿತ್ತು. ಭೀಕರವಿದು. ಧರ್ಮಗ್ರಂಥಗಳನ್ನು ಅರ್ಥಮಾಡಿಕೊಳ್ಳುವುದು ಹೇಗೆ ಎಂದೇ ನಮಗೆ ಇನ್ನೂ ತಿಳಿದಿಲ್ಲ. ನಮ್ಮನ್ನೇ ನಾವು ಮೊದಲು ವಿಮರ್ಶೆಗೆ ಒಡ್ಡಿಕೊಳ್ಳದೆ ಯಾವುದನ್ನೂ ಸರಿಯಾಗಿ ನಾವು ವಿಮರ್ಶಿಸಲಾರೆವು. ಆದುದರಿಂದ, ಸ್ತ್ರೀಯರ ಮೇಲೆ ಅತ್ಯಾಚಾರವೆಸಗುವುದಕ್ಕೆ ಪುರುಷರಿಗೆ ಈ ನಿಲುವು ಅನುಕೂಲಕರವೆನ್ನುವ ವಿರೋಧಾಭಾಸವೂ ನಮಗೆ ತಿಳಿಯುವುದಿಲ್ಲ. ಮ್ಯಾಗ್ದಲೀನಾ ಮೇಲೆ ಕಲ್ಲೆಸೆಯಬೇಕೆನ್ನುವ ಸಂದರ್ಭದಲ್ಲಿ ಜೀಸಸ್–ಯಾರು ಬದುಕಿನಲ್ಲಿ ತಪ್ಪೇ ಮಾಡಿಲ್ಲವೋ ಅವರು ಕಲ್ಲೆಸೆಯಬಹುದು ಎಂದುದು ಸ್ವವಿಮರ್ಶೆ ಇಲ್ಲದೆ ಇನ್ನೊಬ್ಬರನ್ನು ಶಿಕ್ಷಿಸುವ ಅಧಿಕಾರ ಯಾರಿಗೂ ಬರುವುದಿಲ್ಲ ಎಂದು ಸೂಚಿಸುವ ಮಾತು. ಇನ್ನೊಂದು ಅದ್ಭುತವಾದ ಮಾತು ಜೀಸಸ್ ಹೇಳಿದ್ದು–ಬೈಬಲಲ್ಲೇ ಇದೆ–ಅದೆಂದರೆ Letter Kills, Spirit revives ಎಂಬ ಮಾತು! ವಾಚ್ಯಾರ್ಥಕ್ಕೆ ಕಟ್ಟು ಬೀಳುವುದು ಆತ್ಮಹತ್ಯಾತ್ಮಕವಾದ್ದು–ಮಾತಿನ ಒಳಧ್ವನಿಯನ್ನು ಗ್ರಹಿಸಿದಾಗ ಮಾತ್ರ ಹೊಸ ಚೈತನ್ಯ ಎಂಬರ್ಥದ ಮಾತದು. ನಿನ್ನನ್ನು ನೀನು ತಿಳಿ; ತಿಳಿಯುತ್ತ ಹೋಗು ಎನ್ನುವ ಮಾತನ್ನು ಹಿಂದೂಧರ್ಮ ಹೇಳುತ್ತದೆ; ಬೈಬಲ್ ಹೇಳುತ್ತದೆ; ಕುರಾನ್ ಹೇಳುತ್ತದೆ. ಈ ಮಾತು ಸ್ವವಿಮರ್ಶೆಗೆ ಒತ್ತು ಕೊಡುವ ಮಾತಲ್ಲವೆ? ಇದನ್ನೊಪ್ಪಿದರೆ, ನಾವೆಲ್ಲ–ನಾವು ಹಿಂದೂ–ನಾವು ಮುಸ್ಲಿಂ–ನಾವು ಕ್ರಿಶ್ಚಿಯನ್ಸ್ ಎಂದೆಲ್ಲ ತಿಳಿದದ್ದು, ನಮ್ಮ ಕುರಿತು ನಾವೇ ವಿಮರ್ಶಿಸಿ ಪಡೆದ ತಿಳುವಳಿಕೆಯಲ್ಲ, ವಾತಾವರಣದ ಪ್ರಭಾವಕ್ಕೊಳಗಾಗಿ ಅನಿವಾರ್ಯವಾಗಿ ನಾವು ನಂಬುವಂತೆ ಆದ ತಿಳುವಳಿಕೆಯಷ್ಟೆ ಎಂದು ಏರ್ಪಡುತ್ತದೆ. ಗ್ರೀಸ್ ದೇಶದ ಹಳೆಯ ಕಾಲದ ದೊಡ್ಡ ಜ್ಞಾನಿ ಸಾಕ್ರಟೀಸ್, ಪ್ರತಿಯೊಂದು ಸಂಗತಿಯನ್ನೂ ವಿಮರ್ಶೆಗೆ ಒಡ್ಡುತ್ತಿದ್ದ. ಒಮ್ಮೆ ಅವನಲ್ಲಿ ಯಾರೋ ಕೇಳಿದರಂತೆ: ಈ ಪರಿಯ ವಿಮರ್ಶಾತ್ಮಕತೆಯನ್ನು ನೀನು ಹೇಗೆ ಬೆಳೆಸಿಕೊಂಡೆ? ಸಾಕ್ರಟೀಸ್ ಹೇಳಿದನಂತೆ: ಡೆಲ್ಫಿಯ ದೇವವಾಣಿ Know Thy Self – ನಿನ್ನನ್ನು ನೀನು ತಿಳಿ ಎಂದದ್ದು ನನಗೆ ಕೇಳಿಸಿತು. ಹಾಗಾದರೆ ಇದುವರೆಗೆ ನಾನು ಏನು ತಿಳಿದಿದ್ದೆನೋ ಅದು ಸರಿಯಾದ ತಿಳುವಳಿಕೆಯಲ್ಲವೆಂದಾಯಿತು. ಸರಿಯಾದ ತಿಳುವಳಿಕೆ ಇನ್ನು; ಮುಂದೆ ಪಡೆಯಬೇಕಾಗಿದೆ ಎಂದಾಯಿತು. ಇದು ವಿಚಾರ–ವಿಮರ್ಶೆಯ ದಾರಿಯನ್ನು ನನಗೆ ತೋರಿಸಿತು ಎಂದು. ವಿಮರ್ಶೆಯ ದಾರಿಯನ್ನು ಬಿಡದೆ ಇದ್ದುದಕ್ಕಾಗಿ ಸಾಕ್ರಟೀಸ್ ಬಲಿದಾನ ಮಾಡಬೇಕಾಯಿತು ಎನ್ನುವುದೂ ನಾವು ನಡೆದು ಬಂದ ದಾರಿಯ ಗುರುತಾಗಿದೆ. ಜೀಸಸ್ ಆಡಿದ ಒಂದು ಮಾತಿಗೆ ಗಾಂಧೀಜಿ ಮಾಡಿದ ಅತಿ ವಿಶಿಷ್ಟ ವ್ಯಾಖ್ಯಾನವೊಂದು ಕುತೂಹಲಕಾರಿಯಾಗಿದೆ ಮತ್ತು ಮಾರ್ಗದರ್ಶಕವಾಗಿದೆ. ೧೯೨೨ರಲ್ಲಿ ಬ್ರಿಟಿಷ್ ಪತ್ರಕರ್ತನೊಬ್ಬ – Render unto Caesar the things which are Caesar's" ಎಂಬ ಜೀಸಸ್ ಮಾತನ್ನು ಉಲ್ಲೇಖಿಸಿ, ನಾಗರಿಕ ಅಧಿಕಾರಿಗಳಿಗೆ ನಾವು ಸಲ್ಲಿಸಬೇಕಾದ ತೆರಿಗೆ ಇತ್ಯಾದಿಗಳನ್ನು ಸಲ್ಲಿಸಬೇಕಾದುದು ನಮ್ಮ ಕರ್ತವ್ಯವೆಂದಲ್ಲವೆ ಈ ಮಾತಿನ ಅರ್ಥ? – ಅಲ್ಲವೆಂದಾದರೆ ಈ ಮಾತಿಗೆ ಬೇರೇನು ಅರ್ಥವಿದ್ದೀತು ಎಂದು ಗಾಂಧೀಜಿಯವರೊಡನೆ ಕೇಳುತ್ತಾನೆ. Civil disobidienceನ ಗಾಂಧೀಜಿಯವರ ದಾರಿ ಕ್ರಿಸ್ತನಿಗೆ ಸಮ್ಮತವಲ್ಲದಿದ್ದೀತು ಎಂದು ತಿಳಿಸುವುದು ಈ ಪತ್ರಕರ್ತನ ಇಚ್ಛೆಯಾಗಿದ್ದಿರಬಹುದು. ಅದಕ್ಕೆ ಗಾಂಧೀಜಿ ಕೊಟ್ಟ ಉತ್ತರವಿದು:

"Christ never answered a question in a simple and literal manner. He always gave in his replies more than was expected, something deeper. It was so in this case. Here He does not mean at all whether you must or must not pay taxes. When He says "Give back to Caesar the things which are Caesar's", He is stating a law. It means 'give back to Caesar what is his, i.e. I wil have nothing to do

with it". In this incident Christ enunciated the great law-which he exemplified all his life-of refusing to co.operate with evil". Don't co.operate with evil- ಕೆಡುಕಿನ ಜತೆ ಸಹಕರಿಸದಿರುವುದೇ ಗಾಂಧೀಜಿ ಕಂಡುಕೊಂಡ ಕ್ರಿಸ್ತಧರ್ಮದ ತಿರುಳು.

-೨-

ನಮ್ಮ ದೇಶದಲ್ಲಿ ಧರ್ಮ-ಧಾರ್ಮಿಕತೆಯ ಪರಿಸರವನ್ನು ನೋಡುವಾಗ ನಾವು ಮಧ್ಯ ಯುಗದಲ್ಲಿರುವಂತೆ ಅನ್ನಿಸುತ್ತದೆ. ಇಲ್ಲಿ ಬಾಬಾಗಳು-ಬಾಪುಗಳು-ಸ್ವಾಮಿಗಳು-ಮಠಾಧೀಶರು-ಧರ್ಮಾಧಿಕಾರಿಗಳ ಸಾಮ್ರಾಜ್ಯವೇ ನಡೆಯುತ್ತಿದೆ. ರಾಮ್‌ರಹೀಮ್ ಬಾಬಾ-ಆಸಾರಾಂಬಾಪುಗಳಿಗೆ ಶಿಕ್ಷೆಯಾದದ್ದು ಎಲ್ಲರೂ ಸಂಭ್ರಮಿಸಬೇಕಾದ-ನಿಜವಾದ ಧಾರ್ಮಿಕರು ಹೆಚ್ಚು ಸಂಭ್ರಮಿಸಬೇಕಾದ-

ಸಂಗತಿಯಾಗಿದೆ. ಆದರೆ ನಾವು ಯಾವುದೋ ಸ್ವಾಮಿಗಳ-ಬಾಬಾಗಳ ಹಿಂಬಾಲಕರಾಗಿರುವವರೆಗೆ ಇಂಥ ತೀರ್ಪುಗಳ ಮಹತ್ವವನ್ನೇ ತಿಳಿಯರಲಾರೆವು. ಎಲ್ಲವೂ ನಮಗೆ ಇನ್ನೊಂದು ಧರ್ಮದವರು, ನಮ್ಮ ಶತ್ರುಸ್ಥಾನದಲ್ಲಿರುವವರು-ನಮ್ಮ ಧಾರ್ಮಿಕ ನಾಯಕರ ವಿರುದ್ಧ ನಡೆಸುತ್ತಿರುವ ಷಡ್ಯಂತ್ರವಾಗಿ ಕಾಣಿಸುತ್ತದೆ. ೨೧ನೇಯ ಶತಮಾನದ ಈ ಎರಡನೇಯ ದಶಕದಲ್ಲಿ ನಮ್ಮ ಧಾರ್ಮಿಕ ವ್ಯಕ್ತಿಗಳು ನಮಗೆ ತೀರ ಪರಿಚಿತಗೊಳಿಸಿದ ಒಂದು ಪದವೆಂದರೆ ಈ "ಷಡ್ಯಂತ್ರ" ಎಂಬ ಪದ! ತಮ್ಮ ಪಾತಕಗಳನ್ನು ಮುಚ್ಚಿಕೊಳ್ಳಲು ಸ್ವರಕ್ಷಣೆಗಾಗಿ ಮಾಡಿಕೊಳ್ಳುವ ಉಪಾಯಗಳಿವು ಎಂದು ಹೆಚ್ಚಿನ ಎಲ್ಲರಿಗೂ ಗೊತ್ತಿದ್ದರೂ ಆತ್ಮವಂಚನೆ ಹೇಗೆ ನಡೆದಿದೆ ನೋಡಿ!

ಸನಾತನ ಸಂಸ್ಥೆ ಎಂಬೊಂದು ಸಂಸ್ಥೆಯ ಬಗ್ಗೆ ಕೇಳಿ ಬರುತ್ತಿದೆ. ಸಾವಯವ ವಸ್ತುಗಳು, ಆಧ್ಯಾತ್ಮಿಕ ಸಾಧನೆ ಎಂದೆಲ್ಲ ಹೇಳುತ್ತಿರುತ್ತಾರೆ. ಇವೆಲ್ಲ ಅವರಿಗೇ ಬಿಟ್ಟ ವಿಚಾರ. ಆರೆಸೆಸ್‌ನಂತೆಯೇ ಹಿಂದೂ ರಾಷ್ಟ್ರ ಕಟ್ಟುವುದೇ ಇವರ ಗುರಿಯಾಗಿರುವಂತಿದೆ. ಇವರ ಅಭಿಪ್ರಾಯಗಳೊಂದಿಗೆ ಭಿನ್ನಮತ ಹೊಂದಿದವರ ಬಗ್ಗೆ ಮಾತ್ರ ಇವರದು ಉಗ್ರ ಅಸಹನೆ. ವಿಚಾರವಾದಿಗಳೇ ಇವರ ಗುರಿಯಾಗಿರುವಂತಿದೆ. ಹತ್ಯೆ ನಡೆದರೂ ನಡೆಯಿತೇ. ಮತ್ತು ಹತ್ಯಾಕೋರರು ಇವರ ದೃಷ್ಟಿಯಲ್ಲಿ ಧರ್ಮ ವೀರರು! ಹತ್ಯೆ ಮಾಡಿದವರಿಗೆ ಕಾನೂನು ರೀತ್ಯಾ ಶಿಕ್ಷೆಯಾಗಬಹುದು. ಆ ಮಾತು ಬೇರೆ. ಏಕೆಂದರೆ ಆ ಶಿಕ್ಷೆಯನ್ನು ಅನುಭವಿಸುವುದು ಧರ್ಮವೀರರೆಂದೆನಿಸಿಕೊಂಡವರಿಗೆ ಒಂದು ಹೆಮ್ಮೆ. ಜೈಲೊಂದು ವೀರಸ್ವರ್ಗ! ಇದು ಇನ್ನಷ್ಟು ಗಾಬರಿಗೊಳ್ಳಬೇಕಾದ ಸಂಗತಿಯಾಗಿದೆ. ಅಂದರೆ ತನ್ನಂತೆಯೇ ಇರುವ ಮನುಷ್ಯ ಜೀವಿಯನ್ನು ಭಿನ್ನಮತದ ಕಾರಣಕ್ಕೆ ಕೊಂದ ಮೇಲೆ, ಕೊಂದವನೂ ಮನುಷ್ಯನೇ ಆಗಿರುವುದರಿಂದ, ಎಂದಾದರೊಂದು ದಿನ ತಾನು ಮಾಡಿದ ಕೊಲೆಗೆಲಸಕ್ಕೆ ಪಶ್ಚಾತ್ತಾಪಪಡುವ ಸಾಧ್ಯತೆ ಇದ್ದರೆ-ಆ ಸಾಧ್ಯತೆಯನ್ನೂ ಈ ಧರ್ಮವೀರತನದ ಕಲ್ಪನೆ ಗುಡಿಸಿ ಹಾಕಿ ಬಿಡುತ್ತದೆ. ಪಶ್ಚಾತ್ತಾಪಪಡಲಾಗುವುದು ನಿಜವಾಗಿ ಒಂದು ದೊಡ್ಡ ಯೋಗ್ಯತೆ. ಈ ಜನುಮದಲ್ಲೇ ಮರಳಿ ಮನುಷ್ಯನಾಗುವ ಅವಕಾಶವಿದು. ನಿಸರ್ಗವೇ ನಮ್ಮೊಳಗಿಟ್ಟ ಅವಕಾಶ. ಈಗ ಆ ಅವಕಾಶವನ್ನು ಮುಚ್ಚಿದಂತಾಯಿತು. ಎಲ್ಲವೂ ಧರ್ಮದ ಹೆಸರಿನಲ್ಲಿ! ಹಿಂದೂ ಧರ್ಮದ ಧರ್ಮಶಾಸ್ತ್ರಗಳಲ್ಲಿ 'ಪ್ರಾಯಶ್ಚಿತ್ತಕಾಂಡ' ಎಂಬೊಂದು ಭಾಗವೇ ಇದೆ ಎಂದಾದರೂ ಈ ಮಂದಿಗೆ ತಿಳಿದಿದೆಯೇನು?

ಮಹಾಭಾರತದ ನೆನಪಾಗುತ್ತಿದೆ. ಯುದ್ಧ ಮುಗಿದಿದೆ. ದುರ್ಯೋಧನ ತೊಡೆ ಮುರಿದು ಬಿದ್ದಿದ್ದಾನೆ. ಇನ್ನೂ ಕುಟುಕು ಜೀವ ಇದೆ. ಹುಡುಕಿಕೊಂಡು ಕೃಪ ಕೃತವರ್ಮ-ಅಶ್ವತ್ಥಾಮರು, ದುರ್ಯೋಧನನಲ್ಲಿಗೆ ಬರುತ್ತಾರೆ. ನಡೆದುಹೋದ ದುರಂತವನ್ನು ನೋಡಿ ಇವರಿಗೆ ತೀರ ದುಃಖವಾಗುತ್ತದೆ. ಆಗ ದುರ್ಯೋಧನ ಹೇಳುವ ಮಾತು ಇದು: ದುಃಖಿಸಬೇಡಿ. ನನ್ನ ಕುರಿತು ದುಃಖಿಸುವಂತೆ ನಾನು ಜೀವನ ಮಾಡಿಲ್ಲ. ನಾನು ದುಃಖಾರ್ಹನಲ್ಲ. ಏಕೆಂದರೆ ನಾನು ಕ್ಷತ್ರಿಯನಂತೆ ಕಾದಿದ್ದೇನೆ. ವೇದಗಳು ನಮಗೆ ಪ್ರಮಾಣವಲ್ಲವೆ? ಯುದ್ಧದಲ್ಲಿ ದೇಹ ತೆತ್ತವನಿಗೆ ವೀರ ಸ್ವರ್ಗವೆಂದು ವೇದಗಳೇ ಹೇಳಿಲ್ಲವೆ? ನನಗೆ ವೀರಸ್ವರ್ಗ ಸಿಗಬಾರದೆಂದೇ ಕೃಷ್ಣನಂಥವನು ಸಂಧಾನಕ್ಕೆ ನನ್ನನ್ನು ಒಡಂಬಡಿಸಲು ಯತ್ನಿಸಿದ್ದ. ಈ ಗುಟ್ಟು

ನನಗೆ ಗೊತ್ತಾಗದಿರುವುದೆ? ನಾನು ಬಿಡುವೆನೆ? ಸಂಧಾನವನ್ನು ಮುರಿದು ಯುದ್ಧವೇ ಸೈ ಎಂದು ನಿಶ್ಚಯಿಸಿಬಿಟ್ಟೆ ನೋಡಿ. ಆದುದರಿಂದ ನಾನೆಂದೆಂದೂ ಶೋಚನೀಯನಲ್ಲ. 'ಓಸ್ಮಿ ಶೋಚ್ಯಃಕಥಂಚನ'

ಏನು ಹೇಳಬೇಕು ಈ ಮಾತಿಗೆ? ನಡೆದುದರ ಕುರಿತು ಪಶ್ಚಾತ್ತಾಪವೇ ಇಲ್ಲ. ತನ್ನ ಬಗ್ಗೆಯೂ ಇಲ್ಲ. ಸಾಯುವ ಕಾಲದಲ್ಲೂ ಯಾರಾದರೂ ಪರಿತಪಿಸಿದರೆ ಅದರಿಂದ ಅಹಂಕಾರಕ್ಕೆ ಗಾಸಿಯಾಗುವುದು! ತಾನು ಹೀಗೆ ಎಲ್ಲರನ್ನೂ ತನ್ನ ಅಹಂಕಾರಕ್ಕೆ ಆಹುತಿ ತೆಗೆದುಕೊಂಡು ಬದುಕಿದ್ದುದಕ್ಕಿಂತ ಬೇರೆಯೇ ಒಂದು ರೀತಿಯಲ್ಲಿ ಬದುಕಬಹುದಿತ್ತೆಂಬ ಸಾಧ್ಯತೆಯೂ ಹೊಳೆಯುವುದಿಲ್ಲ. ಹೊಳೆದರೆ ಪಶ್ಚಾತ್ತಾಪದ ಕಣ್ಣೀರು ತುಳುಕುವುದು. ಅಲ್ಲಿ ಆ ಕ್ಷಣದಲ್ಲಿ ಮಾನವೀಯತೆ ಅರಳಿಕೊಳ್ಳುವುದು. ಆದರೆ ಹಾಗಾಗುವುದಿಲ್ಲ. ದುರ್ಯೋಧನನಿಗೆ ಪಶ್ಚಾತ್ತಾಪ ಉಂಟಾಗುವುದೇ ಇಲ್ಲ. ಪಶ್ಚಾತ್ತಾಪವೆಲ್ಲ ಧರ್ಮರಾಜನಿಗೆ ಮೀಸಲು. ದುರ್ಯೋಧನನಿಗೆ ಹೀಗಾಯಿತಲ್ಲ ಎಂಬ ಪಶ್ಚಾತ್ತಾಪವೂ ಧರ್ಮರಾಜನಿಗೇ.

ನನಗನಿಸುತ್ತದೆ ನಮ್ಮ ಸಂಘಟನೆಗಳು ದುರ್ಯೋಧನನಂಥವರನ್ನು ನಿರ್ಮಿಸಲು ಹೊರಟಿವೆಯೋ ಹೇಗೆ?

ಒಂದು Crisisಗೆ ಒಳಗಾದಾಗ ನಮ್ಮಲ್ಲಿ ಒಂದು ವಿಶೇಷವಾದಕ್ತೆಯು-ಅದುವರೆಗೆ ನಮಗೇ ತಿಳಿದಿರದ ನಮ್ಮ ಶಕ್ತಿಯು-ಜಾಗೃತವಾಗುವುದು. ಜೀವನ್ಮರಣಗಳಿಗೆಯಲ್ಲಿ ಉಂಟಾಗುವ ಶಕ್ತಿ ಅದು. ಪ್ರಾಣಾಪಾಯದಲ್ಲಿರುವ ತನ್ನ ಮಗುವನ್ನು ನೋಡಿ ಅದನ್ನುಳಿಸಲು ತಾಯಿ ತನ್ನನ್ನೇ ಮರೆತು ಅದರತ್ತ ನುಗ್ಗುವಳು. ಇದು ಅಡ್ಡಿ ನಲ್ಲಿ ಶಕ್ತಿ. ಬೌದ್ಧಿಕವಾಗಿ ಉಂಟಾಗುವ, Self-hypnosisನಿಂದ ಉಂಟಾಗುವ ಶಕ್ತಿಯಲ್ಲ. ತನ್ನ ಆಸೆಯನ್ನೇ ಬಿಟ್ಟಾಗ ಉಂಟಾಗುವ ಶಕ್ತಿ. ನಮ್ಮೊಳಗೇ ಇರುವ ಈ energyಯ ಪರಿಚಯ ಇರುವವರಿಗೆ ಭೋಗದಲ್ಲಿ ಆಸಕ್ತಿ ಇರುವುದಿಲ್ಲ. ಏಕೆಂದರೆ ಅಂಥವರಿಗೆ ಆಸೆಯೇ ಇರುವುದಿಲ್ಲ. ಆಸೆಯನ್ನು ತೊರೆದಾಗಲೇ ಉಂಟಾಗುವ ಶಕ್ತಿ ಅದು! ಬುದ್ಧ, ಆಸೆಯನ್ನು ಬಿಡಿ ಎಂದುದಕ್ಕೆ ಈ ಅನುಭವವೇ ಮೂಲ.

ಇವೆಲ್ಲವೂ ನಮಗೆ ಅನುಭವದಲ್ಲಿ ಅಲ್ಲದಿದ್ದರೂ ಬೌದ್ಧಿಕವಾಗಿ ಗೊತ್ತೇ ಇರುವುದರಿಂದ, ಪ್ರಚಂಡವಾದ ಬಿಕ್ಕಟ್ಟುಗಳನ್ನು ಸೃಷ್ಟಿಸಲು ನಾವು ಸಮರ್ಥರಾಗಿದ್ದೇವೆ. Crisis ಅನ್ನು ಕೃತಕವಾಗಿ ಸೃಷ್ಟಿಸಿ ಅದರ ಫಲವಾಗಿ ಉದ್ವಿಗ್ನ ಮನುಷ್ಯರನ್ನು ಸೃಷ್ಟಿಸುವುದರತ್ತಲೇ ನಮ್ಮ ಗಮನ. ವಿಜ್ಞಾನ ಯಂತ್ರಮಾನವನನ್ನು ಸೃಷ್ಟಿಸಿದಂತೆ! ನಮ್ಮ ಧರ್ಮ ಅಪಾಯದಲ್ಲಿದೆ ಎಂಬೊಂದು ಕೂಗನ್ನು ಎಬ್ಬಿಸಿ ಕೆಲವು ಉದಾಹರಣೆಗಳನ್ನು ಮುಂದೊಡ್ಡಿ ಹಬ್ಬಿಸಿ ಬಿಡಿ-ತತ್‌ಕ್ಷಣದಲ್ಲಿ ಉದ್ವಿಗ್ನ ಸನ್ನಿವೇಶವೊಂದು ಸೃಷ್ಟಿಯಾಗುತ್ತದೆ. ಮುಂದೆ ನಡೆಯುವ ಘಟನೆಗಳಿಗೆ ಯಾವ ತರ್ಕವೂ ಇರುವುದಿಲ್ಲ. ಮತ್ತು ಇಂಥದೊಂದು ಕೂಗಿಗೆ ಓಗೊಟ್ಟು ಉದ್ವಿಗ್ನಗೊಳ್ಳುವುದೇ ಮೌಲ್ಯವೆಂಬಂತೆ, ಆ ಕೂಗಿಗೆ ಕಾಯುತ್ತಿರುವಂತೆ, ಒಂದು ವಾತಾವರಣವನ್ನು ಸಿದ್ಧಪಡಿಸಿಟ್ಟುಕೊಂಡಿರುತ್ತೇವೆ! ಇದು ಎಲ್ಲ ಧರ್ಮಗಳಲ್ಲೂ ನಡೆಯುತ್ತಲೇ ಇದೆ. ಧರ್ಮದ ಮಾತೇಕೆ? ಈಗಲೀಗ ಈ ಕೂಗು ಜಾತಿ-ಮತಗಳ ಮಟ್ಟದಲ್ಲೂ ನಡೆಯುತ್ತಿದೆ.

-೩-

ಆರ್.ಎಸ್.ಎಸ್. ಹೇಳುತ್ತಿದೆ. ನಾವು ಎಂದರೆ ಹಿಂದೂಗಳು ಬಲಿಷ್ಠರಾಗಬೇಕು ಎಂದು. ಅಂದಾಗ ಮಾತ್ರ ಇತರರು ನಮ್ಮ ಮಾತು ಕೇಳುತ್ತಾರೆ ಎಂದು. ಇದು ಯೋಚಿಸಬೇಕಾದ್ದು. ಅಂದರೆ ಯೋಗ್ಯವಾದ ಮಾತನ್ನು,-ಆಡಬೇಕಾದ ಮಾತನ್ನು-ಮನೋಬುದ್ಧಿಗಳನ್ನು ಮುಟ್ಟಬಲ್ಲ, ಮುಟ್ಟಿ ಬೆಳೆಸಬಲ್ಲ ಮಾತುಗಳನ್ನಾಡುವುದಲ್ಲ. ಹಾಗೆ ಮಾತನಾಡುವಂತೆ ಯೋಚಿಸುವ ವ್ಯಕ್ತಿತ್ವಗಳನ್ನು ಬೆಳೆಸುವುದಲ್ಲ! ಅಲ್ಲದೆ ಒಳ್ಳೆಯ ಮಾತಿಗೆ ಜನ ಕಿವಿಗೊಡಲಾರರು; ಶಕ್ತಿವಂತರ ಮಾತಿಗೆ ಮಾತ್ರ ಬೆಲೆ ಕೊಡುವರು ಅಂದರೆ ಹೇಳಿದಂತೆ ಕೇಳುವರ ಎಂಬೀರೀತಿಯ ತಿಳುವಳಿಕೆಯೇ ಪ್ರಶ್ನಾರ್ಹ. ಆರ್.ಎಸ್.ಎಸ್. ಜನರನ್ನು ತಿಳಿದ ರೀತಿಯೇ ಅಸಾಂಸ್ಕೃತಿಕವಾಗಿದೆ.

ಆಯಿತು. ಈಗ ಆರ್.ಎಸ್.ಎಸ್. ಬಲಿಷ್ಠವಾಗಿದೆಯಲ್ಲ. ಕೇಂದ್ರದಲ್ಲಿ ಬಿ.ಜೆ.ಪಿ. ದೊಡ್ಡ ಬಹುಮತದಲ್ಲಿ ಆಳುತ್ತಿದೆ. ಮೋದಿಯವರಿಗೆ ವಿಶ್ವಮಾನ್ಯತೆ ಇದೆ. ಈಗ ಮಂತ್ರಿಗಳು ಇತರರನ್ನು ಕುರಿತು ಆಡುವ ಮಾತುಗಳು ಹೇಗಿವೆ? ಕೇಂದ್ರ ಮಂತ್ರಿ ಅನಂತ ಕುಮಾರ್ ಹೆಗಡೆಯವರ ಮಾತುಗಳನ್ನು ಕೇಳಿದರೆ ಗೊತ್ತಾಗುವುದಿಲ್ಲವೆ? ಅವರು ಕರ್ನಾಟಕಕ್ಕೆ ಬಂದ ಕೂಡಲೇ ಕೆಂಡಾಮಂಡಲರಾಗಿ ಅದೇಕೆ ಗುಟುರು ಹಾಕುತ್ತಾರೋ ದೇವರೇ ಬಲ್ಲ! ಅವರು ಬಲಿಷ್ಠರಾಗಿದ್ದಾರೆ; ಸುಮ್ಮನೆ ಕೂರುವಂತಿಲ್ಲ!

ಆರ್‌ಎಸ್‌ಎಸ್. ಹಿಂದೂ ರಾಷ್ಟ್ರ ಎನ್ನುತ್ತಿದೆ. ಹೇಳಲಿ. ಆದರೆ ನಾನು ಹಿಂದೂ ಆಗಿ ಸಾಯಲಾರೆನೆನ್ನುವ ಅಂಬೇಡ್ಕರ್ ಮಾತನ್ನೂ, ನಾನು ಆಯ್ಕೆಯಲ್ಲಿ ಅಸ್ಪೃಶ್ಯನೆನ್ನುವ ಗಾಂಧಿಯವರ ಮಾತನ್ನೂ ನೆನಪಲ್ಲಿಟ್ಟುಕೊಂಡು ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಕಾರ್ಯಕ್ರಮವನ್ನೇ ಮನಃಪೂರ್ವಕ ಹಮ್ಮಿಕೊಂಡಿದ್ದರೆ ಅವರ ಅನುಭವಗಳೇ ಬೇರೆಯಾಗುತ್ತಿದ್ದವು. ಆ ಅನುಭವಗಳು ಅವರನ್ನು ಈಗಿನಂತಲ್ಲದೆ ಬೇರೆಯೇ ರೀತಿಯಲ್ಲಿ ಮಾಗಿಸುತ್ತಿದ್ದವು. ಗೋರಕ್ಷಣೆಯು ಮುಖ್ಯ

ಕಾರ್ಯಕ್ರಮವಾಗಿದ್ದ ಗಾಂಧೀಜಿ–ಗೋರಕ್ಷಣೆಯೆನ್ನು ನೆಹರೂಗೆ ಅರ್ಥ ಮಾಡಿಕೊಟ್ಟ ರೀತಿ ಇದು-"Cow-protection means protection of the weak, the helpless, the dumb-and the deaf" (ಗೋರಕ್ಷಣೆ ಅಂದರೆ ದುರ್ಬಲರ, ಅಸಾಯಕರ, ಮೂಕರ ಮತ್ತು ಕಿವುಡಾದವರ ರಕ್ಷಣೆ.)

ಇನ್ನು ಹಿಂಸೆಯ ಬಗ್ಗೆ ಹೇಳಲು ಮಾತುಗಳೇ ಇಲ್ಲ. ಗುಜರಾತ್‌ನಲ್ಲಿ ನಡೆದ ಹಿಂಸೆಯ ಬಗ್ಗೆ ಇನ್ನೂ ಪೂರ್ಣ ಪ್ರಮಾಣದ ರಾಷ್ಟ್ರೀಯ ಮಟ್ಟದ ಹೃತ್ಪೂರ್ವಕ ಕ್ಷಮಾಯಾಚನೆಯೇ ನನಗೆ ತಿಳಿದಂತೆ ನಡೆದಿಲ್ಲ. ನಡೆದಿದ್ದರೆ ಕ್ಷಮೆ ಇರಲಿ. ನಡೆದಿಲ್ಲವೆಂದು ಏಕೆ ಹೇಳುತ್ತಿದ್ದೇನೆಂದರೆ, ನಡೆದಿದ್ದರೆ ತೀಸ್ತಾ ಸೆಟಲ್‌ವಾಡ್ ಅಂಥ ಸಾಮಾಜಿಕ ಕಾರ್ಯಕರ್ತರು ಇನ್ನೂ ಆ ಕಾನೂನಿನ ಚಕ್ರವ್ಯೂಹದಲ್ಲಿ ಹೋರಾಡುತ್ತಿರಬೇಕಿರಲಿಲ್ಲ!

–೪=

ಹಿಂದೂ ಧರ್ಮವೆಂದರೆ–ನಮ್ಮ ದರ್ಶನ ಶಾಸ್ತ್ರಗಳನ್ನು ನೋಡಿದರೆ ತಿಳಿಯುತ್ತದೆ– ಭಿನ್ನಮತೀಯರೊಂದಿಗೆ ನಡೆಸಿದ ನಿರಂತರ ಸಂವಾದವಾಗಿದೆ! ಶಂಕರು ತಮ್ಮ ಬ್ರಹ್ಮ ಸೂತ್ರ ಭಾಷ್ಯಕ್ಕೆ ಬರೆದ ಮುನ್ನುಡಿಯಂತಿರುವ 'ಅಧ್ಯಾಸಭಾಷ್ಯ' ವನ್ನೋದಿದರೆ ತಿಳಿಯುತ್ತದೆ–ಅದರ ಪರಿಭಾಷೆಯೆ ಹೊಸತು! ಅಲ್ಲಿ ಉಪನಿಷತ್ತಿದ್ದಾಗಲೀ ಯಾವುದೇ ಆರ್ಷ ಸಾಹಿತ್ಯದ್ದಾಗಲಿ ಒಂದೇ ಒಂದು ಉಲ್ಲೇಖವಿಲ್ಲ. ತೀರ ಬೌದ್ಧಿಕವಾದ ಪರಿಭಾಷೆ, ಇದು

ಬೌದ್ಧ ಪ್ರಭಾವವೇ ಸರಿ. ಇದು ಹೆಚ್ಚುಗಾರಿಕೆಯಲ್ಲವೆ? ಬೌದ್ಧಧರ್ಮವನ್ನು ನೆಚ್ಚಿದ ಅಂಬೇಡ್ಕರ್ ಇದನ್ನು ಗಮನಿಸುತ್ತಿದ್ದರೆ ಏನು ಹೇಳುತ್ತಿದ್ದರೋ! ಅದೊಂದು ಕುತೂಹಲದ ವಿಷಯ.

ಭಿನ್ನ ಮತೀಯರೊಂದಿಗೆ ಅಸಹನೆ ಹಿಂದೂ ಧರ್ಮದ ನಿಜವಾದ Spirit ಅಲ್ಲವೇ ಅಲ್ಲ. ಖಡುಡುಣ ಅನ್ನು ಕೊಂದು ಏನು ಹಿಂದೂಧರ್ಮ? ಬಸವಣ್ಣ ಹೇಳಿದಂತೆ– ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ ಎಂಬಂತಾಗಿದೆ ಇದು.

Image Building ಆರ್‌ಎಸ್‌ಎಸ್‌ನ ಒಂದು ವಿಧಾನವಾಗಿದೆ. ಈಗ ಮೋದಿಯವರ Image ಬೆಳೆಸುತ್ತಿದ್ದಾರೆ! ಕಾಂಗ್ರೆಸ್ಸು ನೆಹರೂ ಮನೆತನದ Image ಬೆಳೆಸುತ್ತಿದೆ. ಸಿಖ್ ಗಲಭೆ ರಕ್ತಪಾತದ ಕಲಂಕ ಈ ನೆಹರೂ ಮನೆತನಕ್ಕೆ ಅಂಟಿಕೊಂಡಿದ್ದರೆ ಗುಜರಾತ್ ಗಲಭೆಗಳ ಕಲಂಕ ಮೋದಿಗೆ ಅಂಟಿಕೊಂಡಿದೆ. ರಾಜೀವ ಗಾಂಧಿ ದುರಂತಕ್ಕೆ ಈಡಾದಾಗ ಗಲಭೆಯಲ್ಲಿ ಮನೆಯ ಗಂಡಸರನ್ನು ಕಳಕೊಂಡ ಸಿಖ್ ಮಹಿಳೆಯರ ದುಃಖ ಈಗ ನನಗೆ ಅರ್ಥವಾಗುತ್ತಿದೆ ಎಂದು ಸೋನಿಯಾಗಾಂಧಿ ಹೇಳುತ್ತಿದ್ದರೆ ಜನಮನದಲ್ಲಿ ಭಾವದ ಅಲಗಳೇಳುತ್ತಿದ್ದವು! ನನ್ನ ಪ್ರಜೆಗಳನ್ನು ಕಾಪಾಡಲಾಗಲಿಲ್ಲ ಎಂದು ಮೋದಿ, ಗುಜರಾತ್ ಗಲಭೆಯ ಸಂದರ್ಭದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ಕೊಡುತ್ತಿದ್ದರೆ ಅವರ ಖಟಚಿಂಜ ಏಕೆ? ಅವರ ವ್ಯಕ್ತಿತ್ವವೇ ಬೆಳೆಯುತ್ತಿತ್ತು!

ವ್ಯಕ್ತಿತ್ವವು ಬೆಳೆಯುವುದು ಧರ್ಮದ ದಾರಿ. Image ಬೆಳೆಸುವುದು ನಮ್ಮ ಸದ್ಯದ ರಾಜಕಾರಣದ ದಾರಿಯಾಗಿದೆ. Image ಅನ್ನು ಹೇರುವುದು ಜನರ ಮನಸ್ಸಿನ ಮೇಲೆ ಮಾಡುವ ಹಿಂಸೆಯೇ ಆಗಿದೆ.

ಧರ್ಮವಾದಿಗಳ ಜತೆಗೆ, ಹಿಂಸೆಯನ್ನು ಪ್ರಚೋದಿಸುವುದರಲ್ಲಿ ಎಡಪಂಥೀಯರು, ಸೆಕ್ಯುಲರ್ ಚಿಂತಕರು ಏನೂ ಕಡಿಮೆ ಇಲ್ಲ. ಯಾರೇ ಆದರೂ ರೂಕ್ಷವಾಗಿ ಏಕೆ ಮಾತನಾಡಬೇಕೋ ತಿಳಿಯದಾಗಿದೆ.

ಈಗ ಏನಾಗಿದೆ ಎಂದರೆ–ಪರ; ವಿರೋಧಗಳಲ್ಲಿ ನೀವು ಯಾವುದಾದರೂ ಒಂದು ಗುಂಪನ್ನು ಸೇರಿಕೊಳ್ಳದಿದ್ದರೆ ಉಳಿಗಾಲವಿಲ್ಲ ಎಂಬ ರೀತಿಯ ಸನ್ನಿವೇಶವಿದೆ ಜೆಕೆ ಹೇಳುತ್ತಿದ್ದರಂತೆ "Every body should give me up" ಎಂದು. ಇದು ನನ್ನನ್ನು ಯಾರೂ ಹಚ್ಚಿಕೊಳ್ಳಬೇಡಿ ಎಂದು ಲೋಕಕ್ಕೆ ಮೊರೆ ಇಟ್ಟಂತೆ ಕೇಳಿಸುತ್ತದೆ. ಸರ್ವಸಂಗ ಪರಿತ್ಯಾಗ ಎನ್ನುವ ಪರಿಕಲ್ಪನೆಯ ಇನ್ನೊಂದು ರೂಪವಿದು. ಇದು ಲೋಕದ ಸಂದರ್ಭವನ್ನು ವಿಮರ್ಶಿಸಿದ ಮಾತೂ ಹೌದು.



(ಪುತ್ತೂರಿನ ಲಕ್ಷ್ಮೀಶ ತೋಳ್ಪಾಡಿಯವರು ನಮ್ಮ ನಡುವಿನ ಸಾಹಿತ್ಯ–ಸಂಸ್ಕೃತಿ ಮತ್ತು ಧರ್ಮಶಾಸ್ತ್ರಗಳನ್ನು ಕುರಿತ ಹಿರಿಯ ವಿದ್ವಾಂಸರು)

'ಹೊಸ ಮನುಷ್ಯ' ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ನಿಮ್ಮಲ್ಲಿ ನೀವು ತಿಳಿದು ನೋಡಿರೆ, ಅನ್ಯವಿಲ್ಲ ಕಾಣಿರಣ್ಣ. ಅರಿವು ನಿಮ್ಮಲ್ಲಿಯೇ ತದ್ಗತವಾಗಿದೆ


– ಅಲ್ಲಮ



ವಿಶೇಷ ಲೇಖನ

ಗಾಂಧಿ ಮತ್ತು ಭಗವದ್ಗೀತೆಯ ರಾಜಕಾರಣ

–ಸಂಜಯ ಪಲ್ಮೀಕರ್



ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಈ ಹೋರಾಟಕ್ಕೆ ಪೂರಕವಾದಂತೆ ಬಾಲಗಂಗಾಧರ ತಿಲಕರಿಂದ ಹಿಡಿದು ವಿನೋಬಾ ಭಾವೆಯವರವರೆಗೆ ಅನೇಕ ರಾಷ್ಟ್ರೀಯ ವ್ಯಕ್ತಿಗಳು ಭಗವದ್ಗೀತೆ ಕುರಿತು ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಆದರೆ ಈ ವ್ಯಾಖ್ಯಾನಗಳಿಗಿಂತ ಭಿನ್ನ ವ್ಯಾಖ್ಯಾನ ನೀಡಿದ ಗಾಂಧೀಜಿ, ಅದನ್ನು ತಮ್ಮ ಅಹಿಂಸೆಯ ಪರಿಕಲ್ಪನೆಗೆ ಒಂದು ಸಮಗ್ರತೆ ಒದಗಿಸಲು ಬಳಸಿಕೊಂಡ ರೀತಿ ಅನನ್ಯವಾದದು. ಈ ಅನನ್ಯತೆಯನ್ನು ಹಲವು ನೆಲೆಗಳಿಂದ ಪರಿಶೀಲಿಸುವ ಪ್ರಯತ್ನ ಮಾಡುವ ಈ ಸಂಕೀರ್ಣ ಲೇಖನ ಓದುಗರಿಂದ ಸಾಕಷ್ಟು ಶ್ರದ್ಧೆ ಮತ್ತು ಏಕಾಗ್ರತೆಯನ್ನು ಬೇಡುವಂತಿದೆ. ಆದರೆ ಗಾಂಧಿಯಂತಹ ಅನನ್ಯ ಪುರುಷನನ್ನು ಅರ್ಥ ಮಾಡಿಕೊಳ್ಳುವ ಕುತೂಹಲವಿರುವವರಿಗೆ ಇದೊಂದು ಕಡ್ಡಾಯ ಓದು ಎಂದು ಮಾತ್ರ ಹೇಳಬಹುದು.–ಸಂ.

ಎಷ್ಟೊ ಸಲ ಒಂದು ತಾತ್ವಿಕ ಪ್ರಶ್ನೆಯಂತೆ ಕಂಡುಬರುವ ವಿಚಾರವೊಂದಕ್ಕೆ ಐತಿಹಾಸಿಕ ನೆಲೆಯ ಪ್ರತಿಕ್ರಿಯೆ ಬೇಕಾಗುತ್ತದೆ. ಗಾಂಧಿಯ ಅಹಿಂಸೆಯ ಅರ್ಥವನ್ನು ನಿರೂಪಿಸುವುದಕ್ಕೆ, ಅದಕ್ಕೆ ಇತರರನ್ನು ಟೀಕಿಸದೇ ಇರುವ ಮಟ್ಟಿಗಿನ ನಮ್ರತೆ ಎಂಬ ಚೌಕಟ್ಟೇ ಸಾಕೆ? ಈ ಪ್ರಶ್ನೆಯನ್ನು ಉತ್ತರಿಸಲು ಸ್ವಲ್ಪ ಬಳಸುದಾರಿಯನ್ನು ಹಿಡಿಯಬೇಕಾಗುತ್ತದೆ ಹಾಗೂ ನಮ್ಮ ಈ ಪ್ರಶ್ನೆಯನ್ನು ಆಧುನಿಕ ಭಾರತದ ಬೌದ್ಧಿಕ ಇತಿಹಾಸದ ಮೂರು ಎಳೆಗಳ ಹಿನ್ನೆಲೆಯಲ್ಲಿಟ್ಟು ನೋಡಬೇಕಾಗುತ್ತದೆ.. ಅವುಗಳೆಂದರೆ, ಭಗವದ್ಗೀತೆಯ ವಿವಿಧ ಸಂಕಲನಗಳ ರೂಪಾಂತರದ ಮೂಲಕ ಆದ ಅದರ ಆಧುನೀಕರಣ, ಚರಿತ್ರೆಯಲ್ಲಿನ ರಾಕ್ಷಸೀಕರಣ(demonization) ಪ್ರಕ್ರಿಯೆಯ ಉದ್ದೇಶಗಳು ಮತ್ತು ಅದದರಕಾರ್ಯತಂತ್ರಗಳಲ್ಲಿನ ಬದಲಾವಣೆ ಹಾಗ್ತೂ ಸಂಕಷ್ಟದಲ್ಲಿರುವ ಜನರಿಗೆ ಮೊಕ್ಷ ಕರುಣಿಸಬಲ್ಲ ಅಸಾಮಾನ್ಯ ವ್ಯಕ್ತಿತ್ವವೊಂದರ ಹುಡುಕಾಟ.

ಹಿಗ್ಗುತ್ತಿರುವ ಗಾಂಧಿ ವಿಚಾರಗಳ ವಿದ್ವಾಂಸ ಸಮುದಾಯದ ಹೊರಗೆ ಕೂಡ ಗಾಂಧೀಜಿಯ ಅತ್ಯಂತ ಚಿರಪರಿಚಿತ ಕೃತಿಗಳೆಂದರೆ 'ಸತ್ಯದೊಡನೆ ನನ್ನ ಪ್ರಯೋಗ' ಮತ್ತು 'ಹಿಂದ್ ಸ್ವರಾಜ್'. ನಂತರದ ದಿನಗಳಲ್ಲಿ 'ಅನಾಸಕ್ತಿಯೋಗ'(೧೯೨೯) ಎಂಬ ಹೆಸರಿನಿಂದ ಪ್ರಕಟವಾದ, ಗೀತೆಯ ಅನುವಾದಕ್ಕೆ ಅವರು ಬರೆದ ಪರಿಚಯಾತ್ಮಕ ಪುಸ್ತಕ ದೂರದ ಮೂರನೆಯ ಕೃತಿ. ಗೀತೆಯ ಬಗೆಗಿನ ಗಾಂಧೀಜಿಯವರ ಇತರ ವ್ಯಾಖ್ಯಾನಗಳು ಇಂದಿನ ಸಾಮಾನ್ಯ ಜನರಿಗೆ ತಿಳಿದಿರುವುದು ಬಹಳ ಕಡಿಮೆ ಎನ್ನಬಹುದು. ಇದು ಅರ್ಥಮಾಡಿಕೊಳ್ಳಬಹುದಾದ ಸಂಗತಿ. ಏಕೆಂದರೆ ಮೂಲದಲ್ಲಿ ಆಶ್ರಮವಾಸಿಗಳಿಗಾಗಿ ರಚಿಸಲ್ಪಟ್ಟ ಇವು ಸಾಕಷ್ಟು ಸಂಕ್ಷಿಪ್ತವೂ ಆಗಿಲ್ಲ. ಅಷ್ಟು ವ್ಯವಸ್ಥಿತವಲ್ಲದ ಅಲ್ಲಲ್ಲಿ ವಿಷಯಾಂತರ ಮತ್ತು ಪ್ರವಚನಗಳ ತುಸು ಅಡ್ಡಾದಿಡ್ಡಿ ಶೈಲಿಯಿಂದಾಗಿ, ಇಂದು ಪುಸ್ತಕರೂಪದಲ್ಲಿ ಬರುತ್ತಿರುವ ಅವು ವಿದ್ವಾಂಸರನ್ನೂ ಕೂಡ ಪ್ರಭಾವಿಸುವ ಸಾಧ್ಯತೆಗಳು ಕಡಿಮೆ. ಆದರೂ ಸಹ, ಪ್ರಸ್ತುತ ಬೌದ್ಧಿಕ ಸಂದರ್ಭದ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಗಮನಿಸಿದಾಗ ಭಾರತದ ರಾಷ್ಟ್ರವಾದವು ಉಗ್ರವಾದ ಮತ್ತು ಕೋಮುವಾದದ ಕಡೆಗೆ ಜಾರುವುದನ್ನು ಗಾಂಧೀಜಿಯವರು ವಿರೋಧಿಸುತ್ತಾ ಬಂದರೂ, ಅದರ ಕೆಲವು ಬೌದ್ಧಿಕ ಧಾರೆಗಳತ್ತ ಸೆಳೆಯಲ್ಪಟ್ಟಿದ್ದಂತೂ ನಿಜ. ಬಂಕಿಮಚಂದ್ರ ಚಟ್ಟೋಪಾಧ್ಯಾಯರಿಂದ ಪ್ರಾರಂಭವಾಗಿ, ೧೯ನೆಯ ಶತಮಾನದ ಕೊನೆಯ ಮತ್ತು ೨೦ನೆಯ ಶತಮಾನದ ಆರಂಭಕಾಲದ ಭಾರತದ ರಾಷ್ಟ್ರೀಯತೆಯ ತುರ್ತು ರಾಜಕೀಯ ಅಗತ್ಯಕ್ಕೆ ತಕ್ಕಂತೆ ಗೀತೆಯನ್ನು ಆಧುನೀಕರಿಸುವ ಪ್ರವೃತ್ತಿ ಇತ್ತು. ಗಾಂಧೀಜಿಯವರು ಈ ರಾಜಕೀಯಕ್ಕೆ ಇಡಿಯಾಗಿ ತಮ್ಮ ಸಹಮತವನ್ನು ವ್ಯಕ್ತಪಡಿಸಿರಲಿಲ್ಲ. ಹಾಗೆ ನೋಡಿದರೆ ಅವರಿಗೆ ಈ ಬಗ್ಗೆ ಗಂಭೀರವಾದ ಕೆಲ ಭಿನ್ನಾಭಿಪ್ರಾಯಗಳಿದ್ದವು. ಆದರೆ ತಿಲಕ್ ಮತ್ತು ಅರಬಿಂದೋ ಅವರಂತೆ ಗಾಂಧೀಜಿಯವರೂ ಸಹ ಗೀತೆಯನ್ನು ಆಧುನಿಕ ಭಾರತದ ಕೇಂದ್ರ ಪಠ್ಯವನ್ನಾಗಿಸಿದ್ದು ನಿಜ.

ಶತಮಾನಗಳಿಂದ ಗೀತೆಯ ಬಗ್ಗೆ ಎಷ್ಟೋ ವ್ಯಾಖ್ಯಾನಗಳು ಬಂದರೂ ಆಧುನಿಕಪೂರ್ವ ಭಾರತದ ಬೌದ್ಧಿಕ ಜೀವನದಲ್ಲಿ ಗೀತೆಗೆ ಬಹಳವಾದ ಪ್ರಾಮುಖ್ಯತೆಯಿರಲಿಲ್ಲ. ಚೋದ್ಯದ ಸಂಗತಿಯೆಂದರೆ ಈ ಪಠ್ಯದ ಅದೃಷ್ಟ ಕುಲಾಯಿಸಿದ್ದು ಸಾಮ್ರಾಜ್ಯಶಾಹಿಯ ಆಳ್ವಿಕೆಯ ಸಂದರ್ಭದಲ್ಲಿ. ೧೭೮೫ರಲ್ಲಿ ಚಾರ್ಲ್ಸ್‌ವಿಲ್ಕಿನ್ಸ್ ಎಂಬ ಕಂಪನಿ ಅಧಿಕಾರಿಯಿಂದ ಒಂದು, ಮತ್ತು ಒಂದು ಶತಮಾನದ ನಂತರ ೧೮೮೫ ರಲ್ಲಿ ಎಡ್ವಿನ್ ಆರ್ನಾಲ್ಡ್ ಎಂಬುವವರಿಂದ ಮತ್ತೊಂದು ಹೀಗೆ ಗೀತೆಯ ಎರಡು ಇಂಗ್ಲಿಷ್ ಅನುವಾದಗಳು ಪ್ರಕಟವಾಗಿ ಅವುಗಳ ಪ್ರತಿಗಳು ಎಲ್ಲೆಡೆ ದೊರೆಯುವಂತಾದುವು. ಪೂರ್ವದಲ್ಲಿ ಭಾರತದ ಸಾಂಪ್ರದಾಯಿಕ 'ಪಂಡಿತ' ವಲಯಕ್ಕೆ ಮಾತ್ರ ಸೀಮಿತವಾಗಿದ್ದ ಗೀತೆಯು ಈಗ ಪೌರ್ವಾತ್ಯವಾದಿಗಳಿಂದ, ಥಿಯೋಸಫಿಸ್ಟರಿಂದ, ಕ್ರೈಸ್ತ ಮಿಷನರಿಗಳಿಂದ, ಹಾಗೂ ಇಂಗ್ಲಿಷ್ ಶಿಕ್ಷಣ ಪಡೆದ ಭಾರತೀಯರಿಂದ ಚರ್ಚಿಸಲ್ಪಡತೊಡಗಿತು.

ಈ ರೀತಿಯಲ್ಲಿ ಗೀತೆಯ ಪ್ರಾಮುಖ್ಯತೆಯು, ಇದು ಹಿಂದೂ ತಾತ್ವಿಕತೆಯ ಸಾರಸಂಗ್ರಹ ಎಂಬ ನಂಬಿಕೆ ೧೯ನೆಯ ಶತಮಾನದ ಅಂತ್ಯದ ವೇಳೆಗೆ ಚೆನ್ನಾಗಿ ನೆಲೆಗೊಂಡಿತ್ತು. ಈಗ ಪ್ರಕಟಗೊಳ್ಳಬೇಕಾಗಿದ್ದುದು ಅದರ ಅರ್ಥ. ಪುರಾತನವಾದ ಈ ಪಠ್ಯವನ್ನು ವರ್ತಮಾನಕ್ಕೆ ಸಲ್ಲುವಂತೆ ಮಾಡುವ ಪ್ರಯತ್ನದಲ್ಲಿ ಭಾರತದ ರಾಷ್ಟ್ರೀಯವಾದಿಗಳು, ಗೀತೆಯ ಸುತ್ತ ಬೆಳೆದಿದ್ದ, ಕೆಲ ಆಯ್ದ ಭಾಗಗಳಿಗೆ ಟೀಕುಗಳನ್ನು ಬರೆಯುವ ಇಂಗ್ಲಿಷ್ ಅನುವಾದಕರ ಪರಂಪರೆಯನ್ನು ಅನುಕರಿಸಿದರು. ಈ ಪರಂಪರೆಯಲ್ಲಿ ಗೀತೆಯ ಶ್ಲೋಕಗಳನ್ನು ಮತ್ತು ಅದರ ಯೋಗವಾರು ವಿಭಾಗಗಳನ್ನು, ಕರ್ಮಾಚರಣೆ ಮತ್ತು ವೈರಾಗ್ಯದ ಬಗೆಗಿನ ಚರ್ಚೆಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಲಾಗುತ್ತಿತ್ತು. ಈ ಹಿನ್ನೆಲೆಯನ್ನು ನಿರ್ಲಕ್ಷಿಸಿದ ಆಧುನಿಕ ಅನುವಾದಕರು ಗೀತೆಯ ಯೋಗವಾರು ವಿಭಾಗಗಳಿಗೆ ಸರಳ ಅರ್ಥವನ್ನು ನೀಡಿದ್ದರಿಂದ, ಕೆಲವು ಶ್ಲೋಕಗಳು ಇದ್ದಕ್ಕಿದ್ದಂತೆ ಪ್ರಾಮುಖ್ಯತೆ ಪಡೆದವು ಮತ್ತು ಗೀತೆಯ ಸಂದೇಶವೇ ಬದಲಾಗಿ ಹೋಯಿತು. ಅಲ್ಲಿಯವರೆಗೆ ಒಂದು ಆಧ್ಯಾತ್ಮಿಕ ಅಭ್ಯಾಸ ಪಠ್ಯವಾಗಿದ್ದ ಗೀತೆ, ಒಂದು ತಾತ್ವಿಕ ಮತ್ತು ರಾಜಕೀಯ ಪಠ್ಯವಾಗಿಬಿಟ್ಟಿತು.

ಈ ಪ್ರವೃತ್ತಿಯು ಪ್ರಾರಂಭವಾಗಿದ್ದು ಬಂಕಿಮಚಂದ್ರರಿಂದ. ಗೀತೆಯನ್ನು ಮೊಟಕುಗೊಳಿಸಿ ಮಾಡಿರುವ ತಮ್ಮ ವ್ಯಾಖ್ಯಾನದಲ್ಲಿ ಅವರು, ಗೀತೆಯ ಎರಡನೇ ಅಧ್ಯಾಯದಲ್ಲಿ ಬರುವ, ಈಗ ಬಹಳ ಪ್ರಖ್ಯಾತವಾಗಿರುವ 'ಕರ್ಮಣ್ಯೇವಾಧಿಕಾರಸ್ತೇ' ಶ್ಲೋಕವನ್ನು ಕುರಿತು, ಆಚಾರ್ಯರುಗಳು 'ಕರ್ಮ' ಪದದ ಅರ್ಥದ ವಿಚಾರದಲ್ಲಿ ಗೊಂದಲವನ್ನು ಸೃಷ್ಟಿಸಿದ್ದಾರೆ ಎನ್ನುತ್ತಾರೆ. ಅದರಿಂದಾಗಿ ನಾವು ಕರ್ಮ ಎಂದರೆ ವೈದಿಕ ಆಚರಣೆ ಎಂದು ಅರ್ಥ ಮಾಡಿಕೊಳ್ಳುತ್ತೇವೆ. ಇದು ಅಸಂಬದ್ಧ. ಅದಕ್ಕೆ ಕೆಲಸ ಅಥವಾ ಕ್ರಿಯೆ ಎಂಬ ಅರ್ಥವಿರಬೇಕಾಗುತ್ತದೆ. ಇದರಿಂದಾಗಿ ಕೇವಲ ಒಂದು ಪದ ಮಾತ್ರವಲ್ಲದೆ ಇಡೀ ಗೀತೆಯೇ ಒಂದು ಮುಕ್ತ ಅರ್ಥವಿವರಣೆಯ ಕ್ಷೇತ್ರಕ್ಕೆ ಕೊಂಡೊಯ್ಯಲ್ಪಟ್ಟಿತು. ಇಲ್ಲಿಂದ ಮುಂದೆ ವ್ಯಾಖ್ಯಾನಕಾರರಿಗೆ 'ಕರ್ಮ' ಎಂಬ ಪದವನ್ನು ಸಾಮಾನ್ಯವಾಗಿ ಕ್ರಿಯೆ ಎಂಬ ಅರ್ಥದಲ್ಲಿ ಬಳಸುವುದು ಸಾಧ್ಯವಾಯಿತು ಮತ್ತು ಗೀತೆಯು ಧಾರ್ಮಿಕ ಕ್ರಿಯೆಯ ಬಗ್ಗೆ ಹೇಳುವುದನ್ನು ರಾಜಕೀಯ ಕ್ರಿಯೆಯ ಕಡೆಗೆ ರವಾನಿಸುವುದು ಸಾಧ್ಯವಾಯಿತು. ಒಂದು ಕಾಲಕ್ಕೆ ವೈದಿಕಾಚರಣೆ ಎಂಬ ಅರ್ಥವಿದ್ದ 'ಕರ್ಮಯೋಗ'ವೆಂಬುದು ಈಗ 'ಕ್ರಿಯಾಯೋಗ' ಎಂಬ ಅರ್ಥ ಪಡೆಯಿತು. ಎಲ್ಲ ಕರ್ಮಾಚರಣೆಗಳನ್ನು ತೊರೆಯುವುದು ಎನ್ನುವ ಅರ್ಥವಿದ್ದ 'ಸಂನ್ಯಾಸ'ವೆಂಬ ಪದವು ಈಗ ಎಲ್ಲ ಬಯಕೆಗಳನ್ನೂ ತ್ಯಜಿಸುವುದು ಎಂಬ ಅರ್ಥವನ್ನು ಪಡೆಯಿತು. ನಿಷ್ಕ್ರಿಯೆಯ ಆರೋಪಕ್ಕೆ ಒಳಗಾಗಿದ್ದ ಒಂದು ರಾಷ್ಟ್ರವು ಈಗ 'ಕ್ರಿಯೆಯ ತತ್ವ' ಎನ್ನುವ ಒಂದು ಸಿದ್ಧಾಂತವನ್ನು ಪಡೆದು ಕ್ರಿಯಾಶೀಲವಾಯಿತು.

ಗೀತೆಯ ಬಗೆಗಿನ ತಿಲಕರ ವ್ಯಾಖ್ಯಾನದಲ್ಲಿ ಇದು ಸ್ಪಷ್ಟವಾಗಿದೆ. 'ಲೋಕಸಂಗ್ರಹ ತತ್ವ' ಅಂದರೆ, ಲೋಕಕಲ್ಯಾಣಕ್ಕಾಗಿ ನಾವು ಶ್ರಮಿಸಬೇಕೆಂದು

ಗೀತೆಯು ಕರೆ ನೀಡುತ್ತದೆ ಎಂಬುದನ್ನು ಪ್ರತಿಪಾದಿಸುವುದು ಅವರಿಗೆ ಸಾಧ್ಯವಾಯಿತು. ಏಕೆಂದರೆ ಅವರು ಗೀತೆಯ ಬಗೆಗಿನ ತಮ್ಮ ವಿವರಣೆಯನ್ನು ನೀಡುವ ಕಾಲಕ್ಕೆ ಅದರ ವಿಭಾಗಗಳ ಅರ್ಥವು ಕ್ರೋಡೀಕರಣಗೊಂಡಾಗಿತ್ತು. 'ಲೋಕಸಂಗ್ರಹ'ದ ಶಬ್ದಾರ್ಥ 'ಲೋಕಗಳ' ಅಂದರೆ ಪ್ರಪಂಚಗಳ ರಕ್ಷಣೆ ಮತ್ತು ನಿರ್ವಹಣೆ ಎಂಬುದು. ೧೪ನೆಯ ಶತಮಾನದ ಅಂತ್ಯದಲ್ಲಿ ಪ್ರಕಟವಾದ ಒಂದು ಮುಖ್ಯವಾದ ಪಠ್ಯ(ಜೀವನ್ಮುಕ್ತಿವಿವೇಕ)ವು 'ಲೋಕಸಂಗ್ರಹ'ಕ್ಕಾಗಿ ಶ್ರಮಿಸುವ ಪರಿಕಲ್ಪನೆಯನ್ನು ಈ ರೀತಿಯಲ್ಲಿ ವಿವರಿಸುತ್ತದೆ; ಸೇವೆ ಮಾಡಬೇಕಾದ ಲೊಕವನ್ನು ಮೂರು ವಿಧದಲ್ಲಿ ವಿಂಗಡಿಸಬಹುದು: ಮುಮುಕ್ಷುಗಳ ಲೋಕ, ಭಕ್ತರ ಲೋಕ, ಇವೆರಡೂ ಅಲ್ಲದವರ ಲೋಕ– ಯೋಗಿಯ ಉಪದೇಶದಿಂದ ಮುಮುಕ್ಷಗಳ ಲೋಕದ ಸೇವೆಯಾಗುತ್ತದೆ, ಯೋಗಿಯ ತಪಸ್ಸಿನಿಂದ ಭಕ್ತರ ಲೋಕಕ್ಕೆ ಸೇವೆಯಾಗುತ್ತದೆ, ನಂಬಿಕೆಯಿಲ್ಲದವರು ಕೇವಲ ಯೋಗಿಯ ದರ್ಶನಮಾತ್ರದಿಂದಲೇ ಪಾವನರಾಗುತ್ತಾರೆ. ಇದಕ್ಕೆ ಪ್ರತಿಯಾಗಿ ತಿಲಕರು, ಲೋಕವೆಂದರೆ ಜನತೆ ಅಥವಾ ಸಮಾಜ, ಮತ್ತು ಲೋಕಸಂಗ್ರಹ ಎಂದರೆ ಸಾರ್ವಜನಿಕ ಹಿತ ಎಂಬ ಅರ್ಥಗಳನ್ನು ಬಳಕೆಗೆ ತಂದರು. ಈ ರೂಪಾಂತರವು ಸಾಧ್ಯವಾಗಿದ್ದು, ಈಗಾಗಲೇ ಸಾಮ್ರಾಜ್ಯಶಾಹಿ ಭಾಷಾಂತರಕಾರರಿಂದ ಆರಂಭವಾದ, ಹೆಚ್ಚು ಗಂಭೀರವಾಗಿ 'ಕರ್ಮ' 'ಕ್ರಿಯೆ'ಯಾಗಿ ರೂಪಾಂತರದಿಂದ ಮತ್ತು ಅದನ್ನು ಮುನ್ನೆಲೆಗೆ ತಂದ ಬಂಕಿಮರಿಂದ. ವಾಸ್ತವದಲ್ಲಿ ಇಲ್ಲಿ ಎರಡು ಘಟ್ಟಗಳ ಕಾರ್ಯವಿಧಾನವಿದೆ. ಕರ್ಮ ಎಂದರೆ ಯಾವುದೇ ಕ್ರಿಯೆಯಾಗಬಹುದು ಎಂದು ವಾದಿಸಿದ ನಂತರ ಈ ವ್ಯಾಖ್ಯಾನಕಾರರು ಆನಂತರ ಕೆಲವು ನಿರ್ದಿಷ್ಟ ಕ್ರಿಯೆಗಳ ಬಗ್ಗೆ ಗಮನ ಕೇಂದ್ರೀಕರಿಸಿದರು. ಹಾಗಾಗಿ ಗೀತೆಯು ಹೇಳುವ ಕರ್ಮಾಚರಣೆ ಎಂಬರ್ಥದ ಧಾರ್ಮಿಕ ಕ್ರಿಯೆಯು, ರಾಜಕಿಯ/ಸಾಮಾಜಿಕ ಕ್ರಿಯೆಯಾಗಿ ರೂಪಾಂತರವಾಯಿತು. ಗೀತೆಯು 'ನೀನು ಯಾವುದೇ ಮೋಹವಿಲ್ಲದೆ (ವೈದಿಕ) ಕರ್ಮಾಚರಣೆಗಳನ್ನು ಮಾಡು' ಎಂದು ಹೇಳಿದರೆ ಅದನ್ನು 'ನೀನು ರಾಷ್ಟ್ರೀಯವಾದೀ ರಾಜಕಾರಣವನ್ನು ಸ್ವಾರ್ಥವಿಲ್ಲದೆ ಮಾಡು' ಎಂದು ಅರ್ಥೈಸಲಾಯಿತು. ತಿಲಕರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಗೀತೆಯ ಅಧಿಕೃತ ವಕ್ತಾರರಾಗಿ, ದೇಶಕ್ಕಾಗಿ ನಾವು ಯಾರನ್ನಾದರೂ ಕೊಲ್ಲಬೇಕಾಗಿ ಬಂದರೆ, ಆ ಕಾರ್ಯವನ್ನು ಯಾವುದೇ ರಾಗ–ದ್ವೇಷವಿಲ್ಲದೆ, ಕೋಪವಿಲ್ಲದೇ ಮಾಡಬೇಕು ಎಂದು ಸ್ವಲ್ಪ ದೂರವೆನಿಸುವ ವ್ಯಾಖ್ಯಾನ ಮಾಡುತ್ತಾರೆ.

ರೂಪಾಂತರದ ಈ ಪ್ರಕ್ರಿಯೆಯು ತನ್ನ ವಿವೇಚನಾರಹಿತ ಬೀಸಿನಲ್ಲಿ ಗೀತೆಯ ಇತರ ವಿಭಾಗಗಳನ್ನು ಆಕ್ರಮಿಸಿಕೊಂಡಿತು. ಇದರಿಂದಾಗಿ 'ಸರ್ವ ಸಂಕಲ್ಪ ಸನ್ಯಾಸಿ' ಯಲ್ಲಿರುವ 'ಸನ್ಯಾಸಿ', 'ಸರ್ವಾರಂಭ ಪರಿತ್ಯಾಗಿ' ಯಲ್ಲಿನ 'ಆರಂಭ' ಮತ್ತು ಪ್ರಖ್ಯಾತ 'ಕರ್ಮಣಿ ಏವ ಅಧಿಕಾರಃ ತೇ' ಶ್ಲೋಕದಲ್ಲಿರುವ 'ಅಧಿಕಾರ' ಇವೆಲ್ಲವೂ ರೂಪಾಂತರಗೊಂಡವು. ಮೀಮಾಂಸಕರು ಬಳಸುವ ಅರ್ಥದಲ್ಲಿ 'ಅಧಿಕಾರ' ಎಂದರೆ, ವ್ಯಕ್ತಿಯೊಬ್ಬನಿಗೆ ಧರ್ಮಾಚರಣೆಯನ್ನು ಕೈಗೊಳ್ಳುವ ಅರ್ಹತೆಯನ್ನು ತಂದುಕೊಡುವ ಆಸ್ತಿಯ ಒಟ್ಟು ಮೊತ್ತ. ಆದರೆ ಆಧುನಿಕ ಭಾಷಾಂತರಗಳಲ್ಲಿ ಅದನ್ನು 'ಹಕ್ಕು', 'ಅರ್ಹತೆ', 'ಪ್ರೇರಣೆ', 'ಕೈಗೊಂಡ ಕೆಲಸ', 'ಕರ್ತವ್ಯ' ಎಂದು ವಿವಿಧ ರೀತಿಯಲ್ಲಿ ಅರ್ಥೈಸಲಾಯಿತು.. ತಪಸ್ವಿಗಳ ಸಾಹಿತ್ಯದಲ್ಲಿ 'ಆರಂಭ' ಎಂಬ ಪದವು ಧರ್ಮಾಚರಣೆಗಳು ಎಂಬ ಅರ್ಥದಲ್ಲಿ ಬಳಸಲ್ಪಡುತ್ತಿತ್ತು. 'ಸರ್ವಾರಂಭ ಪರಿತ್ಯಾಗಿ' ಎಂಬುದನ್ನು ಸಕಲ ಧರ್ಮಾಚರಣೆಗಳನ್ನೂ ತ್ಯಜಿಸಿದವನು ಎಂಬ ಅರ್ಥದಲ್ಲಿ ಬಳಸಲಾಗುತ್ತಿತ್ತು. 'ಸಂಕಲ್ಪ' ಎಂದರೆ ಆಚರಣೆಯ ಹಿಂದಿನ ಉದ್ದೇಶ ಎಂಬ ಅರ್ಥವಿರುತ್ತಿತ್ತು. ಈಗ 'ಆರಂಭ'ವು 'ಉದ್ದಿಮೆ'ಯಾದರೆ, 'ಸಂಕಲ್ಪ'ವು 'ಬಯಕೆ' ಅಥವಾ ಕ್ರಿಯೆಯ ಹಿಂದಿನ 'ಸ್ವಾರ್ಥ= ಉದ್ದೇಶ' ಎಂದಾಯಿತು.

ತಮ್ಮ ಕಾಲದ ಇಂಥ ಬೌದ್ಧಿಕ ಪ್ರವೃತ್ತಿಯಲ್ಲಿ ಗಾಂಧೀಜಿಯವರೂ ಸಹ ಭಾಗಿಯಾಗಿದ್ದು ಆಶ್ಚರ್ಯವೇನಲ್ಲ. ಅವರೂ ಕೂಡ ಆಧುನಿಕ ಪೂರ್ವ ವಿಭಾಗೀಕರಣವನ್ನು ಒಂದು ವಿಭಿನ್ನ ತಾತ್ವಿಕ ಕಾರ್ಯಸಾಧನೆಗಾಗಿ, ಅಸಾಂದರ್ಭಿಕಗೊಳಿಸಲ್ಪಟ್ಟು ಸರಳೀಕರಣಗೊಂಡ ಅರ್ಥದಲ್ಲೇ ಬಳಸುತ್ತಾರೆ. ಗೀತೆಯ ವಿಚಾರದಲ್ಲಿ ಈ ನಿಲುವು ಹೊಂದಿಯೂ ಆಜೀವಿಯೂ ಉಗ್ರವಾದಿ ಹಾಗೂ ಕೋಮುವಾದೀ ರಾಷ್ಟ್ರವಾದಕ್ಕೆ ವಿರುದ್ಧವಾಗಿದ್ದುದು ಹೇಗೆಂಬುದು ಒಂದು ಸಣ್ಣ ಒಗಟಾಗಿ ಉಳಿದಿದೆ. ತಿಲಕ್, ಬಂಕಿಮಚಂದ್ರ ಮತ್ತು ಅರವಿಂದರು ಯಾವ ಪ್ರವೃತ್ತಿಯ ಬಗ್ಗೆ ಸಂದಿಗ್ಧತೆಯಲ್ಲಿದ್ದರೋ ಅದನ್ನು ಗಾಂಧೀಜಿ ನಿರಾಕರಿಸಿದ್ದನ್ನು ಗಮನಿಸಿದರೆ ನಮ್ಮ ಒಗಟಿಗೆ ಉತ್ತರ ದೊರೆತುಬಿಡುತ್ತದೆ.

ಆಧುನಿಕ ಭಾರತದ ಬೌದ್ಧಿಕ ಇತಿಹಾಸದ ಈ ಎಳೆಯು, ರಾಕ್ಷಸೀಕರಣ(demonization)ದ ಒಂದು ಎಳೆಯಾಗಿತ್ತು. ಶತಮಾನಗಳಿಂದ ಅದು ವಿವಿಧ ಗುರಿಗಳನ್ನು ಹೊಂದಿತ್ತು. ಚಾರ್ವಾಕ ಮತ್ತು ಅವನ ಅನುಯಾಯಿಗಳು, ನಿರೀಶ್ವರವಾದಿಗಳು, ತಂತ್ರದ ಅನುಯಾಯಿಗಳು, ನಿಷಿದ್ಧ ಆಚರಣೆಗಳನ್ನು ಕೈಗೊಳ್ಳುತ್ತಿದ್ದವರು, ಯಕ್ಷಿಣಿ ವಿದ್ಯೆ ಕಲಿತವರು, ಬೌದ್ಧರು– ಇವರನ್ನೆಲ್ಲ ಅಸುರರೆಂದು ಕರೆಯಲಾಗುತ್ತಿತ್ತು ಮತ್ತು ಅವರ ಲೋಕಜ್ಞಾನವನ್ನು ಒಂದಲ್ಲ ಒಂದು ರೀತಿಯಲ್ಲಿ 'ಅಸುರೀ' ಎನ್ನಲಾಗುತ್ತಿತ್ತು. ನಮ್ಮ ಪುರಾಣಗಳಲ್ಲಿ ದೈತ್ಯರ ಕತೆಗಳೇ ತುಂಬಿವೆ. ವೈದಿಕಾಚರಣೆಗಳಿಗೆ ಅಡ್ಡಿಯುಂಟುಮಾಡುತ್ತಿದ್ದ, ದೇವತೆಗಳ ಮೇಲೆ ದುರಾಕ್ರಮಣವನ್ನು ಮಾಡುತ್ತಿದ್ದ ದುಷ್ಟ ವೇಣನ ಕತೆಯು ಸುಮಾರು ಒಂದು ಡಜನ್ ಪುರಾಣಗಳಲ್ಲಿ ಬರುತ್ತದೆ. ಗೀತೆಯ ೧೬ನೆಯ ಅಧ್ಯಾಯವು ನಾರಾಯಣನನ್ನು ದ್ವೇಷಿಸುವ ಅಸುರೀ ಜನರ ಬಗ್ಗೆ ಕಣ್ಣಿಗೆ ಕಟ್ಟುವ ವಿವರಗಳನ್ನು ಹೊಂದಿದೆ.

ಅಸುರರು, ರಾಕ್ಷಸರ ಪಾತ್ರಗಳು ಹೊಸವೇನಲ್ಲ. ಇಲ್ಲಿ ಹೊಸದಾದುದು ಯಾವುದೆಂದರೆ, ಆಧುನಿಕ ಭಾರತದಲ್ಲಿ ಈ ಪಾತ್ರಗಳನ್ನು ಬಳಸಿಕೊಂಡ ಬಗೆ. ಈ ಹಿಂದೆ ಇವನ್ನು ಪೌರಾಣಿಕ ಪಾತ್ರಗಳೆಂದು ಮಾತ್ರ ಪರಿಗಣಿಸುತ್ತಿದ್ದರೆ, ಈಗ ಇವನ್ನು ನಮ್ಮ ಮಧ್ಯೆ ಅಸ್ತಿತ್ವದಲ್ಲಿರುವ ನಿಜರೂಪಗಳು ಎಂಬ ರೀತಿಯಲ್ಲಿ ಕಾಣುವಂತಾಯಿತು. ಹಿಂದೆಯೂ ಕೂಡ ರಾಜಕೀಯ ವಿರೋಧಿಗಳನ್ನು ಬಿಡುಬೀಸಾಗಿ ರಾಕ್ಷಸೀಕರಿಸಲಾಗುತ್ತಿತ್ತು. ಆದರೆ ಆಗ ಅದು ವಿರೋಧಿಗಳ ಧಾರ್ಮಿಕ ಅಸ್ಮಿತೆಗಳನ್ನು ಪರಿಗಣಿಸುತ್ತಿರಲಿಲ್ಲ. ಮಧ್ಯಯುಗೀನ ಶಾಸನಗಳು ಮತ್ತು ಕಾವ್ಯಗಳ ನಿರೂಪಣೆಗಳಲ್ಲಿ, ಆಕ್ರಮಣಕಾರರು ಮತ್ತು ಧಾಳಿ ಮಾಡುವ ಸೈನ್ಯಗಳನ್ನು ಕ್ರೂರರು ಮತ್ತು ವಿನಾಶಕಾರೀ ದೈತ್ಯರು ಎಂದು ಚಿತ್ರಿಸುವುದು ಸಾಹಿತ್ಯದ ಒಂದು ಸಂಪ್ರದಾಯವೇ ಆಗಿತ್ತು. ಈಗ ಆ ಚಿತ್ರಣಗಳನ್ನು ವಾಸ್ತವಿಕ ವರದಿಗಳೆಂಬಂತೆ ಪರಿಗಣಿಸಿ, ಅವನ್ನು ಆ ಕತ್ತಲ ಯುಗದ ಇತಿಹಾಸವನ್ನು ಬರೆಯಲು ಆಕರಗಳಾಗಿ ಬಳಸಲಾಯಿತು. ಆಯ್ದ ಐತಿಹಾಸಿಕ ಘಟನೆಗಳ ಜೊತೆ ಪೌರಾಣಿಕ ಕಥೆಗಳನ್ನು ಬೆಸೆಯಲಾಯಿತು. ಇಡಿಯಾಗಿ ಸಮುದಾಯಗಳನ್ನೆ ಧಾರ್ಮಿಕ ಹಿನ್ನೆಲೆಯಲ್ಲಿ ಗುರುತಿಸಿ ಅವರನ್ನು ಕಾಮುಕರು, ವ್ಯಸನಿಗಳು, ದೇವಾಲಯ ಮತ್ತು ಮೂರ್ತಿಭಂಜನೆಯ ಘೋರ ವಿಧ್ವಂಸಕರು, ದುರ್ಜನರು ಎಂಬ ಹಣೆ ಪಟ್ಟಿಗಳನ್ನು ನೀಡಿ ರಾಕ್ಷಸೀಕರಣಗೊಳಿಸಲಾಯಿತು. 'ಸ್ವ'ಎಂಬುದನ್ನು ಬ್ರಾಹ್ಮಣಧರ್ಮದಿಂದಾಚೆಗೆ ಹಿಗ್ಗಿಸಲಾಯಿತು; ಅಸುರೀ 'ಇತರ'ರು ಸುರರು ಮತ್ತು ಬ್ರಾಹ್ಮಣರನ್ನು ಖಂಡಿಸುವವರ ಅಭಿದಾನವಾಗಿ ಉಳಿಯಲಿಲ್ಲ. ಅಸುರೀಕರಣವು, ೧೯ ನೆಯ ಶತಮಾನದ ಅಂತ್ಯದ ವೇಳೆಗೆ ಪ್ರಾರಂಭವಾದ ಮತೀಯ ಧ್ರುವೀಕರಣದ ಭಾಗವಾಯಿತು.

ತಮ್ಮ ಕಾಲದ ಈ ಪ್ರವೃತ್ತಿಯನ್ನು ಒಪ್ಪಿಕೊಂಡ, ಅಥವಾ ಒಂದು ನಿರ್ಧಾರಕ್ಕೆ ಬರಲಾಗದ ಆಧುನಿಕ ಭಾರತದ ಇತರ ವ್ಯಾಖ್ಯಾನಕಾರರ ಹಾಗಲ್ಲದೆ ಗಾಂಧೀಜೀಯವರು ಇದರ ವಿರುದ್ಧ ಒಂದು ಸ್ಪಷ್ಟವಾದ ನಿಲುವನ್ನು ತಳೆದರು. ತಮ್ಮ ಪೂರ್ವಿಕರಿಗಿಂತ ಮತ್ತು ಸಮಕಾಲೀನರಿಗಿಂತ ಭಿನ್ನವಾದ ನಿಲುವನ್ನು ತಳೆಯುವುದು ಗಾಂಧೀಜಿಗೆ ಸಾಧ್ಯವಾಗಿದ್ದು, ಅವರು, ಗುಂಪುಗಳ ಅಥವಾ ಸಮುದಾಯಗಳ ರೂಢಿಗತ ಮಾದರಿಗಳಿಗೆ ಕಟ್ಟುಬೀಳುವ ಅಭ್ಯಾಸವುಳ್ಳವರಾಗಿರಲಿಲ್ಲ ಎಂಬ ಕಾರಣದಿಂದಲ್ಲ. ಸುರೀ ಮತ್ತು ಅಸುರೀ ಪರಿಕಲ್ಪನೆಗಳನ್ನು ಗಾಂಧೀಜಿ ಅರ್ಥೈಸಿಕೊಂಡಿದ್ದು, ಬಯಕೆ ಮತ್ತು ಕೋಪಗಳಿಂದ ಅಸುರೀ ಎಂಬುದು ಹುಟ್ಟುತ್ತದೆ ಎಂಬ ಉಪನಿಷತ್ತುಗಳ ಒಳನೋಟದಿಂದ. ಆದ್ದರಿಂದ ಅವರಿಗೆ ಒಂದು ಭಿನ್ನವಾದ ನಿಲುವನ್ನು ತಾಳುವುದು ಸಾಧ್ಯವಾಯಿತು. ಅಸುರರದ್ದೇ ಆದ ಒಂದು ವರ್ಗವಿಲ್ಲ, ಪ್ರತಿಯಾಗಿ ಅಸುರತ್ವವು ನಮ್ಮೆಲ್ಲರೊಳಗೂ ಇದೆ ಎಂದಾದರೆ, ಅಸುರರ ಜೊತೆ ವ್ಯವಹರಿಸುವಾಗ ಹಿಂಸಾತ್ಮಕ ಮಾರ್ಗಗಳನ್ನು ಅನುಸರಿಸುವ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಆದರೆ ಗೀತೆಯ ಇತರೆ ವ್ಯಾಖ್ಯಾನಕಾರರಿಗೆ ಇವುಂದು ಮುಖ್ಯ ಪ್ರಶ್ನೆಯಾಗಿತ್ತು. ಈ ಪ್ರಶ್ನೆಯನ್ನು ಎದುರಿಸಲು ತುಸು ಚಾತುರ್ಯಬೇಕು. ಏಕೆಂದರೆ ಗೀತೆಯ ದ್ವಂದ್ವವು ದುಷ್ಟ ಮತ್ತು ಶಿಷ್ಟ ಶಕ್ತಿಗಳ ನಡುವಿನ ಧರ್ಮಯುದ್ಧಕ್ಕೆ ಸಮ್ಮತಿ ನೀಡುತ್ತದೆ. ಆದರೆ ಈ ಯುದ್ಧವನ್ನ ನಿರ್ವಹಿಸುವುದನ್ನು ಕೂಡ ಗೀತೆಯು ಕಷ್ಟಕರವಾಗಿಸಿದೆ.

ಈ ಕಷ್ಟವನ್ನು ಅರ್ಥಮಾಡಿಕೊಳ್ಳಲು ನಾವು, 'ಅಸುರೀ'ಯ ವಿರುದ್ಧವಾದ 'ದೈವೀ'ಯನ್ನು ಗಮನಿಸಬೇಕು. ದೈವೀ ವ್ಯಕ್ತಿಯು ಇತರನ್ನು ಟೀಕಿಸದವನು, ದ್ವೇಷವನ್ನು ಮೀರಿದವನು, ಶುದ್ಧನಾದವನು, ಸಮಾಧಾನಿ, ಮೃದು, ಸರಳಜೀವಿ, ಶಿಸ್ತಿನ ಮನುಷ್ಯ, ಆತ ಶಕ್ತಿಶಾಲಿ, ಧೃಢವಾದವನು, ಪಟ್ಟು ಹಿಡಿದು ಸಾಧಿಸುವವನು ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಈ ಬಗೆಯ ಕರುಣಾಮಯಿಯೂ ಮತ್ತು ಕ್ಷಮಾಶೀಲನೂ ಆದ ವ್ಯಕ್ತಿಯು ದೌಷ್ಟ್ಯವನ್ನು ನಿವಾರಿಸುವ ಮತ್ತು ಆಧುನಿಕ ವಸಾಹತು ಭಾರತವನ್ನು, ಬಯಕೆ ಮತ್ತು ಕೋಪದ ಮೂರ್ತ ರೂಪದಂತಿರುವ

ಸಾಕ್ಷಾತ್ ಅಸುರರಿಂದ ಬಿಡುಗಡೆಗೊಳಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಾಧ್ಯವೇ? ದುಷ್ಟ ಮತ್ತು ಶಿಷ್ಟವೆಂಬ ದ್ವಂದ್ವವನ್ನು ಒಪ್ಪಿಕೊಳ್ಳುವುದಾದರೆ, ದೈವೀ ಮತ್ತು ಅಸುರೀ ದ್ವಂದ್ವವನ್ನೇನು ಮಾಡುವುದು? ದೈವೀ ಪ್ರವೃತ್ತಿಯ ಜನರು ವಿಚಾರಶೀಲರೂ ಮೃದು ಹೃದಯಿಗಳೂ ಮತ್ತು ಅಸುರೀ ಪ್ರವೃತ್ತಿಯ ಜನರು ದುರಾಲೋಚನೆ ಮತ್ತು ದುಷ್ಕೃತ್ಯಗಳಲ್ಲಿ ಬಹಳ ಕ್ರಿಯಾಶೀಲರಾಗಿರುವವರು. ಸಮಸ್ಯೆಯಿರುವುದು ಅಸುರೀ ಶಕ್ತಿಗಳ ಕ್ರಿಯಾಶೀಲತೆಯನ್ನು, ಕ್ರಿಯಾಶೀಲತೆಯ ಮೂಲವಾದ ಬಯಕೆ ಮತ್ತು ಕೋಪಗಳಿಂದ ಮುಕ್ತಗೊಳಿಸುವುದು ಹೇಗೆ ಎಂಬುದರಲ್ಲಿ.

ಇದು ಗೀತೆಯು ಆಧುನಿಕ ವ್ಯಾಖ್ಯಾನಕಾರರಿಗೆ ಒಡ್ಡುವ ಸಮಸ್ಯೆಗೆ ಸಮಾನಾಂತರವಾಗಿದೆ: ಕ್ರಿಯಾಶೀಲತೆಯ ತತ್ವವಾದ ರಜಸ್ ಅನ್ನು, ಅದರೊಡನಿರುವ ಲೋಭ, ಕ್ರೋಧ, ಮಹತ್ವಕಾಂಕ್ಷೆಗಳಿಂದ ಬಿಡಿಸಿ ಅದನ್ನು ಉಪಯೋಗಿಸಿಕೊಳ್ಳುವುದು ಹೇಗೆ? ಜೀವನ್ಮುಕ್ತ– ಎಲ್ಲದರಿಂದ ವಿಮುಕ್ತನಾದ, ಸಿದ್ಧ–ಆಧ್ಯಾತ್ಮಿಕ ಪರಿಪೂರ್ಣತೆಯನ್ನು ಪಡೆದ, ಲೋಭ ಕ್ರೋಧಗಳನ್ನು ಮೀರಿದ, ಆದ್ದರಿಂದ ಯಾವ ತಪ್ಪನ್ನೂ ಮಾಡದ ವ್ಯಕ್ತಿಯನ್ನು ಆಶ್ರಯಿಸುವ ಮೂಲಕ ಇದನ್ನು ಸಾಧಿಸಬಹುದು. ಜಗತ್ತನ್ನು ದುಷ್ಟರಿಂದ ಬಿಡುಗಡೆಗೊಳಿಸುವ ಕಾರ್ಯವನ್ನು ಒಬ್ಬ ಸಿದ್ಧಪುರುಷನಿಗೆ ವಹಿಸಬಹುದು, ಅಗತ್ಯವಾದಲ್ಲಿ ಹಿಂಸಾತ್ಮಕ ವಿಧಾನಗಳ ಮೂಲಕವಾದರೂ.

ಜೀವನ್ಮುಕ್ತನು ಮುಕ್ತನಾದವನು ಆದರೂ ಜೀವಂತವಾಗಿರುವವನು, ಅಂದರೆ ತಾನು ದೈಹಿಕವಾಗಿ ಅಸ್ತಿತ್ವದಲ್ಲಿದ್ದರೂ ತನ್ನ ನಿಜ ಸ್ವರೂಪವನ್ನು ಸಾಕ್ಷಾತ್ಕಾರಗೊಳಿಸಿಕೊಂಡ 'ದೈವಿ'ಸ್ವರೂಪಿ ಅವನು. ಅದ್ವೈತ ತತ್ವವು ಇದನ್ನು ನಂಬುತ್ತದೆ, ಆದರೆ ಈ ತತ್ವದ ಟೀಕಾಕಾರರಾದ ರಾಮಾನುಜ ಮತ್ತು ಅವರ ಅನುಯಾಯಿಗಳು ಇದನ್ನು ವಿರೋಧಿಸುತ್ತಾರೆ. ಅರಬಿಂದೋ ಮತ್ತು ತಿಲಕರು ಮುಕ್ತ ಮನುಷ್ಯನ ಮುಕ್ತ ಕ್ರಿಯಾಶೀಲತೆಯ ಕಲ್ಪನೆಯನ್ನು ಬಳಸಿಕೊಳ್ಳುತ್ತಾರೆ. ವ್ಯಕ್ತಿಯೊಬ್ಬನು ಆಧ್ಯಾತ್ಮಿಕವಾಗಿ ಪರಿಪೂರ್ಣನಾದಾಗ ಅವನ ಕ್ರಿಯೆಗಳನ್ನು ನಮ್ಮ ಸಾಮಾನ್ಯ ನೈತಿಕತೆ–ನಿಯಮಗಳಿಂದ ನಿರ್ಧರಿಸಲಾಗದು. ಆತ ಭೀಕರವಾದ ಏನನ್ನೋ ಮಾಡುತ್ತಿರುವಂತೆ ಕಂಡರೂ ಅದು ನಮ್ಮ ಸೀಮಿತ ಮಾನವ ತಿಳುವಳಿಕೆಯ ಮೂಲಕ ನೋಡುವುದರಿಂದಾಗಿ ಹಾಗೆ ಕಾಣಿಸಬಹುದಷ್ಟೆ. ಗೀತೆಯಿಂದ ಒಂದು ಶ್ಲೋಕವನ್ನು(೧೮.೧೭) ಉಲ್ಲೇಖಿಸುತ್ತ ತಿಲಕರು, 'ಯಾವ ವ್ಯಕ್ತಿಗೆ ಅಹಂ ಎಂಬುದು ಇಲ್ಲವೋ ಯಾರ ಪ್ರಜ್ಞೆಯು ಬಂಧನದಿಂದ ಮುಕ್ತವಾಗಿದೆಯೋ ಅವನು ಇಡೀ ಪ್ರಪಂಚವನ್ನು ಸರ್ವನಾಶಗೈದರೂ ಅದು ಕೊಲೆಯಲ್ಲ' ಎನ್ನುತ್ತಾರೆ. ಆದರೆ ಇಂತಹ ವ್ಯಕ್ತಿತ್ವವನ್ನು ಪಡೆದು ಯಾವುದೇ ಬಂಧನವಿಲ್ಲದೇ ಇರುವುದು, ಆ ಕಾರಣಕ್ಕಾಗಿ ಹಿಂಸೆಯನ್ನು ಬಳಸಿ ದೌಷ್ಟ್ಯವನ್ನು ಶಿಕ್ಷಿಸುವುದು ಯಾರಿಗಾದರೂ ಸಾಧ್ಯವೇ? ತಿಲಕರು ಅದು ಸಾಧ್ಯವೆನ್ನುತ್ತಾರೆ, ಪೌರಾಣಿಕ ಹೆಸರುಗಳನ್ನು ಉದಾಹರಿಸುತ್ತಾರೆ.

ಈ ಪರಿಹಾರವು ಕೆಲವರನ್ನು ತೃಪ್ತಿಪಡಿಸಬಹುದು. ಆದರೆ ಇದು ಯಾರಿಗೆ ಸಾಧ್ಯವೋ ಅಂತಹ ನಿಜವಾಗಿ ಮುಕ್ತಿಯನ್ನು ಸಾಧಿಸಿದ ವ್ಯಕ್ತಿಯೊಬ್ಬನನ್ನು ಗುರುತಿಸುವ ಬಗ್ಗೆ ತಿಲಕರು ವಿಚಾರ ಮಾಡಿರಲಿಲ್ಲ. ಅರವಿಂದರ ತಾತ್ವಿಕತೆಯಲ್ಲಿ ಒಳಿತು, ಕೆಡುಕುಗಳು ಸಾಪೇಕ್ಷವಾದವು ಮತ್ತು ಐತಿಹಾಸಿಕವಾಗಿ ಬದಲಾವಣೆಗೊಳ್ಳುವವೂ ಆದ್ದರಿಂದ ಈ ಸಮಸ್ಯೆ ಇನ್ನೂ ಗಂಭೀರ. ದೈವೀಕ ಯೋಜನೆಗಳನ್ನು ಮುಂದುವರಿಸುವಂತಹವು ಒಳ್ಳೆಯವು, ಅವನ್ನು ವಿರೋಧಿಸುವಂತಹವು ಕೆಟ್ಟವು. ಆದರೆ ಸಾಮಾನ್ಯ ಮಾನವ ಪ್ರಜ್ಞೆಗೆ ದೈವದ ಇಚ್ಛೆಯು ತಿಳಿಯಲಾರದು. ಹಾಗಾಗಿ ನಮ್ಮ ಸಮಕಾಲೀನರಾದವರ ಕ್ರಿಯೆಗಳ ಬಗ್ಗೆ ನ್ಯಾಯನಿರ್ಣಯ ಮಾಡಿ, ಮನುಷ್ಯರೊಳಗಿನ ದೈವತ್ವವನ್ನು ಗ್ರಹಿಸುವುದು ಹೇಗೆ? 'ಅವತಾರ'ಗಳ ವಿಷಯದಲ್ಲೂ ಇದು ಹೀಗೇ ಆಗಿರಬಹುದು. ಒಂದು 'ಅವತಾರ'ವು ಪರಿಪೂರ್ಣ ವ್ಯಕ್ತಿಯಲ್ಲ. ಒಬ್ಬ ಅವತಾರಿಯು ಯಾವಾಗಲೂ ಪವಾಡಗಳನ್ನು ಮಾಡದಿರಬಹುದು ಎಂದು ಅರಬಿಂದೋ ಹೇಳುತ್ತಾರೆ. ಆತ ತನ್ನ ಗುರಿಯನ್ನು ಸಾಧಿಸುವಲ್ಲಿ ಅಸಫಲನಾಗಬಹುದು. ಆತ ಏನು ಮಾಡುತ್ತಾನೋ ಅಥವಾ ಮಾಡುವುದಿಲ್ಲವೋ ಅದು ದೈವದ ಇಚ್ಛೆಯಾಗಿರಬಹುದು. ಅದರಾಚೆಗೆ ಅವನಲ್ಲಿ ವಿಶೇಷವಾದುದು ಏನೂ ಇರುವುದಿಲ್ಲ. ಅವನ ಸಮಕಾಲೀನರಿಗೆ ಅವನನ್ನು ಗುರುತಿಸಲು ಸಹಾಯಕವಾಗುವಂತಹ ಯಾವ ಲಕ್ಷಣಗಳೂ ವನಲ್ಲಿ ಇರುವುದಿಲ್ಲ. ಅವರು ಗೊಂದಲಗೊಂಡರೆ ಅದು ಅವರ ಸಮಸ್ಯೆ. ಅವರ ಗೊಂದಲಗಳನ್ನು ನಿರ್ಲಕ್ಷಿಸಿ, ಅಥವಾ ಅವರ ಗೊಂದಲಗಳ ಮೂಲಕ ದೈವವು ತನ್ನ ಯೋಜನೆಗಳನ್ನು ಕಾರ್ಯಗತಗೊಳಿಸುತ್ತದೆ.

ಶಿಕ್ಷಾ ರೂಪದ ಹಿಂಸೆಯ ಸಮರ್ಥನೆಯ ವಿಚಾರದಲ್ಲಿ ತಿಲಕರು ಮತ್ತು ಅರವಿಂದರ ವಾದಗಳ ದಿಕ್ಕೇಡಿತನ ಸ್ಪಷ್ಟವಾಗಿದೆ. 'ಸಿದ್ಧ' ಅಥವಾ 'ಮುಕ್ತ', 'ಆಧ್ಯಾತ್ಮಿಕವಾಗಿ ಜ್ಞಾನಿಯಾದವನು' ಯಾರು ಎಂಬುದರ ಬಗ್ಗೆ ಉಪನಿಷತ್ತುಗಳಲ್ಲಿ ಪುರಾಣಗಳಲ್ಲಿ ಬರುವ ನಿದರ್ಶನಗಳು ಮತ್ತು ಮಧ್ಯಕಾಲೀನ ಗ್ರಂಥಗಳಲ್ಲಿ ಸಂನ್ಯಾಸದ ಬಗ್ಗೆ ಇರುವ ವಿವರಣೆಗಳು ಆಧುನಿಕ ವ್ಯಾಖ್ಯಾನಕಾರರು ನಮಗೆ ಕೊಟ್ಟಿರುವ ವಿವರಣೆಗಿಂತ ಬಹಳ ಬಿನ್ನವಾಗಿವೆ. ಸಾಮಾನ್ಯ ಮನುಷ್ಯರಿಗೆ, ಋಜುಮಾರ್ಗದ ರಾಜಕೀಯ ಚಟುವಟಿಕೆಯಲ್ಲಿ ಮಾರ್ಗದರ್ಶನ ಮಾಡುವವನು ಅಥವಾ ತಪ್ಪು ಮಾಡಿದವನನ್ನು ಶಿಕ್ಷಿಸುವುದಕ್ಕಾಗಿ ತನ್ನ ಆಧ್ಯಾತ್ಮಿಕ ಸಾಧನೆಯಿಂದ ಬಿಡುವು ತೆಗೆದುಕೊಳ್ಳುವವನು ಒಬ್ಬ ವಿವೇಕಿಯಾದ ತತ್ವಜ್ಞಾನಿಯೋ ಅಥವಾ ಮುತ್ಸದ್ಧಿಯೋ ಆಗಿರಲಾರ. ವಿಮುಕ್ತನಾದವನು ಒಬ್ಬ ಪ್ರಾಪಂಚಿಕ ಮನುಷ್ಯನಿಗಿಂತ ಭಿನ್ನವಾದ ರೀತಿಯಲ್ಲಿ ಜೀವಿಸುತ್ತಾನೆ. ಆತನ ಆಧ್ಯಾತ್ಮಿಕ ಸಾಧನೆಯು ಗಾಳಿಗೆ ಒಡ್ಡಲ್ಪಟ್ಟ ದೀಪದಂತೆ ಮೈಎಲ್ಲ ಕಣ್ಣಾಗಿರುವ ಸ್ಥಿತಿಯಲ್ಲಿರುತ್ತದೆ. ಅದನ್ನು ರಕ್ಷಿಸಿಕೊಳ್ಳಲು ಆತ ವಿಶೇಷವಾದ ಅಭ್ಯಾಸವನ್ನು ಮಾಡಬೇಕಾಗುತ್ತದೆ. ರಾಜಕೀಯ ಅಥವಾ ಸಾಮಾಜಿಕ ವ್ಯವಹಾರಗಳಲ್ಲಿ ಪಾಲ್ಗೊಳ್ಳುವುದು ಅದಕ್ಕೆ ಹೊಂದಿಕೆಯಾಗುವುದಿಲ್ಲ. ಅದಕ್ಕಿಂತ ಹೆಚ್ಚಿನದಾಗಿ, ಮುಕ್ತನಾದವನನ್ನು ಗುರುತಿಸುವುದು ಸುಲಭವಲ್ಲ. ಸಾಮಾನ್ಯ ಮನುಷ್ಯರು ಆತನನ್ನೊಬ್ಬ ಕುಡುಕನೆಂದು ಭಾವಿಸಬಹುದು, ಋಷಿಗಳೂ ಈ ಬಗ್ಗೆ ನಿಶ್ಚಿತವಿಲ್ಲ, ಮುಕ್ತನಾದವನಿಗೇ ತಾನು ನಿಜವಾಗಿ ಮುಕ್ತನೋ ಅಲ್ಲವೋ ಎಂಬ ಅನುಮಾನವಿರಬಹುದು. ಹಾಗಾಗಿ ರಾಷ್ಟ್ರೀಯತೆಯ ಯೋಜನೆಗೆ ಇಂತಹ ವ್ಯಕ್ತಿಯನ್ನು ನೇಮಿಸುವುದು ಕಷ್ಟ.

ಗಾಂಧಿ, ಹಿಂಸಾ–ಸಮರ್ಥಕ ಗೀತೆಯ ವ್ಯಾಖ್ಯಾನವನ್ನು ವಿರೋಧಿಸುವುದು ಆಧುನಿಕ ಪೂರ್ವ ಪಠ್ಯವನ್ನು ಉಲ್ಲೇಖಿಸುವ ಮೂಲಕವಲ್ಲ. ಅದನ್ನವರು ಮಾಡಿದ್ದು ಜೀವನ್ಮುಕ್ತರು ನಮ್ಮ ನಡುವೆ ಇರುವರು ಎಂಬ ಕಲ್ಪನೆಯನ್ನೇ ಪ್ರಶ್ನಿಸುವ ಮೂಲಕ. ಮುಕ್ತನಾದವನು ಜೀವಿಸಿರುವವನು ಎಂಬುದು ವಿರೋಧಾಭಾಸ. ಒಬ್ಬ ಮನುಷ್ಯನಿಗೆ ತನ್ನ ದೇಹ ಮತ್ತು ಈ ಪ್ರಪಂಚದ ಬಗ್ಗೆ ಯಾವ ಮೋಹವೂ ಇಲ್ಲದಿದ್ದರೆ ಅವನ ದೈಹಿಕ ಅಸ್ತಿತ್ವ ಮುಂದುವರಿಯುವುದು ಏಕೆ? ಸ್ವಮೋಹವು ಸಂಪೂರ್ಣವಾಗಿ ಇಲ್ಲವಾದಲ್ಲಿ, ನಾವು ಒಂದು ಕ್ಷಣವೂ ಜೀವಂತವಾಗಿರಲಾರೆವು. ದೇಹವು ಇನ್ನೂ ಅಸ್ತಿತ್ವ ಹೊಂದಿದೆ ಎನ್ನುವುದೇ ನಮ್ಮೊಳಗೆ ಮೋಹ ಉಳಿದಿದೆ ಎಂಬುದಕ್ಕೆ ಸಾಕ್ಷಿ. ಎಲ್ಲಿ ಮೋಹ ಇದೆಯೋ ಅಲ್ಲಿ ಹಿಂಸೆ ಇರುತ್ತದೆ. ಪ್ರತಿಯಾಗಿ, ಒಬ್ಬ ವ್ಯಕ್ತಿಯು ನಿರ್ಮೋಹಿಯಾಗಿದ್ದರೆ, ಆತನಿಗೆ ಹಿಂಸೆಯ ಸಂದರ್ಭ ಒದಗುವುದೇ ಇಲ್ಲ. ಮುಕ್ತನಾದರೂ ಜೀವಂತನಾಗಿರುವ ಮನುಷ್ಯನ ಅಸ್ತಿತ್ವ, ವಾಸ್ತವ ಜಗತ್ತಿನಲ್ಲಿ ನಕಲು ಮಾಡಲಾಗದ ಒಂದು ಪರಿಪೂರ್ಣ ಜ್ಯಾಮಿತೀಯ ಚಿತ್ರದ ಹಾಗೆ. ಆದ್ದರಿಂದ ನಾವು ಎಲ್ಲ ಜೀವವೂ ಪವಿತ್ರ ಎಂಬ ರಾಜಮಾರ್ಗವನ್ನು ಅನುಸರಿಸುವುದು ಸೂಕ್ತ.

ಅವತಾರ ಸಿದ್ಧಾಂತದ ಬಗೆಗಿನ ಗಾಂಧೀಜಿಯವರ ನಿರೂಪಣೆಯು, ಪ್ರತೀಕಾರ ತತ್ವಕ್ಕೆ ಪೂರಕವಾಗಿ ಬಳಸುವ ಪ್ರತಿಯೊಂದು ವಿಚಾರವನ್ನೂ ಅವರು ಅತ್ಯಂತ ಜಾಗರೂಕತೆಯಿಂದ ಹೇಗೆ ಪುನರ್ರಚಿಸಿದರು ಎಂಬುದರ ಮತ್ತೊಂದು ನಿದರ್ಶನವಾಗಿದೆ ಧರ್ಮಗ್ಲಾನಿಯದಾಗಲೆಲ್ಲ ದೇವರು ಭೂಮಿಯ ಮೇಲೆ ಅವತರಿಸಿ ಪರಿಸ್ಥಿತಿಯನ್ನು ಸರಿಪಡಿಸುತ್ತಾನೆಂಬುದು ನಿಜ ಎಂದು ಗಾಂಧಿ ಹೇಳುತ್ತಾರೆ. ಆದರೆ ಇದು ಸಂಭವಿಸುವ ವಿಧಾನ ಮಾತ್ರ ಸಾಮಾನ್ಯವಾಗಿ ಕಲ್ಪಿಸಿಕೊಂಡ ರೀತಿಗಿಂತ ಭಿನ್ನವಾಗಿದೆ. ಜಗತ್ತು ಸಂಕಷ್ಟದ ಸ್ಥಿತಿಯಲ್ಲಿರುವಾಗ–ಡಬ್ಲ್ಯೂ.ಬಿ.ಯೇಟ್ಸ್ ಹೇಳುವ 'ಉತ್ತಮರು ನಂಬಿಕೆ ಕಳೆದುಕೊಂಡಿರುತ್ತಾರೆ, ದುಷ್ಟರು ಆವೇಶದ ತೀವ್ರತೆಯಲ್ಲಿರುತ್ತಾರೆ'–ದೇವರು ತಪಶ್ಚರ್ಯೆಯನ್ನು ಕೈಗೊಳ್ಳಲು ಉತ್ತಮರಿಗೆ ಸ್ಫೂರ್ತಿ ನೀಡಿ ಜಗತ್ತಿನಲ್ಲಿ ಒಳ್ಳೆಯದು ಹುಟ್ಟುವಂತೆ ಮಾಡುತ್ತಾನೆ. ದುಷ್ಟರಿಂದ ಜಗತ್ತು ಹೇಗೆ ರಕ್ಷಿಸಲ್ಪಡುತ್ತದೆ ಎಂಬ ಈ ವಿವರಣೆಯು ರೂಢಿಗತ ಯುದ್ಧೋನ್ಮಾದದ ಅರಚಾಟವನ್ನು ಪ್ರೋತ್ಸಾಹಿಸಬಾರದು ಮತ್ತು ಆ ಉನ್ಮಾದವನ್ನು ತಗ್ಗಿಸಬೇಕು. ಇದು ಗಾಂಧೀಜಿಯ ಮಹಭಾರತ ಯುದ್ಧದ ರೂಪಕಾತ್ಮಕ ಓದು ಮತ್ತು ಕೆಡುಕಿನ ಬಗೆಗಿನ ಅವರ ಉಪನಿಷದೀಯ ಅರ್ಥ ವಿವರಣೆಗೆ ಸರಿಯಾಗಿ ಹೊಂದಿಕೊಳ್ಳುವಂತಿದೆ.

ಗಾಂಧೀಜಿಯ ಬಗೆಗಿನ ಒಂದು ಪ್ರಬಂಧದಲ್ಲಿ ಅಕೀಲ್ ಬಿಲ್‌ಗ್ರಾಮಿಯವರು, ಜಗತ್ತಿನ ಮಟ್ಟಿಗೆ ಸಾರ್ವತ್ರಿಕಗೊಳಿಸಬಹುದಾದ ನೀತಿ ತತ್ವಗಳನ್ನು ಸೃಷ್ಟಿಸಬಯಸುವ ನೈತಿಕ ತತ್ವಶಾಸ್ತ್ರಕ್ಕೆ ಪ್ರತಿಯಾಗಿ ಗಾಂಧೀಜಿ, (ಇತರರಿಗೆ)ಉದಾಹರಣೆಯಾಗಬಲ್ಲ ನೈತಿಕ ನಡವಳಿಕೆಗಳ ಸಂಹಿತೆಯೊಂದನ್ನು ಮುಂದಿಟ್ಟರು ಎಂದು ಹೇಳುತ್ತಾರೆ. ಗಾಂಧಿಜಿಯ ಈ ಕೊಡುಗೆ ಬಹಳ ಮುಖ್ಯ ಏಕೆಂದರೆ ನೀತಿ ತತ್ವಗಳು, ಅವನ್ನು ಪಾಲಿಸಲಾಗದವರ ಅಥವಾ ಪಾಲಿಸಲಿಚ್ಛಿಸದವರ ಟೀಕೆಗೆ ಕಾರಣವಾಗುತ್ತವೆ ಮತ್ತು ಅಂತವರ ಬಗ್ಗೆ ಟೀಕಿಸುವವನಲ್ಲಿ ಅವನೊಳಗೇ ಒಂದು ಬಗೆಯ ತಿರಸ್ಕಾರ ಅಥವಾ ದ್ವೇಷ


ಮೂಡಲು ಕಾರಣವಾಗುತ್ತದೆ. ಅಹಿಂಸೆ. ಇಂತಹ ಟೀಕೆಗಳನ್ನು ದೂರವಿಡಬೇಕೆಂದು ಬಯಸುತ್ತದೆ. ಇದರ ಅಗತ್ಯವಿರುವುದು, ನಮ್ಮ ನೈತಿಕ ನಂಬಿಕೆಗಳನ್ನು ಕುರಿತ ಹಠ ಕಕ್ಕಟ್ಟಿದ್ದು ಎಂ ಕಾರಣಕ್ಕಲ್ಲ; ಬದಲಿಗೆಮ ಟೀಕೆಗೂ ಕ್ರೋಧಕ್ಕೂ ಸಂಬಂಧವಿರುವ ಕಾರಣಕ್ಕೆ. ಗಾಂಧೀಜಿಯವರ ನೈತಿಕ ನಡವಳಿಕೆಯ ಕಲ್ಪನೆಯ ಕೇಂದ್ರದಲ್ಲಿರುವುದು ಒಬ್ಬ ಅನುಕರಣೀಯ ವ್ಯಕ್ತಿ: ಜಗತ್ತಿನಲ್ಲಿ ಬದಲಾವಣೆಯನ್ನು ತರಬಯಸುವ ವ್ಯಕ್ತಿ, ಇತರರು ತನ್ನನ್ನು ಹೇಗಾದರೂ ಅನುಕರಿಸುವ ರೀತಿಯಲ್ಲಿ ತನ್ನ ದಾರಿಯನ್ನು ಆಯ್ಕೆ ಮಾಡಿಕೊಳ್ಳಬೇಕು, ಬದುಕಬೇಕು ಮತ್ತು ನಡೆದುಕೊಳ್ಳಬೇಕು.

ಇದೇ ಪ್ರಬಂಧದ ಪ್ರಾರಂಭದಲ್ಲಿ ಬಿಲ್‌ಗ್ರಾಮಿ ಗಾಂಧೀಜಿಯ ಅಹಿಂಸೆಯ ಸಾರಸರ್ವಸ್ವವು ಧಾರ್ಮಿಕ ಮನೋವೃತ್ತಿಯಲ್ಲಿ ಹಾಗೂ ಐರೋಪ್ಯ 'ಜ್ಞಾನಯುಗ'ದ ಕಲ್ಪನೆಗಳು ಮತ್ತು ಸಿದ್ಧಾಂತಗಳ ಅಮೂಲಾಗ್ರ ವಿಮರ್ಶೆಯಲ್ಲಿ ಅಡಗಿದೆ ಎನ್ನುತ್ತಾರೆ. ಅವರು ಯಾವುದನ್ನು 'ಧಾರ್ಮಿಕ ಮನೋವೃತ್ತಿ' ಎಂದು ಕರೆಯುತ್ತಾರೋ ಅದು ವಾಸ್ತವವಾಗಿ ಸ್ವತಃ ಅದಕ್ಕಿಂತಲೂ ಹೆಚ್ಚಿನದು. ಭಾರತೀಯ ಧರ್ಮ, ತತ್ವಶಾಸ್ತ್ರದ ಗ್ರಂಥಗಳು, ನಂಬಿಕೆಗಳು, ಸಂಪ್ರದಾಯಗಳು ಮತ್ತು ಆಚರಣೆಗಳ ಜೊತೆಗಿನ ತಮ್ಮ ಸತತವಾದ ಸಂವಾದದಿಂದ ಗಾಂಧೀಜಿ ಆತ್ಮವಿಶ್ವಾಸವನ್ನೂ ನೈತಿಕಾಚರಣೆಗಳನ್ನು ಕುರಿತ ಈ ತಮ್ಮ ಪರ್ಯಾಯ ನೋಟಕ್ಕೆ ಆಧಾರವೊಂದನ್ನೂ ಕಂಡುಕೊಂಡರು.

ಈ ಆಕರಗಳನ್ನು ಗಂಭೀರವಾಗಿ ಪರಿಗಣಿಸಿದಾಗ ಗಾಂಧೀಜಿಯ ದೃಷ್ಟಿಯಲ್ಲಿ 'ಮಾದರಿಯನ್ನು ಸೃಷ್ಟಿಸುವವನು' ಅನುಕರಣೀಯನಾಗಿರಬೇಕು, ಅಷ್ಟೇ ಅಲ್ಲದೇ, ಬಹಳ ಮುಖ್ಯವಾಗಿ ತನ್ನ ಸುತ್ತಮುತ್ತ ಯಾವ ಸುಳ್ಳುತನವೂ ಬದುಕುಳಿಯಲು ಸಾಧ್ಯವಾಗದಂತಹ ಪ್ರಭಾವೀ ಶಕ್ತಿಯುಳ್ಳವನಾಗಿರಬೇಕು ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಗಾಂಧೀಜಿಯ 'ವಿನಯ'ವೆಂಬುದು ತಾವು ಸತ್ಯವನ್ನು ಸಿದ್ಧಿಸಿಕೊಂಡಿರುವ ಬಗ್ಗೆ ಯಾವುದೇ ರೀತಿಯ ಅನುಮಾನವಿದ್ದುದರಿಂದ ಹುಟ್ಟಿದ್ದಲ್ಲ ಎಂಬುದನ್ನು ಬಿಲ್‌ಗ್ರಾಮಿ ಸೂಚಿಸಿರುವುದು ಸೂಕ್ತವಾಗಿಯೇ ಇದೆ. ಆದರೆ ಪುನಃ ಈ 'ವಿನಯ'ವೆಂಬುದು ಏನು, ಅದು ಎಲ್ಲಿಂದ 'ಬರುತ್ತದೆ' ಎಂಬುದನ್ನು ಅರ್ಥಮಾಡಿಕೊಳ್ಳಲು, ಗಾಂಧಿಯವರು ಗೀತೆಯ ಮೇಲಿನ ತಮ್ಮ ವ್ಯಾಖ್ಯಾನಗಳಲ್ಲಿ ಇದು ಯಾವುದರ ಮೂಲಕವೋ (ಹೊರ ಅಥವಾ ಅನ್ಯ ಮೂಲದಿಂದ) 'ಬರುವುದು' ಎಂಬ ಕಲ್ಪನೆಯನ್ನು ಹುಸಿಗೊಳಿಸಿಬಿಡುವ ಹಲವು ರೀತಿಗಳನ್ನು ತ್ತಾರೆ ನಾವು ಗಮನಿಸಬೇಕಾಗುತ್ತದೆ. ನಿರ್ಲಿಂಗಿಯಾಗುವ ಮೂಲಕ, ದೇವರ ದಾಸನಾಗುವ ಮೂಲಕ, ಚರಕದಂಥ ಒಂದು ಯಂತ್ರದ ನಿರ್ಲಿಪ್ತ ಆದರೆ ಕುಶಲ ಬಿಡಿ ಭಾಗವಾಗಿ ದೈನಂದಿನ ಜೀವನ ನಡೆಸುವ ಮೂಲಕ, ಕೆಟ್ಟದ್ದನ್ನು ಮಾಡಲು ಅಸಮರ್ಥರಾಗುವುದರ ಬಗ್ಗೆ ಗಾಂಧಿ ಸಮ್ಮತಿ ಸೂಚಕ ಮಾತುಗಳನ್ನಾಡುತ್ತಾರೆ. ಇಂತಹ ವ್ಯಕ್ತಿಯ ಮನೋಭಾವವು ವಿನಯಕ್ಕಿಂತ ಹೆಚ್ಚಿನದು; ವಾಸ್ತವವಾಗಿ ನಾವಿಲ್ಲಿ ವಿನಯವನ್ನು ಕುರಿತು ಚರ್ಚಿಸುತ್ತಲೇ ಇಲ್ಲ. ಅದು ನಮ್ರತೆ. ತನ್ನಿಂದಲೇ ಸಕಲವೂ ನಡೆಯುವುದು, ತಾನೇ ಎಲ್ಲದರ ಕರ್ತೃ ಎಂದು ಭಾವಿಸುವುದನ್ನು ನಿಲ್ಲಿಸಿದ ವ್ಯಕ್ತಿಯು ಇತರರನ್ನು ಅವರ ನೈತಿಕ ಕೊರತೆಗಳಿಗಾಗಿ ಟೀಕಿಸುವುದರಿಂದ ದೂರವುಳಿಯುತ್ತಾನೆ. ತಾನು ಅಥವಾ ಇತರ ಯಾವುದೇ ವ್ಯಕ್ತಿಯು, ಏಕಾಂಗಿಯಾಗಿ ಜಗತ್ತಿನಲ್ಲಿ ಬದಲಾವಣೆಯನ್ನು ತರಬಲ್ಲ ಎಂದು ಅವನು ನಂಬುವುದಿಲ್ಲ.

ಈ ಹೊರ ಅಥವಾ ಅನ್ಯ ಮೂಲವನ್ನು ಮತ್ತು ಆಯ್ಕೆಯನ್ನು ತಿರಸ್ಕರಿಸಿದ್ದರ ದುರದೃಷ್ಟಕರ (ಆದರೆ ಯಾವ ರೀತಿಯಲ್ಲೂ ತಾತ್ವಿಕವಾಗಿ ಅನಿವಾರ್ಯ ಎಂದು ಹೇಳಲಾಗದ) ಪರಿಣಾಮವೆಂದರೆ ವರ್ಣ ವ್ಯವಸ್ಥೆಯನ್ನಾಧರಿಸಿದ ಶ್ರಮ ವಿಭಜನೆಯ ಸಮರ್ಥನೆ: ನನ್ನ ಸ್ವಭಾವಜನ್ಯ ಕರ್ಮವನ್ನು ಮಾಡುವ ಮೂಲಕ, ನನ್ನ ಕುಟುಂಬದ ವೃತ್ತಿಯನ್ನು ಮುಂದುವರೆಸುವ ಮೂಲಕ, ಹುಟ್ಟಿನಿಂದ ನನ್ನದಾದ ವರ್ಣವನ್ನು ಅನುಸರಿಸುವ ಮೂಲಕ ನಾನು ನನ್ನ ಜೀವನೋಪಾಯವನ್ನು ಸಂಪಾದಿಸಬೇಕು. ಆದರೆ ಇದೇ ಜಿಜ್ಞಾಸೆಯು 'ಸಹಜ ಪ್ರಾಪ್ತ ಕರ್ಮ' ಎಂದರೆ, ಎಲ್ಲಾ ಅಹಂಕಾರದ ಲಕ್ಷಣಗಳನ್ನೂ ಕಳೆದುಕೊಂಡಾಗ ನನಗೆ ದೊರೆಯುವ ಕ್ರಿಯೆ ಅಥವಾ 'ಆಯ್ಕೆ'ಯ ಪರಿಕಲ್ಪನೆಗೆ ಕಾರಣವಾಗುತ್ತದೆ. 'ನಾನು' ಎಂಬ ಪರಿವೆ ಇಲ್ಲದೆ ಹೋದಾಗ, ಬಯಕೆ ಇಲ್ಲವಾದಾಗ, ಹೆಮ್ಮೆ ಅಳಿಸಿಹೋದಾಗ, ದೇವರ ವಿವೇಕಕ್ಕೆ ನಾನು ಏನನ್ನು ಮಾಡಲು ಸಮರ್ಥ ಎಂದು ತೋಚುವುದೋ, ಅದನ್ನು ಮಾಡಲು ಪ್ರೇರೇಪಿಸುತ್ತಾನೆ. ಆಗ ನಾನು ದೇವರ ಉಪಕರಣ ಮಾತ್ರವಾಗಿ ನಡೆದುಕೊಳ್ಳುತ್ತೇನೆ. ಈ ರೀತಿಯಲ್ಲಿ ಬದುಕುತ್ತಾ ನಂಬಿಕೆ, ನಿರಾಸೆಗಳ ನಡುವಿನ ಹೊಯ್ದಾಟಗಳಿಂದ ತಪ್ಪಿಸಿಕೊಳ್ಳುತ್ತೇನೆ, ಎಷ್ಟೋ ಅನಗತ್ಯ ರೇಜಿಗೆಗಳಿಂದ ಬಿಡುಗಡೆ ಪಡೆಯುತ್ತೇನೆ ಎನ್ನುವುದು.

ಕಾಲದ ಬಗ್ಗೆ ಬಹಳ ಭಿನ್ನವಾದ ಅರಿವು ಇಲ್ಲದ ಹೊರತು ಈ ಬಗೆಯ ಜೀವನ ಸಾಧ್ಯವಿಲ್ಲ. ಸುಧಾರಕರು ಮತ್ತು ತೀವ್ರವಾದಿಗಳು ಒಂದೇ ರೀತಿ, ಒಂದು ತುರ್ತಿನ ಕೆಲವು ಸಲ ಹತಾಶೆಯ ಲೇಪನದ–ಭಾವನೆಯೊಡನೆ, ಕೆಲಸ ಮಾಡುತ್ತಾರೆ. ಪ್ರಗತಿ ಮತ್ತು ಕ್ರಾಂತಿಗಳೆರಡೂ ಐತಿಹಾಸಿಕ ಕಾಲಮಾನದ ಬಹಳ ಸೂಕ್ಷ್ಮವಾದ ಮೌಲ್ಯ ನಿರ್ಣಾಯಕ ಘಟ್ಟಗಳ ಜೊತೆಗೇ ಇರುತ್ತವೆ. ಅದರೆ ಪಾಕೆಟ್ ಗಡಿಯಾರವೊಂದನ್ನು ಸದಾ ಧರಿಸಿರುತ್ತಿದ್ದ, ತಮ್ಮ ಕಟ್ಟುನಿಟ್ಟಿನ ಸಮಯನಿಷ್ಠೆಗೆ ಹೆಸರಾದ ವ್ಯಕ್ತಿಯು, ಹಾಗೆ ಅಸ್ತಿತ್ವಕ್ಕೆ ಬರುವ ಮತ್ತು ಅನಂತ ಕಾಲದಲ್ಲಿ ಲಯವಾಗುವಂತಹ ಅನೇಕ ಐತಿಹಾಸಿಕ ಲೋಕಗಳನ್ನು ಅವರಿಗೆ ಜ್ಞಾಪಿಸಿದ್ದಾರೆ.



(ಹೈದರಾಬಾದ್ ವಿಶ್ವವಿದ್ಯಾನಿಲಯದಲ್ಲಿ ರಾಜಕೀಯಶಾಸ್ತ್ರದ ಪ್ರಾಧ್ಯಾಪಕರಾಗಿರುವ ಸಂಜಯ ಪಲ್ಶೀಕರ್ ನಾಡಿನ ಖ್ಯಾತ ಗಾಂಧಿ ವಿಚಾರ ವಿದ್ವಾಂಸರಲ್ಲಿ ಒಬ್ಬರಾಗಿದ್ದಾರೆ)

(ಕೃಪೆ: *ಸೆಮಿನಾರ್*

ಕನ್ನಡಕ್ಕೆ : ಎಂ. ರಾಜು/ಟಿ.ಎಲ್. ರೇಖಾಂಬ/ಡಿಎಸ್ಸೆನ್)

ಗಾಂಧಿ–ಅಂಬೇಡ್ಕರ ಭಾರತ



ಮೂವತ್ತು ವರ್ಷದಿಂದ ಊರಿನ ಬೀದಿ ಕಸಗೂಡಿಸುತ್ತಿದ್ದ ಸುಮಿತ್ರಾದೇವಿ ಕಳೆದ ಮಾಸಾಂತ್ಯಕ್ಕೆ ಸೇವಾ ನಿವೃತ್ತಿ. ನಗರಸಭೆ ಸಿಬ್ಬಂದಿ, ನೆರೆಹೊರೆಯವರಿಂದ ಬೀಳ್ಕೊಡುಗೆ ಸಮಾರಂಭ ಏರ್ಪಾಡು. ಈಕೆಗೊಂದು ಖುರ್ಚಿ.

ಸಮಾರಂಭದ ಸ್ಥಳಕ್ಕೆ ನೀಲಿ ದೀಪದ ಕಾರು ಬರುತ್ತದೆ. ಜಿಲ್ಲಾಧಿಕಾರಿ ಮಹೇಂದ್ರಕುಮಾರ ಕೆಳಗಿಳಿದು ಬರುತ್ತಾರೆ. ಸುಮಿತ್ರಾದೇವಿಯ ಪಾದಗಳಿಗೆ ಹಣೆಹಚ್ಚಿ ನಮಸ್ಕರಿಸುತ್ತಾರೆ. ಹಿಂದೆ ಹಿಂದೆಯೇ ಮತ್ತೆರಡು ಕಾರುಗಳು.ರೇಲ್ವೆ ಇಂಜನಿಯರ್ ವಿರೇಂದ್ರಕುಮಾರ ಮತ್ತು ಸರಕಾರಿ ವೈದ್ಯ ಧಿರೇಂದ್ರಕುಮಾರ ವೇದಿಕೆಯಡಿ ಬರುತ್ತಾರೆ. ಅವರೂ ಸುಮಿತ್ರಾದೇವಿಯ ಪಾದಗಳಿಗೆ ನಮಸ್ಕರಿಸುತ್ತಾರೆ. ಸುಮಿತ್ರಾದೇವಿಯ ಬಾಯಿಂದ ಮಾತೇ ಹೊರಡುವದಿಲ್ಲ. ಗಳಗಳನೇ ಅಳಲು ಆರಂಭಿಸುತ್ತಾಳೆ .ಸುತ್ತಲೂ ನೆರೆದಿದ್ದ ಜನರ ಗಾಢವಾದ ಮೌನ...

ಇದು ಜಾರ್ಖಂಡದ ರಾಜ್ರಪ್ ನಗರದ ಸಿಸಿಎಲ್ ಕಾಲನಿಯಲ್ಲಿ ಕಳೆದ ಮೂವತ್ತು ವರ್ಷಗಳಿಂದ ಕಸಗುಡಿಸಿದ ಸುಮಿತ್ರಾದೇವಿಯೆಂಬ ಪೌರಕಾರ್ಮಿಕಳ ಹೃದಯಸ್ಪರ್ಶಿ ಕತೆ. ಪೌರಕಾರ್ಮಿಕಳಾಗಿ ಸೇವೆ ಸಲ್ಲಿಸುತ್ತಲೇ ಮೂವರೂ ಪುತ್ರರನ್ನು ಚೆನ್ನಾಗಿ ಓದಿಸಿ ದೊಡ್ಡ ಅಧಿಕಾರಿಗಳನ್ನಾಗಿ ಮಾಡಿದವಳು ಸುಮಿತ್ರಾದೇವಿ. ದೊಡ್ಡ ಮಗ ವಿರೇಂದ್ರಕುಮಾರ ರೈಲ್ವೆ ಇಂಜನಿಯರ್, ಎರಡನೇ ಮಗ ಧಿರೇಂದ್ರಕುಮಾರ ಸರಕಾರಿ ವೈದ್ಯ ಹಾಗೂ ಮೂರನೇ ಮಗ ಮಹೇಂದ್ರಕುಮಾರ ಬಿಹಾರದ ಸಿವಾನ್ ಜಿಲ್ಲೆಯ ಜಿಲ್ಲಾಧಿಕಾರಿ. ಐ. ಎ. ಎಸ್. ಅಧಿಕಾರಿ.

ಅಳುತ್ತಲೇ ಇದ್ದ ಸುಮಿತ್ರಾದೇವಿ ಸ್ವಲ್ಪ ಸಾವರಿಸಿಕೊಂಡು, ತನ್ನ ಮೇಲಾಧಿಕಾರಿಗಳತ್ತ ಮುಖ ಮಾಡಿ, 'ಸಾಹೇಬರೇ, ೩೦ ವರ್ಷದಿಂದ ಈ ಕಾಲನಿಯ ಕಸಗೂಡಿಸಿದ್ದೇನೆ.ಆದರೆ ನನ್ನ ಮಕ್ಕಳೂ ನಿಮ್ಮಂತೆಯೇ ಸಾಹೇಬರಾಗಿದ್ದಾರೆ' ಎಂದಳು ಮುಗ್ಧತೆಯಿಂದ. ಸುತ್ತಲಿದ್ದವರ ಕಣ್ಣುಗಳು ಒದ್ದೆಯಾದವು.


ಈಗ ಡಿಸಿ ಮಹೇಂದ್ರಕುಮಾರ ಸರದಿ." ನಮ್ಮ ತಾಯಿ ನಮಗಾಗಿ ಬಹಳಷ್ಟು ತ್ಯಾಗ ಮಾಡಿದ್ದಾಳೆ. ಪ್ರಾಮಾಣಿಕತೆ ಮತ್ತು ಪರಿಶ್ರಮದಿಂದ ಜೀವನದಲ್ಲಿ ಯಾವುದೇ ಉದ್ಯೋಗದಲ್ಲೂ ಯಶಸ್ಸನ್ನು ಸಾಧಿಸಬಹುದು' ಎಂದರು.

ಸುಮಿತ್ರಾದೇವಿ ಇನ್ನೂ ಒಂದು ಮಾತನ್ನು ಹೇಳಿದಳು."ಮಗ ಜಿಲ್ಲಾ ಕಲೆಕ್ಟರ್ ಆದರೂ ನಾನು ನನ್ನ ವೃತ್ತಿಯನ್ನು ಬಿಡಲಿಲ್ಲ. ಇದರಿಂದಲೇ ನನ್ನ ಕನಸುಗಳು ನನಸಾಗಿರುವಾಗ ನಾನೇಕೆ ಬಿಡಬೇಕು? ಎಂದಳು ಭಾವುಕಳಾಗಿ.

ಒಂದು ವಿವೇಚನೆ

ಬಹು ಧರ್ಮ ಭಾರತದ ಕಥನ

–ಎಚ್.ಎಸ್. ಶಿವಪ್ರಕಾಶ



ಈ ಬಹುತ್ವ ಶಬ್ದದ ಬಗ್ಗೆ ಎಚ್ಚರಿಕೆಯನ್ನು ನಾನು ಕೊಡ್ತೇನೆ. ನನ್ನ ಸಮಾನ ಮನೋಧರ್ಮಿಗಳೂ ಅವಿಮರ್ಶಾತ್ಮಕವಾಗಿ ಈ ಪದವನ್ನ ಒಪ್ಪಿಕೊಳ್ಳತೊಡಗಿದ್ದಾರೆ.ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಇವತ್ತು ಬಹುತ್ವದ ರಾಜಕೀಯ ತಾತ್ಪರ್ಯ ಅಂದ್ರೆ ಸಬ್ ಕೇ ಸಾಥ್ ಸಬ್ ಕಾ ವಿಕಾಸ್! ಇಂಗ್ಲಿಷ್‌ನಲ್ಲಿ Pluralism ಅಂತಾರೆ ಬುದ್ಧಿಜೀವಿಗಳು ಇದನ್ನ. ಅನನ್ಯತೆ ಅಂತ ತರ್ಜುಮೆ ಮಾಡಲಾಗಿದೆ. ಅದೂ ಅನನ್ಯ, ಇದೂ ಅನನ್ಯ. ಮನುಸ್ಮೃತಿನೂ ಅನನ್ಯ, ಸಂವಿಧಾನನೂ ಅನನ್ಯ! ಅದೂ ಇರಲಿ ಇದೂ ಇರಲಿ! ಇದೇ ಹೌದಪ್ಪನ ಚಾಳಿ ನಾನು ಒಮ್ಮೆ ೧೯೭೮ರಲ್ಲಿ ಪಂಚಾಯಿತಿ ಎಲೆಕ್ಷನ್ ಮಾಡ್ಸಕ್ಕೆ ಗೂಳೂರಿಗೆ ಹೋದಾಗ, ಒಬ್ಬ ಹೌದಪ್ಪ ಇದ್ದ ಅವನನ್ನ ಕೇಳ್ದೆ, ಯಾರಿಗೆ ಓಟು ಹಾಕ್ದಪ್ಪ ಅಂತ, 'ಎಲ್ಲಾರಿಗೂ ಒಂದೊಂದು ಒತ್ತುಬ್ಟೆ ಸ್ವಾಮಿ' ಅಂದ! ಆದ್ದರಿಂದ ಈ ಥರದ ಎಲ್ಲಕ್ಕೂ ಸಲೀಸಾಗಿ ಹ್ಞೂಂಗುಟ್ಟುವ ಅರ್ಥದ ಈ ಶಬ್ದವನ್ನು ನಾವು ಬಹಳ ಅನುಮಾನದಿಂದ ವಿಮರ್ಶಾತ್ಮಕವಾಗಿ ನೋಡಬೇಕಾಗಿದೆ.

ಧಾರ್ಮಿಕ ಬಹುತ್ವ ಅಂತ ಅನ್ನೋ ವಿಷಯದ ಬಗ್ಗೆ ಮಾತಾಡೋದಕ್ಕೆ ನನಗೆ ಹೇಳಿದ್ದಾರೆ. ಎಲ್ಲಕ್ಕೂ ಮೊದಲು ನನಗೆ ಈ 'ಬಹುತ್ವ'ಅನ್ನುವ ಪದದ ಬಗ್ಗೆ ಇರುವ ಮೂಲಭೂತ ಸಂಶಯವನ್ನು ನಿಮ್ಮ ಮುಂದೆ ಇಡಬೇಕು. ಯಾಕೆಂದರೆ ಈ ಬಹುತ್ವ ಅನ್ನೋ ಪದವನ್ನ ನಮ್ಮ ವಿದ್ಯಾರ್ಥಿ ದೆಸೆಯಲ್ಲಿ ನಾವು ಕೇಳಿರಲಿಲ್ಲ. ನಾವು ಕಮ್ಯುನಿಸ್ಟ್ ಪಾರ್ಟಿ, ಸಮಾಜವಾದಿ ಪಾರ್ಟಿ ಅಂತ ಎಲ್ಲೆಲ್ಲೋ ಕಲ್ಡೊತ್ತಿದ್ವಲ್ಲ, ಅಲ್ಲೂ ಕೇಳಿರಲಿಲ್ಲ. ಈ ಬಹುತ್ವ ಇಂಗ್ಲಿಷ್‌ನ Pluralism ಅನ್ನೋ ಪದದ ಕನ್ನಡ ಅನುವಾದ. ವಿಶ್ವ ಸಮತಾವಾದಿ ಚಳುವಳಿ ಬಂದಾದ ಮೇಲೆ, ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ, ಬುದ್ಧಿಜೀವಿವಲಯಗಳಲ್ಲಿ ಈ ಶಬ್ದ ಕೇಳತೊಡಗಿದಾಗ ಸಮಾಜವಾದಿ, ಸಾಮ್ಯವಾದಿ ಚಿಂತನೆಯ ಹಿನ್ನೆಲೆಯಿಂದ ಬಂದ ನಾನು ಇದನ್ನು ಅನುಮಾನದಿಂದಲೇ ನೋಡುತ್ತ ಬಂದೆ, ಯಾಕೆಂದರೆ. ನನ್ನ ಅರಿವಿನ ಎರಡು ಸ್ತಂಭಗಳು ಎಂದರೆ, ಒಂದು ಮಾರ್ಕ್ಸ್‌ವಾದ ಮತ್ತೊಂದು ಬಸವಾದಿ ಪ್ರಮಥರ ವಚನವಾದ.

ನನ್ನ ಸಮಾನ ಮನೋಧರ್ಮಿಗಳೂ ಅವಿಮರ್ಶಾತ್ಮಕವಾಗಿ ಈ ಪದವನ್ನ ಒಪ್ಪಿಕೊಳ್ಳತೊಡಗಿದ್ದಾರೆ.ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಇವತ್ತು ಬಹುತ್ವದ ರಾಜಕೀಯ ತಾತ್ಪರ್ಯ ಅಂದ್ರೆ ಸಬ್ ಕೇ ಸಾಥ್ ಸಬ್ ಕಾ ವಿಕಾಸ್! ಇಂಗ್ಲಿಷ್‌ನಲ್ಲಿ Pluralism ಅಂತಾರೆ ಬುದ್ಧಿಜೀವಿಗಳು ಇದನ್ನ. ಅನನ್ಯತೆ ಅಂತ ತರ್ಜುಮೆ ಮಾಡಲಾಗಿದೆ. ಅದೂ ಅನನ್ಯ, ಇದೂ ಅನನ್ಯ. ನಿನ್ನೆ ಪುಟ್ಟಯ್ಯನೋರು ಹೇಳಿದ್ರಲ್ಲ, ಮನುಸ್ಮೃತಿನೂ ಅನನ್ಯ, ಸಂವಿಧಾನನೂ ಅನನ್ಯ! ಅದೂ ಇರಲಿ ಇದೂ ಇರಲಿ! ಇದೇ ಹೌದಪ್ಪನ ಚಾಳಿ! ನಾನು ಒಮ್ಮೆ ೧೯೭೮ರಲ್ಲಿ ಪಂಚಾಯಿತಿ ಎಲೆಕ್ಷನ್ ಮಾಡ್ಸಕ್ಕೆ ಗೂಳೂರಿಗೆ ಹೋದಾಗ, ಒಬ್ಬ ಹೌದಪ್ಪ ಇದ್ದ. ಅವನನ್ನ ಕೇಳ್ದೆ, ಯಾರಿಗೆ ಓಟು ಹಾಕ್ದಪ್ಪ ಅಂತ, 'ಎಲ್ಲಾರಿಗೂ ಒಂದೊಂದು ಒತ್ತುಬ್ಟೆ ಸ್ವಾಮಿ' ಅಂದ! ಆದ್ದರಿಂದ ಈ ಥರದ ಎಲ್ಲಕ್ಕೂ ಸಲೀಸಾಗಿ ಹ್ಞೂಂಗುಟ್ಟುವ ಅರ್ಥದ ಈ ಶಬ್ದವನ್ನು ನಾವು ಬಹಳ ಅನುಮಾನದಿಂದ ವಿಮರ್ಶಾತ್ಮಕವಾಗಿ ನೋಡಬೇಕಾಗಿದೆ. ಇಂಥ ಜವಾಬುದಾರಿರಹಿತ, ಎಲ್ಲಕ್ಕೂ ಮಣೆ ಹಾಕುವ ಉದ್ದೇಶ ಸಂಘಟಕರಿಗಿಲ್ಲ ಅಂತ ನನಗ್ಗೊತ್ತು. ಅವರು ಏಕರೂಪಿ ಧರ್ಮವನ್ನ ಎಲ್ಲರ ಮೇಲೆ ಹೇರಲ್ಪಡುತ್ತಿರುವ, ಬಂದೂಕನ್ನು ನಮ್ಮ ಮುಂದೆ ಹಿಡ್ಕೊಂಡು, ಲಾಠಿಯನ್ನು ನಮ್ಮ ಮುಂದೆ ಹಿಡ್ಕೊಂಡು, ಕತ್ತಿಯನ್ನ ನನ್ನ ಮುಂದೆ ಹಿಡ್ಕೊಂಡು, ದೇಶದ್ರೋಹಿ ಎನ್ನುವ ಬೆದರಿಕೆಯನ್ನು ಹಾಕ್ಕೊಂಡು, ನಮ್ಮ ನೈಸರ್ಗಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರಬಲ್ಲ ಒಂದು ಏಕರೂಪಿ ಧರ್ಮವನ್ನು ಹೇರತಾ ಇದ್ದಾರಲ್ಲ, ಅಂಥ ಸಂದರ್ಭದಲ್ಲಿ ಅನೇಕ ಧರ್ಮಗಳ ಸಮನ್ವಯ ಇರುವಂಥ, ಅನೇಕ ದೃಷ್ಟಿಕೋನಗಳ ಸಮಾನಬಾಳ್ವೆಗೆ ಅನುವು ಮಾಡಿಕೊಡುವಂತ ತೆರಪುಗಳ ಹುಡುಕಾಟಕ್ಕಾಗಿ ಈ ಮೇಳವನ್ನು ಆಯೋಜನೆ ಮಾಡಿದಾರೆ. ಅವರ ಉದ್ದೇಶ ನನಗ್ಗೊತ್ತು. ಆದರೂ ಕೂಡ ಈ ಬಹುತ್ವ ಶಬ್ದದ ಬಗ್ಗೆ ಎಚ್ಚರಿಕೆಯನ್ನು ನಾನು ಕೊಡ್ತೇನೆ.

ಮೊನ್ನೆ ಕರ್ನಾಟಕದಲ್ಲಿ ಒಂದು ದೊಡ್ಡ ವಿವಾದ ನಡೀತು. ಲಿಂಗಾಯತರು ಅಥವಾ ವೀರಶೈವರು ಹಿಂದೂಗಳು ಹೌದೋ ಅಲ್ಲವೋ ಅಂತ. ಹಿಂದೂ ಎನ್ನುವುದು ಏನೆಂದು ಎಲ್ಲಿ ನಿಗದಿಯಾಗಿದೆ? ಅದೇ ನಿಗದಿಯಾಗದೇ ಇದ್ದಾಗ ಇದು ಹಿಂದೂ ಹೌದೋ ಅಲ್ಲವೋ ಎನ್ನುವುದು ಪ್ರಶ್ನೆನೇ ಬರಲ್ಲ. ಯಾಕೇಂದ್ರೆ ಧರ್ಮದ ಚರ್ಚೆ ಭಾರತದಲ್ಲಿ ಎರಡು ಸಾವಿರ ವರ್ಷಗಳಿಂದ ನಡೆದಿದೆ. ಆ ಚರ್ಚೆಗಳನ್ನು ಗುರುತಿಸಿದಾಗ, ಸಂದರ್ಭಗಳನ್ನು ಗುರುತಿಸಿದಾಗ, ಧರ್ಮ ಎನ್ನುವ ಪದದ ಅರ್ಥ, ಇವತ್ತು ನಾವು ಯಾವುದನ್ನು ರಿಲಿಜನ್ ಅಂತೀವಿ ಅದರ ಅರ್ಥ ಖಂಡಿತಾ ಅಲ್ಲ. ಕಾರ್ಲ್ ಮಾರ್ಕ್ಸ್ Religion is opium ಅಂತ ಹೇಳಿದ್ದು ಯೂರೋಪಿನ ಯಹೂದಿ ಧರ್ಮಗಳನ್ನು ಗಮನದಲ್ಲಿಟ್ಟುಕೊಂಡು, ಇಸ್ಲಾಂ ಮತ್ತು ಕ್ರೈಸ್ತ ಧರ್ಮವನ್ನು ಗಮನದಲ್ಲಿಟ್ಟುಕೊಂಡು. ಅದನ್ನ ಬ್ರಿಟಿಷರು ಇಲ್ಲಿಗೆ ಬಂದಾಗ, ನಮಗೊಂದು ಧರ್ಮ ಇದೆ, ಇಲ್ಲೂ ಒಂದು ಇರಬೇಕಲ್ಲ ಅಂದುಕೊಂಡು 'ಹಿಂದೂ' ಅಂತ ಒಂದು ರಿಲಿಜನ್ ಅನ್ನುವುದನ್ನು ಸೃಷ್ಟಿಸಿದರು. ಒಂದು ಬಹಳ ಅದ್ಭುತವಾದ ಪುಸ್ತಕವೊಂದು ಬಂದಿದೆ, ಪ್ರತಿಭಾವಂತ ಯುವ ಇತಿಹಾಸಕಾರ ಮನು ದೇವದೇವನ್ ಬರೆದಿದಾರೆ. ಅದರ ಹೆಸರು Prehistory of Hinduism. ಅವರು ಹೇಳೋ ಪ್ರಕಾರ ೧೮ನೇ ಶತಮಾನಕ್ಕೆ ಮೊದಲು ಹಿಂದೂ ಎನ್ನುವದು ಧರ್ಮ ಸೂಚಕವಾದ ಪದವಾಗಿ ಬಳಕೆ ಆಗಿರಲಿಲ್ಲ, ಪ್ರದೇಶ ಸೂಚಕವಾಗಿ ಬಳಕೆ ಆಗಿತ್ತು. ನಮ್ಮ ವಿಜಯನಗರದ ಒಂದು ಶಾಸನದಲ್ಲಿ, ನಮ್ಮ ಕೃಷ್ಣದೇವರಾಯರ ಕುರಿತು ಒಂದು ಬಿರುದು ಬರ್ತದೆ, ಹಿಂದೂರಾಯ ಸುರತೇರಾಣ ಅಂತ. ಹಿಂದೂ ಅಂದ್ರೆ ಅಲ್ಲಿ ಕೂಡ ಪ್ರದೇಶ ವಾಚಕವೇ ಹೊರತು ರಿಲಿಜನ್ ವಾಚಕವಲ್ಲ. ಆದರೆ, ನಮ್ಮ ಮೇಲೆ ಇಂಗ್ಲಿಷ್ ಭಾಷೆ ಹೇರಿಕೆ ಆದಾಗ, ಆಂಗ್ಲೋ ಕೇಂದ್ರಿತ ಚಿಂತನೆಯ, ಆಂಗ್ಲೋ ಕೇಂದ್ರಿತ ಚಿಂತನೆಯೊಳಗೆ ಅವಿಸಿಕೊಂಡಿದ್ದ ಜುಡೋ–ಕ್ರಿಶ್ಚಿಯನ್ ಕೇಂದ್ರಿತ ಚಿಂತನೆ ಬಂದ ಮೇಲೆ, ನಾವು ಈ ಪದವನ್ನ ಧರ್ಮ, ರಿಲಿಜನ್ ಅನ್ನೋ ಪದಕ್ಕೆ ಸಂವಾದಿಯಾಗಿ ಬಳಕೆ ಮಾಡೋಕೆ ಶುರುಮಾಡಿದ್ದೇವೆ. ಆದರೆ ಬುದ್ಧ ತನ್ನ ತ್ರಿಪಿಟಿಕಾದಲ್ಲಿ 'ಸಬ್ದೇ ಧಮ್ಮ ಅನತ್ತ' ಅಂದಾಗ, ಅಥವಾ ವೈದಿಕ ಧರ್ಮದಲ್ಲಿ 'ಧರ್ಮೋ ರಕ್ಷತಿ ರಕ್ಷಿತಃ' ಅಂದಾಗ, ಬಸವಣ್ಣ 'ದಯವಿಲ್ಲದ ಧರ್ಮವಾವುದಯ್ಯ' ಅಂದಾಗ, ಅವರ್‍ಯಾರೂ ಧರ್ಮವನ್ನು ರಿಲಿಜನ್ ಅನ್ನುವ ಅರ್ಥದಲ್ಲಿ ಬಳಸ್ತಾ ಇರಲಿಲ್ಲ. ಅಂದರೆ ಧರ್ಮ ಅನ್ನುವುದು ಆ ಅರ್ಥದಲ್ಲಿ ಬಳಕೆಯಾಗುವಂತಹದಲ್ಲ. ಇದು ಒಂದು ದೊಡ್ಡ ಗೊಂದಲ ನಮ್ಮ ಚಿಂತನೆಯಲ್ಲಿ ಆಗಲಿಕ್ಕೆ ಕಾರಣ ಇದೆ. ಕೆಲವು ಸಲ ಭಾಷೆಯ ಅಪಪ್ರಯೋಗದಿಂದ ಈ ರೀತಿಯ ಗೊಂದಲಗಳು ಉಂಟಾಗ್ತವೆ. ಅವು ಸಾಮಾಜಿಕವಾಗಿ ಕೂಡ ಬಹಳ ಭೀಕರ ಸ್ವರೂಪವನ್ನ ಪಡಕೊಳ್ತಾ ಇರೋದನ್ನ ನಾವಿವತ್ತು ನೋಡ್ತಾ ಇದೇವೆ.

ನಮ್ಮ ಬ್ರಿಟಿಷ್ ಪೂರ್ವ ಭಾರತದಲ್ಲಿ, ಇವತ್ತು ನಾವು ಯಾವ ಅರ್ಥದಲ್ಲಿ ಧರ್ಮ ಅಂತ ಬಳಸ್ತಾ ಇದೀವಿ, ಅದಕ್ಕೆ ಪೂರಕವಾದ್ದು ಸಂವಾದಿಯಾದ್ದು ಪಂಥ, ಪಥ, ಮತ. ಶ್ರೀ ರಾಮಕೃಷ್ಣ ಪರಮಹಂಸರು ಅಂದ ಹಾಗೆ: 'ಜೊತೊ ಮೊತೊ ತಥೊ ಪೊಥೊ'(ಎಷ್ಟು ಆಲೋಚನೆಗಳಿದಾವೊ ಅಷ್ಟು ಪಥಗಳಿದಾವೆ). ನಿನ್ನೆ ಪ್ರೊ. ಜಿ.ರಾಮಕೃಷ್ಣ ಅವರು ಒಂದು ಮಾತು ಹೇಳಿದ್ರು, ಬಹುತ್ವವನ್ನು ವಿರೋಧಿಸುವ ಒಂದು ಸರ್ವಾಧಿಕಾರಿ ಪ್ರವೃತ್ತಿ, ಭಾರತೀಯ ಚಿಂತನೆಯಲ್ಲಿ ಪ್ರಾಚೀನಕಾಲದಿಂದಲೂ ಇದೆ ಅಂತ. ಇದು ಬ್ರಹ್ಮಸೂತ್ರದಲ್ಲಿ ಬೇರೆ ಬೇರೆ ದೃಷ್ಟಿಕೋನಗಳನ್ನ ಒಟ್ಟುಗೂಡಿಸಿ, ಏಕಾರ್ಥವನ್ನು ಕೊಡುವ ಒಂದು ಪ್ರಯತ್ನ ಆ ಟೀಕುಗಳ ಮೂಲಕ ನಡೀತು ಅಂತ ಒಂದು ಮಾತನ್ನ ಅವರು ಹೇಳಿದ್ರು. ನಾನು ಬ್ರಹ್ಮಸೂತ್ರವನ್ನು ಓದಿಲ್ಲ. ಆದರೆ ನಾನು ಹೆಚ್ಚಾಗಿ ಗಮನಿಸಿರುವುದು ವೈದಿಕೇತರ

ಪರಂಪರೆಗಳನ್ನ, ಬೌದ್ಧ, ಜೈನ, ಶೈವ, ಶಾಕ್ತ ಪರಂಪರೆಗಳನ್ನ. ಇಲ್ಲಿ ಏಕತ್ವವನ್ನು ಅರಸುವ ಒಂದು ಚಿಂತನೆ ಪ್ರಧಾನವಾಗಿದೆ. ಆ ಏಕತ್ವದ ಒಂದು ಶೋಧನೆ ಏನಿದೆ, ಇವತ್ತಿನ ಏಕತ್ವದ ಹೇರಿಕೆಯಲ್ಲ. ನಮ್ಮ ಸೂಫಿ ಗುರುಗಳಾದ ಅಸದುಲ್ಲಾ ಖಾದ್ರಿ ಅಶಹದುಲ್ಲಾ ಶಿವಯೋಗಿಗಳು ಹೇಳ್ತಿದ್ರು, "ಏನಪ್ಪ, ಅವರು ಈ ಸಾಬ್ರು ಇಂದೂಗುಳು ಇವರೆಲ್ಲ ಜಾತಿ–ಪಾತಿ ಅಂತ ಒದ್ದಾಡ್ತರೆ. ಈ ಸೂರ್ಯ ಒಬ್ಬನೋ ಇಬ್ರೋ ಹೇಳಪ್ಪ, ಒಬ್ಬನೇ ಸೂರ್ಯ. ಆ ಸೂರ್ಯನ ಬೆಳಕು ಬೇರೆ ಬೇರೆ ಕಡೆ ಬೇರೆ ಬೇರೆ ಥರ ಕಾಣ್ತದಲ್ವ. ಮರುಭೂಮಿಯಲ್ಲೊಂಥರ ಕಾಣ್ತದೆ, ಪರ್ವತಸೀಮೆಯಲ್ಲೊಂಥರ ಕಾಣ್ತದೆ, ಇಂಡಿಯಾದಲ್ಲೊಂಥರ ಕಾಣ್ತದೆ. ಅರಬೀ ದೇಶ್ದಲ್ಲಿ ಇನ್ನೊಂದು ಥರ ಕಾಣ್ತುದೆ. ಆದರೆ ಸೂರ್ಯ ಒಬ್ಬನೇ'. ಈ ಎಲ್ಲ ಮತಗಳನ್ನು ಮೀರಿದ, ಎಲ್ಲ ಮತಗಳೂ ಯಾವ ತತ್ವವನ್ನ ಅರಸ್ತಾ ಇದ್ವೋ ಅಂಥದಕ್ಕೆ ಧರ್ಮ ಎನ್ನುವ ಪದ ಆಧುನಿಕ ಪೂರ್ವ ಭಾರತದಲ್ಲಿ ಬಳಕೆ ಆಗ್ತಾ ಇತ್ತು. ಆಮೇಲೆ ಮಧ್ಯಯುಗದಲ್ಲಿ ಅನೇಕ ಪಂಥಗಳು, ಭಕ್ತಿ ಪಂಥಗಳು, ನಾಥಸಿದ್ಧಪಂಥಗಳು, ಶಾಕ್ತ ಪಂಥಗಳು, ಬೌದ್ಧ ಧರ್ಮವನ್ನು, ಜೈನ ಧರ್ಮವನ್ನು ಒಳಗೊಂಡು ಪ್ರಾಚೀನ ಕಾಲದ ಪಂಥಗಳನ್ನು ಒಳಗೊಂಡು, ಇವೆಲ್ಲವೂ ಕೂಡ ಅನೇಕತೆಯಲ್ಲಿ ಏಕತೆಯನ್ನ ಹುಡುಕೋದಕ್ಕೆ ಪ್ರಯತ್ನ ಮಾಡಿದ್ವು. ಜೈನರು ಅವರ ಸ್ಯಾದ್ವಾದದಲ್ಲಿ ಹುಡುಕಿದರು. ಇದಕ್ಕೆ ಒಂದು ಬಹಳ ಬೇರೆಯಾದ ಪದವನ್ನು ಬಳಸುತ್ತಾರೆ. ಅನೇಕಾಂತವಾದ ಅಂದರೆ ಬೇರೆ ಬೇರೆ ವಿಚಾರಧಾರೆಗಳ ಭಿನ್ನತೆಯನ್ನ ಒಪ್ತಾರೆ. ಆದರೆ ಅಂತಿಮ ಜ್ಞಾನ ಎನ್ನುವುದು ಇದನ್ನ ಮೀರಿದ್ದು. ಏಕಾಂತವಾದ, ಅನೇಕಾಂತವಾದದ ಅನೇಕವನ್ನು ದಾಟಿ ಇದೆಯಲ್ಲ ಅದು ನಿಜವಾದ ಧರ್ಮ. ಅದು ನಮ್ಮಗಳ ಬುದ್ಧಿಗೆ ಪರಿಕಲ್ಪನೆಗೆ ಎಟುಕುವುದಿಲ್ಲ. ಅದು ಕೇವಲ ಅನುಭವಕ್ಕೆ ಸಿಗೋದು ಅಂತಾರೆ. ಇದನ್ನ ವಚನಕಾರರು ಮತ್ತೆ ಮತ್ತೆ ಅನುಭಾವ ಅಂತ ಕರೆದು ಅನುಭಾವ ಸಂತೆಯ ಸುದ್ದಿಯಲ್ಲ, ಇದು ತನ್ನ ಅನುಭವದಲ್ಲಿ ತಿಳಿದುಕೊಳ್ಳುವುದು ಅಂತ ಹೇಳ್ತಾರೆ. ಪಶ್ಚಿಮದ ಧರ್ಮಗಳ, ಯಹೂದಿ ಧರ್ಮಗಳ ಆಧಾರ, ನಂಬಿಕೆ. ಇವತ್ತು ಯಾವ ಧರ್ಮವನ್ನು ಹಿಂದೂ ಧರ್ಮ ಅಂತ ಹೇಳ್ತಾ ಇದಾರೋ ಅದರ ಆಧಾರ, ನಂಬಿಕೆ. ಆದರೆ ಪ್ರಾಚೀನ ಮತ್ತು ಮಧ್ಯಕಾಲೀನ ಭಾರತೀಯ ಧಾರ್ಮಿಕ ಪಂಥಗಳ ಆಧಾರ ಅನುಭವವೇ ಆಗಿತ್ತೇ ಹೊರತು, ನಂಬಿಕೆ ಆಗಿರಲಿಲ್ಲ.

ಬುದ್ಧನ್ನ ಒಂದು ಪ್ರಶ್ನೆ ಕೇಳ್ತಾರೆ, ಅವರ ಶಿಷ್ಯಂದಿರು; ಭಂತೇ, ನೀನು ಒಂದು ತತ್ವ ಹೇಳ್ತಾ ಇದ್ದೀಯ. ಅಲ್ಲಿ ಆ ಮಹಾವೀರ ಇನ್ನೊಂದು ತತ್ವ ಹೇಳ್ತಾ ಇದ್ದಾನೆ. ಅಲ್ಲಿ ಮಕ್ಖಲಿಗೋಸಲ ಇನ್ನೊಂದು ತತ್ವ ಹೇಳ್ತಾ ಇದ್ದಾನೆ. ಯಾವುದನ್ನು ನಂಬಬೇಕು ನಾವು? ಅದಕ್ಕೆ ಬುದ್ಧ ಹೇಳ್ತಾನೆ; ನೋಡ್ರಪ್ಪ, ತಥಾಗತ ಹೇಳುವುದೆಲ್ಲ, ತಥಾಗತ ಹೇಳಿದ ಅಂತ ನಂಬಬೇಡಿರಿ. ನಾಥಪುತ್ತ(ಪಾಲಿ ಭಾಷೆಯಲ್ಲಿ ಮಹಾವೀರನನ್ನು ನಾಥಪುತ್ತ ಎಂದು ಕರೆಯುತ್ತಾರೆ) ಹೇಳಿದ್ದನ್ನು ನಾಥಪುತ್ತ ಹೇಳಿದ ಅಂತ ನಂಬಬೇಡಿ. ಮಕ್ಖಲಿಗೋಸಲ ಹೇಳಿದ್ದನ್ನು ಅವನು ಹೇಳಿದ ಎಂದು ನಂಬಬೇಡಿ. ನಾನು, ಹೇಳಿದ್ದನ್ನು, ಅವರು ಹೇಳಿದ್ದನ್ನು ನಿಮ್ಮ ಅನುಭವದಲ್ಲಿ ಪರೀಕ್ಷಿಸಿ ನೋಡಿ. ಆಮೇಲೆ ನಿಮಗೆ ಯಾವುದರಲ್ಲಿ ಸಂತೋಷ ಸಿಗ್ತದೆ, ಶಾಂತಿ ಸಿಗ್ತದೆ ಅದನ್ನ ಒಪ್ಕೊಳ್ರಪ್ಪ. (ಪರಿಕ್ಖಾತ್ ವಾಹ್ಯಂ ಭಿಕ್ಖವೇ, ನ ಖಲು ವಚನಾತ್'–ಪರೀಕ್ಷೆಗೊಳಪಡಿಸಿ ಒಪ್ಪಿಕೊಳ್ಳಿ, ಆದರೆ ಕೇಳಿಕೆ ಮಾತನ್ನು ನಂಬಿ ಯಾವುದನ್ನೂ ಪಾಲಿಸಬೇಡಿ) ಅನ್ನೋ ಮಾತನ್ನ ಹೇಳ್ತಾನೆ. ಇದು ನಮ್ಮ ಆಧುನಿಕ ಪೂರ್ವ ಧರ್ಮಗಳ ಧೋರಣೆ.

ಯೂರೋಪಿನ ಈ ಯಹೂದಿ ಧರ್ಮದವರಿಗೆ ಧರ್ಮಗ್ರಂಥಗಳಿದ್ದಾವೆ. ಯಾವುದು ಧರ್ಮ ಗ್ರಂಥ? ವಚನಕಾರರ ಪ್ರಕಾರ ಯಾವುದು ಧರ್ಮ ಗ್ರಂಥ? ಇವತ್ತು ಹಿಂದೂಗಳಿಗೆಲ್ಲ ಭಗವದ್ಗೀತೆ ಧರ್ಮಗ್ರಂಥ ಅಂತ ಹೇಳಿದ್ರು ನಮ್ಮ ವಕೀಲರು. ಯಾರು ಮಾಡಿದ್ದು ಧರ್ಮಗ್ರಂಥ? ನಾನು ಜಂಗಮರಲ್ಲಿ ಹುಟ್ಟಿದೋನು. ನಮ್ಮ ಮನೆಯಲ್ಲಿ ಭಗವದ್ಗೀತೆ ಇರಲಿಲ್ಲ. ನಿಮ್ಮ ಮನೆಯಲ್ಲಿ ಯಾರಾದರೂ ಚಿಕ್ಕ ವಯಸ್ಸಲ್ಲಿ ಭಗವದ್ಗೀತೆ ಓದಿದ್ರಾ? ಯಾರಾದ್ರೂ ನೀನು ಹಿಂದೂ, ಭಗವದ್ಗೀತೆ ಓದ್ಬೇಕಪ್ಪ ಅಂತ ಹೇಳಿದ್ರಾ? ಆದರೆ, ವಚನಕಾರರ ಪ್ರಕಾರ ಧರ್ಮಗ್ರಂಥ ಯಾವುದೂಂದ್ರೆ 'ಸ್ವಾನುಭವ'. ಅದ್ದರಿಂದ ಶಬ್ದಪ್ರಮಾಣವನ್ನ 'ಅನುಭಾವಿಗಳು' ನಿರಾಕರಿಸಿದರು. ಒಂದ್ಸಲ ರವೀಂದ್ರನಾಥ ಟ್ಯಾಗೋರರು ಒಂದು ಪ್ರಶ್ನೆ ಕೇಳ್ಕೊಂಡ್ರು, ಅದೇನೂಂದ್ರೆ, 'ಭಾರತೀಯ ಸಂಸ್ಕೃತಿಯಲ್ಲಿ ಐಕ್ಯತೆ ಎಲ್ಲಿದೆ?'. ಐಕ್ಯತೆ ಇಲ್ಲ ಅಂತ ಕೆಲವು ಜನ ಹೇಳಿದ್ರು. ಉದಾಹರಣೆಗೆ ಹಿಂದಿಯ ದೊಡ್ಡ ಕವಿ ಗಜಾನನ ಮಾಧವ ಮುಕ್ತಿಬೋಧ್, ಬಹಳ ದೊಡ್ಡವರು, ಅವರು 'ಭಾರತೀಯ ಸಂಸ್ಕೃತಿ ಕ್ಯಾ ಹೈ?' ಇಷ್ಟೊಂದು ಜಾತಿಗಳು, ಇಷ್ಟೊಂದು ಪಂಥಗಳು, ಇರೋದು ನೋಡಿದ್ರೆ, ಭಾರತೀಯ ಸಂಸ್ಕೃತಿಯಲ್ಲಿ ಒಂದೊಂದು ಜಾತಿಗೂ ಒಂದೊಂದು ಸಂಸ್ಕೃತಿ ಇದೆ ಅಂದ್ರು, ಆಂದರೆ ಏಕತ್ವವಿಲ್ಲವೇ? ರವೀಂದ್ರನಾಥ ಟ್ಯಾಗರರು ಇದನ್ನೇ ಕೇಳಿದ್ದು. ಭಾರತೀಯ ಸಂಸ್ಕೃತಿಯ ನಿರಂತರತೆಯನ್ನು ನಾವು ಕಾಣಬೇಕಾಗಿರುವುದು ವೇದೋಪನಿಷತ್ತುಗಳಲ್ಲಲ್ಲ, ಸಂಸ್ಕೃತದಲ್ಲಲ್ಲ, ಪುರಾಣಗಳಲ್ಲಲ್ಲ.

ಹೀಗೆ ಅನೇಕ ಜಾತಿಗಳನ್ನ ಅನೇಕ ಪಂಥಗಳನ್ನ ಒಂದು ಮಾಡುವ ಪ್ರಯತ್ನ ನಿರಂತರವಾಗಿ ನಡೆಯುತ್ತಾ ಬಂತು. ಆದರೆ ಮುಂದೆ ಕೆಲವು ಪಂಥಗಳು ಜಾತಿಗಳಾಗಿ ಪರಿವರ್ತನೆಯಾದವು. ಉದಾಹರಣೆಗೆ ಇವತ್ತು ಜೋಗಿ ಅಂತ ಒಂದು ಜಾತಿ ಇದೆ. ಪರಿಶಿಷ್ಟ ಜಾತಿಗಳಲ್ಲಿ ಬರತ್ತೆ. ಈ ಮಧ್ಯಭಾರತ ಪ್ರದೇಶಗಳಲ್ಲಿ ಅವರ ಸಂಖ್ಯೆ ಬಹಳ ಇದೆ. ಬಹುತೇಕ ಅವರು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ್ದಾರೆ. ಈ ಜೋಗಿಗಳು ಒಂದು ಕಾಲದಲ್ಲಿ ಈ ನಾಥಸಿದ್ಧ ಪಂಥದವರು. ಮುಂದೆ ಅವರು ಈ ಸವರ್ಣೀಯ ಸಮಾಜದಿಂದ ದೂರ ಆದ ಹಾಗೆ ಅಸ್ಪೃಶ್ಯರಾಗಿ ಅವರೊಳಗೆ ಇವತ್ತು ಒಂದು ಜಾತಿ ಇದೆ. ಅನೇಕ ಪಂಥಗಳು ಈ ರೀತಿ ಜಾತಿಗಳಾಗಿದಾವೆ. ಆದರೆ ಕೆಲವು ಮಾತ್ರ ಆ ಜಾತ್ಯಾತೀತ ಸ್ವರೂಪವನ್ನ ಇಲ್ಲಿಯವರೆಗೂ ಉಳಿಸಿಕೊಂಡು ಬಂದಿದ್ದಾವೆ. ಆ ರೀತಿಯಾದ ಒಂದು ಪಂಥ ಇತ್ತೀಚೆಗೆ ನಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ಬರುವ ಮೊದಲು ನಮ್ಮ ಹತ್ತಿರದಲ್ಲೇ ಇರುವ, ಯಾವುದನ್ನು ಇವತ್ತು ವೀರಶೈವವೋ ಲಿಂಗಾಯತವೋ ಅಂತ ಕರೀತಾ ಇದಾರೆ ಅದಕ್ಕೆ ಬರೋಣ.

vachanasanchaya.net –ನಮ್ಮ ನಾಗಭೂಷಣಸ್ವಾಮಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಅದರಲ್ಲಿ ಎಲ್ಲ ವಚನ ಸಿಕ್ಕಿಬಿಡತ್ತೆ. ಯಾವ ಪದ ಎಷ್ಟು ಸಲ ಎಲ್ಲಿ ಪ್ರಯೋಗ ಆಗಿದೆ ಅದೆಲ್ಲ ಸಿಗುತ್ತೆ. ಲಿಂಗಾಯತ ಎನ್ನುವ ಪದ ಇಡೀ ಸಾವಿರಾರು ವಚನಗಳ ಸಂಗ್ರಹದಲ್ಲಿ ೭೦ಕ್ಕಿಂತ ಕಡಿಮೆ ಸಲ ಪ್ರಯೋಗ ಆಗಿದೆ. ಲಿಂಗವಂತ ಅನ್ನೋದು ಸ್ವಲ್ಪ ೧೦೦–೧೨೦ ಸಲ ಆಗಿದೆ. ವೀರಶೈವ ಅನ್ನೋದು ಸ್ವಲ್ಪ ಜಾಸ್ತಿ ಇದೆ. ಆದರೆ ಶರಣ ಎನ್ನುವ ಪದ ೪೦೦೦ಕ್ಕೂ ಹೆಚ್ಚು ಬಾರಿ ಪ್ರಯೋಗವಾಗಿದೆ! ವಚನಕಾರರು ತಮ್ಮನ್ನು ತಾವು ಉದ್ದೇಶಿಸಿಕೊಳ್ಳಲು ಬಳಸಿದ ಪದ ಶರಣ ಎನ್ನುವ ಪದವೇ ಹೊರತು, ಲಿಂಗಾಯತ, ವೀರಶೈವ ಅಲ್ಲ. ಒಂದು ದರ್ಶನ ಸೂಚಕ, ಮತ್ತೊಂದು ಆಚಾರ ಸೂಚಕ. ಆದರೆ ಸಮುದಾಯದ ಸೂಚಕವಾಗಿ ಬಳಕೆಯಾದ ಪದ ಶರಣ ಎಂಬುದು.

ಶರಣರು ಜಾತಿಯನ್ನು ವಿನಾಶ ಮಾಡಿದರೇ? ಸರಿ ಮಾಡಿದರೇ? ಎರಡೂ ಅಲ್ಲ. ನಾವು ಪಶ್ಚಿಮದ ಮಾದರಿಯನ್ನ ಇಟ್ಟುಕೊಂಡು ಇವತ್ತು ಇಪ್ಪತ್ತೊಂದನೇ ಶತಮಾನದಲ್ಲಿ, ಮಾತೆ ಮಹಾದೇವಿ ಒಂದು ಕಡೆ ಹೇಳಿದ್ದು ನನಗೆ ನೆನಪಿದೆ, 'ಹನ್ನೆರಡನೇ ಶತಮಾನದಲ್ಲಿ ಬಸವಣ್ಣ ಒಂದು ಕ್ರಾಂತಿ ಮಾಡಿದ. ಕೊಡಲಿ ಹಿಡ್ಕೊಂಡು ಮಾಡಿರ್‍ತಕ್ಕಂಥದ್ದಲ್ಲ. ಬಹಳ ಶಾಂತಿಯುತವಾಗಿ ಮಾಡಿದ ಕ್ರಾಂತಿ' ಅಂತ. ಕ್ರಾಂತಿ ಅನ್ನುವ ಕಲ್ಪನೇ ಆಗ ಇರಲಿಲ್ಲ. ಅದು ಕ್ರಾಂತಿ ಹೇಗೆ ಆಗುತ್ತೆ? ಆಮೇಲೆ ಹಿರೇಮಲ್ಲೂರು ಈಶ್ವರನ್ ಮುಂತಾದ ಪಶ್ಚಿಮ ಬುದ್ಧಿಯ ವಿದ್ವಾಂಸರು, ಅವರನ್ನ ಅನುಸರಿಸಿದ ರಾಮಾನುಜನ್ ಅವರು, ಇದು ಒಂದು Hindu reformation movement ಅಂತಾರೆ. Hindu reformation movement ಆಗ್ಬೇಕು ಅಂತಂದ್ರೆ ಹಿಂದೂ ಅನ್ನುವ ಪದ ಎಲ್ಲದ್ರೂ ಸಿಗಬೇಕಲ್ವ ಒಂದಾದ್ರೂ ವಚನದಲ್ಲಿ? ೨೭೦ಕ್ಕೂ ಹೆಚ್ಚು ವಚನಕಾರರ ಯಾವುದೇ ವಚನಗಳಲ್ಲಿ ಹಿಂದೂ ಎನ್ನುವ ಪದ ಸಿಗೋದೇ ಇಲ್ಲ. Hindu reformation movement ಹೇಗೆ ಆಯಿತು? ಸುಧಾರಣೆ ಎನ್ನುವ ಕಲ್ಪನೆ ಕೂಡ ಬಂಡವಾಳಶಾಹಿ ಬಂದ ಮೇಲೆ ಅದು ಬಂದದ್ದು.

ಆದರೆ ಇವರು ಮಾಡಿದ್ದೇನು ನಿಜವಾಗಿ? ಈ ಹಲವು ಜಾತಿ, ಹಲವು ಹಿನ್ನೆಲೆಯಿಂದ ಬಂದವರನ್ನ ಒಂದು ಸಮಾನ ವೇದಿಕೆಗೆ ತರುವಂತ ಕೆಲಸವನ್ನ ಮಾಡಿದರು. ಶರಣರಾದಾಗ ಅವರು ತಮ್ಮ ಜಾತಿಯ ಗುರುತುಗಳನ್ನು ಬಿಟ್ಟುಕೊಡಲಿಲ್ಲ. ಮಾದಾರ ಚನ್ನಯ್ಯ ಮಾದಾರ ಚನ್ನಯ್ಯ ಅಂತಾನೇ ಬಳಸ್ತಾನೆ, ಮಡಿವಾಳ ಮಾಚಯ್ಯ ಮಡಿವಾಳ ಮಾಚಯ್ಯ ಅಂತಾನೇ ಹೇಳ್ತಾನೆ, ಡೋಹರ ಕಕ್ಕಯ್ಯ ಡೋಹರ ಕಕ್ಕಯ್ಯ ಅಂತಾ, ನುಲಿಯ ಚಂದಯ್ಯ ಮುಂತಾದವರೆಲ್ಲರೂ ಹಾಗೇ ಬಳಸ್ತಾರೆ. ಆದರೆ ಏನು ವ್ಯತ್ಯಾಸ ಅಂದ್ರೆ, ಅವರು ತಮ್ಮ ಜಾತಿಯ ಹೆಸರುಗಳನ್ನ ಯಾವುದೇ ಹೆಮ್ಮೆಯಿಲ್ಲದೇ, ಅಥವಾ ಯಾವುದೇ ನಾಚಿಕೆಯಿಲ್ಲದೇ ಬಳಸೋದಕ್ಕೆ ಶುರುಮಾಡಿದ್ರು. ಈ ರೀತಿ ಆತ್ಮಗೌರವವನ್ನ ವಚನ, ಒಂದು ಸಂಸ್ಕೃತಿ ಅವರಿಗೆ ತಂದುಕೊಡ್ತು. ಇದೇ ರೀತಿ ಇತರ ಪಂಥಗಳೂ ಮಧ್ಯಯುಗದಲ್ಲಿ ಮಾಡ್ತಾ ಬಂದ್ವು.

ಆದರೆ ಯಾಕೆ ಇದು ಜಾತಿಯಾಯಿತು? ಇದರ ಬಗ್ಗೆ ಅಧ್ಯಯನಪೂರ್ವಕವಾದ ಚಿಂತನೆಗಳು ಏಕೆ ನಡೆದಿಲ್ವ? ಯಾಕೇಂದ್ರೆ ನಾವು ಪಶ್ಚಿಮದ ಕನ್ನಡಕ ಹಾಕ್ಕೊಂಡು, ನಾನೂ ಸೇರ್‍ಕೊಂಡು, ಅದೇ ತರ ನೋಡ್ತಾ ಬಂದ್ವಿ. ಇದು ಎಲ್ಲಿ ಶುರುವಾಯ್ತು? ಸ್ಪಷ್ಟವಾಗಿದೆ. ಇದು ಕಸುಬಿನಿಂದ, ಇದು ಕಾಯಕದಿಂದ ಶುರುವಾಗಿದ್ದು. ವಚನಕಾರ ಬಸವಣ್ಣನೇ ಘಂಟಾಘೋಷವಾಗಿ ಹೇಳ್ತಾನೆ 'ಮಾದಾರ ಚನ್ನಯ್ಯನ ಮಗ ನಾನು'. ಮಾದಾರ ಚನ್ನಯ್ಯ ಒಬ್ಬ

ವಚನಕಾರ. ಆ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ದೇವರ ದಾಸಿಮಯ್ಯ ಮುಂತಾದವರು ಈಗಾಗಲೇ ಪ್ರಾರಂಭಿಸಿದ ಒಂದು ಚಿಂತನಾಧಾರೆಯಲ್ಲಿ, ಒಂದು ಸಂಸ್ಕೃತಿಯಲ್ಲಿ, ಬಸವಣ್ಣ ಬಂದು ಸೇರ್ಕೊಂಡು ಅದಕ್ಕೆ ಹೆಚ್ಚು ವ್ಯಾಪ್ತಿಯನ್ನು, ಹೆಚ್ಚು ಸಂಘಟಿತ ರೂಪವನ್ನು ಕೊಟ್ಟಿದ್ದಾನೆ. ಅದು ನಿಜ. ಆದ್ದರಿಂದ ಈ ಪಂಥವನ್ನು ಬಸವಣ್ಣನು ಸ್ಥಾಪಿಸಿದ ಎನ್ನುವುದಕ್ಕೆ ಪುರಾವೆ ಇಲ್ಲ. ಅಥವಾ ರೇಣುಕಾಚಾರ್ಯ ಸ್ಥಾಪಿಸಿದ್ದಂತೂ ಅಲ್ಲವೇ ಅಲ್ಲ. ರೇಣುಕಾಚಾರ್ಯರದು ಚರಿತ್ರೆಯೇ ಅಲ್ಲ.

ಏನಾಯ್ತು ಹಾಗಾದ್ರೆ ಹನ್ನೆರಡನೇ ಶತಮಾನದಲ್ಲಿ? ಎರಡು ಚಾರಿತ್ರಿಕ ಘಟನೆಗಳು ನಡೆದಿದ್ದಾವೆ. ಅದು ನಿಜ. ಬಿಜ್ಜಳನ ಕೊಲೆಯಾಗಿದೆ. ಬಸವಣ್ಣನ ಒಂದು ಅಂತ್ಯ ಆಗಿದೆ. ಏನೋ ಒಂದು ಹಿಂಸೆ, ವ್ಯಾಪಕ ಹಿಂಸೆ ಅಲ್ಲಿ ಜರುಗಿದೆ ಅನ್ನೋದನ್ನ ನಮ್ಮ ಜನಪದ ಮತ್ತು ದಂತಕತೆಗಳು ಹೇಳ್ತವೆ. ಇತಿಹಾಸದ ಸಣ್ಣಪುಟ್ಟ ಕತೆಗಳು ಹೇಳ್ತವೆ. ಆದ್ರೆ ನಿಜವಾಗ್ಲೂ ಏನಾಯ್ತು? ನಿಜವಾಗಿ ಆಗಿದ್ದು ಏನಂದ್ರೆ ಈ ವಚನಗಳ ರಚನೆ. ಸುಮಾರು ೪೦ ವರ್ಷಗಳ ಅವಧಿಯಲ್ಲಿ ಇಷ್ಟು ಜನ ಕವಿಗಳು, ಇಷ್ಟು ಬಗೆಯ ಕಾವ್ಯ ಭಾಷೆಗಳಿಂದ, ಇಷ್ಟು ಶ್ರೀಮಂತ ಸಾಹಿತ್ಯವನ್ನು ಸೃಷ್ಟಿಸಿದ್ದಕ್ಕೆ ಒಂದು ಹೋಲಿಕೆ ಜಗತ್ತಿನ ಯಾವ ಸಾಹಿತ್ಯದಲ್ಲೂ ಇಲ್ಲ. ರಂಶ್ರೀ ಮುಗಳಿಯವರು ಜಾತ್ಯಾಧಾರಿತ ಸಾಹಿತ್ಯಚರಿತ್ರೆಯನ್ನು ಬರೆದು ಕೃತಾರ್ಥರಾದರು. ಅವರೇನು ಮಾಡಿದರು? ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ ಅಂತ ಬರೆದರು. ಇನ್ನೊಂದು ಕಡೆ ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗ ಅಂತ. ಹ್ಯಾಗಾಗತ್ತೆ? ಆದರೆ ಅದು ಕೇವಲ ಬಸವಯುಗವಲ್ಲ. ಅದು ಮಾದಾರ ಚನ್ನಯ್ಯನ ಯುಗ, ಮಡಿವಾಳ ಮಾಚಯ್ಯನ ಯುಗ, ಡೋಹರ ಕಕ್ಕಯ್ಯನ ಯುಗ, ಸೂಳೆ ಸಂಕವ್ವೆಯ ಯುಗ, ಹೆಂಡದ ಮಾರಯ್ಯನ ಯುಗ. ಅನೇಕ ಶರಣರು ತಮ್ಮ ಕಲ್ಪನೆಯ ಕಲ್ಯಾಣವನ್ನು ಕಟ್ಟಿದ್ದಾರೆ. ಇವರ ಒಂದು ಸಾಮೂಹಿಕ ಪ್ರಯತ್ನದ ಉಪಲಬ್ಧಿಯನ್ನು ನಾವು ವಚನಗಳಲ್ಲಿ ಕಾಣ್ತಿದೀವಿ. ನನ್ನ ಅಲ್ಪಮತಿಯ ಪ್ರಕಾರ ಎಲ್ಲ ಆಚಾರವಿಚಾರಗಳನ್ನ ಇವರು ಒಪ್ಪಿಕೊಂಡಿರಲಿಲ್ಲ. ಇವರು ಚರ್ಚೆಯ ಮೂಲಕ ಆಗಿರುವ ಸಾಮಾನ್ಯ ಅಂಶಗಳನ್ನ ಪರಸ್ಪರ ಒಪ್ಪಿಕೊಂಡಿದ್ರು. ಅದರಲ್ಲಿ ಒಂದು ಮುಖ್ಯವಾದದ್ದು ಕಾಯಕ ತತ್ವ.

ಆ ವಚನಗಳನ್ನು ಗ್ರಂಥಸ್ಥಗೊಳಿಸಿದ್ದು ನಿಸ್ಸಂಶಯವಾಗಿ ನೂರೊಂದು ವಿರಕ್ತರು, ಪ್ರೌಢ ದೇವರಾಯನ ಕಾಲದಲ್ಲಿ. ಆಗ ಯಾರು ಇದನ್ನ ಸಂಕಲನ ಮಾಡಿದರು, ಯಾರು ಇದರ ಬಗ್ಗೆ ಟೀಕುಗಳನ್ನ ಬರೆದರು ಅಂದರೆ, ಇವರೆಲ್ಲ ವಿರಕ್ತ ಪಂಥದ ಮಠಾಧೀಶರು. ವಚನಕಾರರಲ್ಲಿ ವಿರಕ್ತ ಪಂಥದ ಮಠಾಧೀಶರು ಇದ್ದರಾ? ಬಸವಾದಿಗಳ ವಚನಗಳಿಂದ ಹಿಡಿದು ಎಲ್ಲೂ ಸಿಕ್ಕಿಲ್ಲ. ಇವರು ಇದನ್ನ ಸಂಕಲಿಸುವಾಗ ಕಲ್ಯಾಣದ ಬಗ್ಗೆ ಒಂದು ಸಂಕಥನವನ್ನು ಕಟ್ಟಿದ್ದಾರೆ. ಅದನ್ನ ಬಸವ ಕೇಂದ್ರಿತವಾಗಿ ಅಥವಾ ಅಲ್ಲಮ ಕೇಂದ್ರಿತವಾಗಿ. ಅಲ್ಲಮ ವಿರಕ್ತ ಪಂಥದವನು. ಅವನನ್ನ ಹೀರೋ ಮಾಡಿ ಇವರೊಂದು ಸಂಕಥನವನ್ನು ಕಟ್ಟಿದರು. ಇನ್ನು ಭಕ್ತಿ ಬಸವಣ್ಣನ ಪರವಾಗಿ.

ವಚನಗಳ ಸಂಕಲನವನ್ನು ನೋಡಿದ್ರೆ ಹೆಚ್ಚಿನ ವಚನಗಳಲ್ಲಿ ಸಿಗೋದು ಈ ಮುಖ್ಯ ವಚನಕಾರರು. ಉಳಿದ ವಚನಕಾರರ ಕೆಲವು ವಚನಗಳು ಸಿಕ್ಕಿದ್ದಾವಲ್ಲ, ಅದನ್ನ ನೋಡಿದಾಗ ನಿಮಗೆ ಒಂದು ರೀತಿಯ ಅಸಮಾನತೆ ಇದೆ ಅನಿಸುತ್ತೆ. ಇದು ಒಂದು. ಎರಡನೇದು 'ಶೂನ್ಯಸಂಪಾದನೆ'ಯದ್ದು. ಶೂನ್ಯ ಸಂಪಾದನೆನ ಬಹಳ ದೊಡ್ಡ ದಾರ್ಶನಿಕ ಗ್ರಂಥ ಅಂತ ಓದ್ತಾರೆ. ನಿಸ್ಸಂಶಯವಾಗಿ ಅದು ಅದ್ಭುತವಾದದ್ದು. ಒಂದು ವಚನ ಪರಂಪರೆಯ ಕರ್ತಾರ ಶಕ್ತಿಯ ಸಂಕೇತ ಅದು. ಮೊಟ್ಟಮೊದಲು ಕವಿತೆಗಳನ್ನು ಒಂದು ನಾಟಕೀಯ ಸಂಕಲನವಾಗಿ ಮಾಡಿದ್ದು ಅದರ ಒಂದು ದೊಡ್ಡ ಮಹತ್ವ

ಆದ್ದರಿಂದ ಏನಾಗ್ತಾ ಇದೆ? ಅಲ್ಲಮನನ್ನು ಕಥಾನಾಯಕನನ್ನಾಗಿ ಮಾಡಿ, ಕಾಯಕ ಜೀವಿಗಳ, ಆ ವಚನಕಾರರ, ಮತ್ತು ಮಹಿಳೆಯರ ದನಿಗಳನ್ನು ಬದಿಗೆ ತಳ್ಳಲಾಗುತ್ತಿದೆ. ನೀವು ಮುಕ್ತಾಯಕ್ಕ ಮತ್ತು ಅಲ್ಲಮನ ಸಂವಾದವನ್ನು ನೋಡಿದಾಗ, ಇಬ್ಬರೂ ಮಾತಾಡುವಾಗ ಯಾವುದೇ ವಿಚಾರದಲ್ಲಿ ಮುಕ್ತಾಯಕ್ಕನ ತಾತ್ವಿಕ ಪ್ರೌಢಿಮೆ ಅಲ್ಲಮನಿಗಿಂತ ಕಮ್ಮಿ ಇಲ್ಲ. ಆದರೂ ಕೊನೆಯಲ್ಲಿ ಅಲ್ಲಮನನ್ನೇ ಗೆಲ್ಲಿಸ್ತಾರೆ. ಯಾಕೇಂದ್ರೆ ಅವನು ಹೀರೋ ಆಗಿರ್ಬೇಕಲ್ಲ, ಅದಕ್ಕೆ. ಅಕ್ಕಮಹಾದೇವಿಯ ಜೊತೆಗಿನ ಸಂವಾದದ ಭಾಗಗಳಲ್ಲೂ ಇದೇ. ಇನ್ನು ಕಾಯಕ ಜೀವಿಗಳದ್ದು. ನುಲಿಯ ಚಂದಯ್ಯನ ಪ್ರಸಂಗ ನೋಡಿ. ನುಲಿಯ ಚಂದಯ್ಯ, ಕಾಯಕವಿದ್ದಲ್ಲಿ ಗುರುವಾದರು ಬಂದರೂ ಮರೆಯಬೇಕು, ಲಿಂಗವಾದರು ಬಂದರೂ ಮರೆಯಬೇಕು, ಜಂಗಮ ಬಂದರೂ ಮರೆಯಬೇಕು ಅಂತಾನೆ. ಕಾಯಕ ಕೇಂದ್ರಿತ ಒಂದು ದೃಷ್ಟಿ ಇದು. ಈ ದೃಷ್ಟಿಯ ವಚನಕಾರರ ದನಿಯನ್ನ ಅಲ್ಲಮನ ದನಿಗೆ ಅಥವಾ ಬಸವೇಶ್ವರನ ಲಿಂಗತ್ವಕ್ಕೆ ಅಧೀನಗೊಳಿಸುವ ಒಂದು ಪ್ರಯತ್ನ ನಡೆದಿದೆ. ಮುಂದೆ ಇದೇ ಸಂಕಥನ ಬೆಳೀತು. ಬಹುತೇಕ ಕಲ್ಯಾಣದ ಬಗ್ಗೆ ಬರೆದವರು ಬಸವ ಕೇಂದ್ರಿತವಾಗಿ ಬರೆದರು. ಒಂದಷ್ಟು ಜನ ಅಲ್ಲಮ ಕೇಂದ್ರಿತವಾಗಿ ಬರೆದರು. ಆದರೆ ಅದರ ಸಾಮೂಹಿಕತ್ವದ ಒಂದು ಸ್ವರೂಪ ಏನಿತ್ತು, ಅದನ್ನ ಮರೆತರು. ಅದರಿಂದ ಯಾವ ವಿರಕ್ತ ಪಂಥದವರು ಇದನ್ನ ಕಬ್ಜಾ ಮಾಡಿದ್ರು, ಅವರು ಈ ಸಮುದಾಯದ ಮೇಲೆ ತಮ್ಮ ಅಧಿಕಾರವನ್ನ ಸ್ಥಾಪನೆ ಮಾಡಿದರು.

ಶರಣರು ಆಚರಿಸಿದ್ದು, ಕಾಯಕಯೋಗ. ಮಾಡುವುದು ಅನ್ನೋ ಪದಕ್ಕೆ; 'ಮಾಡುವುದು, ಮಾಡುವುದು ಮನಮುಟ್ಟಿ, ಮಾಡುವುದು ಮಾಡುವುದು ತನುಮುಟ್ಟಿ' ಅಂತಾರೆ ಬಸವಣ್ಣನೋರು. ಕಾಯಕಪ್ರಧಾನ ದರ್ಶನ ಅವರದಾದ್ದರಿಂದ ನಮ್ಮ ಕಮಾಯಿ ಕಾಯಕದ ಮೂಲಕನೇ ಹುಟ್ಟಬೇಕು. ವಚನಕಾರರ ನೀತಿ ಸಂಹಿತೆಯಲ್ಲಿ ಅವರು ಖಂಡಿಸುವುದು ಪರಸತಿ ಪರಧನವನ್ನ. ದಾನ ಧರ್ಮದ ಒಂದು ಸಂಸ್ಕೃತಿಗೆ ಅವರು ವಿರುದ್ಧವಾಗಿದ್ರು. ದಾನ ಕೊಡೋನ್ಯಾರು? ರಾಜ. ಆ ರಾಜನಿಗೆ ದಾನ ಕೊಡುವಷ್ಟು ಸಂಪತ್ತು ಎಲ್ಲಿಂದ ಬಂತು? ಕಂಡೋರಾಸ್ತಿ ದುಂಡಗೆ ಮಾಡಿದ್ದು. ಅದನ್ನ ಇಸ್ಕೊಳೋರ್‍ಯಾರು? ಕೊಟ್ಟೋನು ಕೋಡಂಗಿ ಇಸ್ಕೊಳೋನು ಈರಭದ್ರ ಅಂತ ಅದಕ್ಕೂ ಜನ ಇದ್ರು. ಅವರು ಮಾತ್ರ ಅರ್ಹರು, ಉಳಿದೋರು ಅಪಾತ್ರರು. ಹಿಂದೆ ದೇವಸ್ಥಾನಗಳಲ್ಲಿ ಅದನ್ನ ಮುಚ್ಚಿಡ್ತಾ ಇದ್ರು. ಶಾಸನಗಳನ್ನ ಬರಸ್ತಾ ಇದ್ರು, ಮುಂದೆ ಯಾರಾದರೂ ಮೂರ್ತಿಗೆ ಕೈ ಹಾಕಿದವರು, ಆ ಸಂಪತ್ತಿಗೆ ಕೈ ಹಾಕಿದವರು ಇಂತಿಂಥಾ ರೌರವ ನರಕಕ್ಕೆ ಹೋಗ್ತಾರೇಂತ. ಕಾರ್ಲ್‌ಮಾರ್ಕ್ಸ್‌ನ Surplus value ಅನ್ನುವ ಕಲ್ಪನೆ ಬರೋದಕ್ಕೆ ಮೊದಲು, ಅದು ಗೊತ್ತಿಲ್ಲದೇ ಶರಣರು ಒಂದು ರೀತಿಯಲ್ಲಿ ದಾನಕ್ಕೆ ಪ್ರತಿಯಾಗಿ ದಾಸೋಹದ ಕಲ್ಪನೆಯನ್ನ ತಂದರು. ಸಂಗ್ರಹದ ಬದಲಾಗಿ ಕಾಯಕತತ್ವವನ್ನು ತಂದ್ರು. ಇದು ಬಸವಯುಗದ ವಚನ ಸಮುದಾಯದಲ್ಲಿ ಬಹಳ ಕೇಂದ್ರಸ್ಥಾನದಲ್ಲಿದ್ದ ಪರಿಕಲ್ಪನೆ ಮತ್ತು ಆಚರಣೆ ಆಗಿತ್ತು. ಆದರೆ ಯಾವಾಗ ಮಠಗಳು ಅಲ್ಲಿ ಸ್ಥಾಪನೆಯಾದ್ವೋ, ನೂರೊಂದು ವಿರಕ್ತರು ಕೂಡ ರಾಜಾಶ್ರಯವನ್ನು ಪಡೆದೇ ಈ ಎಲ್ಲ ಕೆಲಸಗಳನ್ನು ಮಾಡಿದ್ದು. ಅದೇ ಸಂದರ್ಭದಲ್ಲಿ ಇದು ಹೀಗಾಗ್ತಾ ಇರೋದು ನೋಡಿ, ಕೊಡೇಕಲ್ಲು ಬಸವೇಶ್ವರ ಮುಂದೆ ತನ್ನದೇ ಆದ ಇನ್ನೊಂದು ಪಂಥವನ್ನು ಸ್ಥಾಪನೆ ಮಾಡಿದ. ಅದರ ಬಗ್ಗೆ ನಮ್ಮ ಶಿವಾನಂದ ವಿರಕ್ತಮಠ ಅವರು ಬಹಳ ಕೆಲಸ ಮಾಡಿದಾರೆ. ಮಂಟೇಸ್ವಾಮಿ, ಮಲೆಮಾದೇಶ್ವರ ಈ ಕೊಡೇಕಲ್ಲು ಪರಂಪರೆಯಿಂದ ಬಂದವರು. ಹೀಗಾಗಿ ಬಸವಾದಿ ಶರಣರ ದರ್ಶನದ, ಆಚರಣೆಯ, ಚಿಂತನೆಯ ಮುಂದುವರಿಕೆಯನ್ನ ನಾವು ವೀರಶೈವ ಸಾಹಿತ್ಯದಲ್ಲಿ ನೋಡೋದಕ್ಕೆ ಬದಲಾಗಿ ಕೊಡೇಕಲ್ಲು ಪರಂಪರೆಯಲ್ಲಿ, ಮಲೆಮಹದೇಶ್ವರ ಪರಂಪರೆಯಲ್ಲಿ, ಮಂಟೇಸ್ವಾಮಿ ಪರಂಪರೆಯಲ್ಲಿ, ತತ್ವಪದಕಾರರಲ್ಲಿ ನೋಡಬೇಕು ಅಂತ ನನಗನ್ನಿಸುತ್ತೆ.

ಎಲ್ಲಿಯವರೆಗೆ ಸಂಗ್ರಹಕ್ಕಿಂತ ಕಾಯಕ ಮುಖ್ಯವಾಗಿತ್ತೋ, ದಾನಧರ್ಮಕ್ಕಿಂತ ದಾಸೋಹ ಮುಖ್ಯವಾಗಿತ್ತೋ, ಅಲ್ಲಿವರೆಗೆ ವಚನ ಪರಂಪರೆ ತನ್ನ ಬಹುಸಮಾಜಿಕತೆಯನ್ನು ಉಳಿಸಿಕೊಂಡಿತ್ತು. ಇಂಗ್ಲಿಷಿನ ಕವಿ ವಿಲಿಯಂ ಬ್ಲೇಕ್ ಬಹಳ ಒಂದು ಒಳ್ಳೇ ಮಾತನ್ನ ಹೇಳಿದ್ದಾನೆ; 'Charity would be no more if there had not been so many poor. ಇಷ್ಟು ಜನ ಬಡವರು ಇಲ್ದೇ ಹೋಗಿದ್ರೆ ದಾನ ಧರ್ಮ ಎಲ್ಲಿತ್ತಪ್ಪ ಅಂತ. ಬಡತನವನ್ನು ಸೃಷ್ಟಿಸಿರುವ, ಅಸಮಾನತೆಯ ಸಮಾಜವೇ ದಾನಧರ್ಮವನ್ನೂ ಸೃಷ್ಟಿಸಿದೆ. ಈ ಕಾರಣದಿಂದ ಮುಂದೆ ಇವತ್ತು ಜಾತಿಯಾಗಿ ಅದರಿಂದ ಅನೇಕ ಒಳಪಂಗಡಗಳಾಗಿ ಆಗಿದೆಯೇ ಅಂತ ನನ್ನ ಒಂದು ಅನುಮಾನ.


ಆದರೆ ಎಲ್ಲಿ ಇದು ಆಗಿಲ್ಲ, ಆ ರೀತಿಯ ಒಂದು ಪಂಥ ನನ್ನ ಗಮನಕ್ಕೆ ಬಂದಿದೆ. ಬಿಹಾರದಲ್ಲಿ ಅಸ್ಪೃಶ್ಯ ಜನಾಂಗದ ಒಂದು ಕಬೀರಪಂಥ ಇದೆ, ಪಾಶ್ವಾನ್ ಜನಾಂಗದ ಕಬೀರಪಂಥ. ಪ್ರಧಾನವಾದ ಅವರ ಸಮುದಾಯದಲ್ಲಿ ಯಾವುದೇ ಧರ್ಮದವರಿರಬಹುದು, ಯಾವುದೇ ಜಾತಿಯಿರಬಹುದು ಅಲ್ಲಿ ದೀಕ್ಷೆ ಪಡೀಬಹುದು. ಅವರು 'ಕೂಡಿ ಉಂಬ, ಕೊಂಡು ಕೊಳುವ' ವ್ಯವಹಾರವನ್ನು ಪರಸ್ಪರ ಮಾಡ್ತಾರೆ. ಆ ಪಂಥದಲ್ಲಿ ಮಹಿಳೆಯರೂ ಕೂಡ ಗುರುಗಳಾಗಬಹುದು. ಅವರು ಭಾರತೀಯ ಪರಂಪರೆಯ ಬಗ್ಗೆ ನಮ್ಮ ಎಲ್ಲ ವಿಶ್ವವಿದ್ಯಾಲಯದ ಪಂಡಿತರಿಗಿಂತ ಚೆನ್ನಾಗಿ ಹೇಳ್ತಾರೆ. ಎರಡು ಧಾರ್ಮಿಕ ಪರಂಪರೆಗಳಿವೆ ಭಾರತದಲ್ಲಿ. ಒಂದು ಆಚಾರ್ಯವಾಲೀ ಪರಂಪರೆ. ಇನ್ನೊಂದು ಗುರುವಾಲೀ ಪರಂಪರೆ. ಇದಕ್ಕೆ ನಾಥಪಂಥದಲ್ಲಿ ಇನ್ನೊಂದು ರೀತಿಯ ಪರಿಭಾಷೆಯನ್ನ ಬಳಸ್ತಾರೆ. ಬಿಂದು ಸಂತಾನ, ನಾದ ಸಂತಾನ ಅಂತ. ಬಿಂದು ಸಂತಾನ ಅಂದ್ರೆ ವಂಶಪಾರಂಪರ್ಯ. ಅಪ್ಪ, ಮಗ, ಮೊಮ್ಮಗ ಇತ್ಯಾದಿ. ನಾದ ಸಂತಾನ ಅಂದ್ರೆ ಗುರುಶಿಷ್ಯರ ಕೊಂಡಿ. ಬಹಳ ಚೆನ್ನಾಗಿ ಹೇಳ್ತಾರೆ; ಗುರು ನೀಡುವ 'ಹಸ್ತ ಮಸ್ತಕ

ಸಂಯೋಗದಿಂದ ಶಿಷ್ಯ ಪುನರ್ಜಾತನಾಗ್ತಾನೆ’.

ಈ ಮಂಟೇಸ್ವಾಮಿ ಪರಂಪರೆಯಲ್ಲಿ ನೀಲಗಾರರ ದೀಕ್ಷೆ ಸಂದರ್ಭದಲ್ಲಿ ‘ನಿಮ್ಮ ಅಪ್ಪ ಅಮ್ಮ ಸತ್ರು ಅಂತ ತಿಳ್ಕೊಂಡು ಮಂಟೇಸ್ವಾಮಿಯನ್ನೇ ಅಪ್ಪ ಅಮ್ಮ ಅಂತ ಒಪ್ಕೋತೀಯೇನಪ್ಪ’ ಅಂತಾರೆ. ಇವನು ಹ್ಞೂಂ ಅಂತಾನೆ. ಪುನರ್ಜನ್ಮ ಅಂದ್ರೆ ಈ ಜನ್ಮದಲ್ಲೇ. ಕನಕದಾಸರು ಹೇಳ್ತಾರಲ್ಲ, ಅವರು ದಾಸನಾದಾಗ ‘ಮುಕುತರಾಗಲಿ ಎನ್ನ ನೂರೊಂದು ಕುಲದವರು. ಭಕುತಿ ಮಾತ್ರಕೆ ಯೋಗ್ಯ ನಾನಾದೆನು’ ಈ ರೀತಿಯಾದ ಭಾವನೆಯನ್ನ ಈ ರೀತಿಯ ಪಂಥಗಳು ಮಧ್ಯಯುಗದಲ್ಲಿ ನಿರಂತರವಾಗಿ ಬದುಕುತ್ತಾ ಬಂದು ಜನರನ್ನ ಜಾತಿಯ ಹಿಂಸೆಯಿಂದ ಒಂದು ಮಟ್ಟಕ್ಕೆ ಅವು ಬಚಾಯಿಸುತ್ತಿದ್ವು. ಈ ಪಂಥಗಳನ್ನ ನಾವು ಪಶ್ಚಿಮದ ಕನ್ನಡಕಗಳನ್ನು ತೆಗೆದು ಅವುಗಳ ಹಿಡಿಗಟ್ಟುಗಳ ಮುಖಾಂತರ ನೋಡಬೇಕಾಗಿದೆ. ನಾದ ಪರಂಪರೆಯ ಆಧಾರದ ಮೇಲೆ ಸ್ಥಾಪಿತವಾದ ಸಮುದಾಯಗಳು, ವಂಶಪಾರಂಪರ್ಯ ಅಲ್ಲ. ಗುರು ಒಂದು ಜಾತಿ ಆಗಿರ್ತಾನೆ, ಶಿಷ್ಯ ಒಂದು ಜಾತಿ ಆಗಿರ್ತಾನೆ. ಗೋವಿಂದಭಟ್ಟರು ಬ್ರಾಹ್ಮಣರು, ಶಿಶುನಾಳ ಶರೀಫ ಮುಸಲ್ಮಾನ. ಅಲ್ಲಿ ಆಂಧ್ರದಲ್ಲಿ ಯೋಗಿಬ್ರಹ್ಮಯ್ಯ, ಅವನು ವಿಶ್ವಕರ್ಮ. ಅವನ ಶಿಷ್ಯ ಸಿದ್ದಪ್ಪ, ಅವನು ಸಾಬ್ರೋನು. ಅಲ್ಲಿ ಜಾತಿ ಕುಲಗಳ ಒಂದು ಬಂಧನ ಇಲ್ಲ. ಆ ರೀತಿಯ ಕೆಲಸ ಶರಣ ದಾಸ ಪರಂಪರೆಯಲ್ಲಿ ನಡೀತು. ಇದನ್ನ ನಾವು ಕಂಡುಕೋಬೇಕು. ಇದು ಒಂದೋ ಹಲವೋ ಅದನ್ನ ನಾವು ಯೋಚಿಸಬೇಕಾಗಿದೆ.

ಅದಿವತ್ತೇನಾಗಿದೆ ಅಂದ್ರೆ, ಈ ಬಹುತ್ವದ ವಿಜೃಂಭಣೆ ಏನು ಶುರುವಾಯ್ತು, ಯಾವದನ್ನ Post modern age ಅಂತ ಕರೀತೀವಿ, ಅದು ಶುರುವಾದಾಗಿಂದ ರಾಜಕಾರಣದಲ್ಲೂ It has led to the proliferation of identity politics. ಬೆಳಗ್ಗೆ ನಮ್ಮ ಸಿದ್ಧನಗೌಡ ಪಾಟೀಲರು ಹೇಳಿದ್ರಲ್ಲ ರೈತ ಸಂಘ ಒಡೆದುಹೋಗಿರುವ ಬಗ್ಗೆ, ಎಲ್ಲ ಸಂಘಟನೆಗಳೂ ಕೂಡ 80ರ ದಶಕದ ನಂತರ ಒಡೆದುಹೋದವು. ದಲಿತ ಸಂಘಟನೆಗಳು ಒಂದಾಗಿದೆಯಾ ಇವತ್ತು? ಆಮೇಲೆ ಹಿಂದೂ ಮಹಾ ಸಭೆ ಅಂತ ಹೇಳಿದ್ರಲ್ಲ, ಹಿಂದೂ ಸಮಾಜ ಒಂದಾಗಿದೆಯಾ ಇವತ್ತು? ಹಿಂದೂ ಸಮಾಜ ಒಂದಾಗಿದ್ರೆ ನಮ್ಮ ಈ ಭಕ್ತಿ ಪಂಥದವರು ಬಹಳ ಜನ ಬರ್ತಾ ಇರ್ತಿರಲಿಲ್ಲ. ಇತ್ತೀಚೆಗಿನ ದಿನಗಳಲ್ಲಿ ನೋಡಿದ್ರೆ, ಇಲ್ಲಿ ಹಿಂದುತ್ವವಾದ ಕೆಲಸ ಮಾಡಿಲ್ಲ, ಸೆಕ್ಯುಲರ್‌ವಾದನೂ ಕೆಲಸ ಮಾಡಿಲ್ಲ. ಕೆಲಸ ಮಾಡಿರೋದು ಜಾತಿ, ಉಪಜಾತಿ.

ಕಾರ್ಲ್‌ಮಾರ್ಕ್ಸ್ ಹೇಳಿದ್ನಲ್ಲ, stateless society, classless society ಮತ್ತು state should dissolve, ಪ್ರಭುತ್ವ ನಿರಸನವಾಗಬೇಕು ಅಂತ. ಇವತ್ತು ಆತ ಹೇಳಿದ್ದಕ್ಕೆ ವಿರುದ್ಧವಾಗಿ multinational company ಗಳ ಸರ್ವಾಧಿಕಾರ ಬಂದಿದೆ. ಇಲ್ಲಿ ಪೈಪೋಟಿ, ಪೈಪೋಟಿ, ಪೈಪೋಟಿ ಒಂದೇ ಮಂತ್ರ. ಪೈಪೋಟಿ ಮಾಡ್ತರೆ ಒಂದಾಗ್ತರೆ. vicious circle of capitalism ಅಂತ ಕಾರ್ಲ್‌ಮಾರ್ಕ್ಸ್ ಏನು ಕರೆದ ಅದು ನಡೀತಾ ಇದೆ. ಜಾತಿ ಜಾತಿಗಳು ಬೇರೆ ಬೇರೆ ಆಗ್ತವೆ. ಈಗ ಒಂದು ಉಪಜಾತಿ ತನ್ನ ಜಾತಿಯ ವಿರುದ್ಧ ಇನ್ನೊಂದು ಕಡೆ ಸೇರ್ಕೊಂಡು, ಅವರ ತಾತ್ಕಾಲಿಕವಾದ ಮಾತುಗಳಿಗೆ ಇವರು ಮತವನ್ನ ಹಾಕ್ತಾ ಇದಾರೆ. ಈ ರೀತಿಯ ಒಂದು permutations combinations ರಾಜಕೀಯದಲ್ಲಿ ನಡೀತಾ ಇದೆ. ಇದು ಬಹುತ್ವದ ಒಂದು ವಿಕೃತ ರೂಪವಾಗಿದೆ. ಆದರೆ ನಾವು ಮರ್ತಿರೋದು ಸಮಾನತೆಯ ಪ್ರಶ್ನೆಯನ್ನ, ಸಹಬಾಳ್ವೆಯ ಪ್ರಶ್ನೆಯನ್ನ. ಅದರಿಂದ ಮತ್ತೆ ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು ಎನ್ನುವ ಮೂಲಮಂತ್ರವನ್ನ ನಾವು ಧಾರಣೆ ಮಾಡ್ಕೊಂಡು, ಈ ಎಲ್ಲದರ ಬಗ್ಗೆ, ಬಹುತ್ವ ಮತ್ತು ಲಿಂಗತ್ವದ ಬಗ್ಗೆ ಪುನರಾಲೋಚನೆ ಮಾಡ್ಬೇಕು ಅಂತ ಹೇಳಿ ನನ್ನ ಮಾತನ್ನ ಮುಗಿಸ್ತೇನೆ.



(ದೆಹಲಿಯ ಜವಹರಲಾಲ್ ನೆಹ್ರೂ ವಿಶ್ವವಿದ್ಯಾನಿಲಯದ ಕಲಾಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಎಚ್.ಎಸ್. ಶಿವಪ್ರಕಾಶ ಅವರು ಕನ್ನಡದ ಖ್ಯಾತ ಕವಿ ನಾಟಕಕಾರ ಮತ್ತು ಸಂಸ್ಕೃತಿ ಚಿಂತಕರೂ ಹೌದು)

(ಇದು ಧಾರವಾಡದಲ್ಲಿ ಕಳೆದ ಮೇ ೨೬, ೨೭ರಂದು ನಡೆದ ಮೇ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಭಾಷಣದ ಬರಹ ರೂಪ)


(ಬರಹ ರೂಪ: ಟಿ.ಎಲ್. ರೇಖಾಂಬ)

ವಿಶೇಷ ಸಂದರ್ಶನ

ಸಮುದಾಯಗಳು ಉಳಿದರೆ ಮಾತ್ರ ಭಾಷೆಗಳು ಉಳಿದಾವು!

ಭಾಷಾ ಸಂಸ್ಕೃತಿ ಚಿಂತಕ ಗಣೇಶ್ ಎನ್. ದೇವಿಯವರೊಂದಿಗೆ ಸಂದರ್ಶನ

ಸಂದರ್ಶಕರು : ಡಾ. ಎಸ್. ಸಿರಾಜ್ ಅಹಮದ್



ಮೂಲತಃ ಮಹಾರಾಷ್ಟ್ರದವರಾಗಿದ್ದು ಈಗ ಧಾರವಾಡದಲ್ಲಿ ನೆಲೆಸಿರುವ ಗಣೇಶ್ ಎನ್. ದೇವಿಯವರು ವೃತ್ತಿಯಿಂದ ಇಂಗ್ಲಿಷ್ ಆಧ್ಯಾಪಕರಾಗಿದ್ದವರಾದರೂ, ಅವರು ವಿಶೇಷ ಆಸಕ್ತಿ ತಳೆದಿದ್ದು ಸಮುದಾಯಗಳ ಭಾಷೆಗಳ ಬಗ್ಗೆ. ವಿಶೇಷವಾಗಿ ಸಣ್ಣಪುಟ್ಟ ಸಮುದಾಯಗಳ, ನಿರ್ದಿಷ್ಟವಾಗಿ ಬುಡಕಟ್ಟು ಭಾಷೆಗಳ ಬಗ್ಗೆ. ಈ ಭಾಷೆಗಳ ಬಗೆಗಿನ ಈ ತರಹದ ಆಸಕ್ತಿ ಮತ್ತು ಅಧ್ಯಯನಗಳ ಮೂಲಕ ಅವರು ನಾಡಿನ ಸಂಸ್ಕೃತಿ ಮತ್ತು ರಾಜಕಾರಣವನ್ನೂ ಅರ್ಥ ಮಾಡಿಕೊಳ್ಳಲು ಯತ್ನಿಸುತ್ತಾ ಅವರು ಕೇವಲ ಅಧ್ಯಯನಕಾರರಾಗಿ ಉಳಿಯದೆ ಒಬ್ಬ 'ಆಕ್ಟಿವಿಸ್ಟ್' ಕೂಡ ಆಗಿ ಬೆಳೆದು ಹೆಸರು ಮಾಡಿದ್ದಾರೆ. ಇತ್ತೀಚೆಗೆ ಸರ್ವಾಧಿಕಾರಿ ರಾಜಕಾರಣದ ಪ್ರವೃತ್ತಿಗಳ ವಿರುದ್ಧದ ಜಾಗೃತಿಯ ಉದ್ದೇಶವಿಟ್ಟುಕೊಂಡು ಶಿವಮೊಗ್ಗದಲ್ಲಿ ನಡೆದ 'ದಕ್ಷಿಣಾಯನ ಸಮಾವೇಶದ ರೂವಾರಿಯಾಗಿದ್ದವರು ಇವರೇ. ಹಾಗೇ ಪುಣೆಯಲ್ಲಿ ಗಾಂಧಿ–ಅಂಬೇಡ್ಕರ್ ಚಿಂತನೆಗಳ ಸಮೀಕರಣದ ಪ್ರಯತ್ನವಾಗಿ ನಡೆದ 'ಸಮಾಸ್' ಸಮಾವೇಶದ ಹಿಂದಿದ್ದ ಶಕ್ತಿಯೂ ಇವರೇ.

ಗುಜರಾತ್‌ನ ಬರೋಡಾದಲ್ಲಿ 'ಭಾಷಾ ಸಂಶೋಧನಾ ಮತ್ತು ಪ್ರಕಾಶನ ಕೇಂದ್ರ' ಮತ್ತು ತೇಜಗಢದಲ್ಲಿ 'ಆದಿವಾಸಿ ಅಕಾಡೆಮಿ'ಯನ್ನು ಸ್ಥಾಪಿಸಿ ಸಮುದಾಯಗಳ 'ಭಾಷಾ'ಗಳ ಬಗ್ಗೆ ಅಧ್ಯಯನಗಳನ್ನು ಪ್ರೇರೇಪಿಸಿದ ದೇವಿಯವರು ೨೦೧೪ರಲ್ಲಿ 'ಭಾರತದ ಜನತಾ ಭಾಷಾ ಗಣತಿ' ಅಭಿಯಾನದ ನೇತೃತ್ವ ವಹಿಸಿ ೭೮೦ ಜೀವಂತ ಭಾರತೀಯ ಭಾಷೆಗಳನ್ನು ಗುರುತಿಸಿದ್ದಾರೆ. ಈಗ ಧಾರವಾಡದಲ್ಲಿದ್ದುಕೊಂಡೇ ಜಾಗತಿಕ ಭಾಷಾ ನಕ್ಷೆಯೊಂದನ್ನು ನಿರೂಪಿಸುವ ಕೆಲಸದಲ್ಲಿ ತೊಡಗಿದ್ದಾರೆ.

'ಹೊಸ ಮನುಷ್ಯ'ಕ್ಕಾಗಿ ಇವರನ್ನು ಸಂದರ್ಶಿಸಿದ್ದಾರೆ, ದೇವಿಯವರ ಈ ಎಲ್ಲ ಸಾಧನೆಗಳ ಬಗ್ಗೆ ಗಂಭೀರ ಅಧ್ಯಯನ ಮಾಡಿರುವ ಕನ್ನಡದ ಬಹು ಭರವಸೆಯ ಸಾಹಿತ್ಯ ಚಿಂತಕ ಗೆಳೆಯ ಡಾ. ಎಸ್. ಸಿರಾಜ್ ಅಹಮದ್ ಅವರು. ಸಂದರ್ಶನದ ಆಯ್ದ ಭಾಗಗಳು ಇಲ್ಲಿವೆ:–ಸಂ.

ನಿಮ್ಮ ಹಾಗೂ ಕರ್ನಾಟಕದ ನಡುವಿನ ಸಂಬಂಧದ ಕುರಿತು ಹೇಳಿ. ನಿಮ್ಮ ಬೌದ್ಧಿಕ ಪ್ರಯಾಣದಲ್ಲಿ ಕರ್ನಾಟಕ ನಿರಂತರವಾದ ಪ್ರಭಾವವನ್ನು ಬೀರಿದೆ ಅನಿಸುತ್ತದೆ. ನಿಮ್ಮ ಮೊದಲ ಕೃತಿ 'ಆಫ್ಟರ್ ಅಮ್ನೇಸಿಯಾ'ದ ಹೆಸರು ಏಕೆ ರಾಮಾನುಜನ್ ಅವರ ಪದ್ಯದಿಂದ ಪ್ರೇರಿತವಾದದ್ದು ಅಂತ ಒಂದು ಕಡೆ ಹೇಳಿದ್ದೀರಿ.

ನಾನು ಪಿಎಚ್‌ಡಿ ಮಾಡಿದ್ದು ಕನ್ನಡದ ದೊಡ್ಡ ಲೇಖಕ ಶಾಂತಿನಾಥದೇಸಾಯಿ ಅವರ ಮಾರ್ಗದರ್ಶನದಲ್ಲಿ. ಅವರು ಲೋಹಿಯಾವಾದಿ ಆಗಿದ್ದರೂ ಅಥವಾ ಲೋಹಿಯಾವಾದಿ ಆಗಿದ್ದ ಕಾರಣದಿಂದಲೇ ತಮ್ಮ ವಿಚಾರಗಳನ್ನು ನನ್ನ ಮೇಲೆ ಹೇರಲಿಲ್ಲ. ಅವರಿಗೆ ವಿಚಾರಗಳ ಸ್ವತಂತ್ರ ಅನ್ವೇಷಣೆಯಲ್ಲಿ ನಂಬಿಕೆಯಿತ್ತು. ಅವರು ಮಾರ್ಕ್ಸ್‌ವಾದ, ರಾಯ್‌ಚಿಂತನೆ, ಗಾಂಧಿ, ಬುದ್ಧ ಎಲ್ಲರ ಕುರಿತಾಗಿ ಬಹಳ ತೀವ್ರವಾಗಿ ಮಾತಾಡುತ್ತಿದ್ದರು.

ನಾನು ಪಿಎಚ್‌ಡಿ ಮುಗಿಸಿ ಇಂಗ್ಲೆಂಡಿನಲ್ಲಿ ನನ್ನ ಓದು ಮುಗಿಸಿದ ಮೇಲೆ ಭಾರತಕ್ಕೆ ವಾಪಾಸು ಬಂದು ವಿಶ್ವವಿದ್ಯಾಲಯವೊಂದರಲ್ಲಿ ಕೆಲಸ ಮಾಡುವ ಬದಲು ಹಳ್ಳಿಯೊಂದಕ್ಕೆ ಹೋಗಿ ಕೆಲಸ ಮಾಡಬೇಕೆಂದು ನಿರ್ಧಾರ ಮಾಡಿದೆ. ತಕ್ಷಣ ಸಾಧ್ಯವಾಗಲಿಲ್ಲ. ನಾನು ಬರೋಡಾದ ಸಯ್ಯಾಜಿರಾವ್ ವಿಶ್ವವಿದ್ಯಾಲಯಕ್ಕೆ ಸೇರಿದೆ. ಒಂದೆರಡು ವರ್ಷಗಳಲ್ಲಿ ಪ್ರತಿ ಶನಿವಾರ ಭಾನುವಾರಗಳಂದು ನಾನು ಗುಜರಾತಿನ ಹಳ್ಳಿಗಳಿಗೆ ಸ್ಕೂಟರಿನ ಮೇಲೆ ಹೋಗಲು ಆರಂಭಿಸಿದೆ. ನಾಲ್ಕು ವರ್ಷಗಳಲ್ಲಿ ವಿಶ್ವವಿದ್ಯಾಲಯದ ಕೆಲಸ ಬಿಟ್ಟು ಹಳ್ಳಿಯೊಂದರಲ್ಲಿ ಸ್ಕೂಲನ್ನು ತೆರೆಯಬೇಕೆಂದು ಯೋಚಿಸಿದೆ. ಆದರೆ ನಮ್ಮ ಮಗಳು ಇನ್ನೂ ಚಿಕ್ಕವಳಾಗಿದ್ದ ಕಾರಣದಿಂದ, ಬೇರೆಲ್ಲ ಮಕ್ಕಳಂತೆ ಶಿಕ್ಷಣ ಪಡೆಯುವ ಅವಕಾಶದಿಂದ ಅವಳನ್ನು ವಂಚಿತಗೊಳಿಸುವ ಹಕ್ಕು ನನಗಿದೆಯೋ ಇಲ್ಲವೋ ಎಂಬ ಪ್ರಶ್ನೆ ನನ್ನನ್ನು ಕಾಡಿತು. ಹಾಗಾಗಿ ನನ್ನ ನಿರ್ಧಾರವನ್ನು ಮುಂದೂಡಿದೆ. ಎರಡು ವರ್ಷದ ನಂತರ ಬರೋಡಾದಲ್ಲಿ ಸುಮಾರು ೧೨೦ ವಿದ್ಯಾರ್ಥಿಗಳ ಗುಂಪೊಂದನ್ನು ಹುಟ್ಟು ಹಾಕಿ ಅವರ ಜೊತೆ ಹಳ್ಳಿಗಳಲ್ಲಿ ಬರಪರಿಹಾರ ಕೆಲಸವನ್ನು ೧೯೮೬–೮೭–೮೮ರ ಅವಧಿಯಲ್ಲಿ ಶುರುಮಾಡಿದೆ. ಆದರೆ ಇವೆಲ್ಲ ಕೆಲಸಗಳನ್ನು ನಾನು ದಾನಧರ್ಮದ ಬದಲಾಗಿ ಮಾಡುತ್ತಿದ್ದೇನೇ ಹೊರತು ಸಮಾಜಮುಖಿಯಾದ ಕೆಲಸಗಳಲ್ಲಿ ತೊಡಗಿಕೊಳಬೇಕೆಂಬ ಆಳವಾದ ನಂಬಿಕೆಯಿಂದಲ್ಲ. ೧೯೯೧ರಲ್ಲಿ ನಾನು ವಿಶ್ವವಿದ್ಯಾಲಯವನ್ನು ಬಿಡಲು ಮತ್ತೊಮ್ಮೆ ನಿರ್ಧರಿಸಿದೆ. ಅಲ್ಲಿಗೆ ನಮ್ಮ ಮಗಳು ಶಾಲಾ ಶಿಕ್ಷಣ ಮುಗಿಸಿ ಕಾಲೇಜನ್ನು ಸೇರಿದ್ದಳು. ನಮ್ಮ ಮಗಳು ಮತ್ತು ನನ್ನ ಹೆಂಡತಿ ಇಬ್ಬರೂ, ಕುಟುಂಬದ ಆದಾಯಕ್ಕೆ ತೊಂದರೆಯಾದರೂ ನನ್ನ ಕೆಲಸ ಬಿಡುವ ನಿರ್ಧಾರಕ್ಕೆ ಸಮ್ಮತಿ ಸೂಚಿಸಿದರು. ಆದರೆ ನಾನು ಬರೆಯಬೇಕಾಗಿದ್ದ ಪುಸ್ತಕಗಳು–ಪೂರೈಸಬೇಕಾದ ಪ್ರಾಜೆಕ್ಟ್‌ಗಳು ಅರ್ಧ ಮುಗಿದಿದ್ದವು. ನನ್ನ ಪಿಎಚ್‌ಡಿ ವಿದ್ಯಾರ್ಥಿಗಳ ಸಂಶೋಧನೆಯನ್ನು ಮುಗಿಸಿಕೊಡಬೇಕಾದ ಹೊಣೆಯೂ ನನ್ನ ಮೇಲಿತ್ತು. ೧೯೯೬ರ ಸೆಪ್ಟೆಂಬರ್‌ನಲ್ಲಿ ನಮ್ಮ ಮಗಳು ೨೦ನೇ ವರ್ಷಕ್ಕೆ ಕಾಲಿಟ್ಟ ಮೇಲೆ ನಾನು ವಿಶ್ವವಿದ್ಯಾಲಯವನ್ನು ಬಿಟ್ಟು ತೇಜಗಡಕ್ಕೆ ಬಂದೆ. ಕೃಷಿ ಹಿನ್ನೆಲೆಯ, ಪುಟ್ಟ ತಾಲೂಕಿನ ವಿಸ್ತರಣೆಯಂತಿದ್ದ ನನ್ನ ಹಳ್ಳಿಗೂ ತೇಜಗಡಕ್ಕೂ ಬಹಳ ವ್ಯತ್ಯಾಸವಿತ್ತು. ತೇಜಗಡ ನಿಜವಾದ ಆದಿವಾಸಿ ಗ್ರಾಮವಾಗಿತ್ತು. ಈ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಲು ನನಗೆ ಹಲವು ವರ್ಷಗಳು ಬೇಕಾದವು. ಈ ವ್ಯತ್ಯಾಸವನ್ನು ಅರ್ಥ ಮಾಡಿಕೊಳ್ಳಲು ಬೇಕಾದ ಸಮಯವನ್ನು ಕೊಡಲು ನಾನು ಸಿದ್ಧವಾಗಿದ್ದೆ. ಮುಖ್ಯವಾಗಿ ತೇಜಗಡಕ್ಕೆ ಹೋಗುವ ಮೊದಲು ಪ್ರಸನ್ನ ಅವರ ಸಲಹೆಯನ್ನು ಕೇಳಬೇಕೆಂದು ಶಿವಮೊಗ್ಗಕ್ಕೆ ಬಂದಿದ್ದೆ. ಹೆಗ್ಗೋಡಿನಲ್ಲಿ ಒಂದು ವಾರ ಕಾಲ ಇದ್ದು ಅವರೊಂದಿಗೆ ಮಾತುಕತೆ ನಡೆಸಿದೆ. ಹಾಗಾಗಿ ಕರ್ನಾಟಕವು ನನ್ನ ಜೀವನದಲ್ಲಿ ಮೂರು ರೀತಿಯಲ್ಲಿ ಬಹಳ ಮಹತ್ವದ ಪರಿಣಾಮವನ್ನು ಬೀರಿದೆ. ಮೊದಲನೆಯದಾಗಿ ಶಾಂತಿನಾಥ ದೇಸಾಯಿಯವರು ನನ್ನ ಬೌದ್ಧಿಕತೆಯ ಎಲ್ಲೆಗಳನ್ನು ವಿಸ್ತರಿಸಿದರು. ಕರ್ನಾಟಕದಲ್ಲಿಯೇ ಹುಟ್ಟಿ ಬೆಳೆದ ಮಡದಿ ನನ್ನ ನೈತಿಕತೆಯನ್ನು ರೂಪಿಸಿದಳು. ಪ್ರಸನ್ನ ಅವರು ತಮ್ಮ ಕೆಲಸದಿಂದ ನನ್ನನ್ನು ಪ್ರಭಾವಿಸಿದ್ದಾರೆ. ಹಾಗೆಯೇ ನಾನು ಏಕೆ ರಾಮಾನುಜನ್ನರಿಂದ ಬಹಳ ಆಕರ್ಷಿತನಾಗಿದ್ದೇನೆ. ರಾಮಾನುಜನ್ ಅವರದು ಅಪೂರ್ವ ಪ್ರತಿಭೆಯಲ್ಲ. ಅವರು ಮುಖ್ಯವಾಗುವುದು ಅವರ ಅಪೂರ್ಣ ಕೆಲಸ ಮತ್ತು ಅರೆಬರೆ ಒಳನೋಟಗಳಿಂದ. ನನಗೆ ಪೂರ್ಣ ದೃಷ್ಟಿಕೋನವನ್ನು ಹೊಂದಿರುವವರಿಗಿಂತ ಯಾವುದೋ ಪ್ರಶ್ನೆಗೆ ಉತ್ತರ ಹುಡುಕುತ್ತ ಏಗಾಡುವವರನ್ನು ಕಂಡರೆ ಹೆಚ್ಚು ಅಭಿಮಾನ. ಅವರ ಪ್ರಶ್ನೆ– ಪ್ರಯತ್ನಗಳು ಇನ್ನೊಬ್ಬರ ಬದುಕಿಗೆ ದಾರಿತೋರಬಲ್ಲವು.

ಇತ್ತೀಚೆಗೆ ಶೆಲ್ಡನ್ ಪೋಲಾಕ್ ಅವರು 'ದಿ ವೈರ್' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಭಾರತದ ಈಚಿನ ತಲೆಮಾರಿಗೆ ತನ್ನ ಗತಕಾಲದ ಬೌದ್ಧಿಕ ಪರಂಪರೆಗಳ ಬಗೆಗೆ ಪರಿಚಯವೇ ಇಲ್ಲ. ಭಾರತೀಯ ಚಿಂತನೆಗಳ ಇತಿಹಾಸವನ್ನೇ ಅರಿಯದ ತಲೆಮಾರು ಬೌದ್ಧಿಕತೆಯಿಂದ ವಿಮುಖವಾಗುತ್ತಿದೆ ಎಂದಿದ್ದಾರೆ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನೀವು 'ಆಫ್ಟರ್ ಅಮ್ನೇಸಿಯಾ' ಬರೆದಾಗಲೂ ಇದೇ ರೀತಿಯ ಬಗೆಯ ಪ್ರಶ್ನೆಗಳನ್ನು ಎತ್ತಿದ್ದಿರಿ.

ಮಾಧವ ದೇಶಪಾಂಡೆ ಎಂಬ ಸಮಾಜಶಾಸ್ತ್ರಜ್ಞ ಸುಮಾರು ೪೦ ವರ್ಷಗಳ ಹಿಂದೆ ಲೇಖನವೊಂದನ್ನು ಬರೆದಿದ್ದರು. ಭಾರತೀಯ ಭಾಷೆಗಳಲ್ಲಿ ಬಹುಪಾಲು ಜನ ಭೂತಕಾಲವನ್ನು ಬಳಸುವುದರಲ್ಲಿ ಯಾವ್ಯಾವ ಬಗೆಯ ಸಮಸ್ಯೆಗಳಿವೆ ಎಂಬುದನ್ನು ಅಲ್ಲಿ ಚರ್ಚಿಸಿದ್ದರು. ಕಳೆದ ೨೦ ವರ್ಷಗಳಲ್ಲಿ ಭೂತಕಾಲ ಮಾತ್ರವಲ್ಲ ವರ್ತಮಾನವನ್ನು ಎದುರಿಸುವುದು ಹಾಗೂ ಅದನ್ನು ಹೇಗೆ ಬಳಸಿಕೊಳ್ಳುವುದು ಎಂಬುದು ಭಾರತೀಯರಿಗೆ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಕಾಲದ ಜೊತೆ ನಮಗಿರುವ ವಿವಾದಾತ್ಮಕ ಸಂಬಂಧ ಭಾರತೀಯ ತತ್ವಶಾಸ್ತ್ರದ ಬಹುದೊಡ್ಡ ಸಮಸ್ಯೆಯೂ ಹೌದು. ನಾವು ಏಕಕಾಲಕ್ಕೆ ಹಲವು ಕಾಲಗಳಲ್ಲಿ ಬದುಕುತ್ತೇವೆ. ಬೆಂಗಳೂರು ಮುಂಬಯಿಯಂಥ ಆಧುನಿಕ ನಗರಗಳಿಗೆ ನಮ್ಮ ಕುಲ, ಜಾತಿ, ಗೋತ್ರಗಳನ್ನು ಕೊಂಡೊಯ್ಯುತ್ತೇವೆ. ಆದ್ದರಿಂದ ವರ್ತಮಾನದಲ್ಲಿ ನಮ್ಮ ಗತವನ್ನು ಮತ್ತೊಮ್ಮೆ ಹುಡುಕಿ ಕಟ್ಟಿಕೊಳ್ಳುವ ಯಾವುದೇ ಪ್ರಯತ್ನವು ಸಮರ್ಪಕವಾಗಿಲ್ಲ. ಗತವನ್ನು ಕುರಿತು ಮಾತಾಡುವಾಗ ಹಳಹಳಿಕೆ, ಆಕ್ರೋಶ, ಹತಾಶೆಗಳು ಸೇರಿರುತ್ತವೆ.

ಕಳೆದ ಎರಡು ಶತಮಾನಗಳಲ್ಲಿ ಬ್ರಿಟಿಶರು ನಮ್ಮ ಗತವನ್ನು ಭಿನ್ನ ದೃಷ್ಟಿಕೋನದಿಂದ ನೋಡುವ ಬಗೆಯನ್ನು ಕಲಿಸಿದರು. ಅವರು ನಮ್ಮ ಗತವನ್ನು ನೋಡುವ ಕ್ರಮ, ನಾವು ನಮ್ಮ ಗತವನ್ನು ನೋಡುವ ಕ್ರಮಗಳಲ್ಲಿ ಯಾವುದೇ ಬಗೆಯ ಸಾಮ್ಯತೆಯಿಲ್ಲ. ಹಾಗಾಗಿ ಅಲ್ಲಿ ಶೆಲ್ಡನ್ ಪೋಲಾಕ್ ಹಾಗೂ ಇಲ್ಲಿ ದೇವಿ ಇಬ್ಬರೂ ಸಹ ಎರಡು ತುದಿಗಳಲ್ಲಿ ನಿಂತು ಒಂದೇ ಸಮಸ್ಯೆಯ ಎಳೆಯನ್ನು ಹಿಡಿದುಕೊಂಡು ಅದರೊಂದಿಗೆ ಸೆಣಸಾಡುತ್ತಿದ್ದಾರೆ.

ನಿಮ್ಮ ಚಿಂತನೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಕಾರಣಕ್ಕೆ ಈ ಪ್ರಶ್ನೆ. ನಿಮ್ಮ ಕೃತಿಗಳಲ್ಲಿ ದೇಶೀಯ ಚಿಂತನಾಕ್ರಮಗಳು, ಮೀಮಾಂಸೆ, ದೇಶಿ ಸಾಹಿತ್ಯ ಪರಂಪರೆಗಳು–ಭಾಷೆಗಳನ್ನು ಹುಡುಕುವ ನಿರಂತರ ಪ್ರಯತ್ನವನ್ನು ಕಾಣಬಹುದು. ನಿಮ್ಮ ಒಟ್ಟು ಚಿಂತನಾಕ್ರಮ ವಸಾಹತೀಕರಣಕ್ಕೆ ಪ್ರತಿಕ್ರಿಯೆಯ ರೂಪದಲ್ಲಿ ಸೃಷ್ಟಿಯಾಗಿದೆಯೆ?

ನಾನು ಬರೆದಿರುವುದು ಯಾವುದೇ ನಿರ್ದಿಷ್ಟ ವಾದವನ್ನು ಪ್ರತಿಪಾದಿಸುವುದಕ್ಕಲ್ಲ, ಬದಲಾಗಿ ಅರ್ಥಮಾಡಿಕೊಳ್ಳುವುದಕ್ಕಾಗಿ. 'ಆಫ್ಟರ್ ಅಮ್ನೇಸಿಯಾ'ದಲ್ಲಿ ನಾನು ನಮ್ಮ ಸಾಹಿತ್ಯ ಕಲಿಕೆಯ ಕ್ರಮವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನ ನಡೆಸಿದೆ. ನಾವು ಬಳಸುವ ವಿಮರ್ಶೆ ಸಿದ್ಧಾಂತಗಳ ಸ್ವರೂಪ, ಅವುಗಳ ಪ್ರಸ್ತುತತೆಯನ್ನು ನಾನು ಅರಿತುಕೊಳ್ಳಲು ಯತ್ನ ಮಾಡಿದ್ದೇನೆ. ನನ್ನ 'ಆಫ್ ಮೆನಿ ಹೀರೋಸ್' ಕೃತಿಯಲ್ಲಿ ನಾವು ಕಾಲವನ್ನು ಹೇಗೆ ಅರ್ಥಮಾಡಿಕೊಂಡಿದ್ದೇವೆ/ ಎದುರಿಸಿದ್ದೇವೆ ಎಂಬುದನ್ನು ಕಂಡುಕೊಳ್ಳಲು ನೋಡಿದ್ದೇನೆ. ಚರಿತ್ರೆಯ ಪಲ್ಲಟಗಳ ನಡುವೆ ಜರುಗುವ ವಿದ್ಯಮಾನಗಳನ್ನು ಪ್ರಾಮಾಣಿಕವಾಗಿ ಅರ್ಥಮಾಡಿಕೊಳ್ಳುವುದು ನನ್ನ ಗುರಿಯೇ ಹೊರತು ನಿರ್ದಿಷ್ಟವಾದ ಮಂಡನೆಯಲ್ಲ. ಹೌದು ನಾನು ಬೆಳೆದ ಸಂದರ್ಭ, ಕಲಿತ ಇಂಗ್ಲಿಶ್ ಶಿಕ್ಷಣ, ಅರ್ಥ ಮಾಡಿಕೊಂಡ ರಾಜಕೀಯ ವ್ಯವಸ್ಥೆ ಎಲ್ಲವುಗಳ ಕಾರಣದಿಂದ ಪರಸ್ಪರ ವಿರುದ್ಧವಾದ ಭಾಷೆಗಳು, ಚಿಂತನೆಗಳು, ಸಂಪ್ರದಾಯಗಳು, ರಾಜಕೀಯಗಳ ನಡುವಿನ ಸಂಘರ್ಷದ ನಡುವೆಯೇ ನನ್ನ ವ್ಯಕ್ತಿತ್ವ ರೂಪುಗೊಂಡಿತು. ನನಗಿಂತ ಮೊದಲು ಆನಂದ ಕುಮಾರ ಸ್ವಾಮಿ, ಟ್ಯಾಗೋರ್, ಅರಬಿಂದೋ ಘೋಷ್‌ರಂಥ ಆಶಾವಾದಿ ಚಿಂತಕರು ಇಂಥ ಸಂಘರ್ಷಗಳ ನಡುವೆಯೇ ಸಂಶ್ಲೇಷಣೆ–ಸಮನ್ವಯ ಸಾಧ್ಯ ಎಂದು ನಂಬಿದ್ದರು. ಹಾಗೆಯೇ ಇನ್ನು ಕೆಲವರು ಪರಿಶುದ್ಧವಾದ ಜೀವನವನ್ನು ನಡೆಸಲು ಒಂದನ್ನು ಅವಲಂಬಿಸಿ ಇನ್ನೊಂದನ್ನು ತಿರಸ್ಕರಿಸಬೇಕು ಎಂದು ನಂಬಿದ ಬಲಪಂಥೀಯ ನಿರಾಶಾವಾದಿಗಳೂ ಇದ್ದರು. ನನಗೆ ಯಾವ ಶುದ್ಧತೆಯ ಬಗೆಗೂ ನಂಬಿಕೆಯಿಲ್ಲ. ಸಮನ್ವಯವೂ ಸಾಧ್ಯವಾಗುವುದಿಲ್ಲ. ನಾನು ಪರಸ್ಪರ ವಿರುದ್ಧವಾಗಿರುವ ಪರಂಪರೆಗಳ ನಡುವೆ ಸಮನ್ವಯ ಯಾಕೆ ಸಾಧ್ಯವಾಗುತ್ತಿಲ್ಲ ಎಂಬುದನ್ನು ಅರಿಯಲು ಸೆಣಸಾಡುತ್ತಿದ್ದೇನೆ. ಕೇವಲ ಒಂದರ ಅವಲಂಬನೆಯಿಂದ ಏನೂ ಸಾಧ್ಯವಾಗುವುದಿಲ್ಲ. ನಮಗೆ ಎರಡರ ಅಗತ್ಯವೂ ಇದೆ. ಹಾಗಾದರೆ ಇದಕ್ಕೆ ಪರಿಹಾರವೇನು? ನಾನು ಕಂಡುಕೊಂಡ ಉತ್ತರವೇನೆಂದರೆ ನಮ್ಮ ಸಾಮಾಜಿಕ ವಾಸ್ತವದ ನಡುವೆ ಇರುವ ಹಳ್ಳಿಗಳ ಜೀವನಕ್ರಮವನ್ನು ಅಭ್ಯಾಸ ಮಾಡಿ ಅವುಗಳ ಮೂಲಕ ಹೊಸ ಚಿಂತನೆಯನ್ನು ಕಂಡುಕೊಳ್ಳುವುದಾದರೆ ಅಲ್ಲಿ ನಮಗೆ ಹೊಸ ದಾರಿ ಕಾಣಬಹುದು. ಇಂಥ ಪರಸ್ಪರ

ವಸ್ತುನಿಷ್ಠವಾಗಿ ನೋಡುವುದಾದರೆ ಜಾಗತೀಕರಣ ಎನ್ನುವುದು, ಸ್ವಾತಂತ್ರ್ಯದ ಹಾಗೆ ಒಳ್ಳೆಯ ಸಂಗತಿ. ಅದು ನಮ್ಮನ್ನು ರಾಷ್ಟ್ರೀಯತೆಯ ಸಂಕುಚಿತ ಗಡಿಗೆರೆಗಳಿಂದ ದೂರಮಾಡುತ್ತದೆ. ಅದು ನಿಜವಾಗಿ ಸಾಕಾರಗೊಳ್ಳುವುದು ನಮ್ಮಲ್ಲಿ ವಿಶ್ವಮಾನವತೆ, ಅನಿಕೇತನ ತತ್ವದಂಥ ವಿಶಾಲ ಪ್ರಜ್ಞೆ ಬೆಳೆದಾಗ ಮಾತ್ರ. ಆದರೆ ಅದಕ್ಕೆ ವಿರುದ್ಧವಾಗಿ ಇಂದು ಬಂಡವಾಳದ ಹರಿವಿಗೆ ಜಾಗತಿಕ ಅವಕಾಶ ದೊರಕಿದೆಯೇ ಹೊರತು ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯದ ಆಶಯಗಳು ಸಂಪೂರ್ಣ ಮೂಲೆಗೆ ಸರಿದಿವೆ. ಭಾಷೆಗಳು ಸಾಯುತ್ತಿರುವುದು ಜಾಗತೀಕರಣದ ಕಾರಣದಿಂದಲ್ಲ, ಸ್ವಾತಂತ್ರ್ಯ ಸಮಾನತೆಯ ಆಶಯಗಳು ನಾಶವಾಗುತ್ತಿರುವ ಕಾರಣಕ್ಕೆ.

ವಿರುದ್ಧವಾಗಿರುವ *ಬೈನರಿಗಳ* ಆಚೆ ನಡೆಯಬೇಕಾದ ಕಾರಣದಿಂದಲೇ ನನಗೆ ವಿಶ್ವವಿದ್ಯಾಲಯದ ನೌಕರಿಯನ್ನು ಬಿಟ್ಟು ಬುಡಕಟ್ಟು ಗ್ರಾಮಗಳಿಗೆ ಹೋಗಬೇಕಾಯಿತು. ಹಾಗಂತ ಹಳ್ಳಿಯ ಬದುಕು ಬಹಳ ಪರಿಶುದ್ಧವಾದದ್ದು ಎಂದು ನಾನು ನಂಬುವುದಿಲ್ಲ.

"ನಾನು ಭಾಷಾಶಾಸ್ತ್ರಜ್ಞನಲ್ಲ. ಮೂಲತಃ ಒಬ್ಬ ಸಾಹಿತ್ಯ ವಿಮರ್ಶಕ ಹಾಗೂ ಸಂಸ್ಕೃತಿ ಚಿಂತಕ ಹೋರಾಟಗಾರ" ಎಂದು ನೀವು ಹೇಳಿಕೊಳ್ಳುತ್ತೀರಿ. ಮಾರುಕಟ್ಟೆ ಶಕ್ತಿಗಳು ಒಂದೇ ಭಾಷೆಯನ್ನು ನಮ್ಮ ಸಂಸ್ಕೃತಿಯ ಮೇಲೆ ಹೇರುತ್ತ ಏಕರೂಪಿ ಚಿಂತನೆ ಸಂಸ್ಕೃತಿಗಳನ್ನು ಬೆಳೆಸುತ್ತಿದ್ದರೆ ಇನ್ನೊಂದು ಕಡೆ ರಾಷ್ಟ್ರೀಯತೆಯ ಹೆಸರಿನಲ್ಲಿ ಒಂದು ಭಾಷೆಯನ್ನು ಹೇರಿಸುತ್ತಿರುವ ಹೊತ್ತಿನಲ್ಲಿ ನೀವು ದೇಶೀಯ ಭಾಷೆಗಳನ್ನು ದಾಖಲಿಸುವ–ಸಂರಕ್ಷಿಸುವ ಕೆಲಸವನ್ನು ಆರಂಭಿಸಿದಿರಿ. ಇದು ದೇಶೀವಾದದ ಕಡೆ ಚಲಿಸುವ ಕ್ರಮವೇ?

ಅಲ್ಲ. ವಸ್ತುನಿಷ್ಠವಾಗಿ ನೋಡುವುದಾದರೆ ಜಾಗತೀಕರಣ ಎನ್ನುವುದು, ಸ್ವಾತಂತ್ರ್ಯದ ಹಾಗೆ ಒಳ್ಳೆಯ ಸಂಗತಿ. ಅದು ನಮ್ಮನ್ನು ರಾಷ್ಟ್ರೀಯತೆಯ ಸಂಕುಚಿತ ಗಡಿಗೆರೆಗಳಿಂದ ದೂರಮಾಡುತ್ತದೆ. ಅದು ನಿಜವಾಗಿ ಸಾಕಾರಗೊಳ್ಳುವುದು ನಮ್ಮಲ್ಲಿ ವಿಶ್ವಮಾನವತೆ, ಅನಿಕೇತನ ತತ್ವದಂಥ ವಿಶಾಲ ಪ್ರಜ್ಞೆ ಬೆಳೆದಾಗ ಮಾತ್ರ. ಆದರೆ ಅದಕ್ಕೆ ವಿರುದ್ಧವಾಗಿ ಇಂದು ಬಂಡವಾಳದ ಹರಿವಿಗೆ ಜಾಗತಿಕ ಅವಕಾಶ ದೊರಕಿದೆಯೇ ಹೊರತು ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯದ ಆಶಯಗಳು ಸಂಪೂರ್ಣ ಮೂಲೆಗೆ ಸರಿದಿವೆ. ಭಾಷೆಗಳು ಸಾಯುತ್ತಿರುವುದು ಜಾಗತೀಕರಣದ ಕಾರಣದಿಂದಲ್ಲ, ಸ್ವಾತಂತ್ರ್ಯ ಸಮಾನತೆಯ ಆಶಯಗಳು ನಾಶವಾಗುತ್ತಿರುವ ಕಾರಣಕ್ಕೆ. ನಿಜವಾದ ಜಾಗತೀಕರಣದಲ್ಲಿ ಪ್ರತಿ ಅಂಗುಲ ಭೂಮಿಯೂ ಅಲ್ಲಿರುವ ಜನರೂ ತಮ್ಮ ಸ್ವಾಯತ್ತತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಂಥ ಸಂದರ್ಭದಲ್ಲಿ ಇಡೀ ಜಗತ್ತು ಸ್ವಾತಂತ್ರ್ಯ, ಸಮಾನತೆಯ ಆಶಯಗಳಿಂದ ಜೀವಂತವಾಗಿರುತ್ತದೆ. ಈಗ ಕಾರ್ಪೋರೇಟ್ ಜಗತ್ತು ಮಾತ್ರ ಥಳಥಳಿಸುತ್ತಿದ್ದು ಉಳಿದವೆಲ್ಲ ಶವಗಳ ಹಾಗೆ ಮಂಕಾಗಿವೆ. ಹಾಗಾಗಿ ನಾನು ಭಾಷೆಗಳನ್ನು ಕುರಿತು ಮಾತಾಡುತ್ತಿರುವುದು ದೇಶೀವಾದದ ಕಾರಣದಿಂದಲ್ಲ. ಭಾಷೆಗಳನ್ನು ಆವರಿಸಿರುವ ಬದುಕಿನ ಬಗೆಗಿನ ಪ್ರೀತಿಯ ಕಾರಣದಿಂದ.

ಆದರೆ ನೀವು ಹೇಳುವ ಮಾದರಿಯ ಜಾಗತೀಕರಣ ಎಲ್ಲಾದರೂ ಎಂದಾದರೂ ಅನುಷ್ಠಾನಕ್ಕೆ ಬಂದಿದೆಯೆ?

ನೋಡಿ, ಮನುಷ್ಯನನ್ನು ಒಳಗೊಂಡಂತೆ, ಅವನಿಗಿಂತ ಎಷ್ಟೋ ಪಾಲು ದೊಡ್ಡದಾಗಿರುವ ಪ್ರಾಣಿ ಪಕ್ಷಿ ನದಿ ಸಮುದ್ರ ಸಕಲ ಚರಾಚರಗಳನ್ನೊಳಗೊಂಡಂತೆ, ಇಡೀ ವಿಶ್ವವು ನಿರಂತರ ವಿಕಾಸದ ಹಾದಿಯಲ್ಲಿ ಸಾಗುತ್ತಿದೆ. ಪದಾರ್ಥ(ಮ್ಯಾಟರ್), ಪ್ರಜ್ಞೆ, ಭಾಷೆ ಹೀಗೆ ಹಲವು ಅವಸ್ಥೆಗಳನ್ನು ಹಾದುಹೋಗಿರುವ ವಿಕಾಸದ ಹಾದಿಯಲ್ಲಿ ನಾವೀಗ ಭಾಷೆಯನ್ನೂ ದಾಟಿ ಹೊಗುವ ಸ್ಥಿತಿಗೆ ಬಂದಿದ್ದೇವೆ. ವಿಕಾಸದ ಪ್ರಕ್ರಿಯೆ ದೇಶ ಕಾಲ ಭಾಷೆ ಲಿಂಗಗಳನ್ನು ಆಧರಿಸಿಲ್ಲ. ಮನುಷ್ಯನೂ ಸಹ ಇಲ್ಲಿ ಮುಖ್ಯವಲ್ಲ. ನಾವು ತಪ್ಪಾಗಿ ಮನುಷ್ಯನನ್ನು ಈ ಸಮಗ್ರ ವಿಕಾಸದ ಪ್ರಕ್ರಿಯೆಯ ಕೇಂದ್ರವೆಂದು ಭಾವಿಸಿದ್ದೇವೆ. ನನ್ನ ಬಲವಾದ ನಂಬಿಕೆಯೇನೆಂದರೆ ಈ ವಿಕಾಸದ ಪಥದಲ್ಲಿ ಮುಂದೆ ಮನುಷ್ಯರಿಗಿಂತ ಭಿನ್ನವಾದ ಹಾಗೂ ವಿಶಾಲವಾದ ಪ್ರಜ್ಞೆಯನ್ನು ಹೊಂದಿರುವ ಜೀವಿಗಳು ಬರಬಹುದು. ನಾವಿನ್ನೂ ಧರ್ಮ, ದೇಶ, ಜನಾಂಗ, ಭಾಷೆ ಎಂಬ ಹಳೆಯ ಚೌಕಟ್ಟುಗಳಲ್ಲಿಯೇ ಸಿಕ್ಕಿಹಾಕಿಕೊಂಡಿರುವಾಗ ಇದನ್ನು ಮೀರಿದ ನೆಲೆಯಲ್ಲಿ ಚಿಂತಿಸಬೇಕಾದ ಸಂದರ್ಭ ಬರಬಹುದು. ಅಂಥ ಸಂಕ್ರಮಣ ಕಾಲದಲ್ಲಿ ನಾವು ವೈವಿಧ್ಯತೆಯನ್ನು ಎತ್ತಿಹಿಡಿಯುವ

ಅಗತ್ಯವಿದೆ. ನಾನು ಹೇಳುವ ಭಾಷಿಕ ವೈವಿಧ್ಯತೆ ಹಲವು ಬಗೆಯ ಜೈವಿಕ, ಸಾಂಸ್ಕೃತಿಕ, ಸಾಮುದಾಯಿಕ ವೈವಿಧ್ಯತೆಗಳಲ್ಲಿ ಒಂದು. ಹಾಗಾಗಿ ಕೇವಲ ಒಂದೋ ಎರಡೋ ಭಾಷೆಗಳನ್ನು ಉಳಿಸುವ ಕುರಿತು ಮಾತನಾಡುತ್ತಿಲ್ಲ. ನಾವೆಲ್ಲ ಒಟ್ಟಾಗಿ ಚಿಂತಿಸಬೇಕಾದದ್ದು ವೈವಿಧ್ಯತೆ ಎಂಬ ಸ್ಥಿತಿಯ ಬಗ್ಗೆ. ನನ್ನನ್ನು ಬಹಳ ಸಾರಿ ದೇಶಿವಾದಿ ಎಂಬ ಹಣೆಪಟ್ಟಿಯ ಮೂಲಕ ವಿವರಿಸಿದ್ದಾರೆ. ನನ್ನ ಮೊದಲ ಪುಸ್ತಕ ಬಂದಾಗ ದೇಶೀವಾದದ ಚರ್ಚೆ ಶುರುವಾಗಿತ್ತು . ಇಲ್ಲಿ ಬಾಲಚಂದ್ರ ನೆಮಾಡೆ, ಅಲ್ಲಿ ಆಫ್ರಿಕಾದಲ್ಲಿ ಇಂಥ ಚರ್ಚೆಗಳ ಕಾರಣದಿಂದ ಹೊಸದೊಂದು ಚಿಂತನಾಕ್ರಮದ ಹುಡುಕಾಟ ನಡೆದಿತ್ತು.ಆದರೆ ನಾನು ಕೇವಲ ದೇಶೀವಾದಿಯಾಗಿದ್ದರೆ ಅಲ್ಲಿಯೇ ನಿಲ್ಲುತ್ತಿದ್ದೆ. ನನಗನ್ನಿಸುವಂತೆ ಅದನ್ನು ದಾಟಿ ಮುಂದೆ ನಡೆಯುವ ಪ್ರಯತ್ನದಲ್ಲಿ ನಾನಿದ್ದೇನೆ.

ಇಲ್ಲಿಯೇ ಇನ್ನೊಂದು ಪ್ರಶ್ನೆಯನ್ನು ಕೇಳುವುದಾದರೆ, ನೀವು ಪ್ರತಿಪಾದಿಸುವ ವಿಸ್ಮೃತಿಯ ಕಲ್ಪನೆಯನ್ನು ಕನ್ನಡದಲ್ಲಿ ಡಿ ಆರ್ ನಾಗರಾಜರೂ ಚರ್ಚಿಸಿದ್ದಾರೆ. ಆದರೆ ಡಿ ಆರ್ ಅವರು ವಿಸ್ಮೃತಿಯ ಪರಿಕಲ್ಪನೆಯನ್ನು ಬೇರೆಯದೇ ಆದ ಎತ್ತರಕ್ಕೆ ಕೊಂಡೊಯ್ದು ಆಧುನಿಕ ಪೂರ್ವ ಪಠ್ಯಗಳನ್ನು ಮರುವಿಶ್ಲೇಷಿಸುವ ಮೂಲಕ ಅದನ್ನು ಮೀರುವ ಪ್ರಯತ್ನವನ್ನು ಮಾಡುತ್ತಾರೆ.

ಇದು ನನಗೆ ಬಹಳ ಸ್ವಾರಸ್ಯಕರ ಸಂಗತಿಯಾಗಿ ಕಾಣುತ್ತಿದೆ. ಇಂಥ ಪ್ರಯತ್ನ ಡಿ ಆರ್ ಅವರಲ್ಲಿ ಮಾತ್ರವಲ್ಲ. ಆಧುನಿಕ ಪೂರ್ವ ಸಾಮಾಜಿಕ ರಚನೆಗಳನ್ನು ಅರ್ಥ ಮಾಡಿಕೊಳ್ಳುವ ಹಂಬಲ ಆಂತ್ರೋಪಾಲಜಿಯಲ್ಲಿ ಆಗಿದೆ. ಸಾಹಿತ್ಯದಲ್ಲಿ ದಲಿತ ಸಾಹಿತ್ಯದ ಮೂಲಕ, ನಾನು ಬುಡಕಟ್ಟುಗಳ ಜೊತೆ ನಡೆಸಿದ ಅಧ್ಯಯನಗಳಲ್ಲಿ ಆಗಿದೆ. ಆಧುನಿಕ ಪೂರ್ವ ಸಮಾಜಗಳನ್ನು ಅರಿಯುವ ಬಗ್ಗೆ ಹೊಸ ಚಿಂತನಾ ಮಾದರಿ ಬೆಳೆಯುತ್ತಿದೆ. ಆದರೆ ಇದು ಮರಳಿ ಪ್ರಕೃತಿಯ ಕಡೆ ನಡೆಯಿರಿ ಎಂಬ ರೂಸೋನ ಮಾದರಿಯದಲ್ಲ. ಇಂಥ ಪ್ರಯತ್ನಗಳು ನಮಗೆ ತಿಳಿಸುವ ಸತ್ಯವೇನೆಂದರೆ ರ್‍ಯಾಷನಲಿಸಂ, ವಿಜ್ಞಾನ, ತಂತ್ರಜ್ಞಾನ, ಅಧಿಕಾರದ ರಚನೆಗಳು ಹಿಂಸಾತ್ಮಕವಾಗಿವೆ.ಇಂಥ ಹಿಂಸೆಯಿಂದ ಮನುಷ್ಯಕುಲವನ್ನು ರಕ್ಷಿಸಬೇಕಾದರೆ ಕಳೆದ ೨೦೦-೩೦೦ ವರ್ಷಗಳ ಇತಿಹಾಸದಲ್ಲಿ ಬಂದಿರುವ ಪಾಶ್ಚಿಮಾತ್ಯ ವೈಚಾರಿಕ ಸಿದ್ಧಾಂತಗಳಿಂದ ಮಾತ್ರ ಸಾಧ್ಯವಾಗುವುದಿಲ್ಲ. ಅಂಥ ಚಿಂತನೆ ಸಾಧ್ಯವಾಗುವುದು ಆಫ್ರಿಕಾ ಇಂಡಿಯಾದಿಂದ ಬರುವ ಚಿಂತಕರಿಗೆ ಮಾತ್ರ. ಡಿ ಆರ್ ಅವರ ಅಧ್ಯಯನಗಳಲ್ಲಿ ನಾವು ಕಾಣುವುದು ಅಂಥ ಪ್ರಯತ್ನಗಳ ಆರಂಭವನ್ನು. ವಿಶೇಷವೆಂದರೆ, ಬಹಳ ಕ್ರಿಯಾಶೀಲ ಮನಸ್ಸುಗಳು –ಬೊಲಿವಿಯಾದಲ್ಲಿರಲಿ, ಅಥವಾ ಆಸ್ಟ್ರೇಲಿಯಾದ ಲಿಂಡಾ ಸ್ಮಿತ್('ಡಿ-ಕಲೊನೈಜಿಂಗ್ ನಾಲೆಜ್') ಇರಲಿ, ಇಂಡಿಯಾದ ಆಶಿಸ್ ನಂದಿಯಾಗಲಿ, ಕರ್ನಾಟಕದ ಡಿಆರ್ ನಾಗರಾಜರಾಗಲಿ, ನಾನಾಗಲಿ–ಹೇಳುತ್ತಿರುವುದು ಪಾಶ್ಚಿಮಾತ್ಯ ವಿಜ್ಞಾನ ಮತ್ತು ವೈಚಾರಿಕತೆಗಳು ನಮ್ಮನ್ನು ತಪ್ಪು ದಾರಿಗೆ ಕೊಂಡೊಯ್ದಿವೆ ಎಂದು. ಇವೆಲ್ಲವನ್ನು ಕಳಚಿಕೊಂಡು ನಾವೀಗ ಮನುಷ್ಯರಾಗಬೇಕಾಗಿದೆ. ಅದೇ ಹೊತ್ತಿನಲ್ಲಿ ಜಾಗತಿಕವಾಗುವುದು ಎಂದರೆ ಯಾವುದೋ ಒಂದು ರಾಷ್ಟ್ರದ, ಪ್ರದೇಶದ, ಸಮುದಾಯದ ನಿರ್ದಿಷ್ಟ ಲಕ್ಷಣಗಳಿಗೆ ಮಾತ್ರ ಸೇರಿದವರಾಗದೆ ಇವೆಲ್ಲವನ್ನೂ ಮೀರಿದ/ಮೀರುವ ಗುಣವನ್ನೂ ಹೊಂದಿದವರಾಗಬೇಕು.

ಸ್ಥಾಪಿತ/ಮುಖ್ಯ ಧಾರೆಯ ಸಾಹಿತ್ಯ ಸಾಂಸ್ಕೃತಿಕ ಪರಂಪರೆಗಳಿಗೂ ದೇಶೀಯ ಸಂಸ್ಕೃತಿಗಳಿಗೂ ದೊಡ್ಡ ಅಂತರವಿದೆ ಎನ್ನುತ್ತೀರಿ. ಈ ಅಂತರವನ್ನು ದೇಶೀಯ ಸಂಸ್ಕೃತಿಗಳಲ್ಲಿರುವ ಚರಿತ್ರೆ, ಜಾನಪದ, ಭಾಷಾಶಾಸ್ತ್ರ, ಮೀಮಾಂಸೆ ಮೊದಲಾದವುಗಳ ಮೂಲಕ ಇಲ್ಲವಾಗಿಸಲು ಪ್ರಯತ್ನ ಮಾಡುತ್ತಿದ್ದೀರಿ. ಇದು ಪುರೋಹಿತಶಾಹಿ ಬ್ರಾಹ್ಮಣ ಪರಂಪರೆಗಳ ಸಾರ್ವಕಾಲಿಕ ಜ್ಞಾನವನ್ನು ಪ್ರತಿಭಟಿಸುವ ಕ್ರಮವೇ?

ಖಂಡಿತವಾಗಿ. ನಾನು ಎಲ್ಲ ಬಗೆಯ ಪ್ರತ್ಯೇಕತೆಗಳ ವಿರುದ್ಧ ಸಮರಕ್ಕೆ ಸಿದ್ಧ. ಸದ್ಯದ ಜ್ಞಾನವನ್ನು ರೂಪಿಸಿಕೊಳ್ಳುವಲ್ಲಿ ಪಶ್ಚಿಮವನ್ನು ಅಥವಾ ಇಂಡಿಯಾವನ್ನು ಹೊರಗಿಡುವುದು, ಬುಡಕಟ್ಟು ದಲಿತ ಅನುಭವವನ್ನು ದೂರವಿಡುವುದು ಅಥವಾ ಬೌದ್ಧಿಕ/ಸಾಂಸ್ಕೃತಿಕ ಚಟುವಟಿಕೆಗಳಿಂದ ಬ್ರಾಹ್ಮಣರನ್ನು ದೂರವಿಡುವುದು–ಎಲ್ಲ ಬಗೆಯ ಪ್ರತ್ಯೇಕತೆಗಳನ್ನು ತೀವ್ರವಾಗಿ ವಿರೋಧಿಸುತ್ತೇನೆ. ನನಗೆ, ಪ್ರತ್ಯೇಕತೆ, ಸುಲಭವಾದ ಸಮನ್ವಯಗಳಿಗಿಂತ ಮಾನವೀಯವಾದ ಒಗ್ಗೂಡುವಿಕೆ ಸಹಜೀವನದ ಬಗ್ಗೆ ಹೆಚ್ಚು ಆಸಕ್ತಿ. ಎಲ್ಲವೂ ಪವಿತ್ರ ಎಂಬ ನಂಬಿಕೆ ನನ್ನದು. ಹಾಗಂತ ಪಾವಿತ್ರ್ಯದ ಹೆಸರಿನಲ್ಲಿ ನಡೆದಿರುವ ಅನ್ಯಾಯ-ಹಿಂಸೆಯನ್ನು ನಾನು ಬೆಂಬಲಿಸುವುದಿಲ್ಲ. ವೈವಿಧ್ಯತೆಗಳನ್ನು ಪೋಷಿಸಲು ಎಲ್ಲ ಬಗೆಯ ಪ್ರತ್ಯೇಕತೆಗಳನ್ನು ವಿರೋಧಿಸಬೇಕು. ಆ ಅರ್ಥದಲ್ಲಿ ನಾನು, ತಾನು ಮಾತ್ರ ಪವಿತ್ರ ಉಳಿದೆಲ್ಲವೂ

ಭಾಷೆಗಳು ಉಳಿಯುವುದು ಅವುಗಳನ್ನು ಬಳಸುವ ಅವಕಾಶಗಳು ಇದ್ದಾಗ ಮಾತ್ರ. ಇದು ಸಾಧ್ಯವಾಗದೇ ಹೋದಾಗ ಸಮುದಾಯಗಳು ಭಾಷೆಗಳಿಂದ ವಲಸೆ ಹೋಗುವ ನಿರ್ಧಾರ ಮಾಡುತ್ತವೆ. ಸಮುದಾಯಗಳಿಗೆ ಬದುಕುವ ಅವಕಾಶಗಳನ್ನು ಕಲ್ಪಿಸಿದಾಗ ಭಾಷೆಗಳು ಉಳಿಯುತ್ತವೆ. ಹಾಗಾಗಿ ಭಾಷೆಗಳು ಸಹಜವಾಗಿ ಹುಟ್ಟಿ ಬೆಳೆದು ಸಾಯುತ್ತವೆ. ಬದುಕುವ ಅವಕಾಶಗಳಿಗೆ ಅಪಾಯ ಬಂದರೆ ಅಕಾಲ ಮರಣ ಹೊಂದುತ್ತವೆ. ನಾನು ಇಂಥ ಭಾಷೆಗಳನ್ನು ಬಳಸುವ ಸಮುದಾಯಗಳ ಬದುಕಿನ ಘನತೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಹೋರಾಟ ನಡೆಸುತ್ತಿದ್ದೇನೆ.

ಅಪವಿತ್ರ ಎಂಬ ನಂಬಿಕೆಯಿಂದ ಹೊರಡುವ, ಪುರೋಹಿತಶಾಹಿಯ ವಿರೋಧಿಯೇ.

"ನನಗೆ ಭಾಷೆಗಳ ಕುರಿತ ವಿಶೇಷ ವ್ಯಾಮೋಹವಿಲ್ಲ. ಭಾಷೆಗಳು ಯಾಕೆ ಮುಖ್ಯವೆಂದರೆ ಅವು ಸಂಸ್ಕೃತಿ ಹಾಗೂ ನೆನಪುಗಳ ವಾಹಕಗಳು. ಭಾಷೆಗಳನ್ನು ಉಳಿಸುವ ಸರಿಯಾದ ಮಾರ್ಗವೆಂದರೆ ಭಾಷೆಗಳನ್ನು ಆಡುವವರಿಗೆ ಸೂಕ್ತವಾದ ಜೀವನೋಪಾಯವನ್ನು ಕಲಿಸುವುದು" ಎನ್ನುತ್ತೀರಿ. ಪ್ರಪಂಚದ ಹಲವು ಭಾಷೆಗಳನ್ನು ಕುರಿತು ಅಧ್ಯಯನ ಮಾಡಿರುವ ನಿಮ್ಮ ಅನುಭವದಲ್ಲಿ ಭಾಷೆಗಳು ಉಳಿಯುವುದು ಯಾವುದರಿಂದ? ಅವುಗಳನ್ನು ಆಡುವ ಜನರ ಸಂಖ್ಯೆಯಿಂದಲೇ?ಭಾಷೆಗಳ ಮೇಲಿನ ಅಭಿಮಾನದಿಂದಲೇ?

ಭಾಷೆಗಳು ಉಳಿಯುವುದು ಅವುಗಳನ್ನು ಬಳಸುವ ಅವಕಾಶಗಳು ಇದ್ದಾಗ ಮಾತ್ರ. ಇದು ಸಾಧ್ಯವಾಗದೇ ಹೋದಾಗ ಸಮುದಾಯಗಳು ಭಾಷೆಗಳಿಂದ ವಲಸೆ ಹೋಗುವ ನಿರ್ಧಾರ ಮಾಡುತ್ತವೆ. ಸಮುದಾಯಗಳಿಗೆ ಬದುಕುವ ಅವಕಾಶಗಳನ್ನು ಕಲ್ಪಿಸಿದಾಗ ಭಾಷೆಗಳು ಉಳಿಯುತ್ತವೆ. ಹಾಗಾಗಿ ಭಾಷೆಗಳು ಸಹಜವಾಗಿ ಹುಟ್ಟಿ ಬೆಳೆದು ಸಾಯುತ್ತವೆ. ಬದುಕುವ ಅವಕಾಶಗಳಿಗೆ ಅಪಾಯ ಬಂದರೆ ಅಕಾಲ ಮರಣ ಹೊಂದುತ್ತವೆ. ನಾನು ಇಂಥ ಭಾಷೆಗಳನ್ನು ಬಳಸುವ ಸಮುದಾಯಗಳ ಬದುಕಿನ ಘನತೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಹೋರಾಟ ನಡೆಸುತ್ತಿದ್ದೇನೆ. ಈ ಘನತೆ ಸಾಧ್ಯವಾದಾಗ ಅವುಗಳಿಗೆ ಬೇಕಾದ ಭಾಷೆಯಲ್ಲಿ ಮಾತಾಡುವ ಆಯ್ಕೆ/ಸ್ವಾತಂತ್ರ್ಯಗಳು ದೊರಕುತ್ತವೆ. ಸಮುದಾಯಗಳ ಉಳಿವಿಗಾಗಿ ಹೋರಾಡದೆ ಕೇವಲ ಭಾಷೆಗಾಗಿ ಹೋರಾಡಿದರೆ, ಯಾವ ಭಾಷೆಯನ್ನೂ ಸಹ ಉಳಿಸಲು ಸಾಧ್ಯವಿಲ್ಲ. ಭಾಷೆಗಳು ಸ್ಕೂಲು ಕಾಲೇಜುಗಳಲ್ಲಿ ಸೃಷ್ಟಿಯಾಗುವುದಿಲ್ಲ. ಅವು ಅಲ್ಲಿ ಮಿಂದು ಮಡಿಯುಟ್ಟು ಪಾವನವಾಗುತ್ತವೆ. ಭಾಷೆಗಳನ್ನು ಉಳಿಸಲು ಸಾಧ್ಯವಾಗುವುದು ಶಿಕ್ಷಣದಲ್ಲಿ ಬಳಕೆಯಾದಾಗ– ದೇಶ ಭಾಷೆಗಳು ಶಿಕ್ಷಣ ಮಾಧ್ಯಮದಲ್ಲಿ ಬಳಕೆಯಾದಾಗ ಎಂಬ ನಂಬಿಕೆಯನ್ನು ಹಲವು ವಿದ್ವಾಂಸರು ಹೊಂದಿದ್ದಾರೆ. ಅವು ಉಳಿಯುವುದು ಜೀವನೋಪಾಯದ ಮಾರ್ಗಗಳು ಸುಭದ್ರವಾಗಿದ್ದಾಗ. ಚರಿತ್ರೆಯಲ್ಲಿ ಇದಕ್ಕೆ ಹಲವಾರು ಉದಾಹರಣೆಗಳಿವೆ. ರೋಮನ್ ಸಾಮ್ರಾಜ್ಯದಲ್ಲಿ ಲ್ಯಾಟಿನ್ ಶಾಲೆ ಕಾಲೇಜುಗಳಲ್ಲಿ ಬಳಕೆಯಾದರೂ ಅದರ ನಾಶವನ್ನು ತಡೆಯಲು ಸಾಧ್ಯವಾಗಲಿಲ್ಲ. ಭಾಷೆಗಳ ಬಗ್ಗೆ ನನಗೆ ವ್ಯಾಮೋಹವಿಲ್ಲ ಎಂಬ ನನ್ನ ಮಾತಿನ ಅರ್ಥವೇನೆಂದರೆ ಭಾಷೆಯಲ್ಲಿನ ಸುಂದರ ಪದಪುಂಜಗಳಿಗಾಗಿ, ಉತ್ಕೃಷ್ಟ ಕಾವ್ಯಗಳ ಕಾರಣಕ್ಕಾಗಿ ಭಾಷೆಗಳು ಉಳಿಯಬೇಕಿಲ್ಲ. ಇವೆಲ್ಲವುಗಳಿಗಿಂತ ಭಾಷೆಗಳನ್ನು ಬಳಸುವ ಜನ ಬದುಕಬೇಕು ಎಂಬ ಅರ್ಥದಲ್ಲಿ ಈ ಮಾತುಗಳನ್ನು ಹೇಳಿದ್ದೇನೆ.

ಹಾಗಾದರೆ ಸಮುದಾಯವೊಂದು ಭಾಷೆಯನ್ನು ಬಿಡುವುದಾದರೆ ಅದು ಕೇವಲ ಭಾಷೆಯ ಆಯ್ಕೆಯ ಪ್ರಶ್ನೆಯಲ್ಲ.

ನಾನು ಬಹಳ ನೋವಿನಿಂದ ನಿಮಗೊಂದು ಉದಾರಣೆಯನ್ನು ಕೊಡುತ್ತೇನೆ. ಕಳೆದ ವಾರ ಭಾರತ ಸರ್ಕಾರ ೨೦೧೧ರ ಭಾಷಾಗಣತಿಯ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿತು. ಮರಾಠಿ ಭಾಷಿಕರ ಸಂಖ್ಯೆ ತೆಲುಗರಿಗಿಂತ ಹೆಚ್ಚಾಗಿದೆ– ಹಿಂದಿ ಮತ್ತು ಬಂಗಾಲಿ ಭಾಷೆಗಳ ನಂತರದ ಸ್ಥಾನದಲ್ಲಿ ಮರಾಠಿ ಇದೆ ಎಂಬ ಕಾರಣಕ್ಕೆ–ತಕ್ಷಣ ಮಹಾರಾಷ್ಟ್ರದಲ್ಲಿ ದೊಡ್ಡ ಸಂಭ್ರಮಾಚರಣೆ ಆರಂಭವಾಯಿತು. ಆದರೆ ನನ್ನ ಪ್ರಶ್ನೆಯೇನೆಂದರೆ ಎಷ್ಟು ಜನ ಉರ್ದು ಭಾಷಿಕರು ಉರ್ದುಗೆ ಬದಲಾಗಿ ಮರಾಠಿಯನ್ನು ತಮ್ಮ ಭಾಷೆಯನ್ನಾಗಿ ಘೋಷಿಸಿದ್ದಾರೆ? ಉರ್ದು ಮನೆಮಾತಾಗಿರುವವರು ಭಯದಿಂದ ಮರಾಠಿಯನ್ನು ತಮ್ಮ ಭಾಷೆ ಎಂದು ಹೇಳುತ್ತಿದ್ದಾರೆ.

ಭಾಷೆಯೆಂಬುದು ಕೇವಲ ಅಸ್ಮಿತೆಯ ಸಂಗತಿಯಾಗಿಲ್ಲ. ಅದು ಜನಗಳ ಅಸ್ತಿತ್ವವನ್ನೇ ಕಬಳಿಸುವಂತೆ ಆಕ್ರಮಣಕಾರಿಯಾಗಿ ಈಚಿನ ದಿನಗಳಲ್ಲಿ ಬೆಳೆಯುತ್ತಿದೆ ಎಂದು ನಿಮಗೆ ಅನಿಸುತ್ತಿದೆಯೆ?

ಇಂಗ್ಲಿಶ್ ಮತ್ತು ಶಿಕ್ಷಣ ಮಾಧ್ಯಮ ಕುರಿತು...



ಆಧುನಿಕ ನಾಗರಿಕತೆಯ ಪ್ರಭಾವವನ್ನು(ಒಳ್ಳೆಯ ಮತ್ತು ಕೆಟ್ಟ) ಮುಖ್ಯವಾಗಿ ಇಂಗ್ಲಿಶ್‌ನ ಮೇಲೆ, ವಿಶಾಲ ನೆಲೆಯಲ್ಲಿ ಭಾರತೀಯ ಭಾಷೆಗಳ ಮೇಲೆ ಹೇಗೆ ಆಗಿದೆ ಎಂದು ವಿವರಿಸುತ್ತೀರ? ಭಾಷೆಗಳ ನಡುವಿನ ಮುಖಾಮುಖಿಯ ಸಂಕೀರ್ಣತೆ ಎಂತಹದು?

ಇದನ್ನು ಉತ್ತರಿಸಲು ನಾನು ಎರಡೋ ಮೂರೋ ಪುಸ್ತಕಗಳನ್ನು ಬರೆಯಬೇಕಾಗುತ್ತದೆ(ನಗು). ಇತಿಹಾಸದಲ್ಲಿ ಕೆಲವು ಮಸುಕಾದ ವಲಯಗಳಿರುತ್ತವೆ. ಎಲ್ಲವನ್ನೂ ಕಪ್ಪು ಬಿಳುಪು ಎಂದು ಗೆರೆಕೊರೆದು ವಿವರಿಸಲು ಸಾಧ್ಯವಿಲ್ಲ. ಇಂಗ್ಲಿಶಿನ ಮೇಲೆ ಭಾರತೀಯ ಭಾಷೆಗಳ ಪ್ರಭಾವವೂ ಬಹಳ ಮುಖ್ಯವಾದದ್ದು. ಸದ್ಯ ಚಾಲ್ತಿಯಲ್ಲಿರುವ ಸ್ಟ್ಯಾಂಡರ್ಡ್ ಇಂಗ್ಲಿಶ್ ಅಸ್ತಿತ್ವಕ್ಕೆ ಬಂದಿದ್ದು ಅದು ಬೇರೆ ಭಾಷೆಗಳ(ಭಾರತೀಯ ಭಾಷೆಗಳನ್ನು ಒಳಗೊಂಡು) ಪ್ರಭಾವಕ್ಕೆ ತೆರೆದುಕೊಂಡಾಗ. ಹಾಗೇ ಭಾರತೀಯ ಭಾಷೆಗಳು ಹಾಲಿ ಇರುವ ನಿರ್ದಿಷ್ಟ ರೂಪವನ್ನು ಪಡೆದುಕೊಂಡಿದ್ದು ಇಂಗ್ಲಿಶ್‌ನ ಪ್ರಭಾವ ಹೆಚ್ಚಾದ ಕಾರಣದಿಂದ. ಈ ಪ್ರಕ್ರಿಯೆ ಪರಸ್ಪರ ಪೂರಕ ಹಾಗೂ ದ್ವಿಮುಖ ಸ್ವರೂಪದ್ದು. ಭಾಷೆಗಳ ನಡುವಿನ ಮುಖಾಮುಖಿ ಇಂಗ್ಲಿಶಿಗಂತೂ ಕಂಗೆಡಿಸುವಂಥ ಸವಾಲನ್ನು ಒಡ್ಡಿತ್ತು. ಭಾರತೀಯ ಭಾಷೆಗಳು ಇಂಥ ಹಲವು ಬಗೆಯ ಸವಾಲುಗಳನ್ನು ಚರಿತ್ರೆಯಲ್ಲಿ ಎದುರಿಸುತ್ತಲೇ ಬಂದಿದ್ದವು.

ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿಸುವುದಕ್ಕೂ ಅದರ ಅಸ್ತಿತ್ವ ಹಾಗೂ ಬೆಳವಣಿಗೆಗೂ ಏನಾದರೂ ಸಂಬಂಧವಿದೆಯೇ?

ಭಾಷೆಯನ್ನು 'ಶಿಕ್ಷಣ ಮಾಧ್ಯಮ'ವಾಗಿಸುವುದು ಶಾಲೆ ಕಾಲೇಜುಗಳಲ್ಲಿ ಕಲಿಯುವವರ ದೃಷ್ಟಿಯಿಂದ ಮುಖ್ಯವಾದದ್ದು. ಆದರೆ ಇದನ್ನು ಭಾಷೆಗಳ ಅಸ್ತಿತ್ವದ ದೃಷ್ಟಿಯಿಂದ ನೋಡುವಾಗ ಬೇರೆ ರೀತಿಯಿಂದ ನೋಡಬೇಕು. ಕಲಿಯುವವರ ದೃಷ್ಟಿಯಿಂದ ಮಾತೃಭಾಷೆಯಲ್ಲಿ ಶಿಕ್ಷಣ ದೊರಕಿದರೆ, ವೈಜ್ಞಾನಿಕವಾಗಿ ವ್ಯಕ್ತಿಯ ಗ್ರಹಿಕೆ ಪೂರ್ಣರೂಪದಲ್ಲಿ ಬೆಳೆಯಲು ಸಾಧ್ಯವಾಗುತ್ತದೆ ಎನ್ನಬಹುದು. ಭಾಷೆಯ ದೃಷ್ಟಿಯಿಂದ ಶಾಲಾ ಶಿಕ್ಷಣವು ಭಾಷೆಯ ಬೆಳವಣಿಗೆಗೆ ಯಾವ ಕೊಡುಗೆಯನ್ನು ನೀಡಲು ಸಾಧ್ಯವಿಲ್ಲ, ಅದರ ಅಳಿವಿಗೆ ಕಾರಣವೂ ಆಗಲು ಸಾಧ್ಯವಿಲ್ಲ. ಲ್ಯಾಟಿನ್ ಹಾಗೂ ಸಂಸ್ಕೃತಗಳು ಶಿಕ್ಷಣ ಮಾಧ್ಯಮಗಳಾಗಿ ಬಳಕೆಯಲ್ಲಿದ್ದೂ ಸಹ ನಶಿಸಿಹೋದವು. ಇಂಗ್ಲಿಶ್ ಶಿಕ್ಷಣ ಮಾಧ್ಯಮವಾಗಿಯೂ ಉಪಖಂಡದಲ್ಲಿ ಬಹಳ ವ್ಯಾಪಕವಾಗಿ ಬಳಕೆಯಲ್ಲಿಲ್ಲ. ದೈನಂದಿನ ಮಾತುಕತೆಯಲ್ಲಿಯೂ ಅದು ಬಹು ಜನರ ಆಯ್ಕೆಯಲ್ಲ. ಇವು ಚರಿತ್ರೆಯಲ್ಲಿ ದೊರಕುವ ವಾಸ್ತವ ಸಂಗತಿಗಳು. ಹೀಗೆ ಹೇಳುವಾಗ ನಾನು ಇಂಗ್ಲಿಶ್ ಶಿಕ್ಷಣ ಮಾಧ್ಯಮವಾಗಬೇಕು ಎಂದು ಹೇಳುತ್ತಿಲ್ಲ. ಸ್ಕೂಲುಗಳಲ್ಲಿ ಯಾವುದೇ ಭಾಷೆಯನ್ನು ನಿರ್ದಿಷ್ಟವಾಗಿ ಶಿಕ್ಷಣ ಮಾಧ್ಯಮವನ್ನಾಗಿ ಮಾಡಬಾರದು ಎಂಬುದು ನನ್ನ ನಿಲುವು. ಅದನ್ನು ತರಗತಿಯಲ್ಲಿ ಭಾಷೆಗಳನ್ನು ಮಾತಾಡುವವರ ಸಂಖ್ಯೆಯನ್ನಾಧರಿಸಿ ನಿರ್ಧರಿಸಬೇಕು. ಅಂದರೆ ವಿದ್ಯಾರ್ಥಿಗಳು ತಮ್ಮ ಮನೆಗಳಿಂದ ಕೊಂಡೊಯ್ಯುವ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು. ಶಿಕ್ಷಣ ಮಾಧ್ಯಮದ ಆಯ್ಕೆಯನ್ನು ಶಿಕ್ಷಣ ನೀಡುವ ಸರ್ಕಾರ/ಸ್ಕೂಲುಗಳಂಥ ಸಂಸ್ಥೆಗಳಿಗೆ ನೀಡದೆ, ಶಿಕ್ಷಣ ಪಡೆಯಬಯಸುವ ವಿದ್ಯಾರ್ಥಿಗಳಿಗೆ ನೀಡಬೇಕು. ಒಂದೇ ಕ್ಲಾಸ್‌ರೂಮಿನಲ್ಲಿ ಕೂತಿರುವ ಕಾರಣಕ್ಕೆ, ತರಗತಿಯಲ್ಲಿರುವ ಎಲ್ಲ ಮಕ್ಕಳಿಗೆ ಒಂದೇ ರೂಪದ ಶಿಕ್ಷಣ ಮಾಧ್ಯಮವನ್ನು ಹೇರುವುದು ನಾಗರಿಕ ಸಮಾಜದ ಲಕ್ಷಣವಲ್ಲ. ಬಹುಭಾಷಾ ಶಿಕ್ಷಣ ನಮ್ಮ ಕಾಲದ ಅಗತ್ಯವಾಗಿದೆ. ಅದರಿಂದ ಎಲ್ಲ ಭಾಷೆಗಳಿಗೂ ಅನುಕೂಲವಾಗುತ್ತದೆ.


ಕೆಲವು ದಿನಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಸಾಹಿತಿಗಳ ಸಭೆಯಲ್ಲಿ ಕನ್ನಡವನ್ನು ಸ್ಕೂಲುಗಳಲ್ಲಿ ಶಿಕ್ಷಣ ಮಾಧ್ಯಮವಾಗಿ ಬಳಸಿಕೊಳ್ಳುವ ಕುರಿತು ಸರ್ಕಾರಕ್ಕೆ ಒತ್ತಾಯ ಹೇರಿದರು. ಇದು ಬಹಳ ಒಳ್ಳೆಯ ಬೆಳವಣಿಗೆ. ಹೀಗೆ ಮಾಡುವಾಗ ಇಲ್ಲಿ ಕೊಡವ ತುಳು ಕೊಂಕಣಿ ಭಾಷಿಕರೂ ಇದ್ದಾರೆ ಎಂಬುದನ್ನು ಮರೆಯಬಾರದು. ಕನ್ನಡದವರಿಗೆ ಕನ್ನಡದಲ್ಲಿ ಓದಿಬರೆಯಲು ಒತ್ತಾಯಿಸಲು ಹೇಗೆ ಸಾಧ್ಯವಾಗಬೇಕೋ, ಹಾಗೇ ತುಳು ಕೊಡವ ಕೊಂಕಣಿಗಳಿಗೂ ಇದು ಸಾಧ್ಯವಾಗಬೇಕು. ಕರ್ನಾಟಕದಲ್ಲಿರುವವರು ಕನ್ನಡ ಮಾತಾಡಬೇಕು ಎಂಬುದೇನೋ ಸರಿ. ಇದು ಕನ್ನಡವಲ್ಲದ ಭಾಷೆಗಳಿಗೆ ಆತಂಕವುಂಟು ಮಾಡಬಾರದು.

ಭಾಷೆಗಳ ಕುರಿತು ಕೆಲಸ ಮಾಡಲು ಶುರು ಮಾಡಿದಾಗ, ನೀವು ಸತ್ತಿರುವ, ಸಾಯುತ್ತಿರುವ ಭಾಷೆಗಳ ಸ್ಮಶಾನದೊಳಕ್ಕೆ ಕಾಲಿಡುತ್ತೀರ ಎಂದು ಭಾವಿಸಿದ್ದಿರಿ. ವಿಚಿತ್ರವೆಂದರೆ ಸ್ಮಶಾನದ ಬದಲಾಗಿ, ದಟ್ಟವಾದ ಕಾಡೊಳಕ್ಕೆ ಹೊಕ್ಕಂತಾಯಿತು ಎಂದಿದ್ದೀರಿ. ಈ ಕುರಿತು ಹೇಳಿ.

೧೯೯೧ರಲ್ಲಿ ಯುನೆಸ್ಕೋ ಅಳಿವಿನಂಚಿಗೆ ಸರಿದ ಭಾಷೆಗಳ ಕುರಿತು ಚರ್ಚೆಯನ್ನು ಆರಂಭಿಸಿತು. ನಂತರ ಅಳಿವಿನಂಚಿನ ಭಾಷೆಗಳ ಭೂಪಟವನ್ನೂ ಬಿಡುಗಡೆ ಮಾಡಿತು. ೧೯೬೧ರ ಗಣತಿಯಲ್ಲಿ ೧೬೫೨ ಭಾಷೆಗಳಿದ್ದರೆ, ೧೯೭೧ ರ ಗಣತಿಯಲ್ಲಿ ಕೇವಲ ೧೦೯ ಭಾಷೆಗಳಿದ್ದವು. ನಾನೂ ಸಹ ಸಾಯುತ್ತಿರುವ ಭಾಷೆಗಳ ಕುರಿತಾಗಿ ಚಿಂತೆಗೊಳಗಾಗಿದ್ದೆ. ಹಾಗಾಗಿ ನಾನು ಈ ಬಗ್ಗೆ ಕೆಲಸ ಮಾಡಲು ಶುರು ಮಾಡಿದಾಗ ಭಾಷೆಗಳ ಸ್ಮಶಾನದಲ್ಲಿ ಪಿಶಾಚಿಯಂತೆ ಅಲೆಯಬೇಕಾಗಬಹುದೆಂದು ನಂಬಿದ್ದೆ. ಆದರೆ ನಾನು ದೇಶದ ಹಲವು ರಾಜ್ಯಗಳಿಗೆ ಹೋದಾಗ ಕೇವಲ ಒಂದಷ್ಟು ಭಾಷೆಗಳನ್ನು ನೋಡಬಹುದು ಎಂದುಕೊಂಡಿದ್ದೆ. ಉತ್ತರಾಖಂಡದಲ್ಲಿ ಕುಮಾವನಿ ಗಡವಾಲಿ ಎಂಬ ಒಂದೋ ಎರಡೋ ಭಾಷೆಗಳಿರಬಹುದು ಎಂದುಕೊಂಡರೆ ಅಲ್ಲಿ ೧೪ಕ್ಕೂ ಹೆಚ್ಚು ಭಾಷೆಗಳಿದ್ದವು. ಪಂಜಾಬಿನಲ್ಲಿ ಪಂಜಾಬಿಯೊಂದೇ ಇರಬಹುದೆಂದುಕೊಂಡರೆ ಅಲ್ಲಿ ಕನಿಷ್ಠ ೧೨ ಬಳಕೆಯಲ್ಲಿದ್ದವು. ಗುಜರಾತಿನಲ್ಲಿ ಗುಜರಾತಿ ಉರ್ದು ಹಿಂದಿಯಂಥ ಭಾಷೆಗಳಿರಬಹುದೆಂದುಕೊಂಡರೆ ಅಲ್ಲಿ ೫೮ ಜೀವಂತ ಭಾಷೆಗಳಿದ್ದವು. ಇದರಿಂದ ನನಗೆ ದೊಡ್ಡ ಜ್ಞಾನೋದಯವಾಯಿತು. ಹಾಗಾಗಿ ನೂರಾರು ಸ್ವರಗಳಿಂದ ಕಿಕ್ಕಿರಿದ ಭಾಷೆಗಳ ಕಾಡಿನಲ್ಲಿ ಓಡಾಡುವಂತಾಯಿತು.

ಹಾಗಾದರೆ ಭಾಷೆಗಳ ಅಳಿವು ಎಂಬ ಆಲೋಚನೆಯೇ ಅನಗತ್ಯವಾದದ್ದೇ?

ಇದನ್ನು ಬಹಳ ನೇರವಾಗಿ ಹೇಳುತ್ತೇನೆ. ಯೂರೋಪಿನಲ್ಲಿ ೧೯೯೦ ಸುಮಾರಿನಲ್ಲಿ ಭಾಷೆಗಳ ಅಳಿವು ಎಂಬ ಚಿಂತನೆ ಹುಟ್ಟಿತು. ಇದಕ್ಕಾಗಿ ಬಹಳ ಹಣ ಐಟಿ ಸೆಕ್ಟರ್‌ಗಳಿಂದ ಹರಿದುಬಂದಿದೆ. ಅಂಥ ಅಧ್ಯಯನಗಳು ಕಂಡುಹಿಡಿದಿರುವ ಭಾಷೆಗಳ ಕಾರ್ಯಸಾಧ್ಯತೆಯ ಮಾಪನದ ಪ್ರಕಾರ, ಯೂರೋಪಿನ ೭೪ ಭಾಷೆಗಳಲ್ಲಿ ೫೮ ಭಾಷೆಗಳು ಮುಂದಿನ ೩೦ ವರ್ಷಗಳಲ್ಲಿ ಸಾಯುತ್ತವೆ. ೧೯೭೦ರಲ್ಲಿ ಎಚ್‌ಐವಿ, ೧೯೫೦ರಲ್ಲಿ ಕ್ಯಾನ್ಸರ್, ೧೯೩೦ರಲ್ಲಿ ಮಲೇರಿಯಾ, ೨೦ನೇ ಶತಮಾನದ ಆರಂಭದಲ್ಲಿ ಟಿಬಿಗಳು ಚಾಲ್ತಿಗೆ ಬಂದವು. ಯೂರೋಪು ಕಾಲಕಾಲಕ್ಕೆ ಮನುಷ್ಯಕುಲವನ್ನೇ ನಾಶಮಾಡುವ ರೋಗಗಳನ್ನು ಕಂಡುಹಿಡಿದು ಜನರನ್ನು ಭಯಭೀತರನ್ನಾಗಿಸುವ ಚಟಕ್ಕೆ ಬಿದ್ದಂತೆ ಕಾಣುತ್ತದೆ. ಆಫ್ರಿಕಾ, ಲ್ಯಾಟಿನ್ ಅಮೆರಿಕಾ ಏಷ್ಯಾಗಳಲ್ಲಿ ನಾವು ಭಾಷೆಗಳ ಪಲ್ಲಟವನ್ನು ಕುರಿತು ಹೊಸ ಚಿಂತನೆಯನ್ನು ಆರಂಭಿಸಬೇಕಾಗಿದೆ. ಹಾಗೆಯೇ ಇಂಗ್ಲಿಶ್ ನಮ್ಮ ಭಾಷೆಗಳನ್ನು ದೊಡ್ಡಮಟ್ಟದಲ್ಲಿ ಪ್ರಭಾವಿಸುತ್ತಿದೆ ಹಾಗೂ ಜೀವಂತಿಕೆಯನ್ನು ನಾಶಮಾಡುತ್ತಿದೆ. ಹಾಗೆಯೇ ಹಿಂದಿಯೂ ಸಹ ದೇಶೀ ಭಾಷೆಗಳ ಅಸ್ತಿತ್ವನ್ನು ಕಬಳಿಸುತ್ತಿದೆ. ಇಂಗ್ಲಿಶ್ ಭಾಷಾ ಸಾಮ್ರಾಜ್ಯದ ಮಾದರಿಯಲ್ಲಿ ಹಿಂದಿ ಸಾಮ್ರಾಜ್ಯವೂ ಬೆಳೆಯುತ್ತಿದೆ. ೨೦೧೧ರ ಗಣತಿಯಲ್ಲಿ ೫೨ಕೋಟಿ ಭಾರತೀಯರು ಹಿಂದಿ ಭಾಷಿಕರಿದ್ದಾರೆಂದು ಹೇಳಲಾಗಿದೆ. ಆದರೆ ಹಿಂದಿಯ ಒಳಗೆ ೫ ಕೋಟಿ ಜನರಿಗಿಂತ ಹೆಚ್ಚು ಜನ ಮಾತಾಡುವ ಭೋಜಪುರಿಯನ್ನೂ ಸೇರಿದಂತೆ ೪೮ ಮುಖ್ಯ ಭಾಷೆಗಳನ್ನು ಸೇರಿಸಲಾಗಿದೆ. ನಮ್ಮ ಭಾಷೆಗಳು ನಾಶವಾಗುತ್ತಿರುವುದು ಇಂಥ ಭಾಷಾ ವಸಾಹತುಶಾಹಿಯಿಂದ. ಯೂರೋಪಿಯನ್ನರು ಹೇಳುತ್ತಿರುವ ಭಾಷಾನಾಶವನ್ನು ನಾವಿಲ್ಲಿ ಕಾಣಲು ಸಾಧ್ಯವಿಲ್ಲ. ಆದರೆ ನಮ್ಮ ಆರ್ಥಿಕತೆ,ಯೋಜನೆಗಳು, ಶಿಕ್ಷಣಕ್ರಮ, ಮಾರುಕಟ್ಟೆ ನೀತಿಗಳು ನಿಸ್ಸಂದೇಹವಾಗಿ ಭಾಷೆಗಳ ಅಸ್ತಿತ್ವಕ್ಕೆ ಧಕ್ಕೆ ಉಂಟುಮಾಡುತ್ತಿರುವುದಂತೂ ನಿಜ.



(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)

(ಸಂದರ್ಶಕ ಎಸ್. ಸಿರಾಜ್ ಅಹಮದ್ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಸ್ನಾತಕೋತ್ತರ ಇಂಗ್ಲಿಷ್ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿದ್ದಾರೆ)

ಒಂದು ಪ್ರವಾಸ ಚಿತ್ರ


ಚೀನಾದ ಒಂದು ನೋಟ

–ವೆಂಕಟೇಶ ಮಾಚಕನೂರ

ತಮ್ಮ ಚೀನಾ ಪ್ರವಾಸದ ಲೇಖಕರು ಸ್ಥಳಗಳನ್ನು ಮಾತ್ರ ನೋಡಿಲ್ಲ; ಜನರನ್ನೂ ನೋಡಿದ್ದಾರೆ. ಆ ದೇಶದ ಇತಿಹಾಸ–ಪರಂಪರೆಯ ಹಿನ್ನೆಲೆಯಲ್ಲಿ ಅವರನ್ನು ಅರಿಯುವ ಪ್ರಯತ್ನವನ್ನೂ ಮಾಡಿದ್ದಾರೆ. ಹಾಗಾಗಿ ಅವರ ನೋಟ ಪುಟ್ಟದ್ದಾಗಿದ್ದರೂ ಸಮಗ್ರವಾಗಿದೆ; ಜೀವಂತವಿದೆ.–ಸಂ



ಬೀಜಿಂಗನ ಟಿಯಾನಮನ್ ಚೌಕ



ಗ್ರ್ಯಾಂಡ ಕೆನಾಲ

ಚೀನದ ಮಹಾ ಗೋಡೆಯನ್ನೊಮ್ಮೆ ನೋಡಬೇಕೆನ್ನುವ ಹಂಬಲ ಮನದ ಮೂಲೆಯಲ್ಲಿ ಬಹಳ ವರ್ಷಗಳಿಂದ ಬಾಕಿ ಉಳಿದಿತ್ತು. ಕಳೆದ ಮೇ ತಿಂಗಳಲ್ಲಿ ಕಾಲ ಕೂಡಿ ಬಂತು. ಮುವ್ವರು ಸ್ನೇಹಿತರು ಬೆಂಗಳೂರಿನಿಂದ ಸಪತ್ನಿಕರಾಗಿ ಹಾಂಗಕಾಂಗ ಮೂಲಕ ಶಾಂಘೈ ನಗರ ತಲುಪಿದೆವು. ಅದು ಹನ್ನೊಂದು ದಿನಗಳ ನಿಗದಿತ ಪ್ರವಾಸವಾಗಿತ್ತು. ಶಾಂಘೈದಲ್ಲಿ ಮೂರು ದಿನ, ಬೀಜಿಂಗದಲ್ಲಿ ಮೂರುದಿನ, ಹಾಂಗಕಾಂಗ, ಮೆಕಾವ ನಾಲ್ಕು ದಿನ ಹೀಗೆ ಎಡಬಿಡದ ವೀಕ್ಷಣೆ, ಸಂಚಾರ ಇತ್ತು.

ಜಗತ್ತಿನ ಅನೇಕ ಭಾಗಗಳನ್ನು ಸುತ್ತಿರುವ ನಮಗೆ ಚೀನ ಕುರಿತು ಸಾಕಷ್ಟು ಕುತೂಹಲ ಕೂಡ ಇತ್ತು. ನಮ್ಮ ದೇಶದೊಂದಿಗೆ ಆಗಾಗ ಕಾಲು ಕೆದರಿ ಜಗಳಕ್ಕಿಳಿಯುವ, ಅಂತರರಾಷ್ಟ್ರೀಯಯ ಮಟ್ಟದಲ್ಲೂ ಸ್ವಲ್ಪ ಕ್ಯಾತೆಗೆ ಕುಖ್ಯಾತಿ ಹೊಂದಿರುವ ಚೀನ ದೇಶದ ಬಗ್ಗೆ ಸ್ವಲ್ಪ ಪೂರ್ವಗ್ರಹಿಕೆಗಳೂ ಇದ್ದವು. ನಾಲ್ಕೂ ಕಡೆ ದೊರೆತ ನಾಲ್ಕು ವಿಭಿನ್ನ ಪ್ರವಾಸಿ ಮಾರ್ಗದರ್ಶಿಗಳು, ಹಾಗು ನಮ್ಮ ವೀಕ್ಷಣೆ ನಮ್ಮ ಹಲವಾರು ಗ್ರಹಿಕೆಗಳನ್ನು ಸುಳ್ಳು ಮಾಡಿದವು.

೨.೪೦ ಕೋಟಿ ಜನಸಂಖ್ಯೆಯ, ಜಗತ್ತಿನ ಎರಡನೆಯ ಮಹಾನಗರವಾದ ಶಾಂಘೈನಿಂದ ಆರಂಭಗೊಂಡ ನಮ್ಮ ವೀಕ್ಷಣೆ ಆ ನಗರದ ನಿರ್ವಹಣೆ, ಅದರ ಅಚ್ಚುಕಟ್ಟುತನ, ಸ್ವಚ್ಛತೆ, ಸೌಂದರ್ಯ, ಅಸಂಖ್ಯ ಗಗನಚುಂಬಿ ಕಟ್ಟಡಗಳು, ೧೬ ಮಾರ್ಗಗಳ, ೩೯೩ ನಿಲ್ದಾಣಗಳನ್ನು ಹೊಂದಿರುವ ೬೪೪ ಕಿ ಮೀ.ಉದ್ದದ ಮತ್ತು ದಿನಾಲು ಸುಮಾರು ಒಂದು ಕೋಟಿ ಜನರಿಗೆ ತ್ವರಿತ ಸಂಚಾರ ಸೇವೆ ಒದಗಿಸುತ್ತಿರುವ ಶಾಂಘೈ ಮೆಟ್ರೊ ರೈಲು ವ್ಯವವಸ್ಥೆ ಎಂಬ ಅದ್ಭುತ ಇವುಗಳನ್ನೆಲ್ಲ ಕಂಡು ಬೆರಗಿನಿಂದ ತುಂಬಿಹೋಯಿತು. ಕಳೆದ ಮೂರ್‍ನಾಲ್ಕು ದಶಕಗಳಲ್ಲಿ ಆದ ಶಾಂಘೈ ನಗರದ ಹೆಚ್ಚಿನ ಅಭಿವೃದ್ಧಿ, ಬೆಳವಣಿಗೆಗಳು ನ್ಯೂಯಾರ್ಕ ನಗರವನ್ನು ಮೀರಿಸುವಂತೆ ನಮಗೆ ಕಂಡುಬಂತು.

ಶಾಂಘೈದಿಂದ ನೂರು ಕಿ. ಮೀ. ದೂರ ಇರುವ ಸುಝೊವ ನಗರದ ಹತ್ತಿರ ಇರುವ ಗ್ರ್ಯಾಂಡ ಕೆನಾಲ ವಿಶ್ವ ಪಾರಂಪರಿಕ ತಾಣವಾಗಿ ಗಮನ ಸೆಳೆಯುತ್ತದೆ. ೧೭೯೪ ಕಿ. ಮೀ. ಉದ್ದ ಇರುವ ಈ ಕೃತ್ರಿಮ ನಾಲೆ ಐದು ನದಿಗಳನ್ನು ಬೆಸೆದು ೬_೭ ಶತಮಾನದಲ್ಲಿ ನಿರ್ಮಾಣಗೊಂಡಿದೆ. ಉತ್ತರ ಮತ್ತು ದಕ್ಷಿಣ ಚೀನವನ್ನು ಬೆಸೆಯುವ ಈ ನಾಲೆ ಬೀಜಿಂಗ ನಗರಕ್ಕೆ ಆಹಾರ ಧಾನ್ಯ, ಇತರೆ ಸಾಮಗ್ರಿಗಳನ್ನು ಸಾಗಿಸುವ ಜಲಮಾರ್ಗವಾಗಿ ನಿರ್ಮಾಣಗೊಂಡದ್ದು, ಸಮುದ್ರ ಮಟ್ಟದಿಂದ ೨೭ ಮೀ. ಎತ್ತರದಲ್ಲಿರುವ ಬೀಜಿಂಗ ನಗರದವರೆಗೆ ಹಡಗುಗಳು ಈ ಜಲಮಾರ್ಗದಲ್ಲಿ ಸಂಚರಿಸುತ್ತಿದ್ದವು. 'ಪೌಂಡಲಾಕ್' ತಂತ್ರಜ್ಞಾನ ಬಳಸಿ ನದಿಯಲ್ಲಿ ನೀರಿನ ಮಟ್ಟವನ್ನು ಕಾಯ್ದುಕೊಂಡು ಹಡಗುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುತ್ತಿತ್ತಂತೆ. ಗ್ರ್ಯಾಂಡ ಕೆನಾಲ ಮತ್ತು ಚೀನಾದ ಮಹಾಗೋಡೆಗಳಂತಹ ನಿರ್ಮಾಣಗಳು ಮಹಾ ಮಾನವರಿಂದ ನಿರ್ಮಾಣಗೊಂಡವುಗಳಂತೆ ಕಂಡುಬರುತ್ತವೆ. ಅವುಗಳ ತಾಂತ್ರಿಕ ಕೌಶಲ್ಯ ಅಸಾಧಾರಣವಾದುದು.

ಚೀನದ ಶೇ.೬೫ ರಷ್ಟು ಜನವಸತಿ ಇರುವುದು ಚೀನದ ಪೂರ್ವ ಭಾಗದಲ್ಲಿ. ಚೀನದ ಮಹಾನಗರಗಳೆಲ್ಲ ಇರುವೂದು ಪೂರ್ವಭಾಗದಲ್ಲೆ. ಇಲ್ಲಿ ಜನಸಾಂದ್ರತೆ ಹೆಚ್ಚು. ಹಲವಾರು ನದಿಗಳು ಪೂರ್ವ ಚೀನಾಕ್ಕೆ ವರವಾಗಿ ಪರಿಣಮಿಸಿವೆ. ಅತಿ ಹೆಚ್ಚು ನಗರೀಕರಣವಾದ ಪ್ರದೇಶವಿದು. ಯಾವ ನಗರ ಎಲ್ಲಿ ಮುಗಿಯುತ್ತದೆ, ಮತ್ತೊಂದು ಎಲ್ಲಿ ಆರಂಭಗೊಳ್ಳುತ್ತದೆ ಎಂಬುದೇ ತಿಳಿಯದು. ಉದ್ದಕ್ಕೂ ಗಗನಚುಂಬಿ ಕಟ್ಟಡಗಳು, ವಸತಿ ಸಮುಚ್ಚಯಗಳು ಹರಡಿ ನಿಂತಿವೆ. ಎಲ್ಲೆಡೆ ಹಸಿರು. ಸ್ಲಂ ನಂತಹ ಪ್ರದೇಶಗಳು ಕಂಡು ಬರುವದಿಲ್ಲ.

ಶಾಂಘೈ ನಗರದಿಂದ ಬೀಜಿಂಗ ನಗರಕ್ಕೆ ನಾವು ೧೩೦೦ ಕಿ. ಮೀ. ಗಳ ಯಾಣವನ್ನು ಬುಲೆಟ್ ರೈಲಿನಲ್ಲಿ ೪ ಗಂ. ೨೦ ನಿಮಿಷಗಳಲ್ಲಿ ಪೂರೈಸಿದೆವು. ರೈಲಿನ ಸೇವೆ, ಸೌಲಭ್ಯಗಳು ಉತ್ಕೃಷ್ಟ. ಉದ್ದಕ್ಕೂ ಹಸಿರು ಸೂಸುತ್ತಿದ್ದ ಗೋಧಿ ಬೆಳೆ, ಗ್ರೀನ ಹೌಸ್‌ಗಳು, ಒಂದಿಂಚೂ ಒಣ ಭೂಮಿ ಕಂಡು ಬಾರದ ವಿಶಾಲ ಕೃಷಿ ಭೂಮಿ, ಗ್ರಾಮೀಣ ಚೀನ ಕೂಡ ಸಮೃದ್ಧವಾಗಿರುವಂತೆ ಕಂಡುಬಂತು.

ಬೀಜಿಂಗ ನಗರ ಇನ್ನೂ ಸುಂದರ. ನಗರದುದ್ದಕ್ಕೂ ರಸ್ತ ಬದಿ ಬಣ್ಣಬಣ್ಣದ ಗುಲಾಬಿ ಹೂಗಳ ಸಾಲುಸಾಲು ಕಣ್ಣಿಗೆ ಅಕ್ಷರಶಃ ಹಬ್ಬ. ಬೀಜಿಂಗನ್ನು ಗುಲಾಬಿ ನಗರವೆಂದು ಕರೆಯ ಬಹುದೇನೊ! ಸ್ವಚ್ಛತೆ ನಗರದ ಸೌಂದರ್ಯವನ್ನು ಇಮ್ಮಡಿಸಿದೆ. ಅಷ್ಟು ಎತ್ತರವಲ್ಲದ ರಸ್ತೆ ಬದಿಯ ಸಾಲು ವೃಕ್ಷಗಳು, ಹಸಿರು ಹಾಸು, ಯಾವುದೇ ಪಾಶ್ಚಿಮಾತ್ಯ ನಗರದ ಸೌಂದರ್ಯವನ್ನು ಮೀರಿಸುವಂತಿದೆ. ಸಾರ್ವಜನಿಕರ ಬಳಕೆಗಾಗಿ ಅಲ್ಲಲ್ಲಿ ಸೈಕಲ್ಲುಗಳ ಸಂಗ್ರಹಗಳಿವೆ. ಬಸ್ಸು ಅಥವಾ ರೈಲಿನಿಂದ ಇಳಿದು ಒಳ ರಸ್ತೆಗಳಲ್ಲಿ ಸೈಕಲ್ಲುಗಳಲ್ಲಿ ಹೋಗಿ ಕೆಲಸ ಪೂರೈಸಿಕೊಂಡು ಬರಬಹುದು. ಸೈಕಲ್ಲುಗಳಿಗೂ ಕಾರ್ಡ ಬಳಸಿ ಹಣ ಪಾತಿಸಬಹುದು. ಅವುಗಳಿಗೆಲ್ಲ ಬಾರಕೋಡಗಳಿರುತ್ತವೆ. ಸೈಕಲ್, ದ್ವಿ ಚಕ್ರ ವಾಹನಗಳಿಗೆ ಪ್ರತ್ಯೇಕ ಪಥಗಳಿವೆ. ಪ್ರದೂಷಣ ತಡೆಯಲು ಇದೊಂದು ಉತ್ತಮ ಪ್ರಯತ್ನ. ಸಾಕಷ್ಟು ವಾಹನ ಸಂಚಾರ ಇದ್ದರೂ ನಮಗೆ ಪ್ರದೂಷಣ ಅಷ್ಟಾಗಿ ಕಂಡು ಬರಲಿಲ್ಲ. ಬೀದಿ ನಾಯಿ, ದನಗಳಂತೂ ಎಲ್ಲೂ ಕಣ್ಣಿಗೆ ಬೀಳುವದಿಲ್ಲ.

ನಗರ ಪ್ರದೇಶಗಳಲ್ಲಿ ನಮ್ಮಲ್ಲಿಯಂತೆ ಎಲ್ಲಿ ನೋಡಿದಲ್ಲಿ ಜನ ದಟ್ಟನೆ ಕಂಡು ಬರುವದಿಲ್ಲ. ಪ್ರವಾಸಿ ಸ್ಥಳಗಳಲ್ಲಿ ಮಾತ್ರ ಜನ ದಟ್ಟಣೆ ಇರುತ್ತದೆ. ಜನರ ನಡೆನುಡಿಯಲ್ಲಿ ನಯವಿನಯ ಹೆಚ್ಚು, ಆಕ್ರಮಣಕಾರಿ ಸ್ವಭಾವ ಇಲ್ಲ. ಜನ ಶಾಂತಿ ಪ್ರಿಯರು. ಸುಮಾರು ಐದು, ಐದು ಕಾಲಡಿಯಷ್ಟು ಎತ್ತರದ, ಸಾಧಾರಣ ಮೈಕಟ್ಟಿನ, ಬಿಳಿ ಬಣ್ಣದ, ಸುಂದರ ಚಹರೆಯ ಚೀನಿ ಜನ ಕೆಲಸದಲ್ಲಿ ತೋರುವ ಚಾಕಚಕ್ಯತೆ ಮಾತ್ರ ಅಸಾಧಾರಣವಾದುದು. ಮಹಿಳೆಯರಂತೂ ಗಂಡಸರಿಗಿಂತ ಮುಂದು. ಬೊಜ್ಜು ದೇಹದವರು ಒಬ್ಬರೂ ಕಾಣುವದಿಲ್ಲ. ಬಹಳ ವರ್ಷಗಳ ಕಾಲದಿಂದ ಜಾರಿಯಲ್ಲಿದ್ದ ಕುಟುಂಬಕ್ಕೊಂದೇ ಮಗು, ಮತ್ತು ಇದರ ಪರಿಣಾಮ



ಫಾರಬಿಡನ್ ಪ್ಯಾಲೇಸ್



ಚೀನ ಮಹಾಗೋಡೆ

ರೂಪದ ಹೆಣ್ಣು ಭ್ರೂಣ ಹತ್ಯೆಗಳಿಂದಾಗಿ ಚೀನ ಹೆಣ್ಣು ಮಕ್ಕಳ ಕೊರತೆಯಿಂದ ಬಳಲುತ್ತಿದೆ. ಗಂಡು ಮದುವೆ ಮಾಡಿಕೊಳ್ಳಲು ಹೆಣ್ಣಿಗೆ ಅಪಾರ 'ತೆರ' ತೆರುವ ಹಾಗೂ ತುಂಬ ಸಂಪಾದನೆ ಮಾಡುವ ಅಗತ್ಯ ಇರುವ ಬಗ್ಗೆ ಆಗಲೇ ೩೦ ದಾಟಿದ್ದ, ಆ ಕಾರಣಕ್ಕಾಗಿಯೇ ಇನ್ನೂ ಮದುವೆ ಆಗದಿರುವ ಬಗ್ಗೆ ನಮ್ಮ ಗೈಡ ಅಲವತ್ತುಕೊಳ್ಳುತ್ತಿದ್ದ. ಒಂದು ಮಗು ನಿಯಮದಿಂದಾಗಿ ಹೆಣ್ಣು ಗಂಡಿನ ಪ್ರಮಾಣದಲ್ಲೂ ವ್ಯತ್ಯಾಸವಾಗಿ, ಕೆಲವು ಕಡೆ ದುಡಿಯುವ ವಯೋಮಾನದ ಗಂಡಸರಿಲ್ಲದೆ ಕಾರ್ಖಾನೆಗಳು ಮುಚ್ಚಿ ಹೋದ ಬಗ್ಗೆ ಹೇಳಿದ. ಹೀಗಾಗಿ ಕೆಲ ವರ್ಷಗಳ ಹಿಂದೆ, ಸರಕಾರ ಎರಡನೆಯ ಮಗು ಹೊಂದಲು ಅವಕಾಶ ನೀಡಿದ್ದು, ಅದನ್ನು ಚೀನಿಯರು ಸಂಭ್ರಮದಿಂದ ಸ್ವಾಗತಿಸುತ್ತಿದ್ದಾರೆ.

ತಮ್ಮ ಭಾಷೆ ಮ್ಯಾಂಡ್ರಿನ್ ಕಲಿಯಲು ಅತಿ ಕ್ಲಿಷ್ಟವಾದರೂ ಆದರ ಕುರಿತು ಚೀನಿಯರಿಗೆ ತುಂಬ ಅಭಿಮಾನ. ಇಂಗ್ಲಿಷನ್ನು ಒಂದು ಭಾಷೆಯಾಗಿ ಶಾಲೆಗಳಲ್ಲಿ ಇತ್ತೀಚೆಗೆ ಕಲಿಸುತ್ತಿದ್ದರೂ, ಜರಲ್ಲಿ ಅದರ ಜ್ಞಾನ ಅಷ್ಟಕ್ಕಷ್ಟೆ. ಅದರಲ್ಲಿ ವಿಶೇಷ ಪರಿಣತಿ ಹೊಂದಲು ಪ್ರತ್ಯೇಕ ತರಗತಿಗಳಿವೆಯಂತೆ. ಉಚ್ಚ ಶಿಕ್ಷಣ, ಮೆಡಿಕಲ್, ಇಂಜನೀಯರಿಂಗ ಎಲ್ಲ ಚೀನಿ ಭಾಷೆಯಲ್ಲೇ ಜಾಗತೀಕರಣದ ಪೂರ್ಣ ಲಾಭವನ್ನು ಪಡೆದಿರುವ ಚೀನ ತನ್ನ ಭಾಷೆಯ ಮೂಲಕವೇ ತನ್ನ ದೇಶವನ್ನು ಕಟ್ಟಕೊಂಡಿದೆ. ಜಗತ್ತಿನಲ್ಲಿ ದೈತ್ಯ ಶಕ್ತಿಯಾಗಿ ಬೆಳೆದು ನಿಂತಿದೆ.

ಚೀನಿ ಜನ ದೇಶಕ್ಕಾಗಿ ಸಾಕಷ್ಟು ಬೆಲೆ ತೆತ್ತಿದ್ದಾರೆ. ವೈಯಕ್ತಿಕ ಸ್ವಾತಂತ್ರ್ಯವನ್ನು ತ್ಯಾಗ ಮಾಡಿದ್ದಾರೆ. ಕಮ್ಯುನಿಸ್ಟ್ ಸರಕಾರದಡಿ ನಲುಗಿದ್ದಾರೆ. ೧೯೮೯ರಲ್ಲಿ ಕಮ್ಯುನಿಷ್ಠ ಸರಕಾರದ ವಿರುದ್ಧ ಮತ್ತು ಪ್ರಜಾಪ್ರಭುತ್ವದ ಪರವಾಗಿ ವಿದ್ಯಾರ್ಥಿಗಳು, ನಾಗರಿಕರು ದೇಶಾದ್ಯಂತ ನಡೆಸಿದ ಪ್ರಬಲ ಪ್ರತಿಭಟನೆ ಕಮ್ಯುನಿಷ್ಠ ಸರಕಾರದ ಬುಡವನ್ನೇ ಅಲ್ಲಾಡಿಸಿತ್ತು. ಸರಕಾರ ನಿರ್ದಯವಾಗಿ ಅದನ್ನು ಹತ್ತಿಕ್ಕಿತು. ಅದರಲ್ಲಿ ಪ್ರಾಣ ತೆತ್ತವರ ಲೆಕ್ಕವಿಲ್ಲ. ಆದರೆ ಆ ನಂತರ ಚೀನದಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಸರಕಾರ ಸ್ವಲ್ಪ ಉದಾರ ಆಗಿದೆ. ಖಾಸಗಿ ವ್ಯಾಪಾರ ಉದ್ಯೋಗಕ್ಕೆ ಅವಕಾಶ ಸಿಕ್ಕಿದೆ. ವಯಕ್ತಿಕ ದುಡಿಮೆ, ಗಳಿಕೆ ಚೀನಿ ಆರ್ಥಿಕತೆಯನ್ನು ಬದಲಿಸಿದೆ. ದೈಹಿಕ ಶ್ರಮದ ಕೆಲಸ ಬಹಳ ದುಬಾರಿಯಂತೆ. ಗಂಟೆಗೆ ನಮ್ಮ 400ರೂ.ದಷ್ಟು, ಕೃಷಿ ಕ್ಷೇತ್ರದಲ್ಲೂ ಬದಲಾವಣೆಗಳಾಗಿವೆ. ಆದರೆ ಜಮೀನಿನ ಒಡೆತನ ಮಾತ್ರ ಸರಕಾರದ್ದೆ. ಸರಕಾರ ಮುಖ್ಯ ಕ್ಷೇತ್ರಗಳನ್ನು ಹೊರತು ಪಡಿಸಿ ಖಾಸಗೀಕರಣವನ್ನು ಉತ್ತೇಜಿಸುತ್ತಿದೆ. ಕಮ್ಯುನಿಷ್ಟ ಪಕ್ಷದ ಹಿಡಿತ ಮಾತ್ರ ಸಡಿಲಾಗಿಲ್ಲ.



ಹಾಂಕಾಂಗ ನಗರದ ಒಂದು ಪಕ್ಷಿನೋಟ

ಸರಕಾರದ ವಿರುದ್ಧ ಈಗ ಜನ ಮಾತನಾಡತೊಡಗಿದ್ದಾಗಿ ಗೈಡ್ ಹೇಳಿದ. ಖಾಸಗಿ ಪತ್ರಿಕೆಗಳು, ಟಿವ್ಹಿ ವಾಹಿನಿಗಳು ಬಂದಿವೆ. ಆದರೆ ಒಂದೇ ಪಕ್ಷದ ಆಯ್ಕೆರಹಿತ ಸರಕಾರದ ವಿರುದ್ಧ, ಹಾಲಿ ಅಧ್ಯಕ್ಷರ ಅವಧಿ ವಿಸ್ತರಣೆ ಬಗ್ಗೆ ಅಸಮಾಧಾನವನ್ನು ಒರ್ವ ಗೈಡ್ ವ್ಯಕ್ತ ಪಡಿಸಿದರೆ, ಮತ್ತೊಬ್ಬ ಹಾಲಿ ಅಧ್ಯಕ್ಷ ಷಿ ಜಿನ್‌ಪಿಂಗ್ ನ ಭ್ರಷ್ಟಾಚಾರ ವಿರೋಧಿ ಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ. ಭಾರತದ ಸಿನೆಮಾಗಳು, ಯೋಗ ಕುರಿತು ಜನರ ಒಲವು ಇರುವುದಾಗಿ ಹೇಳಿದ.

ಕಮ್ಯುನಿಷ್ಠ ಸಿದ್ಧಾಂತದಂತೆ ಹಾಗು ಸರಕಾರ ಬಹಿರಂಗ ಧಾರ್ಮಿಕ ಆಚರಣೆಗಳ ಬಗ್ಗೆ ನಿರ್ಬಂಧ ಹೇರಿದ್ದರಿಂದಾಗಿ, ಶೇ ೬೦ರಷ್ಟು ಚೀನಿ ಜನ ಯಾವುದೇ ಧರ್ಮ,ದೇವರಲ್ಲಿ ನಂಬಿಕೆ ಉಳ್ಳವರಾಗಿರುದಿಲ್ಲ. ಶೇ. ೨೦ರಷ್ಟು ಜನ ಚೀನಿ ಸಂಪ್ರದಾಯಿಕ ಧಾರ್ಮಿಕ ಆಚರಣೆಗಳನ್ನು ಪಾಲಿಸಿದರೆ, ಶೇ ೧೮ ರಷ್ಟು ಜನ ಬೌದ್ಧ ಧರ್ಮವನ್ನು ಅನುಸರಿಸುತ್ತಾರೆ.

ಚೀನ ಮಹಾಗೋಡೆಯನ್ನು ನಾವು ನೋಡಲು ಹೋದ ದಿನ ವೈಪರಿತ್ಯದ ಹವಾಮಾನ ಇತ್ತು. ಮಳೆ ಹಾಗು ಮಂಜು ಮುಸುಕಿತ್ತು. ಬೀಜಿಂಗನಿಂದ ೬೦ ಕಿಮೀ ದೂರವಿರುವ ಬಾದಲಿಂಗ ಹತ್ತರ ಮಹಾಗೋಡೆ ನೋಡಲು ಶ್ರಮ ಪಡಬೇಕು. ಕೇಬಲ್ ಕಾರ ಮೂಲಕ ಮೇಲೆ ಹೋದರೂ ಕಡಿದಾದ ಗೋಡೆಯ ಮೇಲ್ಭಾಗದಲ್ಲಿ ನಡೆಯುವದು ಸಾಹಸದ ಕೆಲಸ. ಪಾವುಟಿಗೆಗಳಿಲ್ಲ, ೨೦೦ ಮೀ. ದಷ್ಟು ಗೋಡೆ ಮೇಲೆ ನಡೆಯುತ್ತ ಏರಬೇಕು,ಇಳಿಯುವಾಗ ಜಾರಿಕೆ, ಜನನಿಬಿಡತೆ ಹೆಚ್ಚು. ೨೧೦೦೦ ಕಿಮೀ ಕ್ಕೂ ಹೆಚ್ಚು ಉದ್ದವಿರುವ ಮಹಾಗೋಡೆ ನಿರ್ಮಾಣ, ಅದರ ಕತೆ ದೊಡ್ಡದು. ಬೀಜಿಂಗನ ಟಿಯಾನಮನ್ ಚೌಕ, ಫಾರಬಿಡನ್ ಪ್ಯಾಲೇಸ್, ತಾವೋ ಮಂದಿರ, ಸಮ್ಮರ್ ಪ್ಯಾಲೇಸ್, ಒಲಿಂಪಿಕ ಆವರಣ, ಪ್ರತಿಯೊಂದೂ ಆಕರ್ಷಕ. ಮಾವೊ ಸ್ಮಾರಕ ನೋಡಲು ಮಾತ್ರ ವಿದೇಶಿಯರಿಗೆ ಅವಕಾಶ ಇಲ್ಲ.

ಚೀನ ಭೇಟಿ ಪೂರೈಸಿ ನಾವು ಹಾಂಗಕಾಂಗದಲ್ಲಿ ಮೂರುದಿನ, ಮೆಕಾವದಲ್ಲಿ ಒಂದು ದಿನ ತಂಗಿದ್ದೆವು. ಈಗ ಅವು ಚೀನದ ಭಾಗವಾಗಿದ್ದರೂ ಇನ್ನೂ ಕೆಲ ವರ್ಷ ಸ್ವಾಯತ್ತವಾಗಿರಲಿವೆ. ಹಾಂಗಕಾಂಗ ಬೆಳವಣಿಗೆ ಅಸಾಧಾರಣವಾದುದು. ಸುಮಾರು ೧೬೦ ನಡುಗಡ್ಡೆಗಳನ್ನೊಳಗೊಂಡ ಹಾಂಗಕಾಂಗದ ಸೌಂದರ್ಯ ಮತ್ತು ಅದರ ಭೌತಿಕ ಬೆಳವಣಿಗೆ ಕ್ರಿಯಾಶೀಲ ಮತ್ತು ಸೃಜನಶೀಲ ಮನುಷ್ಯನ ನಿರ್ಮಾಣದ ಉತ್ಕೃಷ್ಟ ಪ್ರತೀಕ. ಏನೂ ಇಲ್ಲದ ನಡುಗಡ್ಡೆಗಳಲ್ಲಿ ಏನೆಲ್ಲವನ್ನು ಸೃಷ್ಟಿಸಿರುವುದು ಮಾನವನ ಕರ್ತೃತ್ವ ಶಕ್ತಿಗೆ ಸಾಕ್ಷಿ.

ನಾವು ೧೯೪೭ರಲ್ಲಿ ಸ್ವಾತಂತ್ರ್ಯ ಪಡೆದರೆ ಚೀನ ೧೯೪೯ರಲ್ಲಿ ತಾಂತ್ರಿಕವಾಗಿ ಸ್ವತಂತ್ರಗೊಂಡಿತು. ಆದರೆ ಅಭಿವೃದ್ಧಿಯಲ್ಲಿ ಚೀನ ನಮಗಿಂತ ಎಷ್ಟೋ ಪಾಲು ಮುಂದಿದೆ. ಇದಕ್ಕೆ ಎರಡು ಮುಖ್ಯ ಕಾರಣಗಳೇನೋ ಎಂದು ಚೀನ ನೋಡಿದ ಮೇಲೆ ನನಗೆ ಅನಿಸಿದ್ದು. ಒಂದು, ಅದು ಅಳವಡಿಸಿಕೊಂಡ ಏಕಪಕ್ಷದ ಕಮ್ಯುನಿಷ್ಟ ಆಡಳಿತ. ಎರಡು, ಅದು ದೇವರು, ಮತ, ಧರ್ಮ ಮೌಢ್ಯಗಳನ್ನು ಬದಿಗಿಟ್ಟು ದುಡಿಮೆಯೇ ದೇವರು ಎಂಬ ತತ್ವವನ್ನು ಅನುಸರಿಸಿದ್ದು. ನಮ್ಮಲ್ಲಿ ಈ ಎರಡೂ ಸಾಧ್ಯತೆಗಳು ಅಸಂಭವವಾಗಿದ್ದವು. ನಾವು ಪ್ರಜಾಪ್ರಭುತ್ವವನ್ನು ಆಯ್ದುಕೊಂಡು ಅದನ್ನು ಭ್ರಷ್ಠ ಹಾಗು ಮತೀಯಗೊಳಿಸಿ ಅಭಿವೃದ್ಧಿ ಪಥದಲ್ಲಿ ಆಮೆ ನಡಿಗೆಯನ್ನು ಅನುಸರಿಸುವಂತಾದುದು ವಾಸ್ತವ.



(ಶಿಕ್ಷಣ ಇಲಾಖೆಯ ಆಯುಕ್ತರಾಗಿ ನಿವೃತ್ತರಾಗಿ ಈಗ ಧಾರವಾಡದಲ್ಲಿ ನೆಲೆಸಿರುವ ವೆಂಕಟೇಶ ಮಾಚಕನೂರ ಪ್ರವಾಸ ಕಥನಕಾರರಾಗಿ ಹೆಸರು ಮಾಡಿದವರು)

ನವಿಲುಗರಿ

ಸುಮುಹೂರ್ತ

ಗದರ್ ಗರಕ್ ಎಂದು ಕರಾರುವಕ್ಕಾಗಿ ನಮಸ್ಕಾರ
ಮಾಡುತ್ತಿರುವ ಮದುವೆ ಮಂಟಪದ ಹೂಬಾಗಿಲಿನ
ಸ್ವಯಂಚಾಲಿತ ಸ್ವಾಗತಕಾರಿಣಿ ಮುಗುದೆಯೇ ನಮಸ್ಕಾರ

ಅಲ್ಲಲ್ಲಿ ತಡವರಿಸಿದರೂ ಚಲನೆ ಪಕ್ಕಾ ಇದೆ. ಜೋಡಿ ಕೈಗಳ
ಬೆರಳು ಇನ್ನೇನು ಸ್ಪರ್ಶಿಸಿದಂತೆ ತೋರಿ ಹಿಮ್ಮೆಟ್ಟುವ ಸಮುದ್ರದ
ಅಲೆಗಳಂತೆ. ವಿಲಕ್ಷಣ ನಿನ್ನ ನಿಲುವು ವಿದೇಶಿ ಸೊಸೆ ಮೊದಲ

ಬಾರಿ ಸೀರೆ ಉಟ್ಟಂತೆ ಅಥವಾ ಹಯವದನದ ಪದ್ಮಿನಿ ತನ್ನದೇ
ರುಂಡವನ್ನು ಇನ್ನಾರೊಂದಿಗೋ ಬದಲಿ ಮಾಡಿಕೊಂಡಂತೆ.
ಏಕದಂ ಮಜೇದಾರ ನಾವೀನ್ಯ ಈ ಕೊಂಕಿಸುವ ಕೊರಳಿನ

ಅಪರಿಚಿತತೆಯಲ್ಲಿದೆ. ಕಣ್ಣಿಗೆ ಕಣ್ಣು ಸೇರಿ ಇನ್ನೇನು ಅನ್ನುವಷ್ಟರಲ್ಲಿ
ಕಚಕ್ ಎಂದು ಆಭರಣದೊಂದಿಗೇ ಹೊರಳಿಬಿಡುತ್ತದೆ
ದೇವಿಮನೆ ಘಟ್ಟದ ತಿರುವಿನ ನಾಟಾ ಲಾರಿಯಂತೆ, ವಾರಿಗೆಯವಳ

ಉತ್ಕರ್ಷ ನೋಡಲಾಗದೆ ಫಕನ್ನೆ ಇನ್ನೆಲ್ಲೋ ನೋಡುವ
ಬಡ ಗೃಹಿಣಿಯ ನಿರುಪಾಯ ಗತ್ತಿನಂತೆ. ಎಲ್ಲ ಮದುವೆಯಲ್ಲೂ
ಇರುವ ಇದೊಂದೇ ಸೀರೆಯಲ್ಲಿ ನಿಂತಿರುತ್ತೀ ಎಂಬುದು ಎಲ್ಲರ

ಗಮನಕ್ಕೂ ಬಂದಿರುತ್ತದೆ ಎಂಬುದನ್ನು ನಿನ್ನ ಗಮನಕ್ಕೆ
ತಂದುಕೊಳ್ಳಬೇಡ. ಒಳಗೆ ಹೋದವರಾರೂ ನಿನ್ನನ್ನು ಕಡೆಗಣ್ಣಲ್ಲಿ
ನೋಡುತ್ತಾ ಹೆಹೆಹೆ ಎಂದು ಮಳ್ಳರಂತೆ ನಕ್ಕು ಹೋದರೇ ಹೊರತು

ಪ್ರತಿ ನಮಸ್ಕಾರ ಮಾಡಲಿಲ್ಲ ಎನ್ನುವುದರ ಬಗ್ಗೆ ದಯವಿಟ್ಟು
ಬೇಸರಬೇಡ. ತಮ್ಮತಮ್ಮ ದೈನಿಕವನ್ನು ತಾವೇ ಧಾರಾವಾಹಿ
ಮಾಡಿಕೊಂಡು ತಾವೇ ಬರೆದುಕೊಂಡ ಪಾರ್ಟುಗಳಲ್ಲಿ ಇದ್ದಾರವರು,

ಡೈಲಾಗು ಮರೆತರೆ ಎಂಬ ಆತಂಕವುಂಟು ಎಲ್ಲರಿಗೂ ಮತ್ತು ನಿನ್ನ ಬಗ್ಗೆ
ಸೂಕ್ಷ್ಮ ವಿಚಿತ್ರ ಭಯ. ಚೂರೂ ಮಾಸದಂತೆ ಬಿಡಿಸಿಟ್ಟ ನಗೆಯ ನಿನ್ನ
ಯಾಂತ್ರೀಕತೆಯೇ ಅವರನ್ನು ಹಂಗಿಸುತ್ತದೆ, ಹೀಗಾಗಿ ಕಣ್ಣು

ತಪ್ಪಿಸುತ್ತಾರೆ. ಮುಹೂರ್ತ, ಉಡುಗೊರೆ, ಫ್ಯಾಮಿಲಿ ಸೆಲ್ಫಿ, ಕೆಲವರನ್ನೇ
ಗುಟ್ಟಾಗಿ ಬದಿಯ ರೂಮಿಗೆ ಕರೆದು ಕೊಡುವ ಮುನ್ನ ಪ್ಲಾಸ್ಟಿಕ್
ಚೀಲದೊಳಗೊಮ್ಮೆ ನೋಡಿ ಕೈಗಿತ್ತು ಕಾಲಿಗೆ ಬೀಳುವುದು ಇತ್ಯಾದಿ

ಒಳಗೆ ನಡೆದಿರುವಾಗ ಕೊನೇ ಗಳಿಗೆಯಲ್ಲಿ ದಾಪುಗಾಲಲ್ಲಿ ಧಾವಿಸಿ
ಬಾಳೆಲೆ ಸೀಟು ಹಿಡಿದವರು ಮ್ಯೂಸಿಕಲ್ ಚೇರ್ ಮೇಲೆ ಕೂತವರಂತೆ
ಭಯಂಕರ ತಟಸ್ಥ ಸಮಾಧಾನ ಹೊಂದುವಾಗ ನಿನ್ನನ್ನು ಸ್ವಿಚ್ ಆಫ್


ಮಾಡಲು ಮರೆತರೆಂದು ದುಃಖಿಸಬೇಡ. ಎದುರು ಯಾರೂ ಇರದಿದ್ದರೂ
ನಿಗದಿತ ಲಯದಲ್ಲಿ ಇನ್ನೂ ಜಾರಿಯಲ್ಲಿರುವ ನಿನ್ನ ನಮಸ್ಕಾರಕ್ಕೆ
ಅರ್ಹವಾದ ಲೋಕ ಇಲ್ಲೇ ಇದೆ. ರಾಶಿ ಚಪ್ಪಲಿ ಕೊಡೆ ಬೈಕು ಕಾರು

ಮಳೆಯಲ್ಲಿ ನೆನೆಯುತ್ತಿರುವ ಮರಗಳು, ಎದುರಿನ ಕಾಂಪೌಂಡಿನಿಂದ
ಕೈಬೀಸುತ್ತಿರುವ ದಾಸಾಳ ನೆಲ್ಲಿ ಸುಗಂಧಿ ಲಲ್ಲೆಗರೆವ ಲಿಲ್ಲಿ ಎಲ್ಲವೂ ನಿನ್ನ
ಗಮನ ಸೆಳೆಯಲು ಒದ್ದಾಡುತ್ತಿವೆ. ಆಟೋ ಟೆಂಪೋದಲ್ಲಿ ನಿಂತೇ ನೀನಿಲ್ಲಿಗೆ


ಪಯಣಿಸಿದಾಗ ನಿನ್ನ ಮೋಹದಲ್ಲಿ ಬಿದ್ದ ಮಳೆ ಮತ್ತೆ ಹಿಂಬಾಲಿಸಲೆಂದೇ
ನಿಂತಿದೆ. ಕುಟುಂಬವೊಂದನ್ನು ತಂದಿದ್ದ ಟ್ಯಾಕ್ಸಿ ಚಾಲಕ ಬಾಬು ಈ ಅಪರಿಚಿತ
ಮದುವೆಯೂಟ ನಯವಾಗಿ ತಪ್ಪಿಸಿಕೊಂಡು ಆವರಣದ ಮಾನ ಕಾಪಾಡುವನು

–ಜಯಂತ ಕಾಯ್ಕಿಣಿ





ಚಿತ್ರ : ಸಂಘಮಿತ್ರೆ



ಸ್ವಯಂಸಂಭ್ರಮೆ!

ಮಜ್ಜನದ ತೊಟ್ಟಿಯಲಿ ಅತಿಲೋಕ ಸುಂದರಿ
ಅಸುನೀಗಿದರು ನಾಟ್ಯವಾಡುತ್ತಲೇ ನೀಲಾಂಜನೆ
ನೀರವತೆಗೆ ಜಾರಿದರು
ಸ್ವಯಂಸಂಭ್ರಮೆ ಗೋಡೆಗೆ ಬಣ್ಣ ಹಚ್ಚುವುದನ್ನು
ಬಿಡುವುದಿಲ್ಲ

ಮೂಟೆ ಕಟ್ಟಿಟ್ಟ ಸಿರಿಯಾ ಮಕ್ಕಳ 'ಸಾಲು ಹೆಣ'ದ ಚಿತ್ರ
ಕಂಡರೆ ಸಿಕ್ಕ ಮಕ್ಕಳೆಲ್ಲ ತನ್ನವೇ ಎಂಬಂತೆ ಮುತ್ತಿಟ್ಟು
ಬೀದಿಯಲ್ಲಿ ಬಿದ್ದ ನೆತ್ತರಲ್ಲಿ ಹೊಸ ನಾಳೆಯ
ಸೂರ್ಯನ
ಬಿಡಿಸುತ್ತಾಳೆ

ಯಾರೋ ಕಣ್ಣಿಗೆ ಮಣ್ಣು ಕೆಸರೆರೆಚಿ ಮಾಯವಾದರು
ಓಕುಳಿಯ ರಂಗು ಮುಖಕ್ಕೆ ಮೆತ್ತಿಕೊಂಡ ಖುಷಿಯಲ್ಲಿ
ಕಣ್ಣು, ತುಟಿಗಳಲ್ಲಿ ಹೊಳಪು ಸೂಸುತ್ತ ದಿವ್ಯತೆಯಲ್ಲಿ
ಮೀಯುತ್ತಾಳೆ

ಅನಾಥತೆಯೇ ನೆವವಾಗಿ ಕಲ್ಲೇಟು ತಿಂದ ಬೀದಿ ನಾಯಿ
ಕುರ್ರೋ ಮರ್ರೋ ಎಂದು ದಿಕ್ಕೆಟ್ಟು ಓಡಿ ನರಳುವಾಗ
ತಪ್ಪಲೆಯಲ್ಲಿ ಹಾಲನ್ನ ಕಲೆಸಿ ಮನೆಯೆದುರು ಕೂತು
ತುತ್ತುಣಿಸುತ್ತಾಳೆ

ನಿಮ್ಮ ಕೆಣಕು, ಕೆಸರು, ಕ್ರೌರ್ಯ, ಕಚಡಾತನಗಳೆಲ್ಲ
ಬೆಳಕು ಬಣ್ಣವಾಗಿ, ಹಸಿರಾಗಿ, ಜೀವದುಸಿರಾಗಿ
ಸ್ವಯಂಪ್ರಭೆಯ ಸೂರ್ಯ ಚುಕ್ಕೆಗಳಾಗುವುದನ್ನು
ತಪ್ಪಿಸಲಾಗುವುದಿಲ್ಲ!

–ಎಂ.ಆರ್. ಕಮಲ

ಮರೆತದ್ದು

ಅಲ್ಲಿ ಕಾಣುವ ಪುಟ್ಟ ಕೆರೆಯಲ್ಲಿ
ಹುಡುಕಿದೆ, ಮರೆತದ್ದು ಸಿಕ್ಕೀತೆಂದು

ಎಷ್ಟೊಂದು ಬಿಂಬಗಳು ಅಲ್ಲಿ:


ದಡದಲ್ಲಿ ನಿಂತಿರುವ ಮರಗಿಡಗಳು
ಕೊಂಬೆಕೊಂಬೆಗೆ ಕುಳಿತ ಹಕ್ಕಿಗಳು
ಬಾನು ತುಂಬಿದ ಮೋಡಗಳು
ನೆರಳು ಬೆಳಕಿನ ನಿಲ್ಲದ ಆಟಗಳು

ಪುಟ್ಟ ಕನ್ನಡಿಯಲ್ಲಿ ಇನ್ನೆಷ್ಟು
ಕಾಣಬಹುದು ಮುಖ;
ನಾ ಮರೆತದ್ದು ಎಲ್ಲಿ–
ಅಡಗಿರಬಹುದು, ಯಾವ
ಮುಖದಲ್ಲಿ?

ಮುಗಿಯದ ಪಯಣದಲ್ಲಿ
ದಾರಿ ಇನ್ನೂ ದೂರವಿದೆ,
ದೂರವೆನ್ನುವುದೂ ಒಂದು
ಭ್ರಮೆಯೇ?
ಕೊನೆಯ ನಿಲ್ದಾಣ ಯಾವ
ಹೊತ್ತಿಗೊ,
ಬರುವವನಿಗೆ ಇಲ್ಲ ಹೊತ್ತು
ಗೊತ್ತಿನ ವಿಧಿ–ನಿಯಮ



ಚಿತ್ರ: ರೂಪ ಹಾಸನ



ಮರೆತದ್ದು ಅಲ್ಲಿಯೇ ಇರಲಿ
ಅದರ ಜಾಗದಲ್ಲಿಯೇ,
ಅಚಾನಕ್ಕಾಗಿ ಅಲ್ಲಿಗೆ ಬಂದವರು
ನೋಡಲಿ ಅದನ್ನು
ಅರಳಿದ ಕಣ್ಣುಗಳಲ್ಲಿ
ಸೋಜಿಗದ ಸುಖದಲ್ಲಿ

–ಜೆ.ಪಿ. ಬಸವರಾಜು

ವ್ಯಗ್ರಗೊಂಡ ಮನುಷ್ಯನ ಎದಿರು


ಚಿತ್ರ: ರವಿ ಹಾಸನ

ಯಾಕೊ ಕಾಲ ಕನಲಿದಂತಿದೆ
ಸಾಕು ನಾಯಿ ಕೂಡ ವ್ಯಗ್ರವಾಗುತ್ತಿದೆ
ಅಕಾರಣವಾಗಿ ಎರಗುತಿದೆ

ಅಕಾಲದ ಮಳೆಗೆ
ಬೆಳೆ ಒಡ್ಡಿಕೊಳ್ಳದು
ಬಿರು ಬಿಸಿಲಿನ ಧಗೆ
ಸರ್ವ ಋತುವಾಗಿ

ಅರೆಪಾವು ನೆತ್ತರು
ನಾಳಗಳೊಳಗೆ ಸಣ್ಣಗೆ
ಕುದಿಯುವುದು
ಹೊಟ್ಟೆಯೊಳಗೆ ಕಾಡ್ಗಿಚ್ಚು
ವ್ಯಾಪಿಸುವುದು




ಹೊತ್ತು ಸದ್ದಿಲ್ಲದೆ
ಹೋಗುವಂತೆ ಕಾಣುತ್ತಿಲ್ಲ
ಮುಳ್ಳುಗಳು ಕೆದರಿ
ಮೈಮೇಲೆ ಬೀಳುವಂತಿವೆ

ಖೂಳ ಖಳ ಕಾಲವೇ
ವಿರಮಿಸು ಕೊಂಚ
ವಿಹ್ವಲ, ತಳಮಳಗಳ
ಏಣಿಯಾಟಕ್ಕೆ ತಡೆ ಹಾಕು

–ತಾರಿಣಿ ಶುಭದಾಯಿನಿ

ಬಾಗಿಲು ತೆರೆದು–



ಚಿತ್ರ : ಸಂಘಮಿತ್ರೆ

ಬೆಳಕು
ಮತ್ತು
ಗಾಳಿ ಒಳಬಂದವು

ಕತ್ತಲೆ
ಮತ್ತದರ
ಕುರುಹು ಮಾಯವಾದವು

ಚೌಕಟ್ಟು
ಹಿಡಿದಿಟ್ಟ
ಬಾಗಿಲುಗಳು ತೆರೆದು ನಕ್ಕವು

ಒಳ
ಮತ್ತು
ಹೊರಗೆಲ್ಲ ಸೇರಿ ಒಂದಾದವು



ಮುಚ್ಚು
ಮತ್ತು
ಬಿಚ್ಚು ಒಂದರೊಳಗೊಂದು

ಅರಿವು
ಮತ್ತು
ಇರುವು ಒಟ್ಟಾದವು

ಮಾತು
ಹಾಡು
ಕೂಡಿದ ಹಾಗೆ

ಹೀಗೆ,
ಶಬ್ದ ನಿಶ್ಶಬ್ದ
ಲಜ್ಜೆ ಸಂಗಮದಂತೆ

ಚಿಲಕವಿಲ್ಲದ
ಬಾಗಿಲು
ಹೊಸ್ತಿಲಿಲ್ಲದ ಮನೆ

ಬಾಗಿಲು ತೆರೆದಾಗ ಕಾಂಬುದು

ಮೋಕ್ಷವಲ್ಲ
ಕಲ್ಪವೃಕ್ಷವಲ್ಲ
ಮುಚ್ಚು ಬಿಚ್ಚಿನ ಹುಚ್ಚು ಹೊಳೆ .. ..

–ಸತೀಶ ಕುಲಕರ್ಣಿ

ಉಗುಳಬೇಕು ನುಂಗಬೇಕು


ಎಲೆಅಡಿಕೆ ಅಗಿಯುವದೊಂದು ಧ್ಯಾನವಂತೆ
ಹಲ್ಲು ದವಡೆ ತಾಲು ಲಾಲಾರಸದಲ್ಲಿ ಬೆರೆತು
ಅರೆದು ನುಣ್ಣಗೆ ಸಮರಸವಾಗಿ
ಜೀವದ ಭಾಗ, ಆತ್ಮದ ಭಾಗ.....ಆಹಾ!
ಪ್ರೇಮ ಕಾಮ ಆಧ್ಯಾತ್ಮ......
ಯಾವುದಕ್ಕೆ ಬೇಕಾದರೂ ಸಲ್ಲುವ ರೂಪಕ.



ಧ್ಯಾನವೂ ಒಂದು ಚಟವೇ.
ಎಂದಿದ್ದರೂ ಹೊರಬರಲೇಬೇಕು.
ಉಗುಳಲೂ ಆಗದೆ ನುಂಗಲೂ ಆಗದೆ....
ಎಂಬ ಕಳ್ಳ ತಳಮಳವಾದರೂ ಯಾಕೆ?
ಉಗುಳುವುದೇ ತಾನೆ ಲೋಕರೂಢಿ!
ಭಟ್ಟರು ಶೆಟ್ಟರು ದಲಿತರು ಸಾಬರು
ಯಾರು ಉಗುಳಿದರೂ ಉಳಿಯುವದು
ಬರೀ ಕೆಂಪು ಕಲೆ.

ಹುಚ್ಚು ಹುಡುಗೀ ಇಷ್ಟಕ್ಕೆಲ್ಲ ಅಳುತ್ತಾರ!
ನಿನಗೇನು ಹೊಸದಾ ಕೆಂಪುಕಲೆ ಧರಿಸುವದು?
ಗರ್ಭದ ಒಳಸುಳಿಗಳಿಂದ ನುಗ್ಗಿಬಂದು
ವಿಹ್ವಲಗೊಳಿಸುವ ಸ್ರಾವದ ಮಾಮೂಲಿ ನೋವು
ಧ್ವನಿಯಿಲ್ಲದ ಒಂದು ಚೀತ್ಕಾರ ....
ಅಷ್ಟೇ! ಸುಮ್ಮನೆ ನುಂಗಬೇಕು.

–ಗೀತಾ ವಸಂತ






ಚಿತ್ರ: ರೂಪ ಹಾಸನ

ಕಥೆ

–ವೈದೇಹಿ



ಹಿಂಸೆ

ಧುಮ್ಮಿಕ್ಕಿ ಬರುವ ಅಳುವಿಗೆ ಕೈಯಡ್ಡ ಇಟ್ಟುಕೊಂಡು ಕುಳಿತೇ ಇದ್ದೇನೆ. ಕಸ್ತೂರಿ ಉಣ್ಣುತಿದ್ದಾಳೆ. ಅವಳಿಗೆ ನಾನು ಮೆಲ್ಲ ಕಣ್ಣೊರಸಿಕೊಂಡದ್ದು ಬಹಳ ಸುಖವೆನಿಸಿರಬೇಕು. ಅಂತೂ ಆಕೆ ಯಶಸ್ವಿಯಾಗುತಿದ್ದಾಳೆ. ಹೇಳಲು ಯಾವತ್ತೋ ಸಿದ್ಧ ಮಾಡಿಕೊಂಡಂತೆ 'ಅಳಬೇಡಿ, ಅಳಬೇಡಿ, ಛೆ, ನಮ್ಮ ಕೈಯಲ್ಲುಂಟ? ಹೇಳಿದ್ದರಲ್ಲ ದಾಸರು, 'ಗಟ್ಟಿಮಣ್ಣ ಶಿಶುವ ಮಾಡಿ ಹೊಟ್ಟೆಯೊಳಗೆ ಇರಿಸಲಿಲ್ಲ! ಕೊಟ್ಟ ದೈವ ಕೊಂಡು ಹೋದರೆ ಕುಟ್ಟಿಕೊಂಡು ಅಳುವೆ ಯಾಕೆ?' ಅಂತ. ... ಕಮಲಮಾಯಿ ಹೇಳುತಿದ್ದರು, ನೀವು ಮನಸ್ಸಿಗೆ ತುಂಬ ಹಚ್ಚಿಕೊಂಡಿದ್ದೀರಿ ಅಂತ. ಮತ್ತೆ? ಹಚ್ಚಿಕೊಳ್ಳದೆ? ಮದುವೆಗೆ ನೆರೆದ ಮಗಳು, ಕಾಗೆ ಕಚ್ಚಿಕೊಂಡು ಹೋದ ಹಾಗೆ ಮಾಯವಾದರೆ ಅಳದೆ ಮತ್ತೆ! ನನಗಾದರೆ ಹುಚ್ಚೇ ಹಿಡಿಯುತಿತ್ತು ನೀವೇ ಅಡ್ಡಿಲ್ಲ, ಮದುವೆಗೆ ಬಂದಿದ್ದೀರಿ, ಸಿಹಿಯೂಟ ಮಾಡುತಿದ್ದೀರಿ, ಧೈರ್ಯಸ್ಥೆಯಪ್ಪ'. ಎಲ್ಲವೂ ತಣ್ಣಗೆ, ಇಳಿದನಿ, ಪಿಸುದನಿ. ಸಂತೈಸಲೆಂದೇ ಕಾದವರಂತೆ ಅಲ್ಲೇ ಬೆನ್ನ ಮೇಲೆ ಕೈಯಾಡಿಸಿದಳು. ತೊಡೆಯನ್ನು ಮೆಲ್ಲ ತಟ್ಟಿದಳು. 'ಯಾರಾದರೂ ಏನು ತಿಳಿದುಕೊಳ್ಳುತ್ತಾರೆ, ಅಳಬೇಡಿ'–

ಅದಾಗಿ ಈಗಾಗಲೇ ನಾಲ್ಕಾರು ವರ್ಷಗಳು ಸಂದಿವೆ. ಆದರೆ ನನ್ನ ಒಡಲಿನ ಬೆಂಕಿಭುಗಿಲು ಮಾತ್ರ ಹಾಗೆಯೇ ಇದೆ. ಇನ್ನೂ ಈಗಲೂ ಹೇಳಲು ಕುಳಿತರೆ ಮುಗಿಯುವುದೇ ಇಲ್ಲವೇನೋ ಎಂಬ ಆತಂಕದಲ್ಲಿ ಬಾಯಿ ಮುಚ್ಚಿಕೊಂಡು ಇಷ್ಟು ವರ್ಷ ಇದ್ದೆ. ಹೇಳಿ ಒಮ್ಮೆ ಹೊರಹಾಕಿದರೆ ಈ ಸುಡುತ ಕಡಿಮೆಯಾಗಬಹುದೆ ಅಂತ ಎಣಿಸಿದ್ದು ಎಷ್ಟು ಸಲ! ಆದರೆ ಅದು ಆಗುವ ಮಾತಲ್ಲ. ಇದರೊಂದಿಗೇ ನಾನು ಬೂದಿಯಾಗಬೇಕು. . . .

ನಾನು ಹೇಳುತ್ತಿರುವುದು ಕೇಳಿ ಏನೋ ಮಹಾದುರಂತ ಘಟಿಸಿದೆ ಅಂತ ನೀವು ಅಂದುಕೊಳ್ಳಬಹುದು. ಅದು ಏನಂತ ಹೇಳಿದರೆ ಇಷ್ಟೆಯಾ ಅಂತಲೂ. ಇವತ್ತಿನ ದಿನ ನಡೆಯುತ್ತಿರುವ ನೂರಾರು ಎದೆ ಒಡೆದೇ ಹೋಗುವಂಥ ಘಟನೆಗಳನ್ನು ನೋಡೀ ನೋಡೀ ಈ ರೀತಿಯ ತಳಮಳಗಳು ತಳಮಳಗಳೇ ಅಲ್ಲ ಅಂತ ಯಾರಿಗೇ ಆಗಲಿ ಅನಿಸತೊಡಗಿದೆ. ಯಾವುದೂ ದೊಡ್ಡದೆನಿಸದ ಅದಕ್ಕಿಂತ ದೊಡ್ಡದಕ್ಕೆ ಹೋಲಿಸಿ ಅವಗಣಿಸುವ ಒಂದು ಹೊಸಬಗೆಯ ಜಡತ್ವವೇನೋ ಇದು, ಸಂದೇಹ ಅಷ್ಟೇ. ದೃಢ ಹೇಳಲಾರೆ. ಖಂಡತುಂಡವಾಗಿ ತೀರ್ಮಾನದಂತೆ ನುಡಿಯಲು ನನಗಿರುವ ಜಗತ್ತಿನ ಪರಿಚಯವಾದರೂ ಎಷ್ಟಂತ ಬೇಕಲ್ಲ! ಎಂತಲೇ ಯಾರ ಬಳಿ ಏನು ಹೇಳಿಕೊಳ್ಳಲೂ ಧೈರ್ಯ ವಿಶ್ವಾಸ ಸಾಲುತ್ತಿಲ್ಲ. ಇಷ್ಟಕ್ಕೂ ಹೇಳಿಕೊಳ್ಳಬೇಕೇಕೆ? ಹೇಳಿ ಹಗುರಾಗುವ ಮಾತೇ ಮಿಥ್ಯೆ ಅಲ್ಲವೆ?

ಅಂತೂ ಈ ನಾಲ್ಕು ವರ್ಷಗಳಲ್ಲಿ ಮನೆಯೊಳಗೇ ಇದ್ದು ಇದ್ದು ಮನಸ್ಸಿನೊಳಗೇ ಇದ್ದು ಇದ್ದು ನನಗೂ ಸಾಕು ಅನಿಸಿತ್ತೇನೋ. ಹೊರಟಿದ್ದೇನೆ. ಎಲ್ಲರೂ ಸಿಗುತ್ತಾರೆ, ಎಲ್ಲ ಮರೆತು ಬಂದಳಲ್ಲ ಅಂತ ಅವರಿಗೂ ಸಂತೋಷ, ನನಗೂ. ಒಮ್ಮೆ ಗತದಿಂದಲೂ ಸ್ವಗತದಿಂದಲೂ ಹೊರಬಂದು ನಿರುಮ್ಮಳಗೊಳ್ಳುತ್ತೇನೆ. ಸುಲೋಚನತ್ತೆ ಬೇರೆ ಹೇಳಿದ್ದಾರೆ. ಬಾ, ಜೊತೆಗೆ ನಾನಿರುತ್ತೇನೆ ಅಂತ. 'ಇವರು' ನೀನೂ ಬಾರೇ ಅಂತ ಮಾವನ ಮಗಳ ಮದುವೆ ನಿಶ್ಚಯ ಆದ ಲಾಗಾಯ್ತಿನಿಂದ ಒಂದೇ ಸವನೆ ಹೇಳುತಿದ್ದಾರೆ. ಆದರೆ ಹೋಗುವಾಗ ಅವರು ಜೊತೆ ಇರುತ್ತಾರೆ ಸರಿ, ಅಲ್ಲಿಗೆ ಹೋದ ಮೇಲೆ ಬೇರೆಯೇ, ಅಪರೂಪಕ್ಕೆ ಸಿಗುವ ಸಂಬಂಧಿಕರು, ಗೆಳೆಯರುಗಳಲ್ಲಿ ಮೈ ಮರೆಯುತ್ತಾರೆ. ಮೈ ಮರೆಯದಿರುವುದು ನಾನು ಮಾತ್ರ. 'ಮರೆ, ಇದಕ್ಕಿಂತ ಘೋರ ಘಟನೆಗಳು ಜಗತ್ತಿನಲ್ಲಿ ಎಷ್ಟು ನಡೆಯುವುದಿಲ್ಲ. ಎಲ್ಲ ಮರೆ. ಬದುಕು ನೆನಪುಗಳಿಗಿಂತ ಹೆಚ್ಚು ಮರೆಯುವುದರಲ್ಲೇ ಇದೆ. ಏನೋ, ಆಯಿತು ಹೋಯಿತು ಅಂತಿರಬೇಕು. ಅದರಲ್ಲೇ ನೇತಾಡುವುದಲ್ಲ. . .' ಅಂತ ಎಷ್ಟು ಸಲ ಹೇಳಿದರೋ. ಹೇಳುವಾಗ ಅವರಾದರೂ ಎಲ್ಲ ಮರೆತಂತೆ ಕಾಣುವುದು ಮಾತ್ರ.

'ಗಂಡಸರದು ಒಳ ಕಣ್ಣೀರು. ಅವಕ್ಕೆ ನಮ್ಮಂತೆ ಸರಿಯಾಗಿ ಹೋ ಅಂತ ಅಳಲಿಕ್ಕೂ ಇಲ್ಲ. ಒಂದು ಲೆಕ್ಕಕ್ಕೆ ಅವೇ ಪಾಪದವು ಕಣೇ . . .' ಅಂತ ಕರುಣೆಯ ಮಾತಾಡಿ ದುಃಖದಲ್ಲೂ ನಗೆಯ ಗೀಟು ಎಳೆದಿದ್ದಳು ಸುಲೋಚನತ್ತೆ,

***

ಬಂಧು ಬಾಂಧವ ಸ್ನೇಹಿತರನ್ನು ಕಾಣುವ ಈ ಕೌಟುಂಬಿಕ ಸಮಾರಂಭಗಳು ಎಷ್ಟು ಆಹ್ಲಾದಕರ! ಬಾರದೇ ವರ್ಷಗಳಾಗಿದ್ದಕ್ಕೋ ಏನೋ, ಊರುಮನೆಗೆ ಬಂದ ಸಂಭ್ರಮ. ಎಲ್ಲರನ್ನೂ ಕಾಣುತ್ತ ಮಾತಾಡುತ್ತ ಅವರವರ ಸುಖದುಃಖ ತಿಳಿಯುತ್ತ ಅಂತೂ ಒಳಗೇ ಸುಷ್ಮಾಳ ಜೊತೆಗೇ ಸಂಚರಿಸುತ್ತಿದ್ದ ಮನಸ್ಸು ತುಸು ಹೊರಗೆ ಬರಲು ಪ್ರಯತ್ನಿಸುತಿತ್ತು. ಎಲ್ಲರಂತೆ ಓಡಿಯಾಡಲು ನಾನು ಸಿದ್ಧಗೊಂಡಿದ್ದೆ.

ತನಗೆ ಗೊತ್ತಿರುವ ಸಂಬಂಧಿಕರು ಯಾರೂ ನನ್ನಲ್ಲಿ ಆ ಸುದ್ದಿ ಎತ್ತದಂತೆ ಬಂದುಕಟ್ಟು ಮಾಡಿದ್ದಳು ಸುಲೋಚನತ್ತೆ, ಮೊದಲೇ. ಆದರೂ ಕೇಳುವವರು ಕೇಳಿಯೇ ಕೇಳುವರು. ಸುಷ್ಮಾ ಇದ್ದಿದ್ದರೆ ಇಷ್ಟೊತ್ತಿಗೆ ನೀನೂ ಒಂದು ಮದುವೆ ಮಾಡುತ್ತಿದ್ದೆ ಇತ್ಯಾದಿ ಬಂದ ಲಾಗಾಯ್ತಿನಿಂದ ಹೇಳುವರು. ಹ್ಞೂ, ಹೌದು, ಏನು ಮಾಡುವುದು ಎನ್ನುವಾಗೆಲ್ಲ ನಾನು ಎಷ್ಟು ಧೈರ್ಯದಿಂದಿದ್ದೆ. ಕಣ್ಣಲ್ಲಿ ಒಂದು ಹನಿ ನೀರು ಬಂದಿರಲಿಲ್ಲ. 'ಇಗಾ ನಾನು ಕುಳಿತದ್ದು ಕಾಣು' ಎಂದಳು ಸತ್ಯತ್ತೆ. ಅವಳು ಮಂಟಪಕ್ಕೆ ಬೆನ್ನು ಹಾಕಿ ಪಟ್ಟಾಂಗಕ್ಕೆ ಕುಳಿತಿದ್ದಳು. ಅದನ್ನು ಕಂಡು ಎಲ್ಲಿಂದ ನಗೆ ಚಿಮ್ಮಿತೋ ನಂಗೆ. ಹೊಟ್ಟೆ ಬಿರಿಯ ನಕ್ಕೆ.

ಸತ್ಯತ್ತೆ, ಕುಸುಮ ಚಿಕ್ಕಿ, ಮಾಲತಿ ಚಿಕ್ಕಿ ಅವರವರ ಅಳಿಯಂದಿರು ಮಕ್ಕಳು, ಮೊಮ್ಮಕ್ಕಳು . . ಸದೂ ಮಾವಯ್ಯ, ಅರೂ ದೊಡಮ ಎಲ್ಲರ ಮಧ್ಯೆ ನಾನು ಒಂಚೂರು ಖುಶಿಯ ನಶೆಯೇರಿದಂತೆಯೇ ಆದೆ. ಇವರಂತೂ ದೂರದಿಂದಲೇ ನನ್ನನ್ನು ನೋಡುತ್ತ ಕಣ್ಣಲ್ಲೇ ತನ್ನ ಸಮಾಧಾನ ತಿಳಿಸುತಿದ್ದರು. ಸತ್ಯತ್ತೆಯನ್ನು ಕಾಣದೆ ಎಷ್ಟು ಕಾಲವಾಗಿತ್ತೋ. 'ಸತ್ಯತ್ತೇ, ನೀನೂ ಮುದುಕಿಯಾಗಿದ್ದಾ?'ಎಂದೆ, ಮುಂಚಿನಿಂದಲೂ ಸಲಿಗೆಯವಳು ಸತ್ಯತ್ತೆ, ನನ್ನನೊಮ್ಮೆ ಉದ್ದಕ್ಕೂ ನೋಡಿ. 'ಮುದುಕಿಯಾಗದೆ? ಊರಿಂದ ಮುಂಚೆ ಹುಟ್ಟಿಬಿಟ್ಟೆ, ಬೇಗ ಹುಟ್ಟಿದರೆ ಬೇಗ ಮುದುಕಿ ಆಗುತ್ತೇನಂತ ಯಾರೂ ಹೇಳಲೇ ಇಲ್ಲ ನೋಡು' ಎಂದು ಕುಳಿತಲ್ಲೇ ತೂಗಿ ನಕ್ಕಳು, ನಗಿಸಿದಳು. ಕೇಳಲೇನೋ ಕೇಳಿದೆ. ಸದ್ಯ, ಆ ಪ್ರಶ್ನೆಯನ್ನು ಆಕೆ ನನಗೆ ತಿರುಗಿಸಲಿಲ್ಲ. ನಾನಾದರೂ ಹೇಗಾಗಿದ್ದೇನೆ, ಈ ನಾಲ್ಕು ವರ್ಷಗಳಲ್ಲಿ ತಲೆಗೂದಲು ಉದುರಿ, ನರೆತು! . . .ಆಕೆ ಪಾಪ, ನನ್ನನ್ನು ನೋಡಿ ಏನೂ ಹೇಳಲಿಲ್ಲ. ಬದಲು 'ಹೇಗಿದ್ದೀಯೇ, ಬಾ ಕೂತುಕೋ, ಬಾ ಬಾ' ಎಂದು ಆಚೆಗಿದ್ದ ಕುರ್ಚಿಯನ್ನು ನನಗಾಗಿ ಯಾರ ಬಳಿಯೋ ಹೇಳಿ ಸರ್‍ರಂತ ಹತ್ತಿರ ಎಳೆಸಿಕೊಂಡಳು. ಸುಲೋಚನತ್ತೆ 'ಇರು, ಒಂದೇ ನಿಮಿಷ, ಬಂದೆ' ಎಂದು ಮಂಟಪಕ್ಕೆ ಹೋಗಿರುವುದರಿಂದ ನಾನು ಅಲ್ಲಿಯೇ ಕುಳಿತೆ. ಕುಳಿತು ಕೊಳ್ಳುತ್ತ ಸುಮ್ಮನೆ ಅತ್ತ ನೋಡಿದವಳಿಗೆ ತುಸು ದೂರದಲ್ಲಿ ಎರಡು ಕಣ್ಣುಗಳು ನನ್ನನ್ನೇ ನೋಡುತ್ತಿರುವುದು ಕಂಡಿತು. ಯಾರವಳು? ಕೆದಕಿಕೊಂಡರೆ ನೆನಪಾಗಲಿಲ್ಲ.

ಒಮ್ಮೆ ಅವಳು ಎದ್ದು ನಾನಿರುವಲ್ಲಿಗೆ ಬರಲು ಹವಣಿಸಿದಂತೆ ಕಂಡಿತು. ನಾನು ಸದೂ ಮಾವಯ್ಯನೊಂದಿಗೆ ಮಾತಾಡುತಿದ್ದವಳು, ಅದನ್ನು ಗಮನಿಸಿದೆ. ಇನ್ನೂ ಮೂವತ್ತರ ಸುತ್ತಿನ ಪ್ರಾಯವಿರಬಹುದು. ಮಾತಾಡುತ್ತ ಸುಮ್ಮನೆ ಅತ್ತ ತಿರುಗಿದರೆ ಸಾಕು, ಮುಗುಳು ನಗುತಿದ್ದಳು. ಎಷ್ಟು ಸಲ ಅದು ಎಷ್ಟು ಸಲ! ಗುರುತು ಪರಿಚಯ ಇಲ್ಲದವರು, ಇದ್ದವರೂ ಸಹ, ಸತತ ನಮ್ಮನ್ನೇ ನೋಡುತಿದ್ದರೆ ಒಂಥರ ಕಿರಿಕಿರಿಯಷ್ಟೆ ನನಗೆ ಕಿರಿಕಿರಿಯಾಗುವಷ್ಟು ಆಕೆ ನನ್ನನ್ನೇ ನೋಡುತಿದ್ದಾಳೆ. ಅಥವಾ ನಾನು ಅವಳನ್ನು ನೋಡುತಿದ್ದೇನೆ ಅಂತ ಅವಳಿಗೆ ಅನಿಸಬಹುದೆ?

ಎಪ್ಪತ್ತರ ಸದೂ ಮಾವಯ್ಯನಿಗೆ ಏನೋ ಸಂಕಟ. ಮಾತಾಡುತಿದ್ದಂತೆ, ಯಾರೊಡನಾದರೂ ಹೇಳಿ ಬಿಸಿಬಿಸೀ ನೀರು ಕಳಿಸು ಮಗೂ. ಇವರೆಲ್ಲ ಯಾಕೆ ಮದುವೆ ಮಾಡುತ್ತಾರೋ, ಹಾಗೇ ಜೋಡಿ ಮಾಡಿ ಕಾಡಿಗೆ ಕಳಿಸುವುದು ಬಿಟ್ಟು. ಮದುವೆಗೆ ಬರದೇ ನಿರ್ವಾಹವಿಲ್ಲ, ಬರಲು ಜೀವಕ್ಕೆ ಕೂಡುವುದಿಲ್ಲ– ಎಂದು ನಕ್ಕ. ನನಗೂ ನಗು ಬಂತು. 'ಬಿಸಿನೀರು ನಾನೇ ತರುವೆ ಮಾವಯ್ಯ, ಅದಕ್ಕೇನು' ಎಂದು ಅತ್ತ ಹೋದೆ. ಬಳಿ ಬರಲೆಂದು ಹವಣಿಸುತಿದ್ದ ಆಕೆ ಈ ಬಾರಿಯೂ ತಪ್ಪಿದಳು. ಹೀಗೆ ಎರಡು ಮೂರು ಸಲವಾಯಿತು.

ಉಡುಗೊರೆ ಮುಗಿಯಿತು, ಮದುಮಕ್ಕಳಿಗೆ ಆರತಿ ಎತ್ತಿದರು, ಅಕ್ಷತೆ ಸೇಚಿದರು. ಬಂದವರನ್ನು ಊಟಕ್ಕೆ ಎಬ್ಬಿಸಿದರು.

ಆಗಲೇ ಎಲೆ ಹಾಕಿಯಾಗಿತ್ತು. ನಾನೂ ಸುಲೋಚನತ್ತೆ ಒಂದು ಕಡೆ ಕುಳಿತೆವು. ಸುಲೋಚನತ್ತೆಯೊಡನೆ ಇದ್ದರೆ ಏನೋ, ಸುರಕ್ಷಿತಳಾಗಿದ್ದೇನೆ ಅಂತ, 'ನೀನು ಬರುತ್ತೀಯಾದರೆ ನಾನೂ ಬರುತ್ತೇನೆ' ಅಂತ ಒಪ್ಪಂದ ಮಾಡಿಕೊಂಡೇ ಬಂದಿದ್ದೆನಲ್ಲವೆ.

ನನ್ನ ಬಲಬದಿ ಎಲೆಗೆ ಯಾರೋ ಬಂದು ಕುಳಿತಂತಾಯಿತು. ಗೊತ್ತಾದರೂ ಯಾರೆಂತ ನಾನು ತಿರುಗಿ ನೋಡಲಿಲ್ಲ. ತಿರುಗಿ ನೋಡಬೇಕೆಂದೂ ಕಾಣದ ಅವಸ್ಥೆ ನನ್ನದು. ಅದಕ್ಕೇ ತಾನೆ, ಬಂದ ಲಾಗಾಯ್ತಿನಿಂದ ಎಲ್ಲರ ನಡುವಿದ್ದೂ ಸಾಧ್ಯವಾದಷ್ಟೂ ಸುಲೋಚನತ್ತೆಯ ಬೆನ್ನು ಬಿಡದೆ ಇದ್ದುದು. ಎಲೆ ಮುಂದೆ ಕುಳಿತ ಇಬ್ಬರೂ ನಮ್ಮೊಳಗೇ ಮಾತಿನಲ್ಲಿ ಮಗ್ನವಾಗಿದ್ದೆವು. ಆಚೆ ಬಲಕ್ಕೆ ಕುಳಿತವರು ಬಗ್ಗಿ ನೋಡಿದಂತಾಯಿತು. ಈಗ ಸಹಜವಾಗಿ ನಾನು ಅತ್ತ ತಿರುಗಿದೆ. ನೋಡಿದರೆ ಅವಳೇ, ತದೇಕ ನನ್ನನ್ನು ನೋಡುತಿದ್ದವಳು. ಕೇಳಿದಳು– 'ನೀವು. . . ಹೇಮತ್ತಿಗೆ ಅಲ್ಲವೆ?

ಹೌದು ಎಂದೆ.

ಸಶಬ್ದ ಚಿಟಿಕೆ ಹಾರಿಸಿ 'ಮತ್ತೆ! ಹೇಗೆ! ನನ್ನ ಊಹೆ ಹೇಗೆ! ನಾನು ಕಸ್ತೂರಿ, ಚಿಟ್ಟೆಮನೆ ಗೋಪಣ್ಣನ ಮಗಳು, ಕಸ್ತೂರಿ! ನೆನಪಾಯಿತೆ? ಆಗಿಂದ ನಿಮ್ಮ ಹತ್ತಿರ ಮಾತಾಡಬೇಕಂತ ಎಣಿಸಿದೆ, ಆಗಲೇ ಇಲ್ಲ. ನಿಮ್ಮ ಹಕ್ಕೈ ಎಲೆ ಖಾಲಿ ಇರುವುದು ಕಂಡಿತು, ತಡಮಾಡಿದರೆ ಸೀಟು ತಪ್ಪಿ ಹೋದೀತು ಅಂತ ಓಡಿ ಬಂದು ಕುಳಿತೆ. ಅಯ್ಯಮ್ಮ ನೀವು ಅಂತೂ ಸಿಕ್ಕಿದಿರಿ. ಒಂದು ಕ್ಷಣ ಬಿಟ್ಟಿದ್ದರೂ ಯಾರೋ ಬಂದು ಕುಳಿತು ನೀವು ತಪ್ಪಿಯೇ ಹೋಗುತಿದ್ದಿರಿ"

'!!!'

"ನಿಮ್ಮನ್ನು ನೋಡಿ ಎಷ್ಟು ವರ್ಷ ಆಯ್ತು. ಬಹುಶಃ ಇಂಥದೇ ಯಾವುದೋ ಮದುವೆಯಲ್ಲಿ. ಯಾವ ಮದುವೆ ಅಂತ ನನಗೂ ಈಗ ನೆನಪಿಲ್ಲ. ಸುಮ್ಮನೆ ಮದುವೆಗಿದುವೆಗೆ ಬರುವುದು, ಅಲ್ಲ? ಹನಿ ನೆನಪಿಲ್ಲದ ಹಾಗೆ ಮರೆಯುತ್ತದೆ. ಆದರೆ ನೀವು ಸಿಕ್ಕಿದ್ದು ಮಾತ್ರ ನನಗೆ ನೆನಪುಂಟು ನೋಡಿ! ನಿಮಗೆ? ಇರಲಿಕ್ಕಿಲ್ಲ, ಪಾಪ.. ..'

'(ಪಾಪ?) ಹೌದು. ನೆನಪಾಗುತ್ತಿಲ್ಲ'

'ಆಗೆಲ್ಲ ನೀವು ಹೇಗಿದ್ದಿರಿ! ಒಳ್ಳೆ ಬೆಳ್ಳಗೆ ಮುಖಗಿಖ ತುಂಬಿಕೊಂಡು. . . ನೀವು ಅಜ್ಜನ ಮನೆಗೆ ಬರುತಿದ್ದಿರಿ. ಅಮ್ಮ ಹೇಳುತಿದ್ದಳು ನೀವು ಗೌರಿಮಾಯಿಯ ಮಗಳು ಅಂತ. ನನಗೋ ನಿಮ್ಮೆದುರು ಬರಲು ಸಂಕೋಚ'

'ಯಾಕೆ?'

'ನೀವು ಪೇಟೆಯವರು ಅಂತ, ಅಷ್ಟೆ, ಮತ್ತೆಂತ! ನಾವೆಲ್ಲ ಇಣುಕಿ ಇಣುಕಿ ನೋಡುವುದು, ಬಾಗಿಲಿಗೆ ಕಿವಿ ಒತ್ತಿ ಹಿಡಿದು ನೀವೆಲ್ಲ ಮಾತಾಡುವುದನ್ನು ಕೇಳುವುದು. ನೆನೆದರೆ ಈಗ ನಗೆ ಬರುತ್ತದೆ' –ಬಾಯಿಗೆ ಕೈ ಅಡ್ಡ ಹಿಡಿದು ನಕ್ಕಳು ಕಸ್ತೂರಿ.

ಅವಳು ಮಾತಾಡುತಿದ್ದಂತೆ ಅವಳನ್ನೇ ನೋಡಿದೆ. .

'ಓ . . .ಹ್ಞಾ. . ಗೋಪುಮಾವನ ಮಗಳೇ! ತಿಳಿಯಿತು, ತಿಳಿಯಿತು. . .'

ಎಲೆಯ ಮೇಲೆ ಮದುವೆಯಡಿಗೆ ಬಡಿಸಲು ಸುರುವಾಯ್ತು. ಯಜಮಾನಿತಿಯಿಂದ ಅಭಿಗಾರ ಆಗುತ್ತಲೂ ಒಬ್ಬರ ಹಿಂದೆ ಒಬ್ಬರು ಓಡುನಡಿಗೆಯಲ್ಲಿ ಚಿತ್ರಾನ್ನ ಕೋಸುಂಬರಿ, ಸಾಸುವೆ, ಚಟ್ನಿ ಪಲ್ಯ, ...ಇನ್ನೂ ಉಣ್ಣಲು ಸುರುವಿಲ್ಲ. 'ಕೃಷ್ಣಾರ್ಪಣ' ಕಿವಿಗೆ ಬೀಳದೆ ಊಟಕ್ಕೆ ಕೈ ಹಚ್ಚುವಂತಿಲ್ಲ. ಅದುವರೆಗೆ ಇನ್ನೇನು, ಮಾತಾಡುವುದು ಬಿಟ್ಟರೆ?

ಸುಲೋಚನತ್ತೆ ಹೇಳಿದಳು, ಹುಡುಗನ ಕಡೆಯವರು ಅಂತದ್ದೇನೂ ಹೇಳುವಂತಿಲ್ಲವಂತೆ. ಇನ್ನೂ ಒಳ್ಳೆಯ ಕಡೆಯವರು ಸಿಗುತಿದ್ದರು. ಅಕ್ಕ ಅವಸರ ಮಾಡಿದಳು ಅಂತೆಲ್ಲ.

'ಅವಸರವೋ ಮತ್ತೇನೋ, ಮದುವೆಯಂತೂ ಆಯಿತಲ್ಲ. ಹುಡುಗನಿಗೆ ಒಬ್ಬಳು ಹುಡುಗಿ, ಹುಡುಗಿಗೆ ಒಬ್ಬ ಹುಡುಗ ಆಯಿತೇ' ಎಂದಳು ಕತ್ತುದ್ದ ಮಾಡಿ ಈಚೆ ಇಣುಕಿ ಕೇಳುತಿದ್ದ ಕಸ್ತೂರಿ. ಓ ಇದು ತೊಂಭತ್ತರ ಮೇಲೆ ತೊಗರಿ ಬೇಳೆಯೇ.

ಅವಳ ಗರಗಸ ದನಿಯೂ ಸೇರಿ ಆಕೆ ಹೇಳಿದ ಪರಿಯಿಂದ ಸುಲೋಚನತ್ತೆಗೆ ತಡೆಯಲಾರದಷ್ಟು ನಗು ಬಂತು. 'ಇದು ಯಾವ ಕೋನೇರಿ ಮಾರಾಯ್ತಿ, ಎಲ್ಲಿಂದ ಬಂದು ಸೇರ್‍ತು. . .' ಎಂದಳು ಪಿಸುವಾಗಿ. 'ಶ್ಯ್. ಗೋಪು ಮಾವನ ಮಗಳು ಅಂತೆ. ಗೋಪು ಮಾವ ನಿನಗೆ ಗೊತ್ತಿಲ್ಲ ಬೌಶ. ಅಮ್ಮನ ಕಡೆ ಸಂಬಂಧ. ಎಲ್ಲಿಂದ ಬಂದಳೋ, ನನ್ನ ಪಕ್ಕವೇ ಕುಳಿತುಕೊಳ್ಳ ಬೇಕೆನೆ' ಎಂದೆ ನಾನೂ, ಅಡ್ಡದಲ್ಲಿ.

ಗಮನದ ಅಗತ್ಯವೇ ಇಲ್ಲದವಳು ಈ ಕಸ್ತೂರಿ. ಹಸಕು ದನಿಯಲ್ಲಿ 'ಅಲ್ಲಿ ನೋಡಿ, ನಿಮ್ಮ ಸರೀ ಎದುರು ಸಾಲಿನ ಆ ತುದೀಯಲ್ಲಿ ಕುಳಿತವಳು ಯಾರು ಗೊತ್ತುಂಟ? ಮಾಧು ಚಿಗಪನ ಮೊಮ್ಮಗಳು. ಸಣಕಲು ಕಡ್ಡಿಯ ಹಾಗೆ ಇದ್ದವಳು ಹೀಗೆ ಆಗಿದ್ದಾ ದೇವರೆ! ದುಡ್ಡಿನ ಸೆಕೆ ಬಂದರೆ ಮತ್ತೆಂತ!. . .'

. . .ಸರಿಸರಿ, ಇದು ಊಟಕ್ಕಿಂತ ಹೆಚ್ಚು ಎಲ್ಲರನ್ನೂ ನೋಡಿ ಬಾಯಿ ಸಮೆಸಲು ಬಂದ ಆಸಾಮಿ. 'ಅಲ್ಲ, ಬಂದು ಬಂದು ನಿನ್ನ ಪಕ್ಕದಲ್ಲೆ!' ಮೆಲ್ಲ ನೂಕಿ ಛುಕ್ಕೆಂದಳು ಸುಲೋಚನತ್ತೆ. ಅತ್ತ ಅವಳ ಪಕ್ಕದ ಕುರ್ಚಿಗೆ ಯಾರೋ ಕರ್ಚಿಫು ಹಾಕಿಟ್ಟಿದ್ದರು. 'ಯಾರು ಬರುತ್ತಾರೋ' ಎಂದು ಅನುಮಾನಿಸುವುದರೊಳಗೆ ಇಲ್ಲಿ, ಜಾಗ ಇಲ್ಲಿ ತೆಗೆದಿಟ್ಟಿದ್ದೇನೆ ಬನ್ನಿ, ಎಂದು ಕರಕೊಂಡು ಬಂದ ವ್ಯಕ್ತಿ ಸೀಟು ತೋರಿಸುತ್ತಿರುವಂತೆ ಬಂದದ್ದು ಅವಳ ಬೀಗಿತ್ತಿ. 'ಓ ನೀವು!' ಎನ್ನುತ್ತ ಕರ್ಚಿಫು ತೆಗೆದು ಅಲ್ಲಿ ಕುಳಿತಳು. 'ಆಯಿತು, ಸರಿಯಾಯಿತು. ಇನ್ನು ನನ್ನ ಪಕ್ಕ ನನಗೆ, ನಿನ್ನ ಪಕ್ಕ ನಿನಗೆ' ಎಂದು ಗುಸುನುಡಿದಳು ಸುಲೋಚನತ್ತೆ.

'ಕೃಷ್ಣಾರ್ಪಣ' ಕೇಳಿಸಿತು. ಎಲ್ಲರೂ ಊಟ ಸುರುಮಾಡಿದರು. ಸಾರನ್ನ ಮುಗಿಯುವವರೆಗೂ ಯಾರೂ ಅಷ್ಟು ಮಾತಾಡರು. ಆಮೇಲೆ ಒಂದೊಂದೇ ಮಾತು ಮತ್ತೆ ಮೆಲುದನಿಯಲ್ಲಿ ಜೀವ ತಳೆಯುತ್ತದೆ. ಈ ಕಸ್ತೂರಿಯೋ ಪ್ರಾಯಶಃ ಮೌನ ದ್ವೇಷಿ; ಗೋಪುಮಾವನಂತೆಯೇ. ತನ್ನೊಳಗೇ ಎಂಬಷ್ಟು ಮೆಲುವಾಗಿ, ಆದರೆ ನನ್ನಿಂದ ಆಚೆ ದಾಟದಷ್ಟು ಗಟ್ಟಿಯಾಗಿ 'ಸಾರು ಉಂಚ ಉರಿ ಖಾರ ಅಲ್ಲ? ಊರುಮೆಣಸು ರಾಶಿ ಹಾಕಿದ್ದೊ. . .

'. . .'

'. . .ಹೌದ ಹೇಮತ್ತಿಗೇ, ಕಮಲ ಮಾಯಿ ಒಂದು ಬೇಡದ ಸುದ್ದಿ ಹೇಳಿದರು. ನಂಗೆ ಕೇಳಿದವಳಿಗೆ ಬಾಳಾ ಬೇಜಾರು ಆಯ್ತು. ಛೆ'

ಸಿಕ್ಕಿ ಬಿದ್ದೆನೆ! ಇಲ್ಲಿಗೆ ಮುಗಿಯಿತು ಎಂದುಕೊಂಡೆ. ಯಾಕೆ ಕೆಲ ಹೊತ್ತಾದರೂ ಮರೆಯಬೇಕು ಅಂತ ಆಸೆ ಪಟ್ಟರೆ ಎಲ್ಲ ಮರುಕಳಿಸುವಂತೆ ಕಾಣುತ್ತಿದೆ?

ಬಡಿಸುವ ಕ್ರಮಕ್ಕೆ ಸರಿಯಾಗಿ ಒಂದರ ಹಿಂದೆ ಒಂದು ಬಗೆಗಳು ಬರುತ್ತಲೇ ಇದ್ದವು. ಕಸ್ತೂರಿ 'ಅಂದಾ ಹೇಮತ್ತಿಗೆ, ಸುಷ್ಮಂಗೆ ಮದುವೆ ಸಮೆತ ಆಗಿರಲಿಲ್ಲ, ಅಲ್ಲ? ನಂಗೆ ಅದೆ ಅದೇ ನೆನೆದು ಹೊಟ್ಟೆ ಸುಡುತ್ತದೆ.' ಎಂದಳು. ನಾನು ಏನೊಂದೂ ಆಡದೆ ಸುಲೋಚನತ್ತೆಯ ಕಡೆಗೆ ತಿರುಗಿದರೆ ಅವಳು ಬೀಗಿತ್ತಿಯೊಡನೆ ಮಾತಿನಲ್ಲಿದ್ದಳು. ಆ ಬೀಗಿತ್ತಿ ಕಾಕತಾಳೀಯವಾಗಿ ಇಲ್ಲೇ ಬರಬೇಕೆ!

'ನಿಮಗಾದರೂ ಇನ್ನೊಬ್ಬಳಿದ್ದಾಳೆ. ನನಗೆ ಒಬ್ಬಳೇ ಮಗಳು, ಟಿ.ವಿ. ಯಲ್ಲಿದ್ದಾಳೆ. ವರದಿ ವಿಭಾಗದಲ್ಲಿ. ಈ ವರ್ಷ ಅವಳಿಗೊಂದು ಮದುವೆ ಮಾಡಬೇಕು. ಯಾರಾದರೂ ಇದ್ದರೆ ಹೇಳಿ. (ಯಾವ ಟಿ. ವಿ. ಕೇಳಬೇಕು ನೀವು, ಕೇಳುತ್ತಿಲ್ಲ. ಪರವಾಗಿಲ್ಲ) . . . ಅಲ್ಲ, ಕಮಲ ಮಾಯಿ ಹೇಳುತ್ತಲೂ ನಂಗೊಂದು ದುಃಖ ಆಗಿದ್ದೆಂದರೆ! (ಮತ್ತೆ ಅದೇ) ಅಜ್ಜಯ್ಯನ ತಿಥಿಯ ದಿವಸ

ಎಷ್ಟು ಓಡಾಡಿಕೊಂಡಿತ್ತಂತೆ ಹುಡುಗಿ! ಇಷ್ಟೊದ್ದ ಜಡೆಯಂತೆ! ನಾನು ಕಂಡಿಲ್ಲ. ಕಮಲ ಮಾಯಿ ಬಾಯಲ್ಲಿ ಕೇಳಿದ್ದು. ಎಲ್ಲ ವಿಷಯ ಕೇಳಿ ನನಗೇ ಎಷ್ಟು ಶಾಕ್ ಆಯ್ತು! ಇನ್ನು ನಿಮಗೆ ಎಷ್ಟಾಗಬೇಡ! . .. . ..(ಹೇಳಿ, ಸುದ್ದಿಯನ್ನು ರುಚಿಕರವಾಗಿ ಹೇಳಿ, ಹಿಗ್ಗಿಸಿ. . . ಹೇಳಲ್ಲವೇ?)

ಸ್ವೀಟು, ಜಹಾಂಗೀರು, ಬರುತ್ತಿದೆ. ಯಾಂತ್ರಿಕವಾಗಿ ಎಲ್ಲ ಎಲೆಗಳಿಗೂ ದಡದಡ ಉದುರಿಸಿಕೊಂಡು ಬಡಿಸುತ್ತ ಕರಿಪಾದಗಳು ಮುಂದೆ ದಾಟಿ ಹೋಗಿವೆ. ಕಸ್ತೂರಿ ಜಹಾಂಗೀರನ್ನು ಮುರಿಯುತ್ತ, 'ಇದಕ್ಕೆ ಬಣ್ಣ ಸಾಲದು. ಬಣ್ಣ ಹೇಗೆ ಇರಬೇಕಿತ್ತು, ಒಳ್ಳೇ ಕೆಂಪು ಕಿತ್ತಳೆಯಾಗಿ'

'ಹ್ಞಾ,' (ನೀ ಸಾಯಿ)

'ಥೊ. ಚಪ್ಪೆ ಬೇರೆ. ಸಕ್ಕರೆ ಇನ್ನೂ ಹಿಡಿಯುತಿತ್ತು, . . . ಅಂದಹಾಗೆ ಇದಕ್ಕೆ ಜಹಾಂಗೀರ್ ಎಂದು ಏಕೆ ಹೆಸರಿಟ್ಟರೋ. ಬಹುಶಃ ಜಹಾಂಗೀರನಿಗೆ ಈ ಸ್ವೀಟ್ ಇಷ್ಟ ಇದ್ದಿರಬಹುದು.' ನಕ್ಕಳು.

ನಾನು ಈಚೆ ಕಸ್ತೂರಿ ಕಡೆಗೆ ತಿರುಗಲೇ ಬಾರದೆಂದು ಶಪಥ ತೊಟ್ಟಂತೆ ಅತ್ತ ನೋಡುತ್ತ ಜಹಾಂಗೀರ ತುಂಡು ಮಾಡಿ ತಿನ್ನ ತೊಡಗಿದೆ. ಸುಷ್ಮಾಳಿಂದ ಹೊರಬಂದು ಸಿಹಿತಿಂಡಿ ತಿನ್ನುವ ನನ್ನನ್ನು ಕಂಡು ನನಗೇ ವಿಚಿತ್ರ ಅನಿಸುತಿತ್ತು. ಸಿಹಿಗೂ ದುಃಖಕ್ಕೂ ಸಂಬಂಧವೇ ಇಲ್ಲ. ಅದೆಲ್ಲ ಸುಮ್ಮನೆ. ಅವತ್ತು ಎಲ್ಲ ನಡೆದು ಕಣ್ಣು ಕತ್ತಲೆ ಕಟ್ಟಿದಾಗ ಒಲೆಯ ಮೇಲಿಂದ ಯಾರೋ ಹಾಲು ಬಗ್ಗಿಸಿ ತಂದು ಕೊಟ್ಟಿದ್ದರು. ಕುಡಿದಿದ್ದೆ. ಅದನ್ನು ಕಂಡವರು ಯಾರೋ 'ಅಯ್ಯಮ್ಮ! ಅಷ್ಟೆಲ್ಲ ಗೋಳಿನ ನಡುವೆ ಹಾಲು ಕುಡಿದಳೆ!' ಎಂದರಂತೆ. ಶತ್ರುಗಳ ಬಗ್ಗೆ 'ಸತ್ತರೆ ಹಾಲು ಕುಡಿಯುತ್ತೇನೆ' ಎಂಬಂಥ ಮಾತು ಹುಟ್ಟು ಹಾಕುವ ಜನ ಇವರು. ಹಾಲು ಕುಡಿಯುವುದು ಎಂದರೆ ದೊಡ್ಡ ಸುಖವೆಂಬ ಕಾಲದಲ್ಲಿ. ಈಗ? ಹೊಟ್ಟೆಗೆ ಬಿದ್ದ ಬೆಂಕಿಯನ್ನು ಕಾಣಲಾರದವರು ಹೀಗಲ್ಲದೆ ಮತ್ತೆ ಏನು ಮಾತಾಡಿಯಾರು?

ಈ ಮರುಳು ಹೇಳಿದ್ದು ಸುಳ್ಳಲ್ಲ. ಜಹಾಂಗೀರಿಗೆ ಸಕ್ಕರೆ ಕಡಿಮೆ ಹೌದು.

ಅತ್ತಣಿಂದ ಅವಳು ಮೈ ಮುಟ್ಟಿದಳು. ನಾನು ತಿರುಗಲಿಲ್ಲ. ಮತ್ತೆ ಮುಟ್ಟಿದಳು. ದಾಕ್ಷಿಣ್ಯಕ್ಕೆ ತಿರುಗಿದೆ.

'ಅಲ್ಲ, ನನಗೆ ಅದೇ ನೆನಪಾಗುತ್ತಿದೆ. ಅಂಥಾ ಬೆಳೆದ ಮಗಳನ್ನು ಹೇಗೆ . . . ಈ ಲೋಕದಲ್ಲಿ ಮೊದಲು ಹುಟ್ಟಿದವರು ಮೊದಲು ಸಾಯಬೇಕು, ಅಂತಹ ಒಂದು ರೂಲ್ಸ್ ಇರಬೇಕಿತ್ತು. ಕಣ್ಣಮುಂದೆಯೇ ಆ ಹುಡುಗಿಯನ್ನು ಕಳಿಸಿಕೊಡುವುದೆಂದರೆ. . .?'

ಈಗ ಮಾತ್ರ ನಾನು ತಡೆಯದಾದೆ. ಹಳೆಯ ನೆನಪುಗಳು ಉಕ್ಕಿ ಉಕ್ಕಿ ಬಂದು ಎಲೆ ಕಾಣದಾಯಿತು. ದೊಡ್ಡ ಊಟದ ಪಂಕ್ತಿಯಲ್ಲಿ ನಡುವೆ ಎದ್ದುಹೋಗುವಂತಿರಲಿಲ್ಲ. ಪೇಟೆಯಲ್ಲಿ ಬದಲಾಗಿರಬಹುದು. ಆದರೆ ಊರಿನಲ್ಲಿ ಈಗಲೂ ಹಿರಿಯರು ಮುಗಿಸಿ ಏಳದೆ ನಡುಊಟದಲ್ಲಿ ಯಾರೂ ಏಳುವ ಕ್ರಮವಿಲ್ಲ. ಅದೇ ಅಭ್ಯಾಸವಾಗಿದೆ. ನಾನಂತೂ ಎದ್ದು ಹೋದರೂ ಎಲ್ಲರ ಕಣ್ಣಿಗೆ ಬೀಳುತಿದ್ದೆ. ನನ್ನ ಸಂದರ್ಭಕ್ಕೆ ಹೊಂದುವಂತೆ ಏನೇನೋ ಅಪಕಲ್ಪನೆಗೆ ಈಡಾಗುತಿದ್ದೆ. ಎಂತಲೇ ಏಳಹೋಗದೆ ಎತ್ತಲೋ ನೋಡುತ್ತ ಕುಳಿತುಕೊಂಡೆ. ಗೆಲು ಹಚ್ಚಿಕೊಂಡು ಹೊರಟು ಬಂದಿದ್ದ ನಾನು ಎಷ್ಟು ಬೇಗ ಕರಗಿ ಹೋಗುತಿದ್ದೇನೆ. ಅಯ್ಯೋ, ಈ ಅಳು ಬೇಡ ನನಗೆ. ಈ ಹೊತ್ತಿಗಂತೂ, ಈ ಶುಭ ಸಂದರ್ಭದಲ್ಲಂತೂ, ಅದೂ ಊಟ ಮಾಡುವಾಗಲಂತೂ ಬೇಡವೇ ಬೇಡ. ಈ ಕಸ್ತೂರಿ ಇಲ್ಲಿ ಯಾಕಪ್ಪಾ ಬಂದು ಕುಳಿತಳು. ಒಂದು ಬಿರುಸಿನ ಮಾತು ಆಡಿ ಅವಳ ಬಾಯಿ ಮುಚ್ಚಿಸಲೆ? ಅದು ದೊಡ್ಡದಲ್ಲ. ಆದರೆ ಅಲ್ಲಿಗೆ ಅವಳ ಅಧಿಕ ಮುಗಿಯದು. ಅಷ್ಟೇ ಅಲ್ಲ, ಅವಳು ನಿಜಕ್ಕೂ ತಾನು ದುಃಖ ಮಾತಾಡಿಸುತ್ತಿದ್ದೇನೆಂದು ನಂಬಿಕೊಂಡೆ ಮಾತಾಡಿಸುತಿದ್ದಾಳೆ. ನಿಮ್ಮ ನೋವಿಗೆ ನನಗೂ ನೋವಾಗಿದೆ ಎಂದು ನಂಬಿಸಲು ಹೆಣಗುತ್ತಿದ್ದಾಳೆ. ತನ್ನ ಒಳಗಿರುವ ತನಗೇ ತಿಳಿಯದಂತೆ ಕುತೂಹಲ ಸಸೆಯುವ ವಿಕಾರ ಸ್ವರೂಪದ ಕುರಿತು ಎಚ್ಚರವಿಲ್ಲದವಳಾಗಿದ್ದಾಳೆ. 'ಟಿ.ವಿ. ವರದಿಗೆ ಮಗಳಲ್ಲ, ನೀನೆ ತಕ್ಕವಳು' ಎಂದು ಬಿಡಲೆ?

ಹೋಳಿಗೆ ಬಂತು. ಹಾಕಿಸಿಕೊಂಡು, 'ನನಗೇ ಇಷ್ಟಾದ ಮೇಲೆ ನಿಮಗೆ ಎಷ್ಟಾಗಬೇಕು? ದೇವರು ಕೊಡಬಾರದು, ಕೊಟ್ಟ ಮೇಲೆ ತೆಗೆದುಕೊಂಡು ಹೋಗಬಾರದು.. . ಮನುಷ್ಯ ಎಂದ ಮೇಲೆ. . .' ಮಾತಾಡು ಆಡುತ್ತಲೇ ಎಲೆಯಲ್ಲಿದ್ದ ಎಲ್ಲವನ್ನೂ ಖಾಲಿ ಮಾಡುತಿದ್ದಾಳೆ ಕಸ್ತೂರಿ. ಥೇಟ ಗೋಪು ಮಾವನ ಮಗಳೇ. ಅವನೂ ಅಷ್ಟೆ. ಅದು ಇದು ಅಂತಲ್ಲ, ಎಲ್ಲವನ್ನೂ ಮಾತಾಡುತ್ತಲೇ ಹೋಗುವುದು. ಪಾಪ, ಹೆಂಡತಿ ಎಷ್ಟು ಬುದ್ಧಿ ಹೇಳುತಿದ್ದಳು, ದಿನನಿತ್ಯವೂ.

'ನೀವು ಹೋಳಿಗೆ ಹಾಕಿಸಿಕೊಳ್ಳಲೇ ಇಲ್ಲ. ಚೆನ್ನಾಗಿತ್ತು. ಅರ್ಧವಾದರೂ ಹಾಕಿಸಿಕೊಳ್ಳ ಬಹುದಿತ್ತು, ಒಳ್ಳೆ ಮೆತ್ತಗಿತ್ತು. ತುಪ್ಪ ಹಾಕಿಸಿಕೊಳ್ಳಬಾರದು ಅದಕ್ಕೆ, ಅಹ್ಞ; ಹಾಲು ಸಕ್ಕರೆಯೇ ಸಮ ಏನಂತೀರಿ?'

ಊಟ ಮುಗಿಯುವ ವರೆಗೂ ಇವಳಿಂದ ಬಿಡುಗಡೆಯಿಲ್ಲ. ಸುಲೋಚನತ್ತೆಗೋ ಅವಳ ಬೀಗರೊಡನೆ ಮಾತು ಮುಗಿಯುತ್ತಲೇ ಇಲ್ಲ. ಊಟದ ದಕ್ಷಿಣೆ ಕೊಡಲು ಬಂದರು. ದಕ್ಷಿಣೆ ತೆಗೆದುಕೊಂಡಳು ಕಸ್ತೂರಿ. ನಾನು ಬೇಡವೆಂದೆ. 'ಇದು ಹುಡುಗಿಯ ಮನೆ ದಕ್ಷಿಣೆ. ಹತ್ತು ರುಪಾಯಿ, ಅಡ್ಡಿಯಿಲ್ಲ.' ಮತ್ತೆ ಪರಚಿದಳು 'ನೀವು ದಕ್ಷಿಣೆ ಯಾಕೆ ಹಿಡಿಯಲಿಲ್ಲ? ಊಟದ ದಕ್ಷಿಣೆ ಬಿಡಬಾರದು. ಊಟ ಕೊಟ್ಟವರಿಗೆ ಒಳ್ಳೆಯದಲ್ಲ.'

'. . .'

'ಈಗೆಲ್ಲ ಹೀಗೇ, ಒಬ್ಬರು ಹಿಡಿಯುವುದು, ಒಬ್ಬರು ಬಿಡುವುದು. ಹೀಗೇ ಅದರೆ ಇನ್ನಿನ್ನು ಪೇಟೆಯವರ ಹಾಗೆ ಇಲ್ಲಿಯೂ ದಕ್ಷಿಣೆ ಕೊಡುವ ಸಂಪ್ರದಾಯವನ್ನೇ ಬಿಡುತ್ತಾರೆ, ಛೆ!' ಎನ್ನುವಾಗ ಹಿಂದಿನಿಂದ ಗಂಡಿನ ಮನೆ ದಕ್ಷಿಣೆ ಬಂತು. ಅದನ್ನು ಹಿಡಿದಳು. ಆತ ದಾಟಿ ಹೋದ ಮೇಲೆ ಹೇಳಿದಳು 'ಅಡ್ಡಿಲ್ಲ, ಇಪ್ಪತ್ತು ರುಪಾಯಿ, ಹೊಸಾ ನೋಟು!'

ನಾನು ಮಾತಾಡದುದರ ಕಡೆಗೆ ಆಕೆಗೆ ಗಮನವೇ ಇರಲಿಲ್ಲ. ಸಂಪ್ರದಾಯದ ಬಗ್ಗೆ ಹೊಸದಾಗಿ ಹೇಳುವಂತೆ 'ಅದು ಏನಂದರೆ, ಹೆಣ್ಣಿನ ಮನೆ ದಕ್ಷಿಣೆಗಿಂತ ಗಂಡಿನ ಮನೆ ದಕ್ಷಿಣೆ ಹೆಚ್ಚಿಗೆ ಇರಬೇಕು. ಇಲ್ಲದಿದ್ದರೆ ಗಂಡಿನ ಗ್ರೇಡಿಗೆ ಕಡಿಮೆ ಅಂತವೇ. ಗೊತ್ತುಂಟ ನಿಮಗೆ? ನಿಮಗೆ ಗೊತ್ತಿಲ್ಲದೆ! ನಮ್ಮ ಸುಶೀಲಕ್ಕನ ಮದುವೆಯಲ್ಲಿ ಹೆಣ್ಣಿನ ಮನೆ ದಕ್ಷಿಣೆ ಜಾಸ್ತಿಯಾಗಿ ಗಂಡಿನವರಿಗೆ ಸಿಟ್ಟು ಬಂದು ಅಯ್ಯೋ ಒಂದು ರಾಮಾಯ್ಣ ಆಗಿದ್ದೇ . .'

ಹ್ಞ! ಅವಳ ಸುಸೀಲಕ್ಕ ಮತ್ತು ಅವಳ ಮದುವೆ ಜಗತ್ಪ್ರಸಿದ್ಧ ಅಂತೆಣಿಸಬೇಕು, ಹಾಗಿದೆ ಅವಳು ಹೇಳುವ ಪರಿ. ಇವಳು ಹುಟ್ಟಿದ್ದೇ ಹಳೆಯದನ್ನೆಲ್ಲ ಮಿದುಳಿನ ಗೋಡೌನ್‌ನಲ್ಲಿ ದಾಸ್ತಾನು ಮಾಡಲು ಬಹುಶಃ. 'ಏನು ಹಾಗೆ ನೋಡುತ್ತೀರಿ, ಆ ರಾದ್ಧಾಂತ, ಯಾರೂ ಹೇಳಿದವರೇ ಇಲ್ಲವೆ ನಿಮಗೆ ಹಾಗಾದರೆ?'

ಅಯ್ಯೋ, ಈ ಸುಲೋಚನತ್ತೆ ನನ್ನನ್ನು ಮರೆತೇ ಬಿಟ್ಟಂತೆ ಬೇರೆಯೇ ಜಗತ್ತಿನಲ್ಲಿದ್ದಳು. ಅದೇನು ಅಂತ ತುಸು ಕಿವಿಗೊಟ್ಟೆ ನಾನು. ಬೀಗಿತ್ತಿ, ಹೊರದೇಶದಲ್ಲಿದ್ದ ಎರಡನೆಯ ಮಗ, ಸುಲೋಚನತ್ತೆಯ ಅಳಿಯನ ತಮ್ಮ, ಅಲ್ಲಿ ಕಷ್ಟಕ್ಕೆ ಬಿದ್ದಿರುವುದು, ಅಲ್ಲಿಂದ ಬಿಡಾರ ಕಿತ್ತು ಬರಬೇಕಾಗಿರುವುದು ಇತ್ಯಾದಿ ವಿವರಿಸುತಿದ್ದಳು. ವಿಷಯ ತುಂಡುತುಂಡಾಗಿ ನನ್ನ ಕಿವಿಯ ಮೇಲೆ ಬೀಳುತಿತ್ತು. ಎರಡನೆಯ ಮಗ ಹೊರದೇಶಕ್ಕೆ ಹೋದಾಗ ಅಷ್ಟಕ್ಕೇ ಬೀಗಿ, ಊರಲ್ಲಿರುವ ತನ್ನ ಮಗಳು ಅಳಿಯನನ್ನು ಸದರದಿಂದ ಕಂಡ ಬೀಗಿತ್ತಿ ಆಕೆ ಎಂದು ಸುಲೋಚನತ್ತೆ ಹೇಳುತಿದ್ದಳಲ್ಲ, ಈಗ? ಮಾಡಿದ್ದುಣ್ಣೋ ಮಹಾರಾಯ ಅಂತ ಆಕೆ ಹೇಳುತಿದ್ದುದನ್ನು ಕೇಳುತ್ತಿರಬಹುದೆ? ಮೆಲ್ಲ ತಿವಿದೆ. ಸುಲೋಚನತ್ತೆ ಕ್ಷಣ ಇತ್ತ ತಿರುಗಿ ಕಿರುನಗುತ್ತ 'ಏನಂತೆ ಅವಳದು? ಒಂದೇ ಸಮ? ಊಟವಾಗುವುದರೊಳಗೆ ಪ್ರಶ್ನೆ ಕೇಳಿಕೇಳಿ ನಿನ್ನ ಮೈಯೆಲ್ಲ ಪರಚಿ ಗಾಯ ಆಗದಿದ್ದರೆ ಹೇಳು'. ಎಂದು ಪಿಸು ನುಡಿದಳು. ಬಂದ ಎಲ್ಲವನ್ನು ಸ್ವಲ್ಪಸ್ವಲ್ಪವೇ ಹಾಕಿಸಿಕೊಳ್ಳುತ್ತ ಒಂದೇ ಬೆರಳಲ್ಲಿ ಅವನ್ನು ಮುಟ್ಟಿ ಸೀಪಿ ರುಚಿ ನೋಡುತ್ತ ಮತ್ತೆ ಬೀಗಿತ್ತಿಯೊಡನೆ ಮಾತು ಮುಂದರಿಸಿದಳು.

ಈ ಕಸ್ತೂರಿ, ಗರಾಸಿ ಎಲ್ಲಿದ್ದೋ, ನನ್ನ ಹೂಂ ಹೂಂ ಉತ್ತರ ಸಾಕಾಗದವಳು, ಜಹಾಂಗೀರು ಹೋಳಿಗೆ ಎಲ್ಲ ನೆಪ. ಅದನ್ನು ದಾಟಿ ತನಿಖೆ ಲೋಕಕ್ಕೆ ಹೊರಟವಳು ಎಂದು ಆಗಲೇ ಅನಿಸತೊಡಗಿತ್ತು ನನಗೆ. ಈಗ ನಾನವಳಿಗೆ ಸುಷ್ಮಾ ವಿಚಾರವೆಲ್ಲ ವಿವರಿಸಬೇಕು, ಅವಳ ಪ್ರಶ್ನೆಗಳ ಕೂರಂಬುಗಳಿಗೆ ಉತ್ತರಿಸಬೇಕು. ವಿವರ ಬೇಕಾಗಿದೆ ಅವಳಿಗೆ, ರೋಚಕವಾಗಿ, ಅವಳ ಊಟದೊಂದಿಗೆ ನಂಚಿಕೊಳ್ಳಲು. 'ಯೇ ಅಧಿಕ ಪ್ರಸಂಗಿ, ನಿನಗೆ ದುಃಖ ಮಾತಾಡಿಸಲು ಗೊತ್ತೇ ಇಲ್ಲ. ಸುಮ್ಮನೇ ಊಟ ಮಾಡುತ್ತೀಯ, ಎರಡು ಕೆನ್ನೆಗೆ ಕೊಡಲೋ' ಎಂದು ಕೇಳಬೇಕು. ಆದರೆ ಹೀಗೆ ಇಷ್ಟು ವರ್ಷಗಳಲ್ಲಿ ಎಷ್ಟು ಸಲ, ಎಷ್ಟು ಜನರ ಬಳಿ ಎಷ್ಟೊಂದು ವಿಷಯಗಳಲ್ಲಿ ಅನಿಸುತ್ತಲೇ ಇತ್ತು. ಹಾಗೆ ಹೇಳದೆಯೇ ಒಂದು ಶಬ್ದ ಕೂಡ ಒಡೆಯದೆ ಮುಂದೆ ಬಂದೆವಲ್ಲವೆ. ದಾಕ್ಷಿಣ್ಯ, ವರ್ತನೆಗೊಂದು ಮರ್ಯಾದೆಯ

ಚೌಕಟ್ಟು, ಸಿಟ್ಟಿನ ಪರಿಣಾಮವಾಗಿ ವಿವೇಕದ ಪರಿಧಿ ದಾಟಿಬಿಟ್ಟರೆ ಎಂಬ ಭಯ ಗೊತ್ತೇ ಆಗದ ಹಾಗೆ ಕಟ್ಟಿಹಾಕುತ್ತದೆ.

'ದೇವರು ಕೊಡಬಾರದು. ಕೊಟ್ಟ ಮೇಲೆ ತೆಗೆದುಕೊಂಡು ಹೋಗಬಾರದು.' ಮತ್ತೆ ಅದನ್ನೆ ಹೇಳಿದಳು ಕಸ್ತೂರಿ. ಹೀಗಂತ ಇವಳೀಗ ಯಾರೊಡನೆ? ಯಾವ ಪ್ರಯೋಜನಕ್ಕೆ? ಒಳಗೇ ದುಃಖ ಉಮ್ಮಳಿಸುತ್ತ ಇತ್ತು.

ಹುಡುಗ ಹುಡುಗಿ ಸಂಭ್ರಮದಿಂದ ಊಟಕ್ಕೆ ಕುಳಿತವರನ್ನು ಮಾತಾಡಿಸುತ್ತ ಮುಂದೆ ಮುಂದೆ ಬರುತಿದ್ದರು. ಅವರ ಎದುರಿಂದ ವೀಡಿಯೊ ಹಿಡಿದವನು ಹಿಂದೆ ಹಿಂದೆ ಹೋಗುತಿದ್ದ.

'ಜೋಡಿ, ಚಂದಕ್ಕೆ ಒಂದು ಮೋಸವಿಲ್ಲ' ಎಂದವಳು ಒಮ್ಮೆಗೇ ಪಿಸುವಾದಳು. 'ಹುಡುಗಿಯನ್ನು ಅವನಿಗೆ ಕೊಡಬೇಡಿ ಅಂತ ಮದುವೆಗೆ ಮುಂಚೆಯೇ ಹೇಳುವವಳು ನಾನು. ಆದರೆ ಹೇಳಲಿಲ್ಲ. ನಾನೊಬ್ಬಳು ನಿಷ್ಠುರ ಆಗುವುದು ಯಾಕೆ ಅಂತ ಸುಮ್ಮನಾದೆ. ಹಾಗೆ, ಶಾಮಮಾವ ನನ್ನ ಹಕ್ಕೈ ಕೇಳಿದ ಹುಡುಗ ಆದೀತೆ, ಹೇಗೆ? ಅಂತ. ಬೇಡ ಎನ್ನಲು ನಂಗೆ ಬಾಯಿ ಬರಲಿಲ್ಲ..'

'ಹೂಂ. . .'

('ಏನಾಗಿದೆ ವರನಿಗೆ? ಕೇಳುವುದಿಲ್ಲವೆ?')

ಮದುಮಕ್ಕಳು ಹತ್ತಿರ ಬಂದಾಯ್ತು. ಮುಂದಿನಿಂದ 'ಸಾವಕಾಶ ಆಗಲಿ' ಎಂದು ಉಪಚಾರ ಹೇಳುವ ಹಿರಿಯರು, ಹಿಂದಿನಿಂದ 'ಇವರು ಇಂಥವರು, ಇವರು ನನಗೆ ಈ ಸಂಬಂಧ' ಎಂದು ತಮ್ಮತಮ್ಮ ಸಂಬಂಧಿಗಳನ್ನು ಪರಿಚಯಿಸುತ್ತಾ ಹುಡುಗ-ಹುಡುಗಿ ಸಾಗಿ ಹೋದರು.

ಪಾಯಸ ಬಂತು. 'ಪಾಯಸವ? ಹೋ ಖರ್ಜೂರದ ಪಾಯಸ. ಒಂದು ಬೊಟ್ಟು ಹಾಕಿ ಸಾಕು'. - ಕಸ್ತೂರಿ ಪಾಯಸ ಸೀಪುತ್ತ ಮತ್ತೆ ಪರಚಿದಳು - 'ನಿಮ್ಮ ಸತ್ಯತ್ತೆಗೆ ಮಕ್ಕಳು ಎಷ್ಟು? ಮೊಮ್ಮಕ್ಕಳು? ಎಲ್ಲರಿಗೂ ಮದುವೆಯಾಯಿತೇ? - ಮದುವೆ ಅಂದೊಡನೆ ಒಂದು ರೀತಿ ಅಂಜಿಕೆ ನೋಡಿ, ಈಗೀಗ. ನನ್ನ ಅತ್ತಿಗೆಯ ಮಗಳು ಗೊತ್ತೆ, ಅವಳೂ ಪ್ರಾಯಕ್ಕೆ ಬಂದವಳು . . . .ಮದುವೆಗೆ ಹುಡುಗನನ್ನೂ ನೋಡಿದ್ದಾಗಿತ್ತು. ಒಂದು ಬೆಳಿಗ್ಗೆ ಮನೆಯಿಂದ ಹೊರಗೆ ಹೋದವಳು ಮತ್ತೆ ಬರಲೇ ಇಲ್ಲ!...ಅತ್ತಿಗೆ ಕೊರಗಿಕೊರಗಿ ಹಾಸಿಗೆ ಹಿಡಿದು ಬಿಟ್ಟಿದಾರೆ ಪಾಪ. ನೀವೇ ವಾಸಿ, ಎಷ್ಟು ತಡೆದುಕೊಂಡಿದ್ದೀರಿ. . .'

ಇವಳಿಂದ ನನಗೆ ಮುಕ್ತಿ ಇಲ್ಲ. ಈಕೆ ಖಂಡಿತ ಕೆಸು ತಿಂದ ನಾಲಗೆಯವಳು. ಪ್ರಶ್ನೆಗಳ ಧಾರಾವಾಹಿಯನ್ನೇ ಸೃಷ್ಟಿಸಬಲ್ಲವಳು. ಏನಾದರೂ ಮಾಡಿ ನನ್ನಿಂದಲೇ ಯಥಾವತ್ ಕತೆ ಕೇಳಲು ಗಾಳ ಹಾಕುತಿದ್ದಾಳೆ.

ಧುಮ್ಮಿಕ್ಕಿ ಬರುವ ಅಳುವಿಗೆ ಕೈಯಡ್ಡ ಇಟ್ಟುಕೊಂಡು ಕುಳಿತೇ ಇದ್ದೇನೆ. ಕಸ್ತೂರಿ ಉಣ್ಣುತಿದ್ದಾಳೆ. ಅವಳಿಗೆ ನಾನು ಮೆಲ್ಲ ಕಣ್ಣೊರಸಿಕೊಂಡದ್ದು ಬಹಳ ಸುಖವೆನಿಸಿರಬೇಕು. ಅಂತೂ ಆಕೆ ಯಶಸ್ವಿಯಾಗುತಿದ್ದಾಳೆ. ಹೇಳಲು ಯಾವತ್ತೋ ಸಿದ್ಧ ಮಾಡಿಕೊಂಡಂತೆ 'ಅಳಬೇಡಿ, ಅಳಬೇಡಿ, ಛೆ, ನಮ್ಮ ಕೈಯಲ್ಲುಂಟ? ಹೇಳಿದ್ದರಲ್ಲ ದಾಸರು, 'ಗಟ್ಟಿಮಣ್ಣ ಶಿಶುವ ಮಾಡಿ ಹೊಟ್ಟೆಯೊಳಗೆ ಇರಿಸಲಿಲ್ಲ| ಕೊಟ್ಟ ದೈವ ಕೊಂಡು ಹೋದರೆ ಕುಟ್ಟಿಕೊಂಡು ಅಳುವೆ ಯಾಕೆ?' ಅಂತ. ... ಕಮಲಮಾಯಿ ಹೇಳುತಿದ್ದರು, ನೀವು ಮನಸ್ಸಿಗೆ ತುಂಬ ಹಚ್ಚಿಕೊಂಡಿದ್ದೀರಿ ಅಂತ. ಮತ್ತೆ? ಹಚ್ಚಿಕೊಳ್ಳದೆ? ಮದುವೆಗೆ ನೆರೆದ ಮಗಳು, ಕಾಗೆ ಕಚ್ಚಿಕೊಂಡು ಹೋದ ಹಾಗೆ ಮಾಯವಾದರೆ ಅಳದೆ ಮತ್ತೆ! ನನಗಾದರೆ ಹುಚ್ಚೇ ಹಿಡಿಯುತಿತ್ತು. ನೀವೇ ಅಡ್ಡಿಲ್ಲ, ಮದುವೆಗೆ ಬಂದಿದ್ದೀರಿ, ಸಿಹಿಯೂಟ ಮಾಡುತಿದ್ದೀರಿ, ಧೈರ್ಯಸ್ಥೆಯಪ್ಪ'. ಎಲ್ಲವೂ ತಣ್ಣಗೆ, ಇಳಿದನಿ, ಪಿಸುದನಿ. ಸಂತೈಸಲೆಂದೇ ಕಾದವರಂತೆ ಅಲ್ಲೇ ಬೆನ್ನ ಮೇಲೆ ಕೈಯಾಡಿಸಿದಳು. ತೊಡೆಯನ್ನು ಮೆಲ್ಲ ತಟ್ಟಿದಳು. 'ಯಾರಾದರೂ ಏನು ತಿಳಿದುಕೊಳ್ಳುತ್ತಾರೆ, ಅಳಬೇಡಿ'-

***

ಕೈ ತೊಳೆದು ಮುಖಕ್ಕೆ ನೀರು ಸಿಮಿಸಿಕೊಂಡು ಒಳ ಬರುತ್ತೇನೆ; ನೋಡಿದರೆ ನನ್ನನ್ನು ಅಳಿಸಿದ ಕಸ್ತೂರಿ ಕರ್ಚೀಫಿಂದ ಕೈ ಬಾಯಿ ಮುಖ ಒರೆಸಿಕೊಳ್ಳುತ್ತ ಯಾರೊಡನೆಯೋ ಮಾತಿಗೆ ಬಿದ್ದಿದ್ದಳು. ಬಹುಶಃ ನನ್ನ ಅಳುವಿನ ವರ್ಣನೆಯನ್ನು ಹುರುಪಿನಿಂದ ಹೇಳುತಿದ್ದಿರಬಹುದು. ಮೆಲ್ಲ ಹಾಲಿಗೆ ಬಂದು ಒಂದು ಕುರ್ಚಿಯನ್ನು ಮೂಲೆಗೆ ಒಯ್ದು ಒಬ್ಬಳೇ ಕುಳಿತೆ, ಸುಲೋಚನತ್ತೆ ಮತ್ತು ಇವರು ಬರುವವರೆಗೂ ಇಲ್ಲೇ ಸೈ ಎಂದುಕೊಳ್ಳುತ್ತ. ಎಲ್ಲ, ಊಟ ಮುಗಿಸಿ ವಿದಾಯ ಹೇಳುವುದು ದೂರದಿಂದ ಕಾಣುತಿತ್ತು. ನೋಡುತಿದ್ದಂತೆ, ಈಚಿಂದ "ಏನು, ಒಬ್ಬರೇ ಕುಳಿತಿದ್ದೀರಿ! . . .ಇನ್ನೇನು ಪಾಪ, ಬೇಡ ಅಂದರೂ ನಡೆದುದೆಲ್ಲ ಕಣ್ಮುಂದೆ ರೀಲಿನ ಥರ ಹೋಗುವುದ ನೋಡುತ್ತ ಕುಳಿತುಕೊಳ್ಳುವುದು, ಅಲ್ಲವೆ? ಎಲ್ಲ ನೆನೆದರೆ, ಅಯ್ಯಮ್ಮ!. . .' -ಕಸ್ತೂರಿ! ಬಂದಾಯಿತು! ಇನ್ನೊಂದು ಕುರ್ಚಿ ಎಳೆದು ಕುಳಿತಾಯಿತು. ಕುಳಿತು, ನನ್ನ ಕೈ ಹಿಡಿದುಕೊಂಡಳು. ಮೆಲ್ಲ ಅಮುಕಿದಳು.

ಈಕೆ ಯಾಕೆ, ತನಗೆ ದುಃಖವಾಗಿದೆ ಅಂತ ನನಗೆ ಮನಗಾಣಿಸಿಯೇ ಶುದ್ಧ ಎಂಬ ಹಟದಲ್ಲಿದ್ದಾಳೆ, ಜೊತೆಗೆ, ಆ ಗಳಿಗೆಯ ವರ್ಣನೆಯ ರೋಮಾಂಚವನ್ನು ಪಡೆಯಲು ಹಂಬಲಿಸುತಿದ್ದಾಳೆ. ನೋಡೀ ನೋಡೀ ನನಗೂ ಎಲ್ಲಿಂದ ಹಟ ಬಂತೋ. ಆಕೆ ಬೆನ್ನಟ್ಟಿದಂತೆ ಬಂದು ಕುಳಿತದ್ದು ಕಂಡು, ಹೇಳಿಬಿಡುವ. ತನಗೆ ಹೇಮತ್ತಿಗೆ ಎಲ್ಲಾ ವಿವರಗಳನ್ನು ಸ್ವತಃ ಹೇಳಿದರು ಅಂತ ನಾಕುಮಂದಿಯಲ್ಲಿ ಬೀರುತ್ತ ತಿರುಗುವ ಸಂತಸ ಸಿಗಲಿ ಅಂತಲೂ ಕಂಡಿತು. ಎಲ್ಲವನ್ನೂ ಚಾಚೂ ತಪ್ಪದೆ ಒಣದನಿಯಲ್ಲಿ ಸುರುಮಾಡಿದೆ -

'ನೀನು ಎಷ್ಟು ಬೇಸರಗೊಂಡಿದ್ದೀ ಅಂತ ಗೊತ್ತಾಯಿತು ಕಸ್ತೂರೀ, ಅದಕ್ಕೇ ನಿನ್ನ ಬಳಿ ಎಲ್ಲ ಹೇಳಿ ಹಗುರಾಗ ಬೇಕನಿಸಿದೆ. ಕತೆ ಏನು ಹೇಳುತ್ತೀ! ಜ್ವರವಿತ್ತು ಅವಳಿಗೆ, ಏಳೆಂಟು ದಿನದಿಂದ, ತಲೆಗೇರಿತ್ತು. ಯಾವ ಜ್ವರ ಅಂತ ಪತ್ತೆಯೇ ಆಗಲಿಲ್ಲ. ಆದಿನ ಸ್ವಲ್ಪ ಬಿಟ್ಟಂತಿತ್ತು. ರಾತ್ರಿ ಒಂಭತ್ತರವರೆಗೂ ಅವಳ ಹಾಸಿಗೆ ಪಕ್ಕವೇ ಸಣ್ಣಗೆ ಮಾತಾಡುತ್ತ ಕುಳಿತಿದ್ದೆವು. ಸುಷ್ಮಾ ಇನ್ನು ಮಲಗು, ಹೊತ್ತಾಯಿತು ಎಂದೆ. ಕುಡಿಯಲು ಹಾಲು ತಂದು ಕೊಟ್ಟೆ, ಅರ್ಧ ಲೋಟ ಸಾಕು ಎಂದಳು. ಅಷ್ಟೇ ಕೊಟ್ಟೆ. ಕುಡಿದಳು. 'ಅಬ್ಬ' ಎಂದಳು. ಅದೇ. ಅದೇ ಕಡೇ ಶಬ್ದ ಅವಳು ಮಾತಾಡಿದ್ದು. . . ಅವತ್ತು ರಾತ್ರಿಯೇ . . .'

ಸಿದ್ಧಮಾಡಿ ಕಂಠಗತ ಮಾಡಿಕೊಂಡ ಪಾಠ, ಅವತ್ತಿನಿಂದ ನಿರಂತರವಾಗಿ ಹೇಳೀ ಹೇಳೀ ದಣಿದು ಇನ್ನು ಮುಗಿಯಿತು ಎಂದುಕೊಂಡರೂ ಮುಗಿಯದ ಪಾಠ, ಒಪ್ಪಿಸಿದೆ. ಕೇಳಿಯಾದರೂ ಒಮ್ಮೆ ಇವಳ ಬಾಯಿ ಮುಚ್ಚೀತೆ? ಇಲ್ಲ. ಲಕ್ಷಣ ಕಂಡರೆ ಮುಚ್ಚುವ ಹಾಗಿಲ್ಲ.

ಬದಲು, ನಾನು ಹೇಳಿದ ಅಷ್ಟನ್ನೂ ಕೇಳಿ ಮುಗಿಸಿದ್ದೇ ಝೋರಾಗಿ ನಕ್ಕಳು.

'ಇದು ಇಷ್ಟೂ ಕತೆ ನಂಗೆ ಗೊತ್ತುಂಟು ಹೇಮತ್ತಿಗೇ. ಕಮಲಮಾಯಿ ಇದನ್ನೇ ಒಂದು ಶಬ್ದ ಬಿಡದೆ ಹೇಳಿದ್ದರು. "ಆದರೆ ವಿಷಯ ಬೇರೆಯೇ ಉಂಟು, ಅವು ಗುಟ್ಟು ಮಾಡ್ತೊ; ನಡೆದ ವಿಷಯ ನರಮನುಷ್ಯರಿಗೆ ಗೊತ್ತಾಗದ ಹಾಗೆ ಮುಚ್ಚಳ ಹಾಕಿದೊ ಎನ್ನುತಿದ್ದರು. . ." ಏನಂತ ಅವರಿಗೆ ಗೊತ್ತುಂಟು, ಹೇಳಿ ಮಾಯೇ ಎಂದರೆ ಅವರು ನಿಮ್ಮ ಹಕ್ಕೈಯೇ ಕೇಳಲು ಹೇಳಿದರು. ಅದೇನು, ಅಂಥದ್ದೇನು, ನಿಮ್ಮಿಂದಲೇ ತಿಳಿಯುವ ಅಂತ ನಾನೂ . . .'

ಈಗ ಮಾತ್ರ ನನಗೆ ತಡೆಯಲಿಲ್ಲ, ಸಟ್ಟ ಎದ್ದು ನಿಂತೆ, 'ಏಳು, ಬೇವರ್ಸಿ, ಏಳು ಅಂದೆ, ನಿವಾಳಿಸು ಇಲ್ಲಿಂದ. ಗುಟ್ಟಂತೆ ಗುಟ್ಟು. ಎಲ್ಲಿ ನಿನ್ನ ಕಮಲಮಾಯಿ, ಎಳಕೊಂಡು ಬಾ, ಅದು ಏನಂತ ಹೇಳಲಿ ಅವಳೇ, ಎಲ್ಲ ಇತ್ಯರ್ಥ ಆಗಿ ಬಿಡಲಿ' ನನ್ನ ಧ್ವನಿ ನನಗೇ ಗುರುತು ಸಿಗದ ಹಾಗೆ ದರ್ಶನ ಬಂದವರಂತೆ ಏರಿ ಹೋಯ್ತು. ಬಾಯಲ್ಲಿ ಬರಬಾರದ ಶಬ್ದ ಇನ್ನೂ ಏನೇನು ಬಂತೋ ದೇವರೇ, ಮೈಮರೆವು ಆವರಿಸಿ ಬಿಟ್ಟಿತ್ತು.

ಕಸ್ತೂರಿ ಹೆದರಿದಳೆ? ಇಲ್ಲ. ಬದಲು 'ನಿಮ್ಮ ಸ್ಥಿತಿಯಲ್ಲಿ ನೀವು ಇಷ್ಟು ಇರುವುದೇ ಹೆಚ್ಚು ಬಿಡಿ ಹೇಮತ್ತಿಗೆ. ಅಂಥಾ ದೊಡ್ಡ ಗುಟ್ಟು ಹೊಟ್ಟೆಯಲ್ಲಿ ಇಟ್ಟುಕೊಂಡು. . . ನನ್ನಿಂದ ಬಿಡಿ, ಮನುಷ್ಯ ಮಾತ್ರರಿಂದ ಹೀಗಿರಲು ಸಾಧ್ಯವಿಲ್ಲ. . .'

ಅಂದರೆ? ಏನು!

ಇವಳಿಗೆ, ಎಲ್ಲ ಗೊತ್ತೆ?

ಹ್ಞ? ಹ್ಞ?? ಹ್ಞ???

ಅಯ್ಯೋ. . .

ನನ್ನ ಬೊಬ್ಬೆ ಕೇಳಿ ಇವರು ಹೊರಗಿಂದ ಓಡಿ ಬಂದರು, ಸುಲೋಚನತ್ತೆಯೂ ಹೇಮಾ ಹೇಮಾ ಎನ್ನುತ್ತ ಧಾವಿಸಿ ಬಂದಳು. ಊಟ ಮುಗಿಸಿ ಹೊರಟಿದ್ದ ಯಾರೆಲ್ಲ ನನ್ನ ಸುತ್ತುವರಿದರು.

ಯಾವ ಮಾಯಕದಲ್ಲೋ ಕಸ್ತೂರಿ ಮಾತ್ರ ಅಲ್ಲಿಂದ ಹಾರಿ ಬಿಟ್ಟಿದ್ದಳು.

***

ಇತ್ತೀಚೆಗೆ ನಮ್ಮನ್ನಗಲಿದ ಇಬ್ಬರು ಸಾಹಿತ್ಯ ಮಿತ್ರರಾದ ಎಂ.ಎಸ್. ವ್ಯಾಸರಾವ್ ಮತ್ತು ಶಿವರಾಮು ಕಾಡನಕುಪ್ಪೆ ಅವರ ನೆನಪಿಗೆ 'ಹೊಸ ಮನುಷ್ಯ' ತನ್ನ ಶ್ರದ್ಧಾಂಜಲಿ ಸಲ್ಲಿಸುತ್ತದೆ.-ಸಂ.

ಒಂದು ಸಮೀಕ್ಷೆ

ನಾನು ಓದಿದ ಕನ್ನಡದ ಅತ್ಯುತ್ತಮ ಪುಸ್ತಕ

ಮೇಲಿನ ಶೀರ್ಷಿಕೆಗಾಗಿ ಟಿಪ್ಪಣಿಗಳನ್ನು ಬರೆದು ಕಳಿಸಲು ನಾನು ಕೆಲವು ಸಾಹಿತ್ಯಪ್ರೇಮಿ ಮತ್ತು ಚಿಂತಕ ಗೆಳೆಯರನ್ನು ಕೇಳಿದಾಗ ನನ್ನ ಮನಸ್ಸಿನಲಿದ್ದುದು, ಈ ಟಿಪ್ಪಣಿಗಳ ಮೂಲಕ ಕನ್ನಡ ಸಂವೇದನೆಯ ಸ್ವಭಾವ ಮತ್ತು ಪ್ರವೃತ್ತಿಗಳ ಒಂದು ಚಿತ್ರ ದೊರಕಬುದೆಂಬುದು. ಹಾಗಾಗಿಯೇ ನಾನು ನಿರ್ದಿಷ್ಟವಗಿ ಆಯ್ದ ವಿವಿಧ ಸಾಮಾಜಿಕ ಮತ್ತು ವೃತ್ತಿ ಹಿನ್ನೆಲೆಗಳ ಸಾಹಿತ್ಯ ಓದುಗರನ್ನು ಬರೆಯಲು ಕೋರಿದೆ. ಆ ಮೂಲಕ ಕನ್ನಡ ಸಾಹಿತ್ಯದ ಇತ್ತೀಚಿನ ಓದುಗಾರಿಕೆಯ ಹಿಂದಿನ ಪ್ರವೃತ್ತಿಗಳನ್ನೂ, ಆಯ್ಕೆಗಳ ಹಿಂದಿನ ನೆಲೆಗಳನ್ನೂ ಅರಿಯುವ ಇರಾದೆ ಇತ್ತು.


ಕೋರಿದ ಕೆಲವರು ಅತ್ಯುತ್ತಮವಾದ ಒಂದು ಪುಸ್ತಕದ ಆಯ್ಕೆ ಕಷ್ಟ ಎಂದರು. ನಾನು ನಮ್ಮ ನ್ಯಾಯಾಂಗದಲ್ಲಿ 'ಸಮಾನರಲ್ಲಿ ಪ್ರಥಮ' ಎಂದು ಮುಖ್ಯ ನ್ಯಾಯಾಧೀಶರನ್ನು ಗುರುತಿಸುತಿವ ಹಾಗೆ ನಿಮ್ಮ ಅತ್ಯುತ್ತಮಗಳ ಆಯ್ಕೆಯಲ್ಲಿ ಪ್ರಥಮವಾದ ಒಂದನ್ನು ಗುರುತಿಸಿ ಬರೆಯಲು ಪುಸಲಾಯಿಸಿದೆ. ಅವರಿಗೂ ಇಂತಹ ಒಂದು 'ಕಸರತ್ತು' ತಮ್ಮ ಸಾಹಿತ್ಯ ಗ್ರಹಿಕೆಯ ಸೂಕ್ಷ್ಮಗಳನ್ನು ಇನ್ನಷ್ಟು ಹರಿತಗೊಳಿಸಬಹುದೆಂಬ ನಂಬಿಕೆಯಿಂದಲೋ ಅಥವಾ ನನ್ನ ಮೇಲಿನ ವಿಶ್ವಾಸದಿಂದಲೋ ಬರೆದಿದ್ದಾರೆ. ಖಂಡಿತ ಈ ಟಿಪ್ಪಣಿಗಳಲ್ಲಿ ಕೆಲವಾದರೂ ಇಂದಿನ ಹಲವು ತರಹೆವಾರಿ ಸಾಹಿತ್ಯ ಚಿಂತನೆಗಳ ತದ್ವಿರುದ್ಧ ಎಳೆದಾಟಗಳ ಮಧ್ಯೆ ಕನ್ನಡ ಸಾಹಿತ್ಯದ ಓದಿಗೆ ಪ್ರವೇಶ ಪಡೆಯುತ್ತಿರುವ ಮತ್ತು ನಿಜವಾಗಿ ಸಾಹಿತ್ಯವೆಂದರೇನು ಎಂದು ಗೊಂದಲಗೊಂಡಿರುವ ಯುವ ಓದುಗರಿಗೆ ಕೆಲವು ಒಳನೋಟಗಳನ್ನು ಒದಗಿಸಬಹುದು.

ಹೌದು ನಾನು ಬರೆಯಲು ಕೋರಿದವರಲ್ಲಿ ಕೆಲವರು ಬರೆಯಲಿಲ್ಲ. ಬರೆದವರಲ್ಲಿ ಕೆಲವರು ತಾವು ಇತ್ತೀಚೆಗೆ ಓದಿದುದರಲ್ಲಿ ತಮಗೆ ಗಮನಾರ್ಹವೆನಿಸಿದ ಪುಸ್ತಕದ ಬಗ್ಗೆ ಬರೆದಿದ್ದಾರೆ. ಅವರಿಗೆ ತಮ್ಮ ಇಡೀ ಓದಿನ ರಾಶಿಯಿಂದ ಒಂದು ಪುಸ್ತಕ ಆಯಲು ತಮ್ಮ ಅತಿವ್ಯಸ್ತ ಬದುಕಿನಿಂದಾಗಿ ಕಷ್ಟವಾಗಿರಬಹುದು. ಹಾಗಾಗಿ ಈ ಪುಟ್ಟ ಸಮೀಕ್ಷೆ ಒಂದು ಮಟ್ಟಿಗೆ ಗುರಿ ತಪ್ಪಿದೆ ಮತ್ತು ಈ 'ಸಮೀಕ್ಷೆ'ಯ ಪುಟ್ಟ ಗಾತ್ರ ಮತ್ತು ಈ ಮೇಲೆ ಹೇಳಿದ ಎರಡು ಕಾರಣಗಳಿಂದಾಗಿ ಇದೇನೂ ಯಾವ ಅರ್ಥದಲ್ಲೂ ದಿಕ್ಸೂಚಿ ಎನ್ನಲಾಗದು. ಆದರೆ ಸಂಪಾದಕರ ಸಮೀಕ್ಷಕರ ಆಯ್ಕೆ ಮತ್ತು ಸಮೀಕ್ಷಕರ ಕೃತಿಗಳ ಆಯ್ಕೆ– ಈಎರಡೂ ಆಯ್ಕೆಗಳ ಮಿತಿಗಳ ಚೌಕಟ್ಟಿನ ಈ ಸಮೀಕೆಯಲ್ಲಿ ಕನ್ನಡದ ಸಂವೇದನೆಯ ಬಗ್ಗೆ ಸ್ಥೂಲವಾದದ್ದಾದರೂ ಒಂದು ತಿಳಿವು ಸಿಗಬಹುದೆಂಬ ನನ್ನ ನಿರೀಕ್ಷೆ ಭಾಗಶಃವಷ್ಟೇ ಯಶಸ್ವಿಯಾದಂತಿದೆ. ಪತ್ರಿಕೆಯ ಓದುಗರ ಪ್ರತಿಕ್ರಿಯೆಗಳನ್ನು ಕುತೂಹಲದಿಂದ ಕಾದು ನೋಡುತ್ತಿರುವೆ,–ಸಂ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು'



ನಾನು ಓದಿದ ಅತ್ಯುತ್ತಮ ಪುಸ್ತಕ ಯಾವುದು ಎಂದು ನಿರ್ಧರಿಸುವುದು ಇಷ್ಟೊಂದು ಕಷ್ಟಕರವೆಂದು ಗೊತ್ತಿರಲಿಲ್ಲ. ಏಕೆಂದರೆ ನಾನು ಓದಿದ ಅತ್ಯುತ್ತಮ ಪುಸ್ತಕವೆಂದರೆ ಒಂದು ಪುಸ್ತಕವಲ್ಲ ; ಹಲವಾರು ಅದ್ಭುತ ಕೃತಿಗಳ ಶ್ರೇಷ್ಠ ಭಾಗಗಳನ್ನು ತನಗೆ ಇಷ್ಟವಾದ ಹಾಗೆ ಸಂಕಲಿಸಿಕೊಂಡು ನನ್ನ ಮನಸ್ಸು ಈ ಪುಸ್ತಕವನ್ನು ಕಲ್ಪಿಸಿಕೊಂಡಿದೆ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು" ರಾವ್ ಬಹಾದ್ದೂರರ "ಗ್ರಾಮಾಯಣ". ಟಾಲ್‌ಸ್ಟಾಯ್ ಅವರ "ವಾರ್ ಆಂಡ್ ಪೀಸ್', 'ಅನಾ ಕೇರಾನೀನಾ', ಕಾಮ್ಯುನ 'ಪ್ಲೇಗ್'. ಟಾಗೋರರ 'ಗೋರಾ', ದಾಸ್ತವಸ್ಕಿಯ 'ಕ್ರೈಮ್ ಲೆಂಡ್ ಪನಿಷ್‌ಮೆಂಟ್' ಇವುಗಳ ಅನೇಕ ಭಾಗಗಳು ನನ್ನ ಮೆಚ್ಚಿನ ಈ ಪುಸ್ತಕದಲ್ಲಿ ಸೇರಿಕೊಂಡಿದೆ. ಅಷ್ಟು ಮಾತ್ರವಲ್ಲ ಈ ಭಾಗಗಳ ಜೊತೆಗೆ ಉದ್ದಕ್ಕೂ ಬೇಂದ್ರೆಯವರ ಪದ್ಯಗಳು ಹೆಣೆದುಕೊಂಡಿವೆ. ಇರಲಿ, ಇವುಗಳಲ್ಲಿಯೇ ನನಗೆ ಶ್ರೇಷ್ಠವಾದದ್ದು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು'. ಈ ಕೃತಿಯನ್ನು ಅವರು ಬರೆದದ್ದೇ ಒಂದು ಪವಾಡದ ಹಾಗಿದೆ. 'ಶ್ರೀ ರಾಮಾಯಣದರ್ಶನ'ವನ್ನು ಬರೆದ ಮೇಲೆ ತಮ್ಮ ಜೀವನದ ಅತಿ ಮಹತ್ವದ ಕೃತಿಯನ್ನು ಬರೆದು ಮುಗಿಸಿದೆ ಅಂದುಕೊಂಡ ಕುವೆಂಪು ಎಲ್ಲಾ ಅಂಶಗಳಲ್ಲಿಯೂ, ಆ ಕೃತಿಗೆ ತದ್ವಿರುದ್ದವಾದ ಈ ಕಾದಂಬರಿಯನ್ನು ತಮ್ಮ ೬೪ನೇ ವಯಸ್ಸಿನಲ್ಲಿ ಏಕೆ ಬರೆದರು ? ಆದರ್ಶಗಳ ಅಮೂರ್ತಜಗತ್ತಿನಲ್ಲಿಯೇ ಹಾರಾಡುವ ಮಹಾಕಾವ್ಯಕ್ಕೆ ವೈದೃಶ್ಯವಾಗಿ ಈ ಕಾದಂಬರಿ ಮೂರ್ತವಾದ, ಲೌಕಿಕ ಜಗತ್ತಿನಲ್ಲಿ ಮುಳುಗಿದ, ಅತಿ ಸಾಮಾನ್ಯರ ದೈಹಿಕ ಅನುಭವಗಳನ್ನೇ ನೆಚ್ಚಿಕೊಳ್ಳುವ ಕಾವ್ಯ–ಪುರಾಣವಾಗಿದೆ. ಕನ್ನಡದ ಇನ್ನಾವ ಕಾದಂಬರಿಗೂ ಇಲ್ಲದ ಮಾಂತ್ರಿಕತೆ ಈ ಕೃತಿಗಿದೆ. ಅದು ಸಮಗ್ರವಾದ, ನಿಬಿಡವಾದ ತನ್ನದೇ ಜಗತ್ತಿನ. ಅದೆಷ್ಟು ಪ್ರಭಾವಿಯಾಗಿ ನಿರ್ಮಿಸುತ್ತದೆಯೆಂದರೆ ಅದನ್ನು ಪ್ರತಿಸಾರಿಯೂ ಹೊಕ್ಕಾಗ ನನಗೆ ಕದಳಿಯನ್ನು ಹೊಕ್ಕಂತೆ ಅನುಭವವಾಗುತ್ತದೆ. ಓದುವ ನನ್ನ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಇಲ್ಲವಾಗಿಸುವ, ನನ್ನ ಮನಸ್ಸು ದೇಹಗಳನ್ನು ಹೀಗೆ ತೆಕ್ಕೆಗೆ ತೆಗೆದುಕೊಳ್ಳುವ ಇನ್ನೊಂದು ಕೃತಿ ನಾನು ಓದಿಲ್ಲ. ಪಂಪನು ಕಾವ್ಯವನ್ನೂ 'ನಿಚ್ಚಮ್ ಪೊಸದಾದ' ಸಮುದ್ರಕ್ಕೆ ಹೋಲಿಸುತ್ತಾನೆ. ನನಗೆ ಈ ಕಾದಂಬರಿಯು ಅಂಥ ಕಡಲಾಗಿದೆ. ತೆರೆತೆರೆಯಾಗಿ ಪ್ರತಿಕ್ಷಣವೂ ಹೊಸದಾಗಿ ನನ್ನನ್ನು ಅದು ಆವರಿಸಿಕೊಳ್ಳುತ್ತದೆ. ಅದರಲ್ಲಿರುವುದು ಅದೆಂಥ ಅಪ್ರತಿಮ ಮಾನವ ಲೋಕ! ಇಲ್ಲಿ ಯಾರಿಗೂ ಮೋಕ್ಷವೇ ಇಲ್ಲ. ದೈನಂದಿನ ಬದುಕಿನ ಮಣ್ಣಿನ ಸೆಳೆತ ಹಾಗಿದೆ. ಕಾಮ, ಹಾದರ, ಮೋಸ, ಪ್ರೀತಿ ಅಂತಃಕರಣ, ಬದುಕಿನ ರಹಸ್ಯಮಯತೆ, ಹಾವಿನಂತೆ ಎಗರುವ ಅದರ ದುರಂತಗಳು, ಗಂಡು–ಹೆಣ್ಣುಗಳ ನಡುವೆ ಅಂಟಿದ ನಂಟಿನ ಕೊನೆಯನ್ನು ಈ ವಿಶ್ವ, ಈ ಸೃಷ್ಟಿಗಳೂ ಅರಿತಿಲ್ಲವೆಂಬ ಅರಿವು ಇವೆಲ್ಲವುಗಳು ಈ ಕಾದಂಬರಿಯಲ್ಲಿ ಹೆಣೆದುಕೊಂಡಿವೆ. ಬದುಕಿನ ಕ್ಷಣಿಕವಾದ ಅಧ್ಬುತ ಕ್ಷಣಗಳನ್ನು ಹಿಡಿದುಕೊಡು ಕಷ್ಟವಲ್ಲ. ಅನೇಕ ಕೃತಿಗಳು ಅದನ್ನು ಸಮರ್ಥವಾಗಿಯೇ ನಿರ್ವಹಿಸುತ್ತವೆ. ಆದರೆ ಆದಿಯೂ ಇಲ್ಲದೆ ಅಂತ್ಯವೂ ಇಲ್ಲದೆ ಬದುಕಿನ ಮೂಲಲಯಗಳನ್ನು 'ಮಹಾಭಾರತ' ಟಾಲ್‌ಸ್ಟಾಯ್ ಕಾದಂಬರಿಗಳು ಹಾಗೂ ಕುವೆಂಪು ಅವರ ಈ ಕಾದಂಬರಿ ಮಾತ್ರ ಹಿಡಿದುಕೊಟ್ಟಿವೆ. ಎಂದು ನನ್ನ ಭಾವನೆಯಾಗಿದೆ. ಇದು ಏಕಕಾಲಕ್ಕೆ ಇತಿಹಾಸ, ಪುರಾಣ, ಕಾವ್ಯ ಹಾಗೂ ಕಥನವಾಗಿದೆ. ಇಂಥದು ಕನ್ನಡ ಭಾಷೆಯಲ್ಲಿ ಆಗುವುದಕ್ಕಾಗಿಯೇ ಕನ್ನಡ ಭಾಷೆ ಇಷ್ಟು ಸಾವಿರ ವರ್ಷ ತನ್ನ ಕಸುವನ್ನು ಸಾಧಿಸುತ್ತ ಬಂದಿತು ಎನ್ನಿಸುತ್ತದೆ. ಇನ್ನೊಂದು ಕಾರಣವನ್ನು ಹೇಳಿ ಈ ಟಿಪ್ಪಣಿ ಮುಗಿಸುತ್ತೇನೆ. ಶುದ್ಧವಾದ ಅರ್ಥದಲ್ಲಿ ನಾಸ್ತಿಕನಾದ ನನಗೆ ಮೀರಿ ಹೋಗುವ, ಮಿಕ್ಕು ಮೀರಿ ಹೋಗುವ ಸ್ಥಿತಿಯು ಜೀವನದಲ್ಲಿ ಉತ್ಕಟವಾದ ಪ್ರೀತಿಯಲ್ಲಿ ಬಿಟ್ಟರೆ ಈ ಕಾದಂಬರಿಯ ಓದಿನಲ್ಲಿ ಸಿಕ್ಕಿದೆ ಹಾಗೂ ಸಿಗುತ್ತದೆ. ಯಾವಾಗಲೂ–



–ಡಾ. ರಾಜೇಂದ್ರ ಚೆನ್ನಿ, ವಿಮರ್ಶಕರು ಮತ್ತು ಚಿಂತಕರು

'ಮ' ಅವರ ಶ್ರೀರಾಮಕೃಷ್ಣ ವಚನವೇದ




ನಾನು ಮತ್ತೆ ಮತ್ತೆ ಓದುವ ಪುಸ್ತಕ ಎಂದರೆ ಮಾಸ್ಟರ್ ಮಹಾಶಯ ಅವರ 'ಶ್ರೀರಾಮಕೃಷ್ಣ ವಚನವೇದ'. ನಾನು ಕಣ್ಣುಬಿಟ್ಟಾಗಿನಿಂದ ನೋಡಿದ್ದು ನಮ್ಮ ಮನೆಯ ಹಜಾರದಲ್ಲಿ ತೂಗುತ್ತಿದ್ದ ರಾಮಕೃಷ್ಣ ಮತ್ತು ವಿವೇಕಾನಂದರ ಪಟಗಳು. ಸತತವಾಗಿ ೨೫ ವರ್ಷಗಳ ಕಾಲ ಬರೀ ಪಟಗಳನ್ನಷ್ಟೇ ನೋಡಿ ಕಣ್ಣು ತುಂಬಿಕೊಂಡಿದ್ದ ನಾನು ಅದರೊಳಗೆ ಇಳಿದದ್ದು ಬುದ್ಧ

ಗುರು ಕೆ.ಎಂ. ಶಂಕರಪ್ಪನವರ ಒಂದು ಮಾತಿನಿಂದ. ಆ ದಿನಗಳಲ್ಲಿ 'ಯೋಗಿಯ ಆತ್ಮಕತೆ', ಸ್ವಾಮಿ ರಾಮ, ಬುದ್ಧ ಸಿದ್ಧ ಎಂದು ಎತ್ತೆತ್ತಲೋ ಎಡತಾಕುತ್ತಿದ್ದಾಗ, 'ಚೋರ ಗುರುವಿನ ಚಂಡಾಲ ಶಿಷ್ಯ'ರಾದ ನಾವು ಇದು ಸಾಲದು, ಇದು ಸಾಲದು ಎಂದು ಹಪಹಪಿಸುತ್ತಿದ್ದಾಗ 'ರಾಮಕೃಷ್ಣ ವಚನವೇದ' ಓದ್ರೋ ಬಡೆತ್ತವಾ... ದಾರಿಗೆ ಬತ್ತೀರಾ' ಎಂದರು. ನಾವು ಅವ್ರರ ಮಾತನ್ನು ಶಿರಸಾ ಪಾಲಿಸಿದೆವು. ದಾರಿಗೆ ಬಂದೆವೋ ಇಲ್ಲವೋ, ಆದರೆ ನಿಜ ಗುರುವಿನತ್ತ ನಮ್ಮನ್ನು ನಡೆಸಿದರು ಶಂಕರಪ್ಪನವರು.

ಶ್ರೀರಾಮಕೃಷ್ಣ ವಚನವೇದ ಎರಡು ಸಂಪುಟಗಳಲ್ಲಿದ್ದು ರಾಮಕೃಷ್ಣರ ಶಿಷ್ಯರಾದ ಮಹೇಂದ್ರನಾಥ ಗುಪ್ತ ('ಮ') ಎಂಬುವವರು ಇದರ ಕರ್ತೃ. ಪರಮಹಂಸರ ಜೀವನದ ಕೊನೆಯ ಸುಮಾರು ನಾಲು ವರುಷಗಳಷ್ಟು ಕಾಲ ಅವರ ನಿಕಟ ಸಂಪರ್ಕದಲ್ಲಿದ್ದು ಪರಮಹಂಸರ ನಡೆನುಡಿಗಳನ್ನು ಕಣ್ಣಾರೆ ಕಂಡು ಕಿವಿಯಾರೆ ಕೇಳಿ ಬರೆದಿಟ್ಟರು. ಇದನ್ನು ಓದಿದಾಗ ಶ್ರೀರಾಮಕೃಷ್ಣರೇ ನನ್ನೆದುರು ಕುಳಿತು ಮಾತನಾಡಿದಂತೆ ಭಾಸವಾಗುತ್ತದೆ. ಈ ಗ್ರಂಥದ ಮೊದಲ ಸಂಪುಟದಲ್ಲಿ ಕವಿ ಕುವೆಂಪು ಅವರ ಮುನ್ನುಡಿ ಇದೆ. ಇದರ ಒಂದು ಮುಖ್ಯ ಮಾತು : ' ಈ 'ವಚನವೇದ'ವು ವೇಗಳು ಹೊಗಲಾರದ, ಕೆಲವರ ಪ್ರಕಾರ ಹೊಗಬಾರದ ಮೂಲೆ ಮೂಲೆಗಳನ್ನೂ ಪ್ರವೇಶಿಸಿ ಜ್ಯೋತಿರ್ದಾನ ಮಾಡುತ್ತದೆ'

ವಚನವೇದದಲ್ಲಿ ಆಗಾಗ ಒಂದು ಮಾತು ಬರುವುದು : ಎಲ್ಲವನೂ ಭಗವತಿಗೆ ಅರ್ಪಿಸಿಬಿಡು, ಆಕೆಗೆ ಶರಣಾಗು. ಆಕೆ ಎಲ್ಲವನ್ನೂ ತಿಳಿಸಿಕೊಡುವಳು. ಪರಮಹಂಸರೋ ಕಾಳಿಯ ಮೂಗಿಗೆ ದಾರ ಹಿಡಿದು ಅದು ಅಲುಗಾಡಿದಾಗ 'ಆಹಾ! ಕಾಳಿ ನಿಜವಾಗಿಯೂ ಉಸಿರಾಡುತ್ತಿರುವಳು' ಎಂದು ಕಂಡುಕೊಂಡವರು. ಅಂತಹ ಅಚಲ ವಿಶ್ವಾಸ ಅವರದು. ಆದರೆ ಸಂಶಯಾತ್ಮರಾಗಿ ಹುಟ್ಟಿದಾರಭ್ಯ ಕೈಕಾಲು ಬಡಿಯುತ್ತಲೇ ದೇಕುತ್ತಿರುವ ನಮಗೆ ಭಗವತಿಗೆ ಮೊರೆ ಹೋದರೆ ಕೈಕಾಲು ಬಡಿತ ತಾನೇ ನಿಲ್ಲುವುದು ಎಂಬ ಗುರು ಮಾತಿನಲ್ಲಿ ವಿಶ್ವಾಸ ಹೇಗೆ ತಾನೇ ಬರುವುದು? ಅಂತೆಯೇ ಈ ಪುಸ್ತಕ ಓದಿದಾಗ ಈತ ಹುಚ್ಚನೋ, ಮಾನಸಿಕ ರೋಗಿಯೋ ಎಂದು ಪರಮಹಂಸರ ಬಗ್ಗೆಯೇ ಅನುಮಾನಪಡುವಂತೆ ಆಗುವುದು. ಶ್ರೀರಾಮಕೃಷ್ಣ ವಚನವೇದ' ಏನೆಂದು ಬಣ್ಣಿಸಲು ನನ್ನಲ್ಲಿ ಮಾತುಗಳಿಲ್ಲ. ಓದಿದರೆ ತಾನೇ ಬೋಧೆಯಾಗುವುದು. ಸರಳ ಸುಂದರ ಕನ್ನಡದಲ್ಲಿರುವುದು ಕನ್ನಡದ ಭಾಗ್ಯವೇ ಸರಿ. ಸಾವಿರಾರು ಪುಟಗಳ ಈ ಪುಸ್ತಕದ ಬೆಲೆ ನೂರೋ ಇನ್ನೂರೋ ಇದ್ದೀತು. ಆದರೆ ಇದನ್ನು ಸಂಧಿಸುವ ಕಾಲ ಬರಲು ಗುರು ಪ್ರೇರಣೆ ಆಗಲೇಬೇಕು.



ಸುಲಭಗ್ರಾಹ್ಯ ಸರಳ ದೃಷ್ಟಾಂತ ಕಥೆಗಳ ಮೂಲಕ ನಾನು ಓದಿದ ವೈವಿಧ್ಯಮಯ ಪುಸ್ತಕದ ರಾಶಿ ಯಾವುದನ್ನು ನನಗೆ ತಿಳಿಸಲಿಲ್ಲವೋ ಆ ತಿಳಿವನ್ನು ಈ ಪುಸ್ತಕ ನೀಡಿದೆ. ಹಾಗಾಗಿ ಈ ಸಂಪುಟಗಳು ಸದಾ ನನ್ನ ಒಡನಾಡಿಗಳು.

–ಸವಿತಾ ನಾಗಭೂಷಣ, ಕವಯತ್ರಿ ಹಾಗೂ ಕಾದಂಬರಿಗಾರ್ತಿ

ಯಶವಂತ ಚಿತ್ತಾಲರ 'ಮೂರು ದಾರಿಗಳು'



ಯಾವುದೋ ಒಂದು ಪುಸ್ತಕ ಅಥವಾ ಒಬ್ಬ ಲೇಖಕ ಅತಿ ಶ್ರೇಷ್ಠ ಎಂದು ಹೇಳುವುದು ಸಾಹಿತ್ಯದ ವೈವಿಧ್ಯತೆಯಿಂದ ಪಡೆದ ಸಂತೋಷಕ್ಕೆ ಎಸಗುವ ಅಪಚಾರವೆಂದು ಭಾವಿಸುತ್ತೇನೆ. ಹಾಗಾಗಿ ಅತ್ಯುತ್ತಮವೆಂಬುದನ್ನು ಬದಿಗಿಟ್ಟು, ಮರುಓದಿಗೆ ನನ್ನನ್ನು ಮತ್ತೆಮತ್ತೆ ಸೆಳೆದ ಪುಸ್ತಕಗಳಲ್ಲಿ ಒಂದಾದ ಯಶವಂತ ಚಿತ್ತಾಲರ 'ಮೂರು ದಾರಿಗಳು' ಕಾದಂಬರಿಯ ಆಕರ್ಷಣೆಗೆ ಕಾರಣವಾದ ಮೂರು ಸಂಗತಿಗಳನ್ನು ಹೇಳುತ್ತೇನೆ. ಸಾಹಿತ್ಯಿಕ ಕಾರಣಗಳ ಹೊರತಾಗಿಯೂ ಈ ಕೃತಿಗೆ ನನ್ನ ಭಾವಪ್ರಪಂಚದಲ್ಲಿ ವಿಶೇಷವಾದ ಸ್ಥಾನವಿದೆ.

ಮೊದಲನೆಯದಾಗಿ, ಅತಿಸಾಮಾನ್ಯವಾದುದನ್ನು ಸಾಹಿತ್ಯದ ಸ್ಪರ್ಷದಿಂದ ಅಸಾಮಾನ್ಯವನ್ನಾಗಿಸುವುದು ಹೇಗೆಂಬುದನ್ನು ನಾನು ಕಂಡಿದ್ದು ಈ ಕಾದಂಬರಿಯಲ್ಲಿ. ಸಾಹಿತ್ಯದ ಕುರಿತಾದ ಗ್ರಹಿಕೆಗಳನ್ನು ರೂಪಿಸಿಕೊಳ್ಳುತ್ತಿದ್ದ, ಸ್ವಂತ ಅನುಭವದ ವಿಶಿಷ್ಟತೆಯೇನೆಂಬುದನ್ನು ಹುಡುಕುತ್ತಿದ್ದ ನನ್ನ ಹರೆಯದ ವಯಸ್ಸಿನಲ್ಲಿ ಕೈಗೆ ಸಿಕ್ಕಿದ ಈ ಕಾದಂಬರಿಯಲ್ಲಿ ನಾನು ಓಡಾಡುವ ಜಾಗಗಳು, ಪರಿಚಯದ ಊರಿನ ಹೆಸರುಗಳು ಅಪೂರ್ವವಾದ ವರ್ಚಸ್ಸನ್ನು ಪಡೆದಿದ್ದನ್ನು ಕಂಡೆ. 'ಮೂರು ದಾರಿಗಳ ಕೂಟಸ್ಥಾನದಲ್ಲೇ ಹುಲಿದೇವರ ಗುತ್ತ' ಎಂಬ ವಾಕ್ಯವನ್ನು ಓದಿದಾಗ ಅದುವರೆಗೂ ನೂರಾರು ಬಾರಿ ನೋಡಿದ್ದ ಕುಮಟೆಯ ಹುಲಿದೇವರ ಕಲ್ಲಿನ ಮೂರ್ತಿಯು ರಹಸ್ಯವಾದ ಸಂಕೇತಾರ್ಥವೊಂದನ್ನು ತನ್ನ ಒಡಲೊಳಗೆ ಇಟ್ಟುಕೊಂಡ ಪ್ರತಿಮೆಯಾಗಿ ಮಾರ್ಪಾಟಾಗಿದ್ದು ಅನುಭವಕ್ಕೆ ಬಂದಿತ್ತು. ಹೀಗೆ ಸುತ್ತಲಿನ ವಾಸ್ತವವು ಸಾಹಿತ್ಯ ಕೃತಿಯಲ್ಲಿ ಮೈದಾಳಿದ್ದನ್ನು ಅನುಭವಿಸಿದ ತೀವ್ರತೆ ಹೇಗಿತ್ತೆಂದರೆ, ರಸ್ತೆ ಮರ ಓಣಿ ದಣಪೆ ಹೀಗೆ ಕಂಡದ್ದೆಲ್ಲವನ್ನೂ ಬರೆಯಲಿರುವ ಕತೆಯ ವಾಕ್ಯಗಳಾಗಿ ಮನಸ್ಸು ಊಹಿಸುತ್ತಿತ್ತು.

ಎರಡನೆಯದಾಗಿ, ಎಲ್ಲ ಉತ್ತಮ ಬರವಣಿಗೆಯ ಹಾಗೆ ಇಲ್ಲಿಯೂ ಸಾಂಕೇತಿಕತೆಯು ಕೃತಿಯುದ್ದಕ್ಕೂ ಅದೃಶ್ಯವಾಗಿ ವ್ಯಾಪಿಸಿಕೊಂಡಿದೆ. ಮುಖ್ಯವಾದ ಮಾತೆಂದರೆ ಅದು ಸಾಂಕೇತಿಕವೆಂದು ಗೊತ್ತಾಗಬಾರದು, ಆದರೆ ಅನುಭವಕ್ಕೆ ಬರಬೇಕು. ಕಾದಂಬರಿಯ ಮೊದಲ ಪುಟದಲ್ಲಿಯೇ, ರಾತ್ರಿಯ ಸಮಯದಲ್ಲಿ ಹೊರಡಲಿರುವ ಕೊನೆಯ ನಾವೆಯನ್ನು ಕೂಹೂ ಎಂದು ಕೂಗಿ ನಿಲ್ಲಿಸಿದ ದನಿಯಾಗಿ, ಕತ್ತಲೆಯಲ್ಲಿ ಧಕ್ಕೆಯತ್ತ ಧಾವಿಸುತ್ತಿರುವ ಕಂದೀಲಿನ ಕಿರುಬೆಳಕಾಗಿ ಮುಖ್ಯಪಾತ್ರಗಳಲ್ಲೊಂದಾದ ವಿಶ್ವನಾಥರು ಗೋಚರಿಸುತ್ತಾರೆ. ನಂತರ ಓಲಾಡುವ ನಾವೆಯಲ್ಲಿ ಅವರ ರಾತ್ರಿಯ ಪ್ರಯಾಣ. ನಡುವೆ ಇಸ್ಪೀಟಿನ ಆಟ. ಆರಂಭದ ಅಧ್ಯಾಯ ಮುಗಿಯುವ ಹೊತ್ತಿಗೆ ಇದೆಲ್ಲವೂ ನಮ್ಮ ಪಂಚೇಂದ್ರಿಯಕ್ಕೆ ನಿಲುಕುವ ಅನುಭವವಾಗಿ, ಕಾದಂಬರಿಯ ಬೀಜ ನಮ್ಮೊಳಗೆ ಬಿದ್ದು ಗಿಡವಾಗಿ, ವಿಶ್ವನಾಥರ ಅಲ್ಲೋಲಕಲ್ಲೋಲ ಮನಸ್ಥಿತಿಯ ಪೂರ್ಣ ದರ್ಶನವಾಗಿರುತ್ತದೆ. ಇಂಥ ಕಲಾಪರಿಣತಿಯು ವಿಶಿಷ್ಟವಾದುದು. ಅದೇ ರೀತಿ, 'ಸಿಡಿಮದ್ದಿನ ವಾಸನೆ' ಎಂಬ ಹೆಸರಿನ ಕೊನೆಯ ಅಧ್ಯಾಯವು ಆರಂಭವಾಗುವುದು ಮದುವೆಯ ಮೆರವಣಿಗೆ ಮತ್ತು ಗರ್ನಾಲುಗಳ ಸಿಡಿಮದ್ದಿನ ವಾಸನೆಗೆ ಕಥಾನಾಯಕಿ ನಿರ್ಮಲೆ ಉನ್ಮತ್ತಳಾಗುವ ವಿವರಗಳೊಂದಿಗೆ. ಈ ಉನ್ಮತ್ತತೆಯು ಅವಳ ಒಳಗಿನ ಸಿಡಿಮದ್ದಿನ ವಾಸನೆಯಿಂದ ಬಂದಿರಬಹುದೆಂದು ನಮ್ಮ ಮನಸ್ಸು ಶಂಕಿಸುತ್ತದೆ. ಭೀತಿ ಪ್ರೀತಿ ಬಂಡಾಯಗಳೆಂಬ ಮೂರು ದಾರಿಗಳ ಕೂಟಸ್ಥಾನದಲ್ಲಿ ಅವಳೊಳಗಿನ ಸಿಡಿಮದ್ದು ಸ್ಫೋಟಿಸಿ ಆಕೆಯ ಬಲಿಪಡೆಯುವುದನ್ನು ಅಸಹಾಯಕವಾಗಿ ಗಮನಿಸುತ್ತೇವೆ.

ಕೊನೆಯದಾಗಿ, ಕಥೆಯ ಭೌತಿಕ ಪರಿಸರಕ್ಕೂ ಮನುಷ್ಯ ಸ್ವಭಾವಕ್ಕೂ ಇರುವ ಅವಿನಾಭಾವ ಸಂಬಂಧವನ್ನು ಗುರುತಿಸುವುದು, ಅದನ್ನು ಬಾಯಿಬಿಟ್ಟು ಹೇಳದೆಯೇ ವ್ಯಕ್ತಪಡಿಸುವುದು, ಉತ್ತಮ ಬರವಣಿಗೆಯ ಪ್ರಮುಖ ಲಕ್ಷಣ. ದಟ್ಟವಾದ ನಿಸರ್ಗದ ಹಿನ್ನೆಲೆಯನ್ನು ಕುವೆಂಪು ಕಾರಂತರ ಹಾಗೆ ಚಿತ್ತಾಲರೂ ಕತೆಯ ಅಂತರಂಗದ ಜೊತೆ ಹೆಣೆದಿದ್ದಾರೆ. ಅಷ್ಟು ಮಾತ್ರವಲ್ಲ ಊರುಕೇರಿಯ ವಿವರಗಳೂ ಸಹ ಇಲ್ಲಲ್ಲದೇ ಬೇರೆಲ್ಲಿಯೂ ಈ ಕತೆ ಘಟಿಸಲು ಶಕ್ಯವಿಲ್ಲವೆಂಬಷ್ಟು ಅನನ್ಯವಾಗಿವೆ.



–ವಿವೇಕ ಶಾನಭಾಗ, ಕಥೆಗಾರ ಮತ್ತು ಕಾದಂಬರಿಕಾರ

ಸಾರಾ ಶಾಗುಫ್ತಾರ 'ಜೀವನ ಮತ್ತು ಕಾವ್ಯ'



ನನ್ನ ಆಯ್ಕೆಯ ಅತ್ಯುತ್ತಮ ಪುಸ್ತಕವೆಂದರೆ ನಾನು ಇತ್ತೀಚೆಗೆ ಓದಿದ ಪಾಕಿಸ್ತಾನಿ ಕವಯತ್ರಿ ಸಾರಾ ಶಾಗುಫ್ತಾರ 'ಜೀವನನ ಮತ್ತು ಕಾವ್ಯ'. ಅಮೃತಾ ಪ್ರೀತಂ ಬರೆದಿರುವ ಈ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿರುವವರು: ಹಸನ್ ನಯೀಂ ಸುರಕೋಡ. ಈ ಪುಸ್ತಕವನ್ನು ಕೈಗೆತ್ತಿಕೊಂಡಾಗ ಗಂಟೆ ಎಷ್ಟಾಗಿತ್ತೋ? ಕೆಳಗಿಟ್ಟಾಗ ಪುಟಗಳು ಮುಗಿದಿದ್ದವು. ಹೊರಗೆ ಗುಬ್ಬಿಗಳು ಕಿಚಿಗುಡುತ್ತಿದ್ದವು. ಅವುಗಳ ಕಿಚಿಪಿಚಿಯಲ್ಲಿ ನಾನಿರುತ್ತೇನೆ– ಎಂದಿದ್ದ ಸಾರಾ ಕಾಣತೊಡಗಿದ್ದಳು. ಮೈ–ಮನಸ್ಸೆಲ್ಲ ಬೆಂಕಿಯಲ್ಲಿ ತೊಯ್ಯಿಸಿಕೊಂಡಂತೆ ಉರಿ. ಇನ್ನೆಂದೂ ಸಾಂತ್ವನಿಸಲಾರೆ ಎನ್ನುವ ಕಣ್ಣೀರು. ಇಂದಿಗೂ ದಿಕ್ಕೆಟ್ಟ ಗಳಿಗೆಗಳಲ್ಲಿ ಆತ್ಯಂತಿಕ ಸಂಕಟದ ರೂಪಕವಾಗಿದ್ದ ಸಾರಾಳ ಕವಿತೆಯ ಸಾಲುಗಳು ಸಂಭಾಳಿಕೆಯಾಗುತ್ತವೆ. ಹೌದು, 'ಒಂದು ಅಲೆ ಇಲ್ಲವಾದರೆ ಸಾಗರವೇನೂ ಬಡವಾಗಲಾರದು'.

ಚಂದಿರನ ಬದಲಿಗೆ ಕೋರಲಾರೆ ಆಕಾಶವನ್ನು– ಎಂದಿದ್ದಳು ಸಾರಾ. ಗಂಡಾಳಿಕೆಯ ಮನೋಧರ್ಮವನ್ನು ನಿಷ್ಠೆಯಿಂದ ಎದುರಿಸಿದವಳು.'ಅವಳು ಸಾಕ್ರೆಟಿಸ್ ಸೇವಿಸಿದ ವಿಷಕ್ಕಿಂತ ಘೋರವಾದ ಹಾಲಾಹಲವನ್ನು ಕುಡಿದಳು' ಎಂದರು ಅಮೃತಾ ಪ್ರೀತಂ. ಬದುಕನ್ನು ಅದಮ್ಯವಾಗಿ ಪ್ರೀತಿಸಿದ ಫಲವಾಗಿ

ಸಾರಾ ಮರಮರಳಿ ಮಾನಸಿಕ ರೋಗಿಯಾಗಿ ಆಸ್ಪತ್ರೆ ಸೇರುವಂತಾಗಿತ್ತು. ಸಮಾಜವನ್ನು ಬದಲಿಸುವ ಪ್ರಜಾಸತ್ತಾತ್ಮಕ ದಾರಿಯಲ್ಲಿ ನಡೆದದ್ದಕ್ಕಾಗಿ ಜೈಲು ಸೇರುವಂತಾಗಿತ್ತು. ಬರೆದ-ಪ್ರಕಟಿಸಿದ ಅಪರಾಧಕ್ಕಾಗಿ ಕುಟುಂಬ ವಿದ್ರೋಹದ ಅಪನಿಂದೆಯನ್ನು ಹೊತ್ತು, ಅನಾಥವಾಗಿ ಅಲೆಯುವಂತಾಗಿತ್ತು. ಗಂಡನ ಕ್ರೌರ್ಯವನ್ನು ವಿರೋಧಿಸಿದ್ದಕ್ಕಾಗಿ ಹೆತ್ತ ಮಕ್ಕಳಿಂದಲೇ ಪರಿತ್ಯಕ್ತಗೊಳ್ಳುವಂತಾಯಿತು. ಆದರೆ ಸಾರಾ ಬದುಕಿದಷ್ಟು ಕಾಲವೂ, ಕಿತ್ತಷ್ಟೂ ಚಿಗುರೊಡೆವ ಹುಲ್ಲಿನಂತೆ ಬಾಳಿದಳು.

ಈ ಕೃತಿ ಮುಖ್ಯವೆನಿಸುವುದು- ಪಿತೃ ಸಂಸ್ಕೃತಿಯಲ್ಲಿ ಹೆಣ್ಣು ಅನುಭವಿಸಿದ ಯಾತನೆಯ ವಿವರಗಳಿಗಾಗಿಯಲ್ಲ. ಅದನ್ನು ದಾಟಲೆತ್ನಿಸುವ ತ್ರಾಣಕ್ಕಾಗಿ. ಅವಳ ಮೊದಲ ಗಂಡನಿಂದ ಮೂರು ಮಕ್ಕಳ ತಾಯಾದಾಗ, ಸಾರಾ ಬುರ್ಖಾದೊಳಗಿನ 14ರ ಯುವತಿ. ನಾಲ್ಕಾಣೆ ಉಳಿಸಿ ಪುಸ್ತಕ ಕೊಂಡುಕೊಳ್ಳುವ ಕನಸು ಹೊತ್ತವಳು. ಗಂಡ, ಸಾರಾಳ ಅಣ್ಣನ ಮಗಳ ಮೇಲೆ ಅತ್ಯಾಚಾರದ ಪ್ರಯತ್ನ ಮಾಡಿದರಾತ್ರಿ- ಸಾರಾ, ತನ್ನ ಒಂದು ವರ್ಷದ ಹೆಣ್ಣುಮಗುವನ್ನು ಆ ಅಪ್ಪನ ಮುಂದೆ ನಿಲ್ಲಿಸಿ; 'ಅದೇನು ಮಾಡಬೇಕಂತಿಯೋ ಮಾಡಿಕೋ' ಎಂದು ಗುಡುಗಿದಳು. ಆ ರಾತ್ರಿಯವಳು ವಿಚ್ಛೇದನದ ನಿರ್ಧಾರ ಮಾಡಿದಾಗ, ಅವಳ ಕೊನೆಯ ಮಗುವಿಗೆ ಏಳು ದಿನ.

ಸಾರಾ ಬರೆಯಲಾರಂಭಿಸಿದ್ದು ತನ್ನ ಎದೆಹಾಲು ಹಿಂಡಿ ಪಾತ್ರೆಗೆ ಹಾಕಿ ಕಾಯಲಿಟ್ಟು. ಅವಳ ನಾಲ್ಕನೆಯ ಮಗು ಆಸ್ಪತ್ರೆಯಲ್ಲಿ ಕಫನ್ ಬಟ್ಟೆಗೂ ಗತಿಯಿಲ್ಲದೆ ಶವವಾಗುತ್ತದೆ. ಹಸಿಮೈಯಲ್ಲಿ ರಕ್ತ ಸೋರುವ ಸಾರಾ ಹುಚ್ಚಿಯಂತೆ ಅಲೆದು ಸಾಲ ತಂದು ಆಸ್ಪತ್ರೆಯ ಬಿಲ್ ಕಟ್ಟುತ್ತಾಳೆ. ಕಾಯಲಿಟ್ಟ ಎದೆಹಾಲಿನ ಮೇಲೆ ಆಣೆಯಿಟ್ಟು ಬರೆದಳು. ಮಕ್ಕಳನ್ನು ತನ್ನ ತಾಬೆ ಪಡೆಯಲು ಕಟಕಟೆಯಲ್ಲಿ ನಿಂತು, ತಾನೊಬ್ಬ ಸೂಳೆ- ಎಂದು ಹೇಳಿಕೊಂಡಳು. ಗಂಡ ಅದೇ ಮಕ್ಕಳನ್ನು ಕುರಾನಿನ ಆಣೆಯಿಟ್ಟು ಮೋಸದಿಂದ ಶಾಶ್ವತವಾಗಿ ಅಗಲಿಸಿದ. ಬರೆದಳು ಸಾರಾ-

ಹೆಣ್ಣುಜನ್ಮ ನೀಡುತ್ತಲೇ
ತೋಡಿಕೊಳ್ಳುವಳು ತನಗೊಂದು ಗೋರಿ

ಕೃತಿ ಆವರಿಸಿಕೊಳ್ಳುವುದು, ಸಾರಾಳದ್ದು ಮಾತ್ರ ಎನಿಸುವ ಭಾಷೆಯತೀವ್ರತೆಗಾಗಿ. ಮತ್ತು ದೂರದ ಸಾರಾಳಿಂದ ತನ್ನೆಡೆಗೆ ಬರುತ್ತಿರುವ ಪತ್ರದಂತಹ ಕವಿತೆ, ಕವಿತೆಯಂತಹ ಪತ್ರಗಳನ್ನು ಎದೆಗವಚಿಕೊಂಡು ಸಾರಾಳನ್ನು ಕಾಣಿಸಿದ ಅಮೃತಾರ ಮಮತೆಗಾಗಿ. ಅಮೃತಾ, ತಮ್ಮ 'ನಾಗಮಣಿ' ಪತ್ರಿಕೆಯಲ್ಲಿ ಬಲ್ದೆ ಅಕ್ಖರ್ (ಸುಡು ಶಬ್ದಗಳು) ಎಂಬ ಅಂಕಣದಲ್ಲಿ ಹಲವು ತಿಂಗಳು ಸಾರಾಳ ಕವಿತೆಗಳನ್ನು ಪ್ರಕಟಿಸಿದರು. ತನ್ನ ನಾಡಿನಲ್ಲಿ ನೆಲೆಯಿಲ್ಲದವಳ ಪುಸ್ತಕವನ್ನು ಮೊದಲು ಅಮೃತಾ ಪ್ರಕಟಿಸಿದರು. ಬದುಕಿಡೀ ಹಂಬಲಿಸಿದ್ದ ಪ್ರೀತಿ ಕಟ್ಟಕಡೆಗೂ ಒದಗಿದಾಗ ಬಾಳಿಗೆ ವಿದಾಯ ಹೇಳಿದ ಸಾರಾಳ ವಿಷಾದವನ್ನು ಅಮೃತಾ ಕಾಣಿಸಿದರು.


ಇಡೀರಾತ್ರಿ ಅರ್ಧಚಂದಿರನನ್ನು ದಿಟ್ಟಿಸುತ್ತೇನೆ
ಇನ್ನರ್ಧಎಲ್ಲಿ ಹೋಯಿತು?



ಎಂಬ ಸಾರಾಳ ಬೇಗುದಿಯಲ್ಲಿ ಹೆಣ್ಣಿನ ಬಾಳಿನ-ಅಭಿವ್ಯಕ್ತಿಯ ಮೀಮಾಂಸೆಗಳಿವೆ. ಸಾರಾ ಮತ್ತು ಅಮೃತಾರ ಈ ಜುಗಲ್‌ಬಂದಿಯನ್ನು ಹಸನ್ ನಯೀಂ ಸುರಕೋಡರ ಹೆಣ್ಣುಗಳ್ಳಿನ ಭಾಷೆ ದಟ್ಟವಾಗಿ ಕನ್ನಡಕ್ಕೆ ತಂದಿದೆ. ಇದು, ಭಾವಸತ್ಯವನ್ನೂ, ಲೋಕಸತ್ಯವನ್ನೂ ಮೀಟುತ್ತಿದೆ.ಹಾಗಾಗಿ...

-ವಿನಯಾ ಒಕ್ಕುಂದ., ಕವಯತ್ರಿ ಮತ್ತು ಕಥೆಗಾರ್ತಿ

ಶಿವರಾಮ ಕಾರಂತರ 'ಚೋಮನ ದುಡಿ'



ಎಂಬತ್ತರರ ದಶಕದಲ್ಲಿ 'ಚೋಮನ ದುಡಿ' 'ಸಂಸ್ಕಾರ' 'ಭಾರತೀಪುರ' 'ದಾಟು' ಈ ಕಾದಂಬರಿಗಳು ಅನುಭವ ಮತ್ತು ಅಭಿವ್ಯಕ್ತಿಗೆ ಸಂಬಧಿಸಿದಂತೆ ಹೆಚ್ಚು ಚರ್ಚೆಗೆ ಒಳಗಾದವು. 'ದಲಿತತ್ವ'ದ ಅಭಿವ್ಯಕ್ತಿ ದಲಿತರಿಂದಲೇ ಸಾಧ್ಯ ದಲಿತೇತರರಿಂದ ಅದು ಸಾಧ್ಯವಿಲ್ಲ' ಏಕೆಂದರೆ ಅದು ಅನುಕಂಪ ಕೇಂದ್ರಿತವಾದದು ಎನ್ನುವ ವಾದವನ್ನು ಮುಂದಿಡಲಾಗಿತ್ತು. 'ಅನುಭವ ಮತ್ತು ಅಭಿವ್ಯಕ್ತಿ ಯಾವುದೇ ವಸ್ತುವಿಗೆ ಲೇಖಕ ಎಷ್ಟು ಹತ್ತಿರದಿಂದ ಅನುಭವಿಸಿದ್ದಾನೆ ಹಾಗೂ ಗ್ರಹಿಸಿದ್ದಾನೆ ಎನ್ನುವ ಎರಡೂ ಅಂಶಗಳೊಂದಿಗೆ ಲೇಖಕನ ಅಭಿವ್ಯಕ್ತಿಯ ಸಾಮರ್ಥ್ಯವೂ ಅಷ್ಟೇ ಮುಖ್ಯವಾಗುತ್ತದೆ. ದಲಿತತ್ವದ ಅನುಭವವಿದ್ದೂ ಅಭಿವ್ಯಕ್ತಿಯ ಸಾಮರ್ಥ್ಯ ಇಲ್ಲದೆ ಹೋದರೆ ಅಲ್ಲಿ ದಲಿತತ್ವವೂ ಅಂತಹ ಪರಿಣಾಮ ಬೀರಲಾರದು'ಎಂದು ವಾದಿಸಿ ಕೆಲವರಿಂದ ನಿಂದನೆಗೆ ತುತ್ತಾಗಿದ್ದೆ. ನನ್ನವಾದಕ್ಕೆ ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯನ್ನು ಎತ್ತಿಕೊಂಡು ಪ್ರತಿಪಾದಿಸಿದ್ದೆ. ಈ ಕಾದಂಬರಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯೇ ಒಂದು ಮೈಲುಗಲ್ಲಾಗಿದೆ.

ಕಾರಂತರ ಈ ಕಾದಂಬರಿಯನ್ನು ಮುಲ್ಕ್‌ರಾಜ್ ಆನಂದರ 'ಅಸ್ಪೃಶ್ಯ' ಎಂಬ ಕಾದಂಬರಿ ಪ್ರೇರಣೆಯಿಂದ ಬರೆದುದ್ದಾಗಿ ಚರ್ಚೆಗಳಿವೆ. ಇದು ದಕ್ಷಿಣ ಕನ್ನಡ ಜಿಲ್ಲೆಯ 'ಮೇರ' ಜನಾಂಗಕ್ಕೆ ಸಂಬಂಧಿಸಿದ ಚೋಮನ ಮನೆಯು ಛಿದ್ರಗೊಂಡ ಕಥೆಯನ್ನು ಹೇಳುತ್ತದೆ. ಚೋಮ ಸ್ವಂತ ಭೂಮಿಯನ್ನು ಹೊಂದಿ ಸಾಗುವಳಿ ಮಾಡಬೇಕೆಂಬ ಆಸೆಯನ್ನು ಹೊಂದಿ ಪೂರೈಸಿಕೊಳ್ಳಲಾಗದ ಸ್ಥಿತಿ ಹಾಗೂ ಅದಕ್ಕೆ ಸಂಬಂಧಿಸಿದ ನಂಬಿಕೆ ಸಂಪ್ರದಾಯಗಳನ್ನು ಈ ಕೃತಿ ಬಳಸಿಕೊಂಡು ಬಂದಿದೆ. ಅಸ್ಪೃಶ್ಯತೆಯ ಆಚರಣೆಯಿಂದಾಗಿ ಚೋಮನ ಮಗ ನೀಲ ನೀರಿನಲ್ಲಿ ಮುಳುಗಿ ಸಾಯುತ್ತಾನೆ. ತೀರಿಸಲಾಗದ ಸಾಲಕ್ಕೆ ಮಕ್ಕಳನ್ನು ದುಡಿಯಲು ಕಳುಹಿಸುತ್ತಾನೆ ಚೋಮ. ಗುರುವ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿ ಬೇಸಾಯಗಾರನಾಗುತ್ತಾನೆ. ಚನಿಯ ಜ್ವರಕ್ಕೆ ಬಲಿಯಾಗುತ್ತಾನೆ. ಕೊನೆಗೆ ಚೋಮ ಮತಾಂತರ ಹೊಂದಲಾಗದೆ ಸಮಸ್ಯೆಗಳಿಂದ ಬಿಡಿಸಿಕೊಳ್ಳಲಾಗದೆ ದುಡಿಯಂತೆ ಒಂಟಿಯಾಗುತ್ತಾನೆ.

ವಸಾಹತುಶಾಹಿ ಹಾಗೂ ಜಮೀನ್ದಾರಿ ಪದ್ಧತಿ ಎರಡೂ ನೆಲೆಯಿಂದ ಶೋಷಣೆಗೆ ಒಳಗಾಗುವ ಕುಟುಂಬವಾಗಿ, ಸಂಕಪ್ಪನ ತಾಯಿ ಹಿಂದೂ ಧರ್ಮದ ಜಡಗಟ್ಟಿದ ವ್ಯವಸ್ಥೆಗೆ ಸಂಕೇತವಾದರೆ, ಸಂಕಪ್ಪ ಅವರ ರೂವಾರಿಯಾಗಿಯೂ ಜಮೀನ್ದಾರಿ ವ್ಯವಸ್ಥೆಯ ಪ್ರತಿನಿಧಿಯಾಗಿ ನಿಲ್ಲುತ್ತಾನೆ. ಮನ್ವೇಲ ಸೋಜರು ಬೆಳ್ಳಿಯನ್ನು ದುರುಪಯೋಗ ಪಡಿಸಿಕೊಳ್ಳುವವನಾಗಿ ಬಂದರೆ, ಪಾದ್ರಿ ವಸಾಹತುಶಾಹಿಯ ಪ್ರತೀಕವಾಗುತ್ತಾನೆ. ಉಳುವವನು ಭೂಮಿಗೆ ಒಡೆಯನಾಗಬೇಕೆಂಬ ಆಶಯದ ಚಿಂತನೆಯೇ ಅತ್ಯಂತ ಕ್ರಾಂತಿಕಾರಿ ಹೆಜ್ಜೆಯಾಗಿತ್ತು. ಭೂ ಮಸೂದೆಯನ್ನು ಜಾರಿಗೆ ತಂದಾಗ ದೇವರಾಜ ಅರಸರು ಈ ಕೃತಿಯ ಪರಿಣಾಮದ ಬಗ್ಗೆ ಹೇಳಿಕೊಂಡಿದ್ದರು. ಒಂದು ಕೃತಿ ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಹೇಗೆ ಪರಿಣಾಮ ಬೀರಲು ಸಾಧ್ಯ ಎನ್ನುವುದಕ್ಕೆ ಇದು ಸಾಕ್ಷಿಯಾಗುತ್ತದೆ.

ಚೋಮನ ತಲೆಮಾರುಗಳ ಕನಸು ಭಗ್ನವಾದ ಪ್ರಸಂಗ ಕಾದಂಬರಿಕಾರರು ಉದ್ದೇಶಪೂರ್ವಕವಾಗಿಯೇ ಹೀಗೆ ಮಾಡಿದ್ದಾರೆಂಬ ಟೀಕೆ ವ್ಯಾಪಕವಾಗಿತ್ತು. ನೀಲ ನೀರಲ್ಲಿ ಮುಳುಗಿ ಸಾಯುವಾಗ ಬ್ರಾಹ್ಮಣ್ಯದ ಜಡತ್ವದ ಸಂಪ್ರದಾಯವನ್ನು ಪ್ರತಿಬಿಂಬಿಸಿದೆ. ಇದರಲ್ಲಿ ಹೆಚ್ಚಿನ ಸಂಗತಿಗಳು ವಾಸ್ತವತಾವಾದದ ಮೇಲೆ ನಿಂತಿರುವುದರಿಂದ ಮತ್ತು ಅದನ್ನು ಗಂಭೀರವಾಗಿ ತಗೆದುಕೊಳ್ಳದ್ದರಿಂದ ಇದು ದಲಿತ ಬಂಡಾಯದ ವಿಮರ್ಶಕರಿಗೆ ಆಹಾರವಾಗಲು ಕಾರಣವಾಗಿತ್ತು. ಈಗಲೂ ಈ ಕೃತಿ ನನಗೆ ದಲಿತತ್ವದ ಹಿನ್ನೆಲೆಯಲ್ಲಿ ಹಾಗೂ ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಮಹತ್ವದ್ದು ಎನಿಸಿದೆ. ಡಾ. ಅಂಬೇಡ್ಕರ್ ಅವರ ವೇತ್‌ಬೇಗಾರ್ ಚಳುವಳಿಯ ವಿಚಾರಗಳು ಈ ಕಾದಂಬರಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿಹರಿದಾಡಿವೆ.



-ಅರವಿಂದ ಮಾಲಗತ್ತಿ, ಕವಿ ಮತ್ತು ಕಾದಂಬರಿಗಾರ

ಹೆಚ್. ನಾಗವೇಣಿಯವರ 'ಗಾಂಧಿ ಬಂದ'



ಮೆಚ್ಚಿಕೊಳ್ಳುವುದಕ್ಕೇನು ಕನ್ನಡದಲ್ಲಿ ಕೃತಿಗಳು ಒಂದೇ ಎರಡೇ. ಈ ಹಲವುಗಳ ನಡುವೆ ನಾನೀಗ ಆಯ್ಕೆ ಮಾಡಿಕೊಳ್ಳುತ್ತಿರುವುದು 'ಗಾಂಧಿ ಬಂದ'. ಎಚ್.ನಾಗವೇಣಿಯವರ ಈ ಅಪರೂಪದ ಕಾದಂಬರಿ ಮೊದಲಿಗೇ ಇಷ್ಟವಾಗುವುದು ಅದರ ಕಾವ್ಯದಂತಹ ಭಾಷೆಗೆ. ರೂಪಕಗಳ ಮೆರವಣಿಗೆಯನ್ನೇ ಹೊರಡಿಸುವ ನಾಗವೇಣಿ ಶೈಲಿ ಅನನ್ಯ. 'ಗಾಂಧಿ ಬಂದ' ಕಾದಂಬರಿಯ ವಸ್ತು ಕೂಡ ಕನ್ನಡಕ್ಕೆ ವಿಶಿಷ್ಟವಾದುದು. ಕರಾವಳಿಯ ಬದುಕನ್ನು ಅಲ್ಲಿಯ ರಮಣೀಯ ಪ್ರಕೃತಿ, ಬಹುವರ್ಣದ ಧಾರ್ಮಿಕ ಆಚರಣೆಗಳು, ವಿಶೇಷ ಪರಿಣಿತಿಯ ಕಲಾಪ್ರಕಾರಗಳು, ಆರ್ಥಿಕತೆಯ ಮೇಲೆ ಹಿಡಿತ ಸಾಧಿಸಿರುವ ಜಮೀನ್ದಾರೀ ಹಿನ್ನೆಲೆಯ ಬಂಟರು, ಬಂಟರ ಗೆಳೆತನದಿಂದಾಗಿ ಸಾಮಾಜಿಕ ಅಧಿಕಾರದ ಪಾಲುದಾರರಾಗಿರುವ ಪುರೋಹಿತರು . . . ಹೀಗೆ ಅನೇಕ ಸಂಗತಿಗಳು ಹಿಡಿದಿಟ್ಟುಕೊಂಡಿವೆ. ಇವುಗಳೆಲ್ಲ

ಅಂಚು ಕಟ್ಟಿದಂತೆ ಕಡಲು ಮೊರೆಯುತ್ತಿರುತ್ತದೆ. ಇವೆಲ್ಲವನ್ನೂ ನಾಗವೇಣಿ ಅಷ್ಟೇ ರಮ್ಯವಾಗಿ, ಗಂಭೀರವಾಗಿ, ಕನ್ನಡಕ್ಕೇ ಹೊಸ ನುಡಿಗಟ್ಟನ್ನು ಸೃಷ್ಟಿಸಿಕೊಡುವ ರೀತಿಯಲ್ಲಿ ಬರೆಯುತ್ತಾರೆ.

ಗಾಂಧಿಬಂದ ಕಾದಂಬರಿ ಭಿನ್ನ ಎನಿಸುವುದು ಗಾಂಧಿಯನ್ನು ಮತ್ತು ಗಾಂಧಿಯ ತತ್ವವನ್ನು ಕಾದಂಬರಿಯಲ್ಲಿ ಬೆರೆಸಿರುವ ರೀತಿಗೆ. ಒಂದು ವರದಿಯಾಗಬಹುದಾಗಿದ್ದ ಘಟನೆಯನ್ನು ಅದು ಉಂಟುಮಾಡಿದ ಪಲ್ಲಟದೊಂದಿಗೆ ಬೆಸೆದು ಕೊಡುವ ಕಾದಂಬರಿ ಪರೋಕ್ಷವಾಗಿ ಸಮಾಜವೊಂದು ಆರೋಗ್ಯಕರವಾಗಲು ಕಂಡುಕೊಳ್ಳಬೇಕಾಗಿರುವ ದಾರಿಯನ್ನೂ ಸೂಚಿಸುತ್ತದೆ. ಹೆಬ್ಬಾರರ ಮನೆಯ ಯುವತಿ ವಿಧವೆ ದ್ರೌಪದಿ ಅದ್ರಾಮನ ಪ್ರೇಮಪಾಶದಲ್ಲಿ ಬೀಳುವುದು ಮತ್ತು ಅದನ್ನು ತಡೆಯಲು ಹೆಬ್ಬಾರರು ಏನೆಲ್ಲಾ ಸಾಧ್ಯವೋ ಅದನ್ನೆಲ್ಲ ಮಾಡಿಯೂ ವಿಫಲವಾಗುವ ಕತೆಯ ಮೊದಲ ಬೀಳಿನೊಂದಿಗೆ, ಅದೇ ಕಾಲದಲ್ಲಿ ನಡೆಯುತ್ತಿದ್ದ ಭಾರತದ ಸ್ವಾತಂತ್ರ್ಯಹೋರಾಟದ ಝಳವು ಆ ಹಳ್ಳಿಗೂ ತಲುಪುವುದನ್ನು ಮತ್ತು ಅದು ಉಂಟು ಮಾಡಿದ ಇತ್ಯಾತ್ಮಕ ಪರಿಣಾಮಗಳನ್ನೂ ಹೆಣೆಯಲಾಗಿದೆ. ಕಾದಂಬರಿ ಅಲ್ಲಿನ ಸಾಂಸ್ಕೃತಿಕ ವೈಭವವನ್ನು ವರ್ಣಿಸುವ ಭರದಲ್ಲಿ ಎಲ್ಲಿಯೂ ಅಲ್ಲಿನ ಶ್ರೇಣೀಕೃತ ಸಮಾಜದ ಹುಳುಕುಗಳನ್ನು ಮರೆ ಮಾಡುವುದಿಲ್ಲ. ಕಂಬಳದ ಎಲ್ಲ ಕೆಲಸಗಳಲ್ಲಿ ಮೈಮುರಿದು ದುಡಿಯುವ ಹೊಲೆಯರನ್ನು ಆಚರಣೆಯ ಹಂತದಲ್ಲಿ ಮಾತ್ರ ಹೊರಗಿಡುವುದನ್ನಾಗಲೀ, ದೊಡ್ಡವರ ಮನೆಯ ಕೆಲಸಗಳನ್ನೆಲ್ಲಾ ಮಾಡಿಕೊಡುವ ಶೂದ್ರರು ಅಂತಿಮವಾಗಿ ದೊಡ್ಡವರ ಮನೆಗಳ ಅಂಗಳದ ಮೂಲೆಯಲ್ಲಿ ಕೈಕಟ್ಟಿ ನಿಲ್ಲಬೇಕಾಗಿ ಬರುವ ದೈನ್ಯತೆಯಾಗಲೀ, ಹಾದರ ಮಾಡುವವರು ಬೇರೆಯವರಿಗೆ ವಿಧಿಸುವ ನೈತಿಕತೆಯಾಗಲೀ ಅಸದೃಶವಾಗಿ ಚಿತ್ರಿತಗೊಂಡಿದೆ. ಗಾಂಧಿಗೆ ಒಡವೆಗಳನ್ನು ಕೊಡಬೇಕೆಂಬ ಮಗನ ಮಾತಿಗೆ ಸಿಟ್ಟಿಗೇಳುವ, ಅದೇ ಗಾಂಧಿ ದ್ರೌಪದಿಯ ಬೋಳು ಹಣೆಗೆ ಕುಂಕುಮ ಇಟ್ಟುಕೊಳ್ಳುವಂತೆ ಹೇಳಿದಾಗ ಸಂಪ್ರೀತಳಾಗುವ ಸೂರಕ್ಕೆ ಈ ಕಾದಂಬರಿ ಓದಿದವರನ್ನೆಲ್ಲಾ ಆವರಿಸಿಕೊಳ್ಳದೇ ಇರಲು ಸಾಧ್ಯವಿಲ್ಲ. ಮಾರಪ್ಪ, ದಾರು, ಅದ್ರಾಮ, ದ್ರೌಪದಿ ಎಲ್ಲರೂ ನಮ್ಮವರೇ ಅನ್ನಿಸುವಷ್ಟು ಆಪ್ಯಾಯಮಾನತೆಯನ್ನು ಕಾದಂಬರಿ ಸೃಷ್ಟಿಸುತ್ತದೆ.




–ಸಬಿತಾ ಬನ್ನಾಡಿ, ಕವಯತ್ರಿ ಮತ್ತು ವಿಮರ್ಶಕಿ

ಕೆ.ವಿ. ನಾರಾಯಣರ 'ಚಾಮ್‌ಸ್ಕಿ ಜೊತೆಗೆ ಎರಡು ಹೆಜ್ಜೆ'



ಕನ್ನಡದಲ್ಲಿ ಈಚೆಗೆ ಬಂದಿರುವ ಪುಸ್ತಕಗಳಲ್ಲಿ ಕೆವಿಎನ್ ಅವರ **'ಚಾಮ್‌ಸ್ಕಿ ಜೊತೆಗೆ ಎರಡು ಹೆಜ್ಜೆ'** (೨೦೧೭) ಎಂಬೀ ಪುಸ್ತಕ ಅತ್ಯಂತ ಅಪರೂಪದ್ದು. ಚಾಮ್‌ಸ್ಕಿಯ ಚಿಂತನೆಗಳು ಕನ್ನಡದ ಮನಸ್ಸಿಗೆ ತಲುಪಬೇಕು ಎಂಬ ಇರಾದೆಯಿಂದ ಕೆವಿಎನ್ ಈ ಪುಸ್ತಕವನ್ನು ಬರೆದಿರುತ್ತಾರೆ. ಈ ಹೊತ್ತಿಗೆ ನನಗೇಕೆ ಮೆಚ್ಚುಗೆಯಾಗಿದೆ ಅನ್ನುವುದಕ್ಕೆ ಹಲವು ಕಾರಣಗಳಿವೆ. ಆದರೆ ಈ ಎಲ್ಲ ಕಾರಣಗಳು ಭಾಷೆ ಕುರಿತಾದ ತಾತ್ವಿಕ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಸಂಬಂಧಿಸಿವೆ. ನುಡಿ ಬಗೆಗಿನ ಚಿಂತನೆಗಳನ್ನು ಕಳೆದ ಆರು ದಶಕಗಳಿಂದ ಚಾಮ್‌ಸ್ಕಿ ಮಂಡಿಸುತ್ತಲೇ ಬಂದಿರುತ್ತಾನೆ. ಈ ಎಲ್ಲ ಚಿಂತನೆಗಳ ಆಳ ಮತ್ತು ಹರವನ್ನು ಕುರಿತು ಒಂದೇ ಪಟ್ಟಿನಲ್ಲಿ ಚರ್ಚಿಸುವುದು ಅಷ್ಟೊಂದು ಸುಲಭದ ಮಾತಲ್ಲ. ಆದರೆ ನುಡಿಯೊಂದನ್ನು ಇಡಿಯಾಗಿ ಅರಿಯಲು ಬೇಕಾದ ತಾತ್ವಿಕ ಚಿಂತನೆಗಳನ್ನು ಗಹನವಾಗಿಯೂ ಮತ್ತು ವೈಜ್ಞಾನಿಕವಾಗಿಯೂ ಪ್ರಸ್ತುತ ಪುಸ್ತಕವು ಮಂಡಿಸುತ್ತದೆ. ಮನುಷ್ಯರ ಮೆದುಳಿನಲ್ಲಿ ಜೈವಿಕವಾಗಿ ಅಂತಸ್ಥವಾಗಿರುವ 'ಭಾಷಿಕ ಸಾಮರ್ಥ್ಯ'ವನ್ನು ಅರಿಯುವ ಬೇರೆ ಬೇರೆ ತಾತ್ವಿಕ ಚಿಂತನೆಗಳನ್ನು ಚಾಮ್‌ಸ್ಕಿ ವಿವರಿಸಿದ್ದಾನೆ. ಈ ವಿಶ್ಲೇಷಣೆಗಳು ಕೇವಲ ಭಾಷೆಯ ಬಳಕೆ ಮತ್ತು ರಚನೆಯನ್ನು ಮಾತ್ರ ವಿವರಿಸುವುದಕ್ಕೆ ಸೀಮಿತವಾಗಿಲ್ಲ. ಈ ವಾಸ್ತವನ್ನು ಕೆವಿಎನ್ ಅವರು ಅತ್ಯಂತ ಸ್ವಚ್ಛವಾಗಿ ಇಲ್ಲಿ ಕಂಡರಿಸಿದ್ದಾರೆ. ಕನ್ನಡ ನುಡಿಯನ್ನು ಅಧ್ಯಯನ ಮಾಡುವುದಕ್ಕೆ ಈ ಚಿಂತನೆಗಳು ಹೇಗೆ ನೆರವಾಗುತ್ತವೆ ಎಂಬುದನ್ನು ಇಲ್ಲಿ ಕಾಣುತ್ತೇವೆ.

ಪ್ಲೇಟೋ, ಗೆಲಿಲಿಯೋ ಹಾಗೂ ಡಾರ್ವಿನ್ ಮೊದಲಾದ ಚಿಂತಕರನ್ನು ಕಾಡಿಸಿದ ಹಲವು ಪ್ರಶ್ನೆಗಳಿಗೆ ಚಾಮ್‌ಸ್ಕಿ ಖಚಿತವಾದ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಿದ್ದಾನೆ. ಈ ಎಲ್ಲ ತಾತ್ವಿಕ ವಿನ್ಯಾಸಗಳು ನುಡಿ ಒದಿನ ಸನ್ನಿವೇಶದಲ್ಲಿ ಹೇಗೆ 'ಅರಿವಿನ ಪಲ್ಲಟ'ಕ್ಕೆ ಕಾರಣವಾಗಿವೆ ಅನ್ನುವ ವೈಜ್ಞಾನಿಕ ವಾಸ್ತವವನ್ನು ಕೆವಿಎನ್ ಅವರು ಈ ಪುಸ್ತಕದಲ್ಲಿ ವಿಶದೀಕರಿಸಿದ್ದಾರೆ. ನುಡಿಯೆಂಬ ವಿದ್ಯಮಾನದ ದಿಟ ಸ್ವರೂಪವನ್ನು ಅರಿಯಲು ಬೇಕಾದ ವೈಜ್ಞಾನಿಕ ವಿಶ್ಲೇಷಣೆಗಳ ಖಚಿತತೆಯನ್ನೂ ಇಲ್ಲಿ ನೋಡುತ್ತೇವೆ. ಈ ವಿಶ್ಲೇಷಣೆಗಳು ಕೇವಲ ಭಾಷಿಕ ರಚನೆಯನ್ನು ಬಿಡಿಸಿ ನೋಡುವ ಪರಿಕರಗಳಾಗದೇ, ಮಾನವನ ಬೌದ್ಧಿಕ–ವೈಚಾರಿಕ ರಚನೆಗಳನ್ನು ಅರಿಯುವುದಕ್ಕೆ ನೆರವಾಗುತ್ತವೆ. 'ಕಾಗ್ನಿಶನ್' ಎಂಬುದನ್ನು ಭಾಷೆಗೆ ಎದುರಾಗಿ ಬಳಸದೇ, ಪ್ರತಿಯೊಂದು ಪರಿಕಲ್ಪನಾತ್ಮಕ ವ್ಯವಸ್ಥೆ, ಜ್ಞಾನ, ಅರಿವು, ವ್ಯಾಖ್ಯಾನ, ಗ್ರಹಿಕೆ ಮೊದಲಾದ ಮಾನಸಿಕ ವ್ಯವಹಾರಗಳನ್ನು ಕಾಗ್ನಿಶನ್ ಎನ್ನಲಾಗುತ್ತದೆ. ಈ ಎಲ್ಲ ಗ್ರಹಿಕೆಗಳ ಸಂಕೀರ್ಣತೆಯ ಜೊತೆಗೆ ವ್ಯವಹರಿಸುವ ವ್ಯವಸ್ಥೆಗಳಲ್ಲಿ ಭಾಷೆಯೂ ಒಂದು. ನುಡಿಯ ಯಾವುದೇ ಆಯಾಮವನ್ನು ಕುರಿತು ಅಧ್ಯಯನ ಮಾಡಿದರೂ, ಜೈವಿಕ ವಿನ್ಯಾಸಗಳನ್ನು ಅರಿಯುವ ಸಾಧ್ಯತೆಗಳು ನಮಗಿಲ್ಲಿ ದೊರೆಯುತ್ತವೆ. ಅಂದರೆ ಭಾಷೆಯೆಂಬ ಸಾಮರ್ಥ್ಯ ಮನುಷ್ಯನಲ್ಲಿ ಇರುತ್ತದೆ ಎಂದಾದರೆ, ಅದು ಸಂವಹನಕ್ಕಾಗಿ ಇರುತ್ತದೆ ಎಂದಲ್ಲ, ಪರಿಕಲ್ಪನೆಗಳನ್ನು ರೂಪಿಸುವ ವಿನ್ಯಾಸವಾಗಿರುತ್ತದೆ. ನುಡಿ ಒದು ಎನ್ನುವುದು ಮನುಷ್ಯರ ಮೆದುಳಿನಲ್ಲಿ ಅಂತಸ್ಥವಾಗಿರುವ ಸಾಮರ್ಥ್ಯದ ಸ್ವರೂಪವನ್ನು ವಿವರಿಸುವ ಬಗೆಯಾಗಿದೆ. ಮನುಷ್ಯರ ಮನಸ್ಸಿನಲ್ಲಿ ಭಾಷಿಕ ಕ್ರಿಯೆ ನಿರಂತರವಾಗಿರುತ್ತದೆ. ಇದನ್ನೇ **'ಐ ಲಾಂಗ್ವೇಜ್'** ಎನ್ನಲಾಗುತ್ತದೆ. ಭಾಷಾಶಾಸ್ತ್ರಜ್ಞರಿಗೆ ಐ ಲಾಂಗ್ವೇಜ್‌ನ ಲಕ್ಷಣಗಳನ್ನು ಅರಿಯುವ ಗುರಿ ಮುಖ್ಯವಾಗಬೇಕು ಹೊರತು ಕೇವಲ ಅಭಿವ್ಯಕ್ತಿಯ ಮಾದರಿಗಳನ್ನಲ್ಲ.



–ಮೇಟಿ ಮಲ್ಲಿಕಾರ್ಜುನ, ಭಾಷಾ ತಜ್ಞ ಮತ್ತು ಚಿಂತಕ

ತೇಜಸ್ವಿಯವರ 'ಕಿರಗೂರಿನ ಹಯ್ಯಾಳಗಳು'



ಮನಸ್ಸಿಗೆ ಮುಟ್ಟಿದ, ದಿಕ್ಕೆಟ್ಟಾಗ ದಿಕ್ಕು ತೋರಿದ, ಭರವಸೆಯೇ ಖಾಲಿಯಾದಾಗ ವಿಶ್ವಾಸ ತುಂಬಿದ, ನಗುವಿನ ವಿಲಾಸವೇ ಕಳೆದು ಹೋದಾಗ ಹೊಟ್ಟೆ ತುಂಬ ನಗಿಸಿದಂತಹ ಪುಸ್ತಕಗಳೇ ನನ್ನ ಪಾಲಿಗೆ ಅತ್ಯುತ್ತಮ ಪುಸ್ತಕಗಳು. ಅದರಲ್ಲಿ ಒಂದನ್ನು ಆರಿಸಿ ಹೇಳುವುದು ಕಷ್ಟ.

ಕ್ರಿಮಿನಲ್ ಕೇಸಿನಲ್ಲಿ ಸಿಕ್ಕಿಹಾಕಿಕೊಂಡು ಸಸ್ಪೆಂಡ್ ಆದ ಕಾಲವದು. ನೋವು, ಅಪಮಾನಗಳ ಹೊದ್ದುಕೊಂಡು ಹಗಲಿನಲ್ಲಿ ಮಲಗಿ ರಾತ್ರಿ ಎಲ್ಲ ಎದ್ದು ಕೂರುತ್ತಿದ್ದೆ. ಅಂತಹ ಸಮಯದಲ್ಲಿ ನನ್ನ ಗೆಳತಿಯೊಬ್ಬಳು ತೇಜಸ್ವಿಯವರ ಕಿರುಗೂರಿನ ಗಯ್ಯಾಳಿಯರು, ಚಿದಂಬರ ರಹಸ್ಯ, ಕರ್ವಾಲೋ, ಸಣ್ಣಕತೆಗಳ ಸಂಗ್ರಹವನ್ನು ತಂದು ಕೊಟ್ಟಳು.

ಉರುಳಿದ ಒಂದು ಮರ, ಒಂದು ಹಾರುವ ಓತಿ, ಏಲಕ್ಕಿ ಬೆಳೆಯೊಂದಿಗೆ ಹೆಣೆದುಕೊಂಡಿರುವ ಬದುಕನ್ನು ನಗಿಸುತ್ತಲೇ ಮನವರಿಕೆ ಮಾಡುವ ರೀತಿಗೆ ಕೋಟಿ ಧನ್ಯವಾದಗಳ ಹೇಳಬೇಕೆನಿಸಿ ತೇಜಸ್ವಿಯವರಿಗೆ ಪತ್ರವನ್ನೂ ಬರೆದಿದ್ದೆ. ಉತ್ತರ ಬರಲಿಲ್ಲ. ಆದರೆ ಕಿರುಗೂರಿನ ಗಯ್ಯಾಳಿಯರು ಓದಿ ಮನಸಾರೆ ನಕ್ಕೆ. ಅಷ್ಟೇ ಅಲ್ಲ ಆ ಗಯ್ಯಾಳಿಯರು ನನ್ನೊಳಗೆ ಸಂಚಲನ ಹುಟ್ಟಿಸಿ ಹೊದ್ದಿದ್ದನ್ನು ಕಿತ್ತೆಸೆದು ಎದ್ದು ಕೂರುವಂತೆ, ನಿಂತು ನಡೆಯುವಂತೆ ಮಾಡಿದರು. ಮುಟ್ಟಿ ನೋಡಿಕೊಳ್ಳುವಂತೆ ತಿರುಗಿಸಿ ಕೊಡುವ ಶಕ್ತಿಯನ್ನು ನನ್ನೊಳಗೆ ಹುಡುಕಿಕೊಳ್ಳುವಂತೆ ಮಾಡಿದರು. ನಮ್ಮೊಳಗೆ ಶಕ್ತಿ ಇದ್ದರಷ್ಟೇ ಸಾಲದು, ಅದು ಇದೆ ಎಂಬ ಅರಿವು ಬೇಕು. ಆದರೆ ಹೆಣ್ಣುಮಕ್ಕಳೊಳಗೆ ಅಂತರ್ಗತವಾಗಿರುವ ಶಕ್ತಿ, ಚೈತನ್ಯಗಳನ್ನು ಶೋಧಿಸುವ ಕೀಲಿಕೈಗಳನ್ನು ಅಡಗಿಸಿಟ್ಟು ಅವರನ್ನು ಪರಾವಲಂಬಿಗಳೆಂದು ನಂಬಿಸಲಾಗುತ್ತದೆ. ಹಾಗಾಗಿಯೇ ಅಚಾನಕ್ಕಾಗಿ ಆ ಶಕ್ತಿ, ಚೈತನ್ಯ ಆಸ್ಫೋಟವಾದಾಗ ನಾವೇ ತಬ್ಬಿಬ್ಬುಗೊಳ್ಳುತ್ತೇವೆ. ಅಂತಹ ಆಸ್ಫೋಟ ನಮ್ಮೊಳಗಷ್ಟೇ ಅಲ್ಲದೆ ಸುತ್ತಲಿನ ಪರಿಸರದಲ್ಲೂ ಸಂಚಲನ ಮೂಡಿಸಬಲ್ಲದು ಎಂಬುದನ್ನು ಪುಸ್ತಕ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ. ನನ್ನೊಳಗಿನ ಗಯ್ಯಾಳಿಯನ್ನು ಪರಿಚಯಿಸಿದ, ಆ ಗಯ್ಯಾಳಿಯ ಬಗ್ಗೆ ಹೆಮ್ಮೆ ಪಡುವಂತೆ ಮಾಡಿದ ಕಾರಣಕ್ಕೆ ಕಿರುಗೂರಿನ ಗಯ್ಯಾಳಿಯರು ನನ್ನ ಪಾಲಿಗೆ ಅತ್ಯುತ್ತಮ ಪುಸ್ತಕ.




–ದು. ಸರಸ್ವತಿ, ರಂಗಕರ್ಮಿ ಮತ್ತು ಲೇಖಕಿ

ಸಾಹಿತ್ಯ ಚಿಂತನೆ

ಸಾಹಿತ್ಯ-ಸಮಾಜ-ಅಂದು-ಇಂದು

-ಕೆ. ಸತ್ಯನಾರಾಯಣ



ಸಾಹಿತ್ಯದ ವಿಧಾನವೆಂದರೆ ಪ್ರತಿಕ್ಷಣವೂ ಸಂವೇದಿಸುವ, ಮಿಡಿಯುವ ರೀತಿಯದು. ಅವನಿಗೆ ಪ್ರತಿ ಕ್ಷಣವೂ, ಪ್ರತಿ ಕಣವೂ ಜಗತ್ತಿನ ಒಟ್ಟು ಚೈತನ್ಯವು ತನ್ನ ಅನಂತತೆಯಲ್ಲಿ ಮತ್ತು ತಾಕ್ಷಣಿಕತೆಯಲ್ಲಿ ಹೊಳೆಯುತ್ತಿರುತ್ತದೆ, ಅನುಭವಕ್ಕೂ ಬರುತ್ತಿರುತ್ತದೆ, ವೇದ್ಯವಾಗುತ್ತಿರುತ್ತದೆ. ಹೀಗೆ ವೇದ್ಯವಾಗುವುದರಲ್ಲಿ ಒಂದು ಸಣ್ಣ ಭಾಗ ಮಾತ್ರ ಬರವಣಿಗೆಯಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ಈಗ ಸೃಷ್ಟಿಯಾಗುತ್ತಿರುವ ಬಹುಪಾಲು ಬರವಣಿಗೆಗಳನ್ನು ಗಮನಿಸಿದರೆ, ಕಾರ್ಯ ಕಾರಣ ಸಂಬಂಧವನ್ನು, ವಿಶ್ಲೇಷಣಾ ಕ್ರಮವನ್ನು ಆಧರಿಸಿ ನಿರೂಪಿಸಿದ ಪಠ್ಯಗಳೇ ಕಾಣುತ್ತವೆ. ಸೃಜನಶೀಲ ಬರವಣಿಗೆ, ವಿಮರ್ಶಾತ್ಮಕ ಬರವಣಿಗೆಗಳ ವಿಧಾನ ಈಗ ಹೆಚ್ಚು ಕಡಿಮೆ ಒಂದೇ ರೀತಿಯದು. ಜಗತ್ತಿನ ಸಕಲ ಸಂಗತಿಗಳನ್ನು **problematise** (ಸಮಸ್ಯೀಕರಿಸಿ) ಮಾಡಿ ಸಂಕೀರ್ಣಗೊಳಿಸಿ ನಂತರ ಅರ್ಥ ಹುಡುಕುವ ಮಾನಸಿಕ ಗೀಳಿಗೆ ಇಂದು ನಾವೆಲ್ಲ ತುತ್ತಾಗಿದ್ದೇವೆ.

ಪ್ರತಿಯೊಂದು ತಲೆಮಾರಿನ ಲೇಖಕಗರು, ಓದುಗರು ತಮಗೆ ಬೇಕಾದ ಸಾಹಿತ್ಯವನ್ನು ತಾವೇ ಸೃಷ್ಟಿಸಿಕೊಳ್ಳುತ್ತಾರೆ, ಕಂಡುಕೊಳ್ಳುತ್ತಾರೆ. ಹಾಗಾಗಿ ಅಂದು-ಇಂದುಗಳ ಹೋಲಿಕೆ ಅಷ್ಟೇನು ಅಪೇಕ್ಷಣೀಯವಾದದ್ದಲ್ಲ. ಆದರೂ ಕಳೆದ ಮೂರುನಾಲ್ಕು ದಶಕಗಳ ಸಾಂಸ್ಕೃತಿಕ ಪಲ್ಲಟಗಳನ್ನು ಅರ್ಥಮಾಡಿಕೊಳ್ಳಲು ಒಂದಿಷ್ಟು ವಿದ್ಯಮಾನ, ಪ್ರವೃತ್ತಿಗಳನ್ನು ಗುರುತಿಸಬಹುದು, ಚರ್ಚಿಸಬಹುದು. ಅಂದು ಎಂದರೆ ಯಾವ ಕಾಲಬಿಂದು ಎಂಬುದೇ ಮುಖ್ಯ ಪ್ರಶ್ನೆ. ನಮ್ಮ-ನಮ್ಮ ವಯೋಮಾನ, ಮನೋಧರ್ಮಕ್ಕನುಗುಣವಾಗಿ "ಅಂದು" ಅರವತ್ತರ, ಎಪ್ಪತ್ತರ ದಶಕಳಾಗಬಹುದು. ನಂತರದ ವರ್ಷಗಳೂ ಆಗಬಹುದು. "ಇಂದು" ಎಂಬುದು ಈವತ್ತು ಎನ್ನುವಂತೆ ನಿರ್ದಿಷ್ಟ ಅರ್ಥದಲ್ಲಿ ಕಂಡರೂ ಅದೂ ಕೂಡ ಹೊರಗಿನ ಕಾಲಕ್ಕಿಂತ ಒಳಮನಸ್ಸಿನ ಸ್ವರೂಪ, ಅಪೇಕ್ಷೆಯನ್ನು ಸೂಚಿಸುವತಂದ್ದೇ ಆಗಿರುತ್ತದೆ.

ಸಾಹಿತ್ಯ ಸಂಸ್ಕೃತಿ-ಸಂವೇದನೆಯನ್ನು ಅಕ್ಷರ ಜ್ಞಾನ ಮತ್ತು ಶಿಕ್ಷಣಕ್ಕೆ ತಳುಕು ಹಾಕಿದ್ದು ನಮ್ಮ ಕಾಲದಲ್ಲಾದ ದೊಡ್ಡ ಬದಲಾವಣೆ (ತಪ್ಪು). ಹಾಗಾಗಿ ಸಾಹಿತ್ಯವನ್ನು ಶಿಕ್ಷಣದ ಮೂಲಕ ಕಲಿಸುವುದು ಮಾತ್ರವೇ ಹೆಚ್ಚು ಮೌಲಿಕವಾಗಿರುತ್ತದೆ ಎಂಬುದು ಇನ್ನೊಂದು ಗ್ರಹೀತ. ಹೇಳಿಕೊಳ್ಳುವಂತಹ ಸಾಹಿತ್ಯಿಕ, ಸಾಂಸ್ಕೃತಿಕ ವಾತಾವರಣದಲ್ಲೇನು ಬೆಳೆಯದ ನನ್ನ ಸಾಹಿತ್ಯಿಕ ಸಂವೇದನೆ ರೂಪಗೊಂಡಿದ್ದು ಮತ್ತು ಈವತ್ತು ಕೂಡ ಆ ಸಂವೇದನೆಯನ್ನು ಪೊರೆಯುತ್ತಿರುವಂತದ್ದು. ಸುಮಾರಾದ ವಿದ್ಯಾವಂತರು, ಅರೆವಿದ್ಯಾವಂತರು, ಅನಕ್ಷರಸ್ಥರು ಬದುಕಿನ ಭಾಗವಾಗಿ ದಿನವೂ ನಡೆಸುತ್ತಿದ್ದ ಇತಿಹಾಸ, ಪುರಾಣ, ಮಹಾಕಾವ್ಯ, ಜನಪದ ಸಾಹಿತ್ಯ, ದಿನನಿತ್ಯದ ಸಮಸ್ಯೆಗಳನ್ನು ಕುರಿತು ನಡೆಸುತ್ತಿದ ಮಾತುಕತೆಯಿಂದ ಮೂಡುತ್ತಿದ್ದ ಸಾಂಸ್ಕೃತಿಕ ಪಾಠಗಳು/ನೋಟಗಳು ಇವರಿಗೆಲ್ಲ ಬರವಣಿಗೆಯ ಶಕ್ತಿ ಇರಲಿಲ್ಲ, ಅಭಿವ್ಯಕ್ತಿಯಿರಲಿಲ್ಲ ಎಂಬುದನ್ನು ಒಪ್ಪಬಹುದಾದರೂ ಸಾಹಿತ್ಯಿಕ ಸಂವೇದನೆಯಿಲ್ಲವೆಂದು ಹೇಳುವುದು ಹೇಗೆ? ನಮ್ಮ ಕಲಿಕೆಯ ವಿಧಾನಗಳು ವಿದ್ಯಾವಂತರನ್ನು ಹೇಗೆ ಸಂವೇದನಾಶೀಲತೆಯಿಂದ ವಿಮುಖಗೊಳಿಸಿತು, ಇದರಿಂದ ಹೊರ ಬರುವ ದಾರಿಗಳಿವೆಯೇ ಎಂಬುದರ ಬಗ್ಗೆ ಪ್ರಾಮಾಣಿಕ ಚರ್ಚೆ ಅಗತ್ಯ.

ಸಾಹಿತ್ಯ ಲೋಕವೆಂದರೆ ಅದು ಲೇಖಕ ಕೇಂದ್ರಿತವಾಗಿರಬೇಕೆ? ಓದುಗನ ಪಾತ್ರ, ಮಹತ್ವ ಕುರಿತಂತೆ ನಮ್ಮಲ್ಲಿ ಖಂಡಿತವಾದ ಬದಲಾವಣೆಗಳಾಗಿವೆ. ಓದುಗನನ್ನು ಸಹೃದಯನೆಂದೋ, ರಸಿಕನೆಂದೋ ಕರೆದು ಅವನನ್ನು ಸಾಹಿತ್ಯ ಲೋಕದ ಸಾವಯವ ಭಾಗವಾಗಿ ಪರಿಗಣಿಸಲಾಗಿತ್ತು. ಈಗ ಓದುಗರೆಂದರೆ ಲೇಖಕರಿಗೆ, ಪುಸ್ತಕ ವ್ಯಾಪಾರಿಗಳಿಗೆ, ಗ್ರಂಥಾಲಯ ಇಲಾಖೆಗಳಿಗೆ ಒಬ್ಬ ಗ್ರಾಹಕ ಮಾತ್ರ. ಲೇಖಕರಿಗೂ ಈಗ ಓದುಗರನ್ನು ಸಮಾನ ನೆಲೆಯಲ್ಲಿ ಪರಿಗಣಿಸಿ, ಸಾಹಿತ್ಯ ಲೋಕದ ಪಾಲುದಾರನನ್ನಾಗಿ ಮಾಡಿಕೊಳ್ಳುವುದಕ್ಕಿಂತ ಹೆಚ್ಚಾಗಿ ಗ್ರಂಥಾಲಯಗಳು, ಪುಸ್ತಕ ವಿತರಕರ ಮೇಲೇ ಹೆಚ್ಚು ಗಮನ. ಬರವಣಿಗೆಯ ಲೋಕವೆಂಬುದು ಲೇಖಕರಿಗಾಗಿ ಮಾತ್ರವೇ ಇದೆ ಎಂದು ಭಾವಿಸಿ ಸೃಷ್ಟಿಸಿಕೊಂಡಿರುವ ವಿಷವರ್ತುಲದಲ್ಲಿ ನಾವಿದ್ದೇವೆ. ಇದರ ಮುಂದಿನ ಹಂತವೆಂದರೆ ಓದುಗರ ಮನ್ನಣೆ, ಪ್ರೀತಿಗಿಂತ ಈಗ ಲೇಖಕರು ಹೆಚ್ಚಾಗಿ ಬಯಸುವುದು ತಮ್ಮ ವರ್ಗದವರಿಂದಲೇ ಮೂಡಿ ಬರುವ ಸ್ವಪ್ರಶಂಸೆ, ಪರಸ್ಪರ ಅಭಿನಂದನೆ, ಮೆಚ್ಚುಗೆ, ಪ್ರಶಸ್ತಿ ಪುರಸ್ಕಾರಗಳು, ಇತ್ಯಾದಿ. ಇದರ ಬಗ್ಗೆ ಸಾಹಿತಿಗಳೆಲ್ಲ ಸಿಟ್ಟಿನಿಂದ ಮಾತನಾಡುತ್ತಾರೆ, ನಿಜ. ಆದರೆ ಇದು ಇವರೇ ಸೃಷ್ಟಿಸಿಕೊಂಡಿರುವ ಲೋಕ.

ತಾತ್ವಿಕವಾಗಿ ಕೂಡ ಓದುಗನ ಸ್ಥಾನ ಪಲ್ಲಟವಾಗಿದೆ. ಓದುಗ ತನ್ನ ಆಂತರಿಕ ಸ್ವಾಯತ್ತತೆಯಲ್ಲಿ, ಮುಗ್ಧತೆಯಲ್ಲಿ ಕೃತಿಯನ್ನು, ಲೇಖಕರನ್ನು ಆಯ್ಕೆ ಮಾಡುವ ಒಂದು ಚೈತನ್ಯ ಎಂದು ಈಗ ಯಾರೂ ಭಾವಿಸುವುದಿಲ್ಲ. ಓದುಗನಿಗೂ ಒಂದು ಅಜೆಂಡಾ ಇರುತ್ತದೆ. ಮನುಷ್ಯ ತನ್ನನ್ನು ತಾನು ಮೀರುವ ಕ್ರಿಯೆಯಾಗಿ ಓದುಗಾರಿಕೆ ನಡೆಯುವುದಿಲ್ಲ ಎಂದು ಭಾವಿಸುತ್ತಿರುವ ಲೇಖಕವರ್ಗ ಯಾವ ರೀತಿಯ ಸಾಹಿತ್ಯವನ್ನು ಸೃಷ್ಟಿಸಬಹುದು? ಇಂತಹ ಲೇಖಕವರ್ಗದ ಮುಂದಿರುವುದು ಕಣ್ಣೆದುರಿನ ಸಮಕಾಲೀನ ಓದುಗರು ಮಾತ್ರವೇ! ಹೀಗೆ ಓದುಗನನ್ನು ಯಾಂತ್ರಿಕವಾಗಿ ಪರಿಭಾವಿಸುವ ಲೇಖಕವರ್ಗ ಪ್ರತಿಯೊಬ್ಬ ಓದುಗನಿಗೂ ಅನನ್ಯವಾಗಿರುವ ಏಕಾಂತ ಮತ್ತು ಅನೂಹ್ಯತೆಯನ್ನು, ಆ ಏಕಾಂತ ಮತ್ತು ಅನೂಹ್ಯತೆಯಲ್ಲಿ ಮಾತ್ರವೇ ನಿಜವಾಗಬೇಕಾದ ಸಾಹಿತ್ಯ ಕೃತಿಯ ಅಗತ್ಯವನ್ನು ಕೂಡ ಪರೋಕ್ಷವಾಗಿ ನಿರಾಕರಿಸುತ್ತದೆ.

ಓದುಗನನ್ನು ಯಾಂತ್ರಿಕವಾಗಿ ಪರಿಭಾವಿಸುವ ಇನ್ನೊಂದು ನೆಲೆಯೆಂದರೆ, ಓದುಗನನ್ನು ಒಬ್ಬ exclusive ವ್ಯಕ್ತಿಯಾಗಿ ಪರಿಗಣಿಸುವುದು. ವೃತ್ತಿನಿರತ ಸಾಹಿತಿಗಳನ್ನು ಬಿಟ್ಟರೆ ಬಹುಪಾಲು ಮನುಷ್ಯರ ಓದು, ಅವರವರ ವೃತ್ತಿ ವ್ಯವಹಾರ, ಸಂಸಾರ, ಕಷ್ಟಕೋಟಲೆ, ನೋವು, ನಲಿವುಗಳ ನಡುವೆಯೇ ನಡೆಯುತ್ತದೆ. ಈ ಒತ್ತಡಗಳ ನಡುವೆ ನಡೆಯುವ ಓದುವಿಕೆಯಲ್ಲಿ ಸಾಹಿತ್ಯದ, ಅದರಲ್ಲೂ ಸಮಕಾಲೀನ ಸಾಹಿತ್ಯದ ಪಾಲು ತುಂಬಾ ಕಡಿಮೆಯಿರುತ್ತದೆ. ಓದುಗನ ಈ ಜೀವನ ಸಂದರ್ಭವನ್ನು ಲೇಖಕವರ್ಗ ಹೃತ್ಪೂರ್ವಕವಾಗಿ ಗೌರವಿಸುವುದಿಲ್ಲ.

ಶಿಕ್ಷಣ, ಪ್ರಜಾತಂತ್ರದಿಂದಾಗಿ ಓದುಗರ ಸಂಖ್ಯೆ, ವೈವಿಧ್ಯ ಎರಡೂ ವಿಸ್ತಾರವಾಗಿದೆ. ಒಂದೇ ವರ್ಗದ ಓದುಗರಿಗೆ ಮಾತ್ರ ಒಗ್ಗಿಕೊಂಡಿದ್ದ ಲೇಖಕರಿಗೆ ಇದೊಂದು ಸವಾಲು. ಈಗ ಓದುಗವರ್ಗದಲ್ಲೇ ಅನೇಕ ವಲಯಗಳಿವೆ, ಭಿನ್ನ ಸ್ತರಗಳಿವೆ. ಓದುವಿಕೆ ವಿಕೇಂದ್ರೀಕರಣಗೊಂಡಿದೆ. ಯಾವುದೇ ವಲಯದ ಓದುಗರು ಈಗ ಯಜಮಾನಿಕೆಯ ಸ್ಥಾನವನ್ನು ಪಡೆಯುವುದು ಸಾಧ್ಯವಿಲ್ಲ. ಪತ್ರಿಕೆ, ನಿಯತಕಾಲಿಕೆಗಳ ಸಂಖ್ಯೆ ಕೂಡ ಹೆಚ್ಚಾಗಿರುವುದರಿಂದ ಇಡೀ ಕರ್ನಾಟಕದ ಓದುಗರನ್ನು ಒಂದೋ ಎರಡೋ ಪತ್ರಿಕೆಗಳು ಪ್ರಭಾವಿಸುವುದು ಕಷ್ಟ. ವಿಸ್ತಾರವಾದ, ವೈವಿಧ್ಯಮಯವಾದ ಓದುಗ ವಲಯಕ್ಕೆ ಬರೆಯುವಾಗ ಯಾವಾಗಲೂ ಓದುಗ ಸ್ನೇಹಿಯಾಗಿ, ಜನಪ್ರಿಯವಾಗಿಯೇ ಬರೆಯಬೇಕೆ? ಪ್ರಯೋಗಶೀಲತೆ, ಶಾಸ್ತ್ರ ಬರವಣಿಗೆಗಳಿಗೆಲ್ಲ ಇಂತಹ ಓದುಗ ವಲಯದಿಂದ ಯಾವ ರೀತಿಯ ಪ್ರೋತ್ಸಾಹ ನಿರೀಕ್ಷಿಸಬಹುದು?

ಎಲ್ಲ ತಲೆಮಾರಿನಲ್ಲೂ ಲೇಖಕರು ಸೃಷ್ಟಿಕ್ರಿಯೆಯ ಸ್ವರೂಪ, ಉದ್ದೇಶಗಳ ಬಗ್ಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ವಿಚಾರಗಳನ್ನು ಮಂಡಿಸುತ್ತಾರೆ. ಈಚಿನ ದಿನಗಳಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಬರವಣಿಗೆಯನ್ನು ಒಂದು ಜ್ಞಾನ ವ್ಯವಸ್ಥೆ (knowledge system)ಯಾಗಿ ಕಟ್ಟುವ ಕಡೆಗೆ ಒಲವಿದೆ. ಈ ರೀತಿಯ ಕಟ್ಟುವಿಕೆಯ ಮೂಲಕ ಇದುವರೆಗೆ ಸೃಷ್ಟಿಯಾಗಿರುವ ಜ್ಞಾನ ವ್ಯವಸ್ಥೆಗಳಿಗೆ ಪರ್ಯಾಯವನ್ನು ಹುಡುಕುವ ಆಸೆಯೂ ಇದೆ. ಈ ಆಸೆಯ ಹಿಂದೆ ಜ್ಞಾನ ವ್ಯವಸ್ಥೆಯ ನಿರ್ಮಾಣದಲ್ಲಿ ಸಾಹಿತ್ಯದ್ದೇ ಮುಖ್ಯ ಪಾತ್ರ ಎಂಬ ನಂಬಿಕೆಯಿಂದೆ. ಜ್ಞಾನ ವ್ಯವಸ್ಥೆ, ಸಾಂಸ್ಕೃತಿಕ ಯಜಮಾನಿಕೆಯನ್ನು ನಿರ್ಮಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ಎಂಬುದು ನಿಜ. ಆದರೆ ಜ್ಞಾನ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ವಿಜ್ಞಾನ, ತಂತ್ರಜ್ಞಾನ, ತತ್ವಶಾಸ್ತ್ರ, ಆರ್ಥಿಕ ಶಕ್ತಿಗಳ ಪ್ರಭಾವವನ್ನು ನಾವು ನಿರಾಕರಿಸುವ ಹಾಗೇ ಇಲ್ಲ. ಒಂದು ಸಮಾಜವು ಹೆಚ್ಚು ಹೆಚ್ಚು ಆಧುನಿಕಗೊಂಡಂತೆ,

ಬಂಡವಾಳಶಾಹಿಯು ಹೊಸ ಹೊಸ ರೂಪ ತಳೆದಂತೆ, ಜ್ಞಾನ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಅಂಶಗಳಿಗಿಂತ ಬೇರೆ ಅಂಶಗಳೇ ಹೆಚ್ಚು ನಿರ್ಣಾಯಕ. ಈ ಸವಾಲನ್ನು ಕನ್ನಡ ಸಾಂಸ್ಕೃತಿಕ ಲೋಕ ಗ್ರಹಿಸಬೇಕಾದಷ್ಟು ಆಳ ಮತ್ತು ತೀವ್ರತೆಯಲ್ಲಿ ಇನ್ನೂ ಗ್ರಹಿಸಿಲ್ಲವೆನಿಸುತ್ತದೆ.

ನವೋದಯದ ಯುಗಧರ್ಮದಲ್ಲಿ ಸಾಹಿತ್ಯ ಕೃತಿಗಳ ಭೂಮಿಕೆಯ ಮೂಲಕ ಇದುವರೆಗೆ ಸೃಷ್ಟಿಸಿಕೊಂಡು ಬಂದಿರುವ ಜ್ಞಾನ ವ್ಯವಸ್ಥೆಯನ್ನು ಶೋಧಿಸಬಹುದೆಂಬ ಮನೋಧರ್ಮವಿತ್ತು. ಜೊತೆಗೇ ಸಾಹಿತ್ಯ ಕೃತಿಯೊಳಗೇ ಸೃಷ್ಟಿಯಾಗುತ್ತಿರುವ ಜ್ಞಾನ ವ್ಯವಸ್ಥೆಯನ್ನು ಕೂಡ ವಿಮರ್ಶಾತ್ಮಕವಾಗಿಯೇ ನೋಡಬೇಕೆಂಬ ನಿಲುವೂ ಇತ್ತು. ಈ ಅಂಶಗಳು ನವೋದಯದ ಕಾಲದ ಓದುಗಾರಿಕೆಯ ಸ್ವರೂಪವನ್ನು ಕೂಡ ನಿರ್ಧರಿಸಿದೆ. ತತ್ವಶಾಸ್ತ್ರ, ವಿಜ್ಞಾನ, ವಿಶೇಷವಾಗಿ ವಸ್ತು ವಿಜ್ಞಾನ, ಜ್ಯೋತಿಷ್ಯ, ಸಂಖ್ಯಾಶಾಸ್ತ್ರ ಸಂವೇದನೆ ಮತ್ತು ಗ್ರಹಿಕೆಯ ಭಿನ್ನ ಪ್ರಸ್ಥಾನಗಳು. ಹೀಗೆ ಯಾವುದೇ ಕ್ಷೇತ್ರವೂ ಅವರಿಗೆ ವರ್ಜ್ಯವಾಗಿರಲಿಲ್ಲ. ಇದಕ್ಕೆ ಹೋಲಿಸಿದರೆ ಈಚಿನ ವರ್ಷಗಳ ಸಾಹಿತ್ಯ ವಲಯದ ಓದುಗಾರಿಕೆಯ ಸ್ವರೂಪ ಕೆಲವು ಸುಲಭದ ದಾರಿಗಳನ್ನು ಹುಡುಕಿಕೊಂಡಂತೆ ಕಾಣುತ್ತದೆ. ಶಾಸ್ತ್ರ, ವಿಧಾನ, ಅಮೂರ್ತ ಬರವಣಿಗೆಗಳ ಓದು ಕಡಿಮೆಯಾಗಿರುವುದು, ಸಾಹಿತ್ಯಿಕ ಕೃತಿಗಳು ರೂಪಿಸುವ ತಾತ್ವಿಕತೆಯನ್ನು ಸ್ವಯಂಪೂರ್ಣವೆಂದು, ತತ್ವಶಾಸ್ತ್ರಕ್ಕೆ ಪರ್ಯಾಯವೆಂದು ಪರಿಗಣಿಸುವುದು, ಅನ್ವಯಿಕ ಗ್ರಹಿಕೆ, ಅಧ್ಯಯನದ ವಿಧಾನಗಳನ್ನು ಹೆಚ್ಚಾಗಿ ನೆಚ್ಚಿಕೊಂಡ ಸಮಾಜ ವಿಜ್ಞಾನಗಳ ನೋಟಗಳಿಗೇ ಆದ್ಯತೆ ಕೊಡುವುದು, ಇವೆಲ್ಲ ಈಚಿನ ತಲೆಮಾರಿನ ಲೇಖಕರ ಓದುಗಾರಿಕೆಯನ್ನು ನಿರ್ಧರಿಸಿ, ಪ್ರೇರೇಪಿಸಿರುವಂತೆ ಕಾಣುತ್ತದೆ. ಈ ಆಯ್ಕೆಯನ್ನು ಗಮನಿಸುವಾಗ ನನಗೆ ವಿದುರ–ಮೈತ್ರೇಯರ ಒಂದು ಮಾತುಕತೆ ನೆನಪಾಗುತ್ತದೆ. ಶಾಶ್ವತವಾದ ಆನಂದವನ್ನು ಪಡೆಯಲು ತಕ್ಕ ತತ್ವಜ್ಞಾನ ಯಾವುದು ಎಂಬುದರ ಬಗ್ಗೆ ನನಗೆ ಈಗ ಆಸಕ್ತಿ, ವ್ಯಾಸರಿಂದ ತಿಳಿದ ವರ್ಣಾಶ್ರಮ ಧರ್ಮದ ಕಥೆಯಲ್ಲ ("ಮಹಾಭಾರತದ ಸಾಮಾಜಿಕ ಭಿತ್ತಿ") ಎಂದು ವಿದುರ ಮೈತ್ರೇಯನಿಗೆ ಹೇಳುತ್ತಾನೆ.

ಸೃಷ್ಟಿಕ್ರಿಯೆಯ ಸ್ವರೂಪವನ್ನು ವಿವರಿಸುವಲ್ಲಿ, ಒಪ್ಪಿಕೊಳ್ಳುವಲ್ಲಿ ಮನಶ್ಶಾಸ್ತ್ರದ ನೆಲೆಗಳು ಮುಂದೆ ಬಂದಿವೆ. ಈ ನೆಲೆಗಳನ್ನು ಈಗ ಬರೆಯುತ್ತಿರುವ ಎಲ್ಲ ಮನೋಧರ್ಮದವರೂ ಒಪ್ಪಿದ್ದಾರೆನಿಸುತ್ತದೆ. ಮನಶ್ಶಾಸ್ತ್ರವು ಮನಸ್ಸಿನ ನಿಗೂಢತೆಯನ್ನು ವಿವರಿಸುತ್ತದೆ, ಶೋಧಿಸುತ್ತದೆ ಎಂದು ಹೇಳಿದರೂ ಕೊನೆಗೂ ಅದರ ಅರಿವಿನ ವಿಧಾನವು ಕಾರ್ಯ ಕಾರಣ ರೀತಿಯದು, ತರ್ಕ ಪ್ರಧಾನವಾದುದು. ಒಳ ತಿಳಿವು, ಅಂತಃಸ್ಫೂರ್ತಿ, ಕಲ್ಪಕತೆ, ಬೆರಗು, ಲಂಘನಗಳಿಗೆ ಅಲ್ಲಿ ಸ್ಥಾನ ಕಡಿಮೆ. ಸಾಹಿತಿಯು ಸಂವೇದನೆ ಮತ್ತು ಗ್ರಹಿಸುವ ಸ್ತರದಲ್ಲೇ ತತ್ವಜ್ಞಾನಿ, ವಿಜ್ಞಾನಿಗಳಿಗಿಂತ ಭಿನ್ನ. ಚಿಂತನೆ, ಗ್ರಹಿಕೆಯ ಎಲ್ಲ ಹಂತಗಳನ್ನೂ ಕ್ರಮಬದ್ಧವಾಗಿ, ತರ್ಕಬದ್ಧವಾಗಿ ಹಾದು ನೋಟವನ್ನೂ, ಸೃಷ್ಟಿಯನ್ನೂ ಮಂಡಿಸುವ ವಿಧಾನ, ಸ್ವಭಾವ ಅವನದಲ್ಲ. ವಿಜ್ಞಾನದ ಮೂಲಭೂತ ಆವಿಷ್ಕಾರಗಳು ಕೂಡ ಇದೇ ಕ್ರಮವನ್ನು ನೆಚ್ಚಿಕೊಂಡಿವೆ. ಆವಿಷ್ಕಾರಗೊಂಡ ಸತ್ಯವನ್ನು ಮಾತ್ರ ನಂತರ ಅನ್ವಯಿಕ ನೆಲೆಗಳಲ್ಲಿ ಸೋದಾಹರಣವಾಗಿ ಮಂಡಿಸಲಾಗುತ್ತದೆ. ಸಾಹಿತ್ಯದ ವಿಧಾನವೆಂದರೆ ಪ್ರತಿಕ್ಷಣವೂ ಸಂವೇದಿಸುವ, ಮಿಡಿಯುವ ರೀತಿಯದು. ಅವನಿಗೆ ಪ್ರತಿ ಕ್ಷಣವೂ, ಪ್ರತಿ ಕಣವೂ ಜಗತ್ತಿನ ಒಟ್ಟು ಚೈತನ್ಯವು ತನ್ನ ಅನಂತತೆಯಲ್ಲಿ ಮತ್ತು ತಾಕ್ಷಣಿಕತೆಯಲ್ಲಿ ಹೊಳೆಯುತ್ತಿರುತ್ತದೆ, ಅನುಭವಕ್ಕೂ ಬರುತ್ತಿರುತ್ತದೆ, ವೇದ್ಯವಾಗುತ್ತಿರುತ್ತದೆ. ಹೀಗೆ ವೇದ್ಯವಾಗುವುದರಲ್ಲಿ ಒಂದು ಸಣ್ಣ ಭಾಗ ಮಾತ್ರ ಬರವಣಿಗೆಯಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ಈಗ ಸೃಷ್ಟಿಯಾಗುತ್ತಿರುವ ಬಹುಪಾಲು ಬರವಣಿಗೆಗಳನ್ನು ಗಮನಿಸಿದರೆ, ಕಾರ್ಯ ಕಾರಣ ಸಂಬಂಧವನ್ನು, ವಿಶ್ಲೇಷಣಾ ಕ್ರಮವನ್ನು ಆಧರಿಸಿ ನಿರೂಪಿಸಿದ ಪಠ್ಯಗಳೇ ಕಾಣುತ್ತವೆ. ಸೃಜನಶೀಲ ಬರವಣಿಗೆ, ವಿಮರ್ಶಾತ್ಮಕ ಬರವಣಿಗೆಗಳ ವಿಧಾನ ಈಗ ಹೆಚ್ಚು ಕಡಿಮೆ ಒಂದೇ ರೀತಿಯದು. ಜಗತ್ತಿನ ಸಕಲ ಸಂಗತಿಗಳನ್ನು problematise (ಸಮಸ್ಯೀಕರಿಸಿ) ಮಾಡಿ ಸಂಕೀರ್ಣಗೊಳಿಸಿ ನಂತರ ಅರ್ಥ ಹುಡುಕುವ ಮಾನಸಿಕ ಗೀಳಿಗೆ ಇಂದು ನಾವೆಲ್ಲ ತುತ್ತಾಗಿದ್ದೇವೆ.


ಸಮಾಜದಲ್ಲಿ ಸಾಹಿತ್ಯದ ಪ್ರಭಾವ ಮತ್ತು ಪಾತ್ರ ಸಮೂಹ ಮಾಧ್ಯಮಗಳಿಗಿಂತ ಭಿನವಾದದ್ದು. ಅಲ್ಲದೇ ಸಾಹಿತ್ಯ ಕೃತಿಗಳ ಪ್ರಭಾವಕ್ಕೆ ತೆರೆದುಕೊಳ್ಳುವವರನ್ನು ಮಾತ್ರ ಅದು ಪ್ರಭಾವಿಸಬಲ್ಲದು, ಅಷ್ಟೇ. ಹಾಗಾಗಿ ಬರಹಗಾರನಿಗೆ ಸಮೂಹ ಮಾಧ್ಯಮಗಳಿಂದ ಒಂದು ರೀತಿಯ "ದೂರ"ದ ಅಗತ್ಯವಿದ್ದೇ ಇದೆ. ಮಾಧ್ಯಮಗಳು ಮಾಡುವ ಕೆಲಸವನ್ನು ಮತ್ತೆ ಅವನು ಮಾಡಬೇಕಾಗಿಲ್ಲ. ಸಮಕಾಲೀನತೆಯ ಬಗ್ಗೆ ಅವನಿಗೆ ಆಸಕ್ತಿಯಿದ್ದರೂ ಕುವೆಂಪು ಹೇಳುವ ಹಾಗೆ ಅಪತ್ರಿಕಾ ವಾರ್ತೆಯ ಕಡೆಗೇ ಅವನ ಗಮನ. ಸಮೂಹ ಮಾಧ್ಯಮಗಳ ಒಡೆಯರು, ವಕ್ತಾರರು ಮತ್ತು ಸ್ವತಃ ಸಾಹಿತಿಗಳೇ ಈಗ ಸಾಹಿತ್ಯವನ್ನು ಸಮೂಹ ಮಾಧ್ಯಮದ ವಿಸ್ತರಣೆಯಾಗಿ ನೋಡುತ್ತಾರೆ. ಜೊತೆಗೆ ಮಾರುಕಟ್ಟೆ ಅರ್ಥಶಾಸ್ತ್ರದ ಪ್ರೇರಣೆಗಳನ್ನು ಈಗ ಲೇಖಕರೂ ಒಪ್ಪಿಕೊಂಡಿರುವುದರಿಂದ ಸಮೂಹ ಮಾಧ್ಯಮಗಳ ಮೇಲೆ ವಿಪರೀತವೆನ್ನುವಷ್ಟು ಅವಲಂಬನೆಯಿದೆ. ಮಾಧ್ಯಮದಲ್ಲಿ ಹಾಜರಿರುವುದೇ ಸಾಹಿತ್ಯ ಲೋಕದಲ್ಲೂ ಹಾಜರಿದ್ದಂತೆ ಎಂಬ ನಂಬಿಕೆಯಿದು.

ಇನ್ನೊಂದು ದಿಕ್ಕಿನಿಂದ ಸಮೂಹ ಮಾಧ್ಯಮಗಳು ಸಾಹಿತ್ಯ, ಸಾಂಸ್ಕೃತಿಕ ಲೋಕದ ಅನನ್ಯತೆ, ವಿಶಿಷ್ಟತೆಯನ್ನು ನಗಣ್ಯವಾಗಿ ಕಾಣುತ್ತಿರುವುದನ್ನು ನೋಡಬಹುದು. ಸಾಹಿತ್ಯ ಲೋಕದ ಸುದ್ದಿ ಆಯಾಮಗಳಿಗೆ ಮಾತ್ರ ಈಗ ಗಮನ. ಪ್ರಶಸ್ತಿಯ ಸುದ್ದಿ ಪ್ರಕಟವಾಗುತ್ತದೆ, ಪ್ರಶಸ್ತಿ ಪಡೆದ ಕೃತಿಯ ವಿಮರ್ಶೆ ಪ್ರಕಟವಾಗುವುದಿಲ್ಲ. ಸಾಹಿತ್ಯಿಕ, ಸಾಂಸ್ಕೃತಿಕ ಸಂಗತಿಗಳಿಗೆ ಓದುಗರಿಲ್ಲ, ಇದ್ದರೂ ಕಡಿಮೆ ಎಂದು ತಾವೇ ನಿರ್ಧರಿಸಿಕೊಂಡು ಸಾಹಿತ್ಯಿಕ ಪುರವಣಿಗಳ ಸ್ವರೂಪವನ್ನು ಪತ್ರಿಕೆಗಳು ಸ್ವಯಂ ಪ್ರೇರಣೆಯಿಂದ ಸಾಕಷ್ಟು ಅಸಾಹಿತ್ಯಿಕವಾಗಿ ಬದಲಾಯಿಸಿದವು. ಕೆಲವೇ ದಶಕಗಳ ಹಿಂದೆ ಓದುಗರನ್ನು ನಿರ್ಮಿಸುವುದು, ಅವರ ಸದಭಿರುಚಿಯನ್ನು ಬೆಳೆಸುವುದು, ಹೊಸತಾದ್ದನ್ನು, ಪ್ರಯೋಗಶೀಲವಾದದ್ದನ್ನು ಗುರುತಿಸುವುದನ್ನು ಪತ್ರಿಕೆಗಳು ತಾವೇ ಮುಂದಾಳುತನ ವಹಿಸಿ ಮಾಡುತ್ತಿದ್ದವು ಎಂದು ಈಗ ನಂಬುವುದೇ ಕಷ್ಟವಾಗಿದೆ.

ಪ್ರಭುತ್ವದೊಡನೆ ಸಾಹಿತ್ಯ ಲೋಕದ ಸಂಪರ್ಕ ಹೇಗಿರಬೇಕು? ಯಾವುದೇ ಪಕ್ಷದ, ವೈಚಾರಿಕತೆಯ ಸರ್ಕಾರವಾದರೂ ತಾನು ಕಾಣುತ್ತಿರುವ ಕ್ರಮಕ್ಕಿಂತ ಇನ್ನೊಂದು ಭಿನ್ನವಾದ ಕ್ರಮವಿದೆ ಎಂಬುದನ್ನು ಒಪ್ಪುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಸಾಹಿತ್ಯವು ಒಂದು ವಿದ್ಯಮಾನವನ್ನು ಹಲವು ಕ್ರಮಗಳಲ್ಲಿ ನೋಡಬಹುದು, ನೋಡಬೇಕು, ಯಾವುದೇ ನೋಡುವ ಕ್ರಮವೂ ಸ್ವಯಂ ಪೂರ್ಣವಲ್ಲ, ನೋಡುವ ಕ್ರಮವೇ ಸತ್ಯಕ್ಕೆ, ಸಂದಿಗ್ಧತೆಗೆ ಪರ್ಯಾಯವಲ್ಲ ಎಂದು ನಂಬುತ್ತದೆ. ಈ ನಂಬಿಕೆಯ ಹಿನ್ನೆಲೆಯಲ್ಲಿ ಸರ್ಕಾರದೊಡನೆ ಕೆಲಸ ಮಾಡಿದರೆ ತಪ್ಪಿಲ್ಲ. ಆದರೆ ಸರ್ಕಾರದ ಆಶ್ರಿತರಾಗಬಾರದು, ಫಲಾನುಭವಿಗಳಾಗಬಾರದು. ಮರಾಮತ್–ಮುಜರಾಯಿ ಇಲಾಖೆಗಳಂತೆ ಸಂಸ್ಕೃತಿಯೂ ಕೂಡ ಸರ್ಕಾರಕ್ಕೆ ಒಂದು ಇಲಾಖೆ. ಬೇರೆ ಇಲಾಖೆಗಳನ್ನು ನಿರ್ವಹಿಸುವಂತೆಯೇ ಈ ಇಲಾಖೆಯನ್ನೂ ಸರ್ಕಾರವು ನಿರ್ವಹಿಸುತ್ತದೆ. ಬೇರೆ ಇಲಾಖೆಯ ಫಲಾನುಭವಿಗಳಂತೆ, ಆಶ್ರಿತರಂತೆಯೇ ಈ ಇಲಾಖೆಯ ವ್ಯಾಪ್ತಿಗೆ ಬರುವವರನ್ನು ಸರ್ಕಾರವು ಪರಿಗಣಿಸುತ್ತದೆ. ಸಂಸ್ಕೃತಿ ಇಲಾಖೆಯ ಪರಿಭಾಷೆ, ಕಾರ್ಯ ವಿಧಾನ ಕೂಡ ಇತರ ಇಲಾಖೆಗಳಂತೆಯೇ ಇರುವುದನ್ನು ಗಮನಿಸಬಹುದು. ಹೀಗೆ ಹೇಳುವಾಗ ಸಾಹಿತ್ಯ ಲೋಕಕ್ಕೆ ಇರುವ, ಇರಬೇಕಾದ ನೈತಿಕ ಶಕ್ತಿ, ಪ್ರಭಾವದ ಪ್ರಶ್ನೆ ಎಲ್ಲಿ ಹೋಯಿತು? ಸಾಹಿತ್ಯ ಲೋಕಕ್ಕೆ ಒಂದು ಘಟಕವಾಗಿಯೇ ನೈತಿಕ ಶಕ್ತಿ ಇರುವುದಿಲ್ಲ. ಎಲ್ಲ ಕಾಲದಲ್ಲೂ, ಎಲ್ಲ ದೇಶಗಳಲ್ಲೂ ಕೆಲವೇ ಕೆಲವು ಲೇಖಕರಿಗೆ ಮಾತ್ರ ಇಂತಹ ನೈತಿಕ ಶಕ್ತಿಯಿರುತ್ತದೆ. ಲಂಕೇಶ್, ಕಾರಂತ, ಡಿವಿಜಿಯವರಂತಹವರು ಉದಾಹರಣೆಗೆ ಯಾವತ್ತೂ ಕಡಿಮೆಯೇ. ನೈತಿಕ ಶಕ್ತಿಯ ಜೊತೆಗೇ ಪ್ರಭುತ್ವವು ಗಮನಿಸಲೇಬೇಕಾದಷ್ಟು ಪ್ರಮಾಣದ ಸಾಂಸ್ಕೃತಿಕ ಸಾಧನೆ ಕೂಡ ಲೇಖಕರಲ್ಲಿರಬೇಕಲ್ಲ. ಕೊನೆಗೂ ಇದು ಪ್ರತಿಯೊಬ್ಬ ಲೇಖಕನ ಆತ್ಮಪರೀಕ್ಷೆಗೆ ಬಿಟ್ಟಿದ್ದು.

ಸಾಹಿತ್ಯ–ಸಮಾಜ–ಸಾಹಿತಿಗಳ ಬಗ್ಗೆ ಮಾತನಾಡುತ್ತಾ ನಾವು ಮರೆತುಬಿಡುವ ಒಂದು ಪ್ರಶ್ನೆಯೆಂದರೆ, ನಮ್ಮ ನಮ್ಮ ವೈಯಕ್ತಿಕ ಕೌಟುಂಬಿಕ ವಲಯಗಳಲ್ಲೇ ಈಗ ಸಾಹಿತ್ಯದ ಓದುಗಾರಿಕೆಯೂ, ಸಂವೇದನಾಶೀಲತೆಯೂ ಯಾವ ಸ್ಥಾನದಲ್ಲಿದೆಯೆಂಬುದು. ಬಂಧು–ಮಿತ್ರರ ವಲಯಗಳಲ್ಲೇ ಈಗ ಸಾಹಿತ್ಯ ಮತ್ತು ಮಾತೃಭಾಷೆ ಕೇಂದ್ರಸ್ಥಾನದಲ್ಲಿರಲಿ, ಮುಖ್ಯಸ್ಥಾನದಲ್ಲಿ ಕೂಡ ಇಲ್ಲ. ಕುಟುಂಬಗಳು ನಗರೀಕರಣಗೊಂಡಂತೆ, ಆರ್ಥಿಕವಾಗಿ ಕೊಂಚ ಸಂಪನ್ನವಾದಂತೆ, ಮನುಷ್ಯನಲ್ಲಿ ಭಾವನಾತ್ಮಕ ನೆಲೆ ಮತ್ತು ಸೆಳೆತ, ಸಮುದಾಯ ಪ್ರಜ್ಞೆ ಎರಡೂ ಕಡಿಮೆಯಾಗುತ್ತಾ ಹೋಗುತ್ತದೆ. ತಕ್ಷಣಕ್ಕೆ ಮತ್ತು ಸ್ವಾರ್ಥಕ್ಕೆ ಉಪಯೋಗ ಬೀಳುವಂತಹ ಓದು ಮತ್ತು ಮನರಂಜನೆಗೇ ಹೆಚ್ಚು ಆದ್ಯತೆ ದೊರಕುತ್ತದೆ. ಸಾಹಿತಿಗಳು ಕೂಡ ಇಂತಹ ಕುಟುಂಬಗಳಿಂದಲೇ, ಇಂತಹ ಮೌಲ್ಯ ವ್ಯವಸ್ಥೆಯಿಂದಲೇ ಮೂಡಿಬರುತ್ತಾರೆ, ಈ ಚೌಕಟ್ಟಿನಲ್ಲಿಯೇ ಬರೆಯುತ್ತಾರೆ, ಓದುಗರನ್ನು ಹುಡುಕುತ್ತಿರುತ್ತಾರೆ ಎಂಬುದನ್ನು ಒಪ್ಪಿಕೊಂಡರೆ ನಾವು ಎತ್ತುವ ಪ್ರಶ್ನೆಗಳು, ಹುಡುಕಬಹುದಾದ ಉತ್ತರ ಎರಡೂ ಬೇರೆಯೇ ಆಗಿರುತ್ತದೆ.


(ಈಗ ಬೆಂಗಳೂರಿನಲ್ಲಿ ನೆಲೆಸಿರುವ ನಿವೃತ್ತ ವರಮಾನ ತೆರಿಗೆ ಆಯುಕ್ತರಾದ ಕೆ. ಸತ್ಯನಾರಾಯಣ ಕಥೆ–ಕಾದಂಬರಿ–ಪ್ರಬಂಧ–ವಿಮರ್ಶೆ–ಪ್ರವಾಸ ಕಥನ ಹೀಗೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೆಲಸ ಮಾಡಿರುವ ಕನ್ನಡದ ಹಿರಿಯ ಲೇಖಕರು)



ಲಲಿತಪ್ರಬಂಧ

ಮೊಸರಲ್ಲಿ ಕಲ್ಲು!

–ವಿಜಯೇಂದ್ರ ಪಾಟೀಲ



ಕಚೇರಿಯಲ್ಲಿ ಇನ್ನೊಂದು ಗಟ್ಟಿ ಮಹಿಳಾ ಧ್ವನಿಯ ಅಭಿಪ್ರಾಯ ಪಡೆಯುವದಿತ್ತು. ಆಕೆ ಕುಸುಮಾ ಹೆಸರಿನವಳಾದರೂ ಮಾತಿನಲ್ಲಿ ವಜ್ರಾದಪಿ. ಸಂಸಾರ ಸಾಗರದ ಪರಿಣತ ಈಜುಗಾರ್ತಿ. ಹೀಗಾಗಿ ಇಲ್ಲಿ ಪೀಠಿಕೆ ಬಿಟ್ಟು ನೇರವಾಗಿ ಕೇಳಿದೆ. "ನಿಮ್ಮ ಯಜಮಾನರಿಗೂ ಮೊಸರಿನಲ್ಲಿ ಕಲ್ಲು ಬರುವುದಿದೆಯೇ?" ಆಕೆ "ಗಂಡಸಾಗಿ ಅದು ಅವರ ಹಕ್ಕು" ಎಂದು ಹಾಸ್ಯ ಮಾಡಿದಂತೆ ಮಾಡಿ "ಬರಿ ಕಲ್ಲು ಮಾತ್ರವಲ್ಲ, ಗಾಜು, ಕಬ್ಬಿಣ, ಪ್ಲಾಸ್ಟಿಕ್ ಕೂಡ ಬರುತ್ತಿರುತ್ತವೆ" ಎಂದು ಜೋರಾಗಿ ನಕ್ಕು,"ಅದು ಅವರ ನಿಜ" ಎಂದು ಇನ್ನೂ ಜೋರಾಗಿ ನಕ್ಕಳು. ನನಗೆ ಹಾದಿ ಬಂದಾದಂತೆ ಕಂಡಿತು. ಆದರೆ ಆಕೆಯೇ ತೆರೆದಳು. "ನಾನು ಮೊಸರು ಮಾಡುವೆ. ಅದರಲ್ಲಿ ಅವರಿಗೆ ಏನೇನೋ ಬರುತ್ತವೆ. ಅವರು ಹಣ್ಣು, ತರಕಾರಿ ತರುವರು. ಅದರಲ್ಲಿ ಕ್ರಿಮಿನಾಶಕದ ವಾಸನೆ ಹಾಗೂ ಹುಳುಗಳು ಸಿಗುವವು" ಎಂದು ಒಗಟಿನಂತೆ ಹೇಳಿದಳು. "ಕ್ರಿಮಿನಾಶಕ ಇರುವಲ್ಲಿ ಹುಳುಗಳು ಇರಬಾರದಲ್ಲ" ಎಂದು ನಾನು ತರ್ಕ ಹೂಡಿದೆ. "ಅದೇನೊ ತಿಳಿಯದು. ಅದು ನನ್ನ ಸ್ವಂತದ ನಿಜ" ಎಂದು ಕಣ್ಣು ಮಿಟುಕಿಸಿದಳು. ಈಕೆ ಕೊಡ್ಡಿಗೊಂದು ಕುಂಟಿ ಅನ್ನುವುದು ತಿಳಿಯಿತು. ಇದು ಅವಳ ಸಂಸಾರ ನಿಯಂತ್ರಣ ಮಾರ್ಗ ಎಂಬುದೂ ಅರ್ಥವಾಯಿತು. ಆಕೆಯೆ

ಒಂದು ದಿನ ರಾತ್ರಿಯ ಊಟ ಮಾಡುವಾಗ ನಿಜವಾಗಿಯೂ ನನಗೆ ಮೊಸರಿನಲ್ಲಿ ಕಲ್ಲು ಬಂದಿತು. ಅದಾದದ್ದು ಹೀಗೆ .ಜೋಳದ ರೊಟ್ಟಿಯನ್ನು ಮೊಸರಿನ ಬಟ್ಟಲಲ್ಲಿ ಅದ್ದಿ ಅದಕ್ಕೆ ಗುರೆಳ್ಳಿನ ಹಿಂಡಿ ಮೆತ್ತಿ ಬಾಯಲ್ಲಿ ಹಾಕಿಕೊಳ್ಳುವುದು. ಯೋಜನೆ ಮಾತ್ರದಿಂದಲೆ ಬಾಯಲ್ಲಿ ನೀರು ಬಂದಿತ್ತು. ಆದರೆ ಕಲ್ಲು ಬಂದು ಯೋಜನೆ ಅರ್ಧಕ್ಕೆ ನಿಂತು ಹೋಯಿತು. ಆ ಬೇಜಾರಿನಲ್ಲಿ ಮೊಸರಿನಲ್ಲಿ ಸಿಕ್ಕ ಕಲ್ಲನ್ನು ಕೈ ಸ್ವಲ್ಪ ಎತ್ತರಿಸಿ ಸ್ಟೀಲ್ ತಟ್ಟೆಯ ಮೇಲೆ "ಠಣ್" ಎನ್ನುವಂತೆ ಬಿಟ್ಟೆ. ಹೆಂಡತಿಯ ಗಮನ ಸೆಳೆಯುವುದು ನನ್ನ ಒಳ ಉದ್ದೇಶ. ಆದರೆ ಅದಾಗಲಿಲ್ಲ. ಸಣ್ಣ ಪುಟ್ಟ ಶಬ್ದ, ಪಿಸುಮಾತು, ಕಣ್ಸನ್ನೆಗಳಿಗಾಗಿ ನನ್ನತ್ತ ನೋಡುತ್ತಿದ್ದ ಜಮಾನಾ ಕಳೆದಿತ್ತು. ಆದರೆ ಸಾಹಿತ್ಯ, ಸೂಚ್ಯತೆ, ಸೂಕ್ಷ್ಮತೆ ಅಂತೆಲ್ಲ ಪದಗಳನ್ನು ಭಾಷಣದ ಮಟ್ಟಿಗೆ ಉಳಿಸಿಕೊಂಡಿದ್ದ ನನಗೆ ಅವುಗಳ ವ್ಯಾಮೋಹ ಇನ್ನೂ ಹೋಗಿರಲಿಲ್ಲ. ತಟ್ಟೆಗೆ ಕಲ್ಲೆಸೆದದ್ದು ಅಂಥ ಒಂದು ಕಾರ್ಯಾಚರಣೆ ಎಂದು ನನಗೆ ಅನಿಸಿತ್ತು. ಆದರೆ ಹೆಂಡತಿಗೆ ಅದು ಅತ್ಯಂತ ಸ್ಥೂಲ ಹಾಗು ಅಶಿಕ್ಷಿತತನದ್ದಾಗಿ ಕಂಡಂತಿತ್ತು.

ಅದಕ್ಕೆ ಕಾರಣವೂ ಇತ್ತು. ಪುಣೆಯಿಂದ ಬಂದಿದ್ದ ನನ್ನ ಗೆಳೆಯನೂ ನನ್ನೊಂದಿಗೆ ಊಟಕ್ಕೆ ಕುಳಿತಿದ್ದ. ಆತ ಸೂಕ್ಷ್ಮ. ಗೆಳೆಯನ ಮನೆಯಲ್ಲಿ ಮೊಸರಿನಲ್ಲಿ ಕಲ್ಲು ಬರುವಂಥ ಸಮಯದಲ್ಲಿ ತಾನಿರುವಂತಾಯಿತು ಎಂದು ಮುಜುಗರಗೊಂಡನೊ ಏನೊ. ಆದರೆ ನನಗೆ ಒಂದು ಉನ್ಮಾದ ಬಂದಂತಿತ್ತು. ಗಂಡನ ಪಾತ್ರವನ್ನು ಹುಮ್ಮಸ್ಸಿನಿಂದ ಅಭಿನಯಿಸಬೇಕೆಂದು ಅನ್ನಿಸಿಬಿಟ್ಟಿತು. ಎರಡು ಬೆರಳಲ್ಲಿ ಕಲ್ಲು ಹಿಡಿದು ಮೆತ್ತಗಿನ ಆದರೆ ನಾಟಕೀಯ ಧ್ವನಿಯಲ್ಲಿ .." ಮೊಸರಿನಲ್ಲಿ ಕಲ್ಲು... " ಎಂದು ಹೆಂಡತಿಗೆ ತೋರಿಸಿದೆ. ಗೆಳೆಯ 'ಇರಲಿ ಇರಲಿ ' ಎಂಬಂತೆ ಕೈ ತೋರಿಸಿ ಮುಖ ಕೆಳಗೆ ಹಾಕಿದ. ಹೆಂಡತಿ 'ನಿಮಗೂ ಬಂತೆ' ಎಂದು ಗೆಳೆಯನಿಗೆ ಕೇಳಿ " ಇವರಿಗಂತೂ ಮೊಸರಿನಲ್ಲಿ ಕಲ್ಲು ಬರಲಾರಂಭಿಸಿ ಬಹಳ ದಿನಗಳಾದವು" ಎಂದು ಹೇಳಿದಳು. ಗೆಳೆಯ ಬೇಚೈನು ಅನುಭವಿಸಿ ಅವಳತ್ತ ಅಡ್ಡ ಗೋಣು ಹಾಕಿದ. ನನ್ನ ಕೈಯಲ್ಲಿಯ ಕಲ್ಲು ನೋಡಿ ಉದ್ದುದ್ದ ಕತ್ತು ಹಾಕಿದ. ಅದು ಇಗರ್ಜಿಯ ಚಿಹ್ನೆಯಾಯಿತು. ರೆಡ್ ಕ್ರಾಸ್ ಆಯಿತು. ಕಡೆಗೆ ಆಮ್ನೆಸ್ಟಿಯಂತೆ ಶಾಂತ ಭಾವ ತಳೆದು ತಟಸ್ಥವಾಯಿತು.!

ನಿಜ ಹೇಳಬೇಕೆಂದರೆ ಈ ಮೊದಲು ನನಗೆ ಅನ್ನದಲ್ಲಿ, ಪಲ್ಯದಲ್ಲಿ ಚಿಕ್ಕ ಪುಟ್ಟ ಕಲ್ಲುಗಳು ಬಂದದ್ದುಂಟು. ಅದು ಅಮ್ಮನ ಅಡಿಗೆಯ ಕಾಲದಿಂದಲೂ ಬಂದದ್ದೇ. ಆದರೆ ಮೊಸರಿನಲ್ಲಿ ಕಲ್ಲು ಇದೇ ಮೊದಲು. ಇದನ್ನೆಲ್ಲ ವಿವರಿಸಿದರೆ ಹೇಗೆ ಎಂದುಕೊಳ್ಳುತ್ತಿರುವಾಗಲೇ ಗೆಳೆಯ ವಾತಾವರಣ ತಿಳಿಗೊಳಿಸುವ ಸದುದ್ದೇಶದಿಂದಲೇ ಇರಬೇಕು, ಬಾಯಿ ತೆಗೆದು " ಈ ಮೊಸರು ಮನೆಯದೆ ಅಥವಾ ಕೊಂಡದ್ದೆ." ಎಂದು ಕೇಳಿದ.ಪಾಪ! ಅವನ ಮುಂದಿನ ನಡೆ ಹೇಗಿತ್ತೊ ಏನೊ ಹೆಂಡತಿಗೆ ಅದರಲ್ಲಿ ಪೋಲಿಸ್ ವಿಚಾರಣೆಯ ದನಿ ಕೇಳಿಸಿತು. "ನೀವು ಗಂಡಸರಿಗೆಲ್ಲ ಸೋಸಿದ ಮೊಸರಲ್ಲೂ ಕಲ್ಲು ಬರುತ್ತದೆ ಬಿಡಿ" ಎಂದು ಶರಾ ಬರೆದಳು. ಆಮ್ನೆಸ್ಟಿ ಪುನಃ ಶಾಂತವಾಯಿತು. ನಾನು ಕೈ ತೊಳೆಯುವ ಮೊದಲು ತಟ್ಟೆಯಲ್ಲಿಯ ಕಲ್ಲನ್ನು ವಿನಾಕಾರಣ ಮತ್ತೊಮ್ಮೆ ಮುಟ್ಟಿ ನೋಡಿದೆ.

ಊಟದ ನಂತರ ರಾತ್ರಿಯ ಬಸ್ಸಿಗೆ ಗೆಳೆಯನನ್ನು ಹತ್ತಿಸಲು ಹೊರಟೆ. ನನ್ನ ಎಸಿ ಕಾರಿನಲ್ಲಿ ಆತ ಆರಾಮಾದ. ಸೀಟು ಅಗಲಿಸಿಕೊಂಡ. ತಡಕೊಂಡ ಮಾತು ಆಡತೊಡಗಿದ. ದಾಂಪತ್ಯದ ಉನ್ನತ ಯಶಸ್ಸು ಅದರ ಶ್ರೇಷ್ಠ ಅಭಿನಯದ ಮೂಲಕ ಬರುವಂಥದು ಎಂದ ಮತ್ತು ಅದು ಪು.ಲ.ದೇಶಪಾಂಡೆಯವರ ಮಾತು ಎಂದು ಹೇಳಿ ತನ್ನ ನಿರ್ಲಿಪ್ತತನ ತೋರಿಸಿದ. ನಾನು ಸತ್ಯವನ್ನೆ ಹೇಳಿದ್ದೇನೆ, ಸತ್ಯವನ್ನಲ್ಲದೆ ಬೇರೇನೂ ಹೇಳಿಲ್ಲ ಎಂದು ಹೇಳುತ್ತ 'ಠಣ್' ಎಂದು ಸಾಕ್ಷಿ ಹೇಳಿದ ಸಾಕ್ಷಿ ಕಲ್ಲನ್ನು ನೆನಪಿಸಿದೆ. "ಸಾಕ್ಷಿ, ಸತ್ಯಗಳೆ ದಾಂಪತ್ಯ ಬಾಳಿಸಲು ಬೇಕೆನ್ನುವುದಾದರೆ ಸಾವಿರ ಸುಳ್ಳು ಹೇಳಿ ಮದುವೆ ಮಾಡಿಸಿಕೊಂಡು ಬಂದವರಿಗೇನು ಮರ್ಯಾದೆ"" ಎಂದು ಈ ಸಾರಿ ಸ್ವಂತ ಮಾತು ಹೇಳಿ ಹುಬ್ಬು ಹಾರಿಸಿದ. "ಅವರವರ ದಾಂಪತ್ಯ ಉಳಿಸಿಕೊಳ್ಳಲು ಅವರವೇ ಆದ ದಾರಿಗಳು.ಆಕಸ್ಮಾತ್ ಸತ್ಯದಿಂದ ಉಪಯೋಗವಾದರೂ ತಪ್ಪಿಲ್ಲ. ಮುಖ್ಯ, ಏಳೇಳು ಜನ್ಮ ಬಾಳಬೇಕು" ಎಂದು ತೋರುಬೆರಳು ತೋರಿಸಿದ. ಅವನ ಮಾತಿನ ಹುಕಿಯಲ್ಲಿ ನಾನು ಮಂಕಾದೆ. ನಮ್ಮ ಸಧ್ಯದ ಬದುಕು ಮೊದಲ ಆವೃತ್ತಿಯದೊ,ಕೊನೆಯದೊ ಯಾರನ್ನು ಕೇಳುವುದು? " ಪು.ಲ.ದೇಶಪಾಂಡೆ ದಾಂಪತ್ಯ ಕುರಿತಂತೆ ಆಡುತ್ತಿದ್ದ ಮಾತು ಕೇಳಲು ದಂಪತಿಗಳು ಟಿಕೆಟ್ಟು ಖರೀದಿಸಿ ಬರುತ್ತಿದ್ದರು" ಎಂದು ಹೇಳಿ ಕಾರಿನಲ್ಲಿ ಮತ್ತಾರೂ ಇರದಿದ್ದರೂ ಹತ್ತಿರ ಸರಿದು ತೊಡೆ ಬಡಿದು "ದಂಪತಿಗಳಲ್ಲದ ಜೊತೆ ಕೂಡ ಬರುತ್ತಿದ್ದವು" ಎಂದು ಹೇಳುವ ಹೊತ್ತಿಗೆ ನಾವು ಬಸ್ ನಿಲ್ಲುವಲ್ಲಿ ಬಂದಿದ್ದೆವು. ಬಸ್ ಹತ್ತಿ ಕಿಟಕಿಯಿಂದ ಕಡೆಯದಾಗಿ ಎಂಬಂತೆ "ಸಂಸಾರವೆಂಬುದು ಹಾಲಿನಂತಹದು" ಎಂದು ಹೇಳುತ್ತಿದ್ದುದನ್ನು ಪಕ್ಕದವನೂ ಕೇಳಿಸಿಕೊಂಡ.

ನಾನು ಮತ್ತೆ ಕಾರು ಹತ್ತಿದೆ. ತಲೆ ತುಂಬ ದಾಂಪತ್ಯವೇ ಕುಣಿಯುತ್ತಿತ್ತು. ದಾಂಪತ್ಯದ ಪ್ರವಚನ ಚಂದ. ನಾಟಕಗಳೂ ಚಂದ. ಪರರ ದಾಂಪತ್ಯ ಕುರಿತಂತೆ ಮಾತಾಡುವುದು ಚಂದದಲ್ಲಿ ಚಂದ. ಆದರೆ ದಾಂಪತ್ಯ ನಿಜಕ್ಕೂ ಚಂದವೇ? ಚಂದವಿರದಿದ್ದರೆ ಅದೇಕೆ ಇರುತ್ತಿತ್ತು ಎಂಬ ಪ್ರಶ್ನೆ ಹುಟ್ಟಿತು. ಚಂದವಿಲ್ಲದ್ದು ಇರಬಾರದೇ ಎಂಬ ಮರುಪ್ರಶ್ನೆಯೂ ಮೂಡಿತು. ಈಗ ಪ್ರಜಾಪ್ರಭುತ್ವ ಒಪ್ಪಿದ್ದೇವೆ. ನಾವೇ ಆರಿಸಿ ಕಳಿಸುತ್ತೇವೆ. ಆದರೇನು ಚನ್ನಾಗಿದೆಯೇ? ಹುಡುಗ, ಹುಡುಗಿ, ಹಿರಿಯರು ಸೇರಿಯೇ ದಾಂಪತ್ಯ ನಿರ್ಧರಿಸುತ್ತಾರೆ. ಹೊಸ ಸರಕಾರ, ಹೊಸ ಸಂಸಾರಗಳು ಕೆಲ ದಿನ ಚಂದವೆ. ಕಾಲ ಸರಿದಂತೆ ಮತ್ತೆ ಅದೆ ಡೊಂಕುಬಾಲ. ಇದ್ದುದರಲ್ಲಿ ಪ್ರಜಾಪ್ರಭುತ್ವ ವಾಸಿ. ಹಾಗೆ ನಾವು ಕಂಡುಕೊಂಡ ದಾಂಪತ್ಯ ಎಂಬ ಆಚರಣೆ. ಹೀಗೇ ಆಲೋಚನೆ. ನನ್ನ ಗಾಡಿಯ ಮುಂದೆ ಹುಡುಗರಬ್ಬರು ಅಡ್ಡಾದಿಡ್ಡಿ ಸೈಕಲ್ ಹೊಡೆದುಕೊಂಡು ಸಾಗಿದ್ದರು. ದಾರಿ ಬಿಡರು. ಪಕ್ಕಕ್ಕೂ

ಸರಿಯರು. ಮುಂದೂ ಹೋಗರು. ನನ್ನ ತಾಳ್ಮೆಯ ಪರೀಕ್ಷೆ ನಡೆದಿತ್ತು." ದಾಂಪತ್ಯವೆಂದರೆ ಹೀಗೇ" ಎಂದು ಪು.ಲ.ನಕ್ಕಂತಾಯ್ತು.ಹುಡುಗರು ಸರಿಯಲಿಲ್ಲ.ಮನೆಯೇ ಬಂತು.

ರಾತ್ರಿ ನಿದ್ರೆ ಬೇಗ ಬರಲಿಲ್ಲ. ಸಂಸಾರಕ್ಕೆ ಹಾಲು ಬೇಕು. ಆದರೆ ಹಾಲಿಗೂ ಸಂಸಾರಕ್ಕೂ ಯಾವ ಸಂಬಂಧ? ಹಳೆಯ ಕಾಲದ ಹೈನದ ಮನೆಯ ನೆನಪಾಯಿತು. ಫಳಫಳ ಬೆಳಗಿದ ಪಾತ್ರೆಯಲ್ಲಿಯ ಹಾಲನ್ನು ಮಂದ ಉರಿಯಲ್ಲಿ ಉಕ್ಕು ಬರುವಂತೆ, ಆದರೆ ಹೊರಚಲ್ಲದಂತೆ ಕಾಯಿಸಿ ದಪ್ಪ ಕೆನೆ ತೆಗೆದು ಮೊಸರು ಮಾಡಿ, ಮಜ್ಜಿಗೆ ಕಡೆದು, ಬೆಣ್ಣೆ ತೆಗೆದು ಕಾಯಿಸಿ ತುಪ್ಪ ಮಾಡಿದರೆ ಅಲ್ಲಿಗೆ ಹಾಲಿಗೆ ಮೋಕ್ಷ! ಹೆಂಗಸಿಗೆ ಹಾಲಿನದೆ ದಂದುಗ. ಸಾಲದ್ದಕ್ಕೆ, "ಮೊಸರು ಕಡೆಯೇ ಮಗಳೇ, ಬೆಣ್ಣೆ ತೆಗೆಯೆ..." ಎಂದು ಹಾಡುತ್ತ ಬರುವ ತತ್ವ ಪದದವರು... ಹಾಲು ಕೆಡಬಾರದು. ಅಪಶಕುನ. ಅಂಥದರಲ್ಲೂ ಮೈಮರೆವು ಘಟಿಸುತ್ತಿದ್ದವು. ಒಮ್ಮೆ ಎರಡು ಸಾರಿ ಹಾಲು ಕೆಡಿಸಿದವರನ್ನು ಕ್ಷಮಿಸಿ, ಸುಮ್ಮನೆ ಕಡಿಮೆ ರುಚಿ ಇರುವ ಮೊಸರು ಮಾಡಲು ಬಿಟ್ಟು ಹಿರಿಯರು ಸಂಸಾರ ಕಾಪಾಡಿಕೊಳ್ಳಲು ದಾರಿ ತೋರಿಸುತ್ತಿದ್ದರು. ಮತ್ತೆ ಮತ್ತೆ ಹಾಲು ಕೆಟ್ಟರೆ ಹಾಲಿನೊಂದಿಗೆ ಹೆಂಗಸೂ ಹೊರಕ್ಕೇ! ಕಾಲವೇ ಹಾಗೆ. ಹಾಲೆಂದರೇನು ಅದು ಕೇವಲ ಹಾಲೆ? ಕ್ಷೀರ! ಒಂದು ಹನಿ ಕೆಳಗೆ ಬಿದ್ದರೂ ಯಾರಾದರು ತುಳಿದಾರೆಂದು ಬೇಗ ಒರೆಸಬೇಕು. ಹಾಲನು ಮಾರಿ ಹರಿಯನು ಕೊಳ್ಳಬೇಕೆಂದರೆ ಈ ಶೀಲ ಬೇಕೇಬೇಕು!

ನಮ್ಮ ಪಕ್ಕದವ ಮಾರಾಟ ಪ್ರತಿನಿಧಿ. ವಾರಗಟ್ಟಲೆ ಹೊರಗೇ ಇರಬೇಕಾದ ಉದ್ಯೋಗ. ಹಾಲಿನ ಬಗೆಗೆ ಅವನ ಹೆಂಡತಿಗೆ ಅಲಕ್ಷ್ಯ, ಅಗೌರವದ ಭಾವ. ಮತ್ತೆ ಮತ್ತೆ ಹಾಲು ಕೆಡುವುದು. ಆದರೆ ಆಕೆ ಜಾಣೆ. ಒಡೆದ ಹಾಲಿನ ನೀರಿನ ಭಾಗ ತೆಗೆದು ಸಕ್ಕರೆ ಬೆರೆಸಿ ಆತನಿಗೆ ಬಾಸುಂದಿ ಎಂಬ ಹೊಸ ರುಚಿ ತೋರಿಸುತ್ತಿದ್ದಳು. ದಣಿದು ಬಂದ ಆತ ಅದನ್ನೇ ತಿಂದು ಮಲಗುತ್ತಿದ್ದ. ಅಂಥ ಸಂಭಾವಿತ ಕೂಡ ಒಮ್ಮೊಮ್ಮೆ " ಎಷ್ಟಂತ ಈ ಬಾಸುಂದಿ ತಿಂದು ಸಾಯುವುದು" ಎಂದು ಕೂಗು ಹಾಕುತ್ತಿದ್ದ. ದನ ಸಾಕಿದ ಮನೆಯ ಗಂಡಸರು ಎಲ್ಲಿದ್ದರೂ ರಾತ್ರಿಯ ಹೊತ್ತಿಗೆ ಮನೆಗೆ ಬರುತ್ತಿದ್ದರು. ಹಸು, ಎಮ್ಮೆ ಸಲುಹಿದರೇನೇ ಹೈನ, ಹಾಲು ಮತ್ತು ಅದರಂಥದೇ ಸಂಸಾರ.....

ಫ್ರಿಜ್ಜ್ ಬಂದಮೇಲೆ ಒಂದಿಷ್ಟು ಬದಲಾವಣೆಗಳಾಗಿವೆ. ಹಾಲು ಈಗ ಕ್ಷೀರವಾಗಿ ಉಳಿದಿಲ್ಲ. ಮೊದಲ ಮರ್ಯಾದೆಯದೂ ಅಲ್ಲ. ಪ್ಯಾಕೆಟ್ ಆಗಿಹೋಗಿದೆ. ಇಂದು ಹಾಲನ್ನು ಕಾಯಿಸಿ ಬಾಳಿಸಿಕೊಳ್ಳುವ ಪದ್ಧತಿ ಇಲ್ಲ. ಫ್ರಿಜ್ಜ್ ನಲ್ಲಿಡುವುದು. ರುಚಿಗೆ ಎರಡನೆ ಆದ್ಯತೆ. ಕೆಟ್ಟರೆ ಎಸೆದು ಮತ್ತೊಂದು ಪ್ಯಾಕೆಟ್ ತರಲೂ ತಯಾರು. ಹೊರಗೇ ಚಹ ಕುಡಿಯುವುದು. ಫ್ರಿಜ್ಜ್ ಇದ್ದೂ ಹಾಲು ಕೆಡಿಸುವುದಕ್ಕೆ ಹಳೆಯ ಮಂದಿ ವಿಷಾದಪಡುತ್ತಾರೆ.... ಹೀಗೇ... ಹಾಲು...ಮೊಸರು... ನಿದ್ರೆ, ಎಚ್ಚರ.....

ಅಷ್ಟಾಗಿಯೂ ಮರುದಿನದ ಬೆಳಗು ಶುಭ್ರವಾಗಿತ್ತು. ಪು.ಲ.ದೇಶಪಾಂಡೆಯವರು ಕನಸಲ್ಲಿ ಬಂದು ಇಬ್ಬರಿಗೂ ಏನೂ ಹೇಳಿರಲಿಲ್ಲವಾದರೂ ಹೆಂಡತಿ ಹಿಂದಿನ ರಾತ್ರಿ ತಾನು ಮೊಸರು ಬಡಿಸೇ ಇಲ್ಲ ಎಂಬಂತಿದ್ದಳು ಮತ್ತು ನಾನು ಕಲ್ಲು ಬಂದೇ ಇಲ್ಲ ಎಂಬಂತಿದ್ದೆ. "ಸಂಜೆ ಬೇಗ ಬನ್ನಿ. ಅಯ್ಯನವರ ಮನೆಯಲ್ಲಿ ಸಖಿಗೀತ ಕಾರ್ಯಕ್ರಮವಿದೆ" ಎಂದು ನಕ್ಕಳು. ಆದರೆ ಈ ನಗುವಿಗೆ ಆಯಸ್ಸು ಕಡಿಮೆ ಇತ್ತು. ನನ್ನ ಸಹೋದ್ಯೋಗಿ ರೀಟಾಳ ಫೋನ್ ಬಂತು. ಆಕೆಯ ಕಾರಿಗೆ ಅನಾರೋಗ್ಯ. ನನ್ನದರಲ್ಲೇ ಬರುವವಳು. ನನ್ನ ಕಾರಿನ ಸಂಕಷ್ಟ ಕಾಲದಲ್ಲಿ ಆಕೆಯ ಕಾರಿನಲ್ಲಿ ನಾನೂ ಬರುವ ರಿವಾಜಿತ್ತು. ಏನು ಮಾಡುವುದು? ಹೆಂಡತಿ ನಗು ವಾಪಸ್ ಪಡೆದಳು. ನನ್ನ ನಿನ್ನಿನ ಕಲ್ಲು ಮತ್ತೆ 'ಠಣ್' ಎಂದಿತು.

ದಾರಿಯಲ್ಲಿ ರೀಟಾ ಬಂದು ಕುಳಿತಳು. ಆಕೆ ಸಿಂಗಲ್ ಪ್ಯಾರೆಂಟ್. ತನ್ನ ಮಗುವಿಗೆ ಒಂಟಿ ಪಾಲಕಿ. "ಮಗುವಿನ ತಂದೆ ಯಾರೆಂದು ಮಗುವಿಗೆ ತಿಳಿದರೆ ಸಾಕು" ಎಂಬ ವಾಕ್ಯವನ್ನು ತನ್ನ ಫೇಸ್ ಬುಕ್ ಪ್ರೊಫೈಲ್ ನಲ್ಲಿ ಬರೆದುಕೊಂಡಿದ್ದಾಳೆ.ನಾನು ಮಳೆ, ಬೆಳೆ ಮಾತಾಡಿ ಮೊಸರಿನ ಮೂಲವಾದ ಹಾಲಿನ ಸುದ್ದಿ ತೆಗೆದಂತೆ ಮಾಡಿ " ನೀವು ಯಾವ ಹಾಲು ಕೊಳ್ಳುತ್ತೀರಿ" ಎಂಬ ಅಸಂಬದ್ಧ ಪ್ರಶ್ನೆ ಕೇಳಿದೆ. ಅವಳ ಹಾಲಿನಂಥ ಸಂಸಾರದ ಕತೆಯೂ ನನ್ನೊಳಗೆ ಕೆಲಸ ಮಾಡುತ್ತಿತ್ತೊ ಏನೊ! ಆಕೆ "ನಾನು ಹಾಲು ಬಳಸುವುದಿಲ್ಲ. ಅದು ಬಿಳಿ ವಿಷಗಳಲ್ಲೊಂದು. ಅಲ್ಲವೇ?" ಎಂದು ಕೇಳಿದಳು. "ಹಾಲು ತರುವುದು, ಮೊಸರು ಮಾಡುವುದು ಇದಾವುದೂ ಇಲ್ಲ. ಅದರ ಸಂಪರ್ಕ, ಗೊಡವೆ, ಜವಾಬ್ದಾರಿಗಳಿಲ್ಲದೆ ನಾನು ನಿರಂಬಳವಾಗಿದ್ದೇನೆ" ಎನ್ನುತ್ತ ಎರಡೂ ಕೈ ಎತ್ತಿ ಭಾರವಿಲ್ಲದ ಬದುಕನ್ನು ಅಭಿನಯಿಸಿ ತೋರಿಸಿದಳು.ಅವಳ ಹಾಲಿಲ್ಲದ ಹಾದಿ ಅರೆಕಾಲ ಅಸೂಯೆ ಹುಟ್ಟಿಸಿತು. ಹಾಲೇ ಇರದಾಗ ಮೊಸರಿನ ಅಸ್ತಿತ್ವವೆಲ್ಲಿಯದು? ಅದರಲ್ಲಿ ಶಿಲೆಯ ಉದ್ಭವವಾದರೂ ಹೇಗಾದೀತು? 'ಠಣ್' ಎಂಬ ಬೇಡವಾದ ಸದ್ದಾದರೂ ಎಲ್ಲಿಂದ ಬರಬೇಕು? ಆದರೆ ರೀಟಾ ಎಂಬ ಹೆಣ್ಣುಮಗಳ ಈ ಗಂಡು ಆಲೋಚನೆ ನನ್ನನ್ನು ಬಹುದೂರ ಒಯ್ಯಲಿಲ್ಲ. ಪಂಜೆಯವರ ಕಾಲಿಲ್ಲದೆ ನಡೆಯುವ ಕುದುರೆಯಂತೆ ಇದು ಹಾಲಿಲ್ಲದೆಯೆ ನಡೆಯುವ ಸಂಸಾರ. ಆದರೆ ಹಾಲೆಂಡು ಹಿಡಿದು ಇಡೀ ಜಗತ್ತು ಇಂದು ಹೈನುಗಾರಿಕೆಯನ್ನು ದಾಂಪತ್ಯದಂತೆ ಸಲಹುತ್ತಿರುವಾಗ ರೀಟಾಳ ಸಂತತಿ ಸಾಸಿರವಾಗಿ ಹಾಲು ವರ್ಜಿಸುತ್ತ ಹೋದರೆ ಈ ಉದ್ದಿಮೆಯ ಗತಿಯಾದರು ಏನು? ಇವಳಿಗೂ ಒಬ್ಬ ಗಂಡನಂಥವ ಸಿಗಲಿ, ಇವಳ ಸಂಸಾರವೂ ಹಾಲು ಬಳಸುವಂತಾಗಲಿ ಎಂದು ಮನದಲ್ಲೆ ಹಾರಯಿಸಿದೆ. ವಿದಾಯದ ಕಾಲ ಬಂದಾಗ ಹಾಲು ತೊರೆದ ಈ ವಿಚಿತ್ರ ಸಂನ್ಯಾಸಿನಿಗೆ "ಹಾಗಾದರೆ ನಿಮ್ಮಲ್ಲಿ ಬಂದಾಗ ನಮಗೆ ಕಪ್ಪು ಚಹವೇ ಗತಿ" ಎಂದು ನಕಲಿ ಮಾಡಿದೆ. ಆಕೆ "ಹಾಗೇನಿಲ್ಲ, ವೈಟ್‌ನರ್ ಇರುತ್ತದಲ್ಲ. ಹಾಲಿಲ್ಲದಿದ್ದರೂ ಬದಲಿ ವ್ಯವಸ್ಥೆ ಬೇಕೇಬೇಕು" ಎಂದು ಸಮಜಾಯಿಷಿ ನೀಡಿದಳು. ಜನರಿಗೆ ಸಹಜ ವ್ಯವಸ್ಥೆಗಿಂತ ಬದಲಿ ವ್ಯವಸ್ಥೆಯೇ ಹೆಚ್ಚು ಅನುಕೂಲಕರವಾಗಿ ಕಂಡಂತಿದೆ ಎಂದುಕೊಂಡೆ.

ಕಚೇರಿಯಲ್ಲಿ ಇನ್ನೊಂದು ಗಟ್ಟಿ ಮಹಿಳಾ ಧ್ವನಿಯ ಅಭಿಪ್ರಾಯ ಪಡೆಯುವದಿತ್ತು. ಆಕೆ ಕುಸುಮಾ ಹೆಸರಿನವಳಾದರೂ ಮಾತಿನಲ್ಲಿ ವಜ್ರಾದಪಿ. ಸಂಸಾರ ಸಾಗರದ ಪರಿಣತ ಈಜುಗಾರ್ತಿ. ಹೀಗಾಗಿ ಇಲ್ಲಿ ಪೀಠಿಕೆ ಬಿಟ್ಟು ನೇರವಾಗಿ ಕೇಳಿದೆ. "ನಿಮ್ಮ ಯಜಮಾನರಿಗೂ ಮೊಸರಿನಲ್ಲಿ ಕಲ್ಲು ಬರುವುದಿದೆಯೇ?" ಆಕೆ "ಗಂಡಸಾಗಿ ಅದು ಅವರ ಹಕ್ಕು" ಎಂದು ಹಾಸ್ಯ ಮಾಡಿದಂತೆ ಮಾಡಿ "ಬರಿ ಕಲ್ಲು ಮಾತ್ರವಲ್ಲ, ಗಾಜು, ಕಬ್ಬಿಣ, ಪ್ಲಾಸ್ಟಿಕ್ ಕೂಡ ಬರುತ್ತಿರುತ್ತವೆ" ಎಂದು ಜೋರಾಗಿ ನಕ್ಕು"ಅದು ಅವರ ನಿಜ" ಎಂದು ಇನ್ನೂ ಜೋರಾಗಿ ನಕ್ಕಳು. ನನಗೆ ಹಾದಿ ಬಂದಾದಂತೆ ಕಂಡಿತು. ಆದರೆ ಆಕೆಯೇ ತೆರೆದಳು. "ನಾನು ಮೊಸರು ಮಾಡುವೆ. ಅದರಲ್ಲಿ ಅವರಿಗೆ ಏನೇನೋ ಬರುತ್ತವೆ. ಅವರು ಹಣ್ಣು, ತರಕಾರಿ ತರುವರು. ಅದರಲ್ಲಿ ಕ್ರಿಮಿನಾಶಕದ ವಾಸನೆ ಹಾಗೂ ಹುಳುಗಳು ಸಿಗುವವು" ಎಂದು ಒಗಟಿನಂತೆ ಹೇಳಿದಳು. "ಕ್ರಿಮಿನಾಶಕ ಇರುವಲ್ಲಿ ಹುಳುಗಳು ಇರಬಾರದಲ್ಲ" ಎಂದು ನಾನು ತರ್ಕ ಹೂಡಿದೆ. "ಅದೇನೊ ತಿಳಿಯದು. ಅದು ನನ್ನ ಸ್ವಂತದ ನಿಜ" ಎಂದು ಕಣ್ಣು ಮಿಟುಕಿಸಿದಳು. ಈಕೆ ಕೊಡ್ಡಿಗೊಂದು ಕುಂಟಿ ಅನ್ನುವುದು ತಿಳಿಯಿತು. ಇದು ಅವಳ ಸಂಸಾರ ನಿಯಂತ್ರಣ ಮಾರ್ಗ ಎಂಬುದೂ ಅರ್ಥವಾಯಿತು. ಆಕೆಯೇ ಮಾತಾಡಿದಳು "ಸರ್, ನೀವು ಕೇಳುತ್ತಿರುವ ಹಿನ್ನೆಲೆ ಕುರಿತಂತೆ ನನಗೆ ಒಂದು ಅಂದಾಜಿದೆ. ನಾವು ಒಂದು ಒಪ್ಪಂದಕ್ಕೆ ಬಂದಿದ್ದೇವೆ. ಮೊಸರಿನ ಕಲ್ಲು ಹಾಗೂ ಪಲ್ಯದ ಹುಳುಗಳನ್ನು ಹಾಗೇ ಹೋಗಲು ಬಿಟ್ಟು ಬಿಡುವುದು. ಅನುಭವಿಸಿದರೂ ಆಡುವಂತಿಲ್ಲವೆಂಬುದು ಒಪ್ಪಂದದ ಮಹತ್ವದ ಕಲಮು. ಸಮಸ್ಯೆಗಳು ತಂತಾನೆ ಪರಿಹಾರ ಕಂಡುಕೊಳ್ಳುವವರೆಗು ಅವುಗಳನ್ನು ಫ್ರೀಜರ್‌ನಲ್ಲಿಡುವುದು. ಪರಸ್ಪರರ ಹುಟ್ಟು ಹಬ್ಬ, ಮದುವೆ ವಾರ್ಷಿಕೋತ್ಸವಗಳನ್ನು ಭರ್ಜರಿಯಾಗಿ ಆಚರಿಸಿಕೊಳ್ಳುವುದು. ಈಗ ನೋಡಿ, ಇವರ ಹುಟ್ಟು ಹಬ್ಬ ಇಂದು. ಹೊಟೇಲ್‌ನಲ್ಲಿ ಟೇಬಲ್ ಬುಕ್ ಆಗಿದೆ. ನಾನೀಗ ಬೇಗ ಹೋಗಬೇಕು...." ಎಂದು ಹೇಳಿ "ನಾವು ಕಂಡುಕೊಂಡ ಪರಿಹಾರ ನಿಮಗೂ ಲಾಗೂ ಆಗುವುದೇ ನೋಡಿ" ಎಂದವಳೇ ಹೆಗಲಿಗೆ ಬ್ಯಾಗ್ ಏರಿಸಿದಳು. ಇವಳ ಬಾಳ ಬೆಳಕಲ್ಲಿ ನನಗೂ ದಾರಿ ಕಾಣಬಹುದೇ ಎಂದು ಯೋಚಿಸತೊಡಗಿದೆ. ಎಷ್ಟು ಜನರೊ ಅಷ್ಟು ದಾರಿ ಎಂದು ಯಾರೊ ಹೇಳಿದ್ದು ನೆನಪಾಯಿತು. ಸಮ್ಮಿಶ್ರ ಸರಕಾರಗಳ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಎಂಬ ಫಾರ್ಮುಲಾಗಳಿಗೆ ಕುಸುಮಾನೆ ಮಾದರಿ ಎಂದುಕೊಂಡೆ.

ಅಯ್ಯನವರ ಮದುವೆಯ ವಾರ್ಷಿಕೋತ್ಸವದ ನೆನಪಾಯಿತು. ಅದರ ಹೆಸರೇ ಸಖಿಗೀತ. ಸುಂದರ ಹೆಸರು. ಅವಸರದಲ್ಲೇ ಮನೆಗೆ ಬಂದೆ. ಹೆಂಡತಿ ಸಾಕಷ್ಟು ಸಮಯ ತೆಗೆದುಕೊಂಡು ಸಿಂಗರಿಸಿಕೊಂಡಿದ್ದಳು. ನಾನೂ ಭಲೇ ಜೋಡಿ ಎನ್ನುವಂತೆ ತಯಾರಾದೆ. ಸ್ವಾಗತ, ಪುಟ್ಟ ಉಪಹಾರ, ಚಹ. ಮುಗಿದವು. ಶಾಸ್ತ್ರಿಯವರಿಂದ ಬೇಂದ್ರೆಯವರ ಸಖಿಗೀತದ ಸುಶ್ರಾವ್ಯ ಹಾಡುವಿಕೆ.

"ಸಖಿ ನಮ್ಮ ಸಖ್ಯದ ಆಖ್ಯಾನ ಕಟು ಮಧುರ ವ್ಯಾಖ್ಯಾನದೊಡಗೂಡಿ

ವಿವರಿಸಲೆ" ..ದಿಂದ ಆರಂಭಗೊಂಡು ನನಗು, ನಿನಗು ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೆ.." ಎಂದು ಮುಗಿಯುವಾಗ ರಾತ್ರಿ ಹತ್ತು ಗಂಟೆ. ಊಟ,ಉಡುಗೊರೆ, ಹೆಂಗಸರ ಮುಸಿ ಮುಸಿ ನಗು ನಡೆದೇ ಇದ್ದವು. ಅದಕ್ಕೆ ಕಾರಣವೆಂದರೆ ಅಯ್ಯನವರ ಅನಧಿಕೃತ ಪತ್ನಿಯೂ ಸಭೆಗೆ ಬಂದು ಘನಗಾಂಭೀರ್ಯದಲ್ಲಿ ವಿರಾಜಮಾನರಾಗಿದ್ದರು. ಧರ್ಮಪತ್ನಿಯೇ ಖುದ್ದಾಗಿ ಅವರಿಗೆ ಫಲ ತಾಂಬೂಲ ಸೀರೆಗಳನ್ನಿತ್ತು ಸತ್ಕರಿಸಿದರು. ಪತ್ನಿ, ಸಖಿ ಹಾಗೂ ಸಖಿಗೀತಗಳನ್ನು ಯಶಸ್ವಿಯಾಗಿ ನಿಭಾಯಿಸುವ ಅಯ್ಯನವರಿಗೆ ಅಭಿನಂದಿಸಿ ಮನೆಗೆ ಬಂದೆವು. ಅಯ್ಯನವರಿಗಿಂತ ನಾನು ಮೇಲಲ್ಲವೇ ಎಂದು ಕೇಳಬೇಕೆನ್ನಿಸಿದರೂ ಯಾಕೋ ಕೇಳಲಿಲ್ಲ.

ಸಖಿಗೀತ ಮನಸ್ಸನ್ನು ಮೃದುಗೊಳಿಸಿತ್ತು. ಅದೇ ಮನಸ್ಥಿತಿಯಲ್ಲಿ ನಾಳೆಯಿಂದ ನಾನೇ ಮೊಸರು ಮಾಡಲಾ ಎಂದು ಹೆಂಡತಿಯನ್ನು ಕೇಳಿದೆ. ಒಂದು ತಮಾಷೆಯಂತೆ ನೋಡಿದಳು. ಒಪ್ಪಿಗೆ ಅಂದುಕೊಂಡೆ. ಮರುದಿನ ಬೆಳಿಗ್ಗೆ ಹಾಲಿಗೆ ಹೆಪ್ಪು ಹಾಕಿ ಕಚೇರಿಗೆ ಹೋದೆ. ಸಂಜೆ ಬಂದವನೇ ಅದರತ್ತ ಓಡಿದೆ. ಹಾಲು ಇದ್ದ ಹಾಗೇ ಇತ್ತು. ಕಹಿ ರುಚಿಯೊಂದೇ ಬದಲಾವಣೆ. ರಾತ್ರಿ ಮತ್ತೆ ಮರಳಿ ಯತ್ನವ ಮಾಡಿದೆ. ಬೆಳಿಗ್ಗೆ ನೋಡುದರೆ ಒಂದು ಕಡೆ ನೀರು, ಉಳಿದ ಕಡೆ ಒಡಕೊಡಕು. ಸ್ವಲ್ಪ ವಾಸನೆ. ಹಿಂದೆಗೆಯಲೇ ಬಾರದೆಂದು ಮನದಲ್ಲಿ ಕುಲದೈವವನ್ನು ಸ್ಮರಿಸಿ ಹೆಪ್ಪು ಹಾಕಿ ಹೋದೆ. ಸಂಜೆ ಬಂದು ಎದೆಬಡಿತ ಕೇಳುತ್ತ ಮುಚ್ಚಳ ಸರಿಸಿದೆ. ಚಂದ ಕಂಡಿತು! ಒಂದು ಚಮ್ಮಚ ಅದರಲ್ಲದ್ದಿ ಎತ್ತಲು ನೋಡಿದೆ. ಅದು ಎತ್ತಿದಷ್ಟೂ ಉದ್ದವಾಗುತ್ತ, ಅಖಂಡತ್ವ ಸಾಧಿಸಿ ಹಾಗೇ ಬರತೊಡಗಿತು. ಚೂಯಿಂಗ್ ಗಮ್‌ನಷ್ಟು ಜಿಗುಟು! ಹೆಂಡತಿ ನೋಡಿ ನಡೆಯಲಿ, ನಡೆಯಲಿ ಎಂಬ ಭಾವ ಪ್ರಕಟಿಸಿ ಮಾತಾಡದೆ ಹೋದಳು.

ಅಮ್ಮನ ನೆನಪಾಯಿತು. ಯಾರು ಕೈ ಬಿಟ್ಟರೂ ಈಕೆ ಕೈ ಬಿಡದಾಕೆ ಎಂಬ ದೃಢ ನಂಬಿಕೆಯೊಂದಿಗೆ ಮೊಬೈಲ್ ತೆಗೆದುಕೊಂಡು ತೆರೆಸ್ಸಿಗೆ ಏರಿದೆ. ಆಕಡೆಯಿಂದ 'ಮಗು' ಅನ್ನುವ ಪದ ಬಂದೊಡನೆ ಎಲ್ಲ ಕಷ್ಟಗಳೂ ಕಳೆದವು ಅನ್ನಿಸಿತು. ಅಮ್ಮ ಮೊಸರು ಮಾಡುವುದನ್ನು ಚಂದವಾಗಿ ಹೇಳಿಕೊಟ್ಟಳು. "ಹಾಲು ಚನ್ನಾಗಿ ಕಾಯಬೇಕು. ಉಕ್ಕು ಬರಬೇಕು. ಚಲ್ಲಬಾರದು. ಚಲ್ಲಿದರೆ ಅದರ ರುಚಿಯೇ ಹೋಯ್ತು. ಮನೆಯ ತಾಪಮಾನ ಹೆಚ್ಚಿದ್ದರೆ ಸ್ವಲ್ಪ ತಣಿಸಿ, ಕಡಿಮೆ ಬಿಸಿಹಾಲಿಗೆ ಹೆಪ್ಪು ಹಾಕಬೇಕು. ತಾಪಮಾನ ಕಡಿಮೆ ಇದ್ದಾಗ ಹಾಲು ಕೊಂಚ ಬಿಸಿ ಇರುವಾಗಲೇ ಹೆಪ್ಪು ಹಾಕಬೇಕು. ಹೆಪ್ಪಿನ ಬೀಜದ ಗುಣಮಟ್ಟ ಚನ್ನಾಗಿರಬೇಕು. ಮೊಸರು ಮಾಡಲಿಟ್ಟ ಹಾಲಿಗೆ ನಾಲ್ಕು ಗಂಟೆಯ ಕಾಲ ತೊಂದರೆ ಕೊಡಬಾರದು. ಈ ಎಲ್ಲ ಕ್ರಿಯೆಗೂ ದೃಷ್ಟಿಯಾಗದಂತೆ ನೋಡಿಕೊಳ್ಳಬೇಕು....ಮೊಸರು ಗಟ್ಟಿಯಾದಷ್ಟೂ ಸಂಸಾರ ಗಟ್ಟಿ...."

ಆತ್ಮವಿಶ್ವಾಸದೊಂದಿಗೆ ಹೆಪ್ಪು ಹಾಕಿದೆ. ಸಂಜೆ ಸೊಗಸಾದ ಮೊಸರು ಸಿದ್ಧವಾಗಿತ್ತು. ಬೆಣ್ಣೆಯಂತೆ ಕಾಣುತ್ತಿತ್ತು. ಗಟ್ಟಿ ಮೊಸರಿನ ಬಟ್ಟಲನ್ನು ಹೆಂಡತಿಯ ಮುಂದೆ ನಾನೇ ತಂದಿಟ್ಟೆ. ಸಾರ್ಥಕ ಭಾವದಲ್ಲಿ ಒಂದು ತುಂಡು ರೊಟ್ಟಿಯನ್ನು ಮೊಸರಲ್ಲದ್ದಿ ಬಾಯಿಗೆ ಹಾಕಿದೆ. ಮೊಸರು ಬಹಳ ರುಚಿಯಾಗಿತ್ತು. ಆದರೆ ಅಷ್ಟರಲ್ಲಿ ಹೆಂಡತಿಯ ತಟ್ಟೆಯಲ್ಲಿ 'ಠಣ್' ಎಂಬ ಶಬ್ದವಾಯ್ತು. ಹೆಬ್ಬೆರಳು, ತೋರುಬೆರಳುಗಳ ನಡುವೆ ಕಲ್ಲು ಹಿಡಿದ ಹೆಂಡತಿ ಮತ್ತೊಮ್ಮೆ ತಟ್ಟೆಗೆ 'ಠಣ್' ಎನ್ನಿಸುವ ತಯಾರಿಯಲ್ಲಿದ್ದಂತೆ ಅನ್ನಿಸತೊಡಗಿತು......!



(ನಮ್ಮ ನಡುವಿನ ಬಹು ಅಪರೂಪದ ಮೆಲುದನಿಯ ಹಾಸ್ಯಲೇಪಿತ ಲಲಿತ ಪ್ರಬಂಧಕಾರಾಗಿರುವ ವಿಜಯೇಂದ್ರ ಪಾಟೀಲರು ಮೂಲತಃ ಗೋಕಾಕ ಬಳಿಯ ಬೆಟಗೇರಿಯವರಾಗಿದ್ದು ಯೂನಿಯನ್ ಬ್ಯಾಂಕ್‌ನ ಶಾಖಾ ವ್ಯವಸ್ಥಾಪಕರಾಗಿ ನಿವೃತ್ತಿಯಾಗಿ ಈಗ ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ)

ಕನ್ನಡ ಚಿತ್ರರಂಗದ ಇಂದಿನ ಸಂದಿಗ್ಧಗಳು

–ಹೊನ್ನಾಳಿ ಚಂದ್ರಶೇಖರ್

ಇರಾನಿನ ಮಜೀದ್ ಮಜೀದಿ, ಕೋರಿಯಾದ ಕಿಮ್ ಕಿ ಡುಕ್ ಮುಂತಾದ ಪ್ರತಿಭಾನ್ವಿತರು ಒಂದೆರಡು ಕೋಟಿ ರೂಪಾಯಿಗಳ ಮೌಲ್ಯದ ವೆಚ್ಚದಲ್ಲಿ ಸಿನಿಮಾ ನಿರ್ಮಿಸಿ ಇಡೀ ವಿಶ್ವದ ಗಮನ ಸೆಳೆಯುತ್ತಾರೆ. ಆದರೆ ಕನ್ನಡದಲ್ಲಿ ಮಾತ್ರ ನಮ್ಮದು ಸಣ್ಣ ಮಾರುಕಟ್ಟೆಯಾದ್ದರಿಂದ ಪ್ರಯೋಗಾತ್ಮಕ ಸಿನಿಮಾ ಮಾಡಲು ಆಗುವುದಿಲ್ಲ, ಇರುವ ಅವಕಾಶದಲ್ಲೇ ಏನಾದರೂ ಮಾಡಬೇಕಷ್ಟೇ ಎಂದು ನಿರ್ಮಾಪಕರು ಹಲುಬುತ್ತಾರೆ. ಇದರ ನಡುವೆಯೇ ಹಲವು ಪ್ರಯೋಗಗಳಿಗೆ ತಮ್ಮನ್ನು ಒಡ್ಡಿಕೊಂಡಿರುವ ಹಿಂದಿ, ತಮಿಳು, ತೆಲಗು ಭಾಷೆಯ ಸಿನಿಮಾಗಳು ಕನ್ನಡ ಸಿನಿಮಾಕ್ಕಿಂತ ಐದಾರು ಪಟ್ಟು ಹೆಚ್ಚು ಲಾಭ ಗಳಿಸಿ ಎಲ್ಲರ ಗಮನ ಸೆಳೆಯುತ್ತಿವೆ.

ಈ ವೈರುಧ್ಯವೇ ಕನ್ನಡ ಸಿನಿಮಾ ಎತ್ತ ಸಾಗುತ್ತಿದೆ ಎಂಬುದಕ್ಕೆ ಕೈಗನ್ನಡಿ. ಇಂದು ಪೂರ್ಣ ನಿರ್ಮಾಪಕರ ಕೈಗೊಂಬೆಯಾಗಿರುವ ಕನ್ನಡ ಸಿನಿಮಾರಂಗ ಸ್ಥೂಲ ಮನೋರಂಜನೆ ಮತ್ತು ಆರ್ಥಿಕ ಲಾಭವನ್ನೇ ಮುಖ್ಯ ಗುರಿಯಾಗಿ ಹೊಂದಿರುವಂತಿದೆ. ಪ್ರಯೋಗಶೀಲತೆ ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ಪ್ರದರ್ಶಿಸುತ್ತಲೇ ಇದನ್ನು ಸಾಧಿಸಬಹುದು ಎಂಬುದನ್ನು ಯೋಚಿಸುವುದಕ್ಕೂ ಅದಕ್ಕೆ ಪುರಸೊತ್ತಿಲ್ಲದಂತಾಗಿದೆ.

ಈ ಸಂದರ್ಭದಲ್ಲಿ ಇದೇ ನೆಲದಲ್ಲಿ ಬೇರೆ ಭಾಷೆಯ ಸಿನಿಮಾಗಳಿಗೆ ಸಾಧ್ಯವಾಗುವ ಮಾರುಕಟ್ಟೆ ಕನ್ನಡ ಸಿನಿಮಾಕ್ಕೆ ಏಕೆ ಸಾಧ್ಯವಾಗುತ್ತಿಲ್ಲ ಎಂಬ ಪ್ರಶ್ನೆಗಿಂತ ಬೇರೆ ಭಾಷೆಯ ಸಿನಿಮಾದಲ್ಲಿ ಇರುವುದು ಕನ್ನಡ ಸಿನಿಮಾದಲ್ಲಿ ಏಕಿಲ್ಲ ಎಂಬ ಪ್ರಶ್ನೆಯೇ ಅತ್ಯಂತ ಸೂಕ್ತ ಎನಿಸುತ್ತದೆ. ಆರಂಭದಿಂದಲೂ ಬಹುತೇಕವಾಗಿ ಭ್ರಮಾಲೋಕದಲ್ಲೇ ಮುಳುಗಿರುವ ಕನ್ನಡ ಚಲನಚಿತ್ರರಂಗ ಅದರಿಂದ ಹೊರಬರುವ ಲಕ್ಷಣವಂತೂ ಸದ್ಯಕ್ಕೆ ಕಾಣುತ್ತಿಲ್ಲ.

ಅಪ್ಪಟ ಸೃಜನಶೀಲ ಪ್ರಯತ್ನಗಳು ನಡದೇ ಇಲ್ಲ ಎನ್ನುವಂತಿಲ್ಲ. ಎಲ್ಲೋ ಅಲ್ಲೊಂದು, ಇಲ್ಲೊಂದು–ಎಪ್ಪತ್ತರ ದಶಕದಲ್ಲಾದಂತೆ ಒಮ್ಮೊಮ್ಮೆ ಸಾಲು ಸಾಲಾಗಿ–ಸಣ್ಣ ಮಿಂಚು ಹೊಳೆಯುತ್ತವೆ. ಆದರೆ ಅದು ಉಜ್ವಲವಾಗುವುದಕ್ಕೆ ಮುಂಚೆಯೇ ನಂದಿಸುವ ಕೈಗಳು ಮೇಲೆದ್ದು ಅವನ್ನು ಹತ್ತಿಕ್ಕುತ್ತವೆ. ಅಲ್ಲಿಗೆ ಮುಗಿಯಿತು.

ಒಂದೆಡೆ ನಾವು ಜನರಿಗೆ ಬೇಕಾಗಿದ್ದನ್ನೇ ಕೊಡುತ್ತಿದ್ದೇವೆ, ಅವರ ನಾಡಿ ಮಿಡಿತ ಗೊತ್ತಿದೆ ಎಂದು ಸದಾ ಸುರುಳಿ ಸುತ್ತುವವರು, ಮತ್ತೊಂದೆಡೆ ಕನ್ನಡ ನಾಡಿನ ಜನತೆ ಸಿನಿಮಾ ನೋಡದಿದ್ದರೂ ಪರವಾಗಿಲ್ಲ, ಪ್ರಪಂಚದ ಹತ್ತು ಮಂದಿ ಜ್ಯೂರಿಗಳು ನೋಡಿದರೆ ಸಾಕು ಎನ್ನುವ ಪ್ರಶಸ್ತಿಶೂರರ ನಡುವೆ ಇಡೀ ಚಿತ್ರರಂಗ ನಲುಗುತ್ತಿದೆ. ಜನಪ್ರಿಯ ಸಿನಿಮಾ ಎಂದರೆ ವೇಗ, ಪ್ರಯೋಗಶೀಲ ಅಥವಾ ಕಲಾತ್ಮಕ ಸಿನಿಮಾ ಎಂದರೆ ನಿಧಾನ ಎಂಬ ಜಾಯಮಾನದಿಂದ ಹೊರಬರುವ ಪ್ರಯತ್ನಗಳೇ ನಡೆಯುತ್ತಿಲ್ಲ. ಹಾಗೆ ಹೊರಬಂದು 'ಬ್ರಿಡ್ಜ್' ಸಿನಿಮಾ ಮಾಡುವವರು ಒಂದೆರಡು ಸಿನಿಮಾಕ್ಕೇ ಹೊರಹೋಗುವಂತೆ ಮಾಡುವ ಸಕಲ ಕಲಾವಲ್ಲಭರು ಗಾಂಧಿ ನಗರದಲ್ಲಿದ್ದಾರೆ.

ಸಿನಿಮಾ ಒಂದು ಉದ್ಯಮ ಎಂದು ಆರಂಭದಲ್ಲಿಯೇ ಗುರುತಿಸಲ್ಪಟ್ಟಿತು. ಅಂದಿನಿಂದ ಇವತ್ತಿನ ವರೆಗೂ ಸಿನಿಮಾ ಜಗತ್ತನ್ನು ಆಳುತ್ತಿರುವುದು ನಿರ್ಮಾಪಕರೇ. ಎಲ್ಲೋ ಕೆಲವೊಮ್ಮೆ ಸೂಪರ್ ಸ್ಟಾರ್‌ಗಳು ಮತ್ತು ಬೆರಳೆಣಿಕೆಯ ನಿರ್ದೇಶಕರುಗಳು ಒಂದಿಷ್ಟು ಕಾಲ ತನ್ನ ಮೂಗಿನ ನೇರಕ್ಕೆ ಚಿತ್ರರಂಗವನ್ನು ನಡೆಸಿರಬಹುದು. ಅದೇನೂ ಹೆಚ್ಚಲ್ಲ. ಆದರೆ ನಿರ್ಮಾಪಕರೇ ಅಂತಿಮ ದೊಣ್ಣೆನಾಯಕರು.

ಹಿಂದಿನ ನಿರ್ಮಾಪಕರಿಗೂ, ಇಂದಿನ ನಿರ್ಮಾಪಕರಿಗೂ ಬಹಳಾ ವ್ಯತ್ಯಾಸವಿದೆ. ಈಗ್ಗೆ ಐದಾರು ದಶಕಗಳ ಹಿಂದೆ ಸಿನಿಮಾ ಎಂದರೆ ಸಾಮಾಜಿಕ ಜವಾಬ್ದಾರಿ ಎಂದು ನಿರ್ಮಾಪಕರು ತಿಳಿದಿದ್ದರು. ಯಾವುದೇ ಸಿನಿಮಾ ಮಾಡಿದರೂ ಅದರಲ್ಲೊಂದು ಸಂದೇಶ ಇರಬೇಕೆಂದು ಬಯಸುತ್ತಿದ್ದರು. ಜನಪ್ರಿಯ ಸಿನಿಮಾಗಳಿಗೂ, ಕಲಾತ್ಮಕ ಸಿನಿಮಾಗಳಿಗೂ ಹೆಚ್ಚು ವ್ಯತ್ಯಾಸವೇನೂ ಇರಲಿಲ್ಲ. ಪ್ರೇಕ್ಷಕರು ಏನನ್ನು ಬಯಸುತ್ತಾರೆ ಎನ್ನುವುದಕ್ಕಿಂತ ಪ್ರೇಕ್ಷಕರಿಗೆ ಏನನ್ನು ಕೊಟ್ಟರೆ ಸೂಕ್ತ ಎಂದು ಚಿಂತಿಸುತ್ತಿದ್ದರು. ಆದರೆ ಇಂದು ನಿರ್ಮಾಪಕರು ತಮ್ಮ ಎಲ್ಲಾ ಕೃತ್ಯಗಳಿಗೂ ಪ್ರೇಕ್ಷಕರನ್ನೇ ಗುರಿ ಮಾಡುತ್ತಿದ್ದಾರೆ. ಅವರಿಗೆ ಬೇಕಾಗಿದ್ದುದನ್ನು ಕೊಡುವುದು ನಮ್ಮ ಗುರಿ ಎನ್ನುತ್ತಿದ್ದಾರೆ. ಅದನ್ನೇ ಕೊಡುತ್ತಿದ್ದೇವೆ ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ ಅವರ ಸಿನಿಮಾಗಳು ಮಾತ್ರ ತೋಪಾಗುತ್ತಿವೆ.



'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರದ ಒಂದು ಚಿತ್ರಿಕೆ

ಆದರೂ ಮತ್ತೊಂದು ಅಂತದ್ದೇ ಸಿನಿಮಾ ಮಾಡುತ್ತಾರೆ. ಹಾಗಾಗಿ ಇದು ಕಪ್ಪುಃಣವನ್ನು ಸಕ್ರಮಗೊಳಿಸಿಕೊಳ್ಳುವ ವ್ಯವಹಾರವೂ ದಂಧೆಯೂ ಆಗಿರಬಹುದೆಂಬ ಅನುಮಾನವೂ ಇದೆ. ಆದ್ದರಿಂದಕನ್ನಡ ಸಿನಿಮಾಕ್ಕೂ, ಕನ್ನಡ ಜನಕ್ಕೂ ಏನೂ ಸಂಬಂಧವಿಲ್ಲ ಎಂಬ ಪರಿಸ್ಥಿತಿಯಂತೂ ಈಗ ಸೃಷ್ಟಿಯಾಗಿದೆ. ಈ ನಿರ್ಮಾಪಕರ ಭರಾಟೆಯಲ್ಲಿ ಸಿನಿಮಾ ಒಂದು ಸೃಜನಶೀಲ ಕಲೆ ಎಂದುಕೊಂಡು ಬರುವ ನಿರ್ಮಾಪಕರು ಮೂಲೆ ಸೇರುತ್ತಿದ್ದಾರೆ.

ಸಾಮಾಜಿಕ ಸ್ಪಂದನೆ ಎಲ್ಲಿದೆ?


ಇಂದು ಸಮಾಜದ ಆಗುಹೋಗುಗಳಿಗೆ ಕನ್ನಡ ಚಲನಚಿತ್ರರಂಗದಿಂದ ಯಾವುದೇ ಸ್ಪಂದನೆ ಸಿಗುತ್ತಿಲ್ಲ. ಕಳಪೆ ಲೈಂಗಿಕ ದೃಶ್ಯಗಳೇ ವಿಜೃಂಬಿಸಿ ಅದೇ ಮಲೆಯಾಳಂ ಚಿತ್ರರಂಗ ಎಂಬ ಭಾವನೆ ಎಲ್ಲೆಡೆ ಮೂಡಿದಾಗ ಅದನ್ನು ಮತ್ತೆ ಸದಬಿರುಚಿಯ ಮಾರ್ಗಕ್ಕೆ ತಂದಿದ್ದು ಆ ನಾಡಿನ ಖ್ಯಾತ ಸಾಹಿತಿಗಳು ಹಾಗೂ ಪ್ರತಿಭಾನ್ವಿತ ನಟ–ನಿರ್ದೇಶಕರು. ಬಹಳ ರ್ಷಗಳ ಕಾಲ ಸವೆದ ಜಾಡಿನಲ್ಲೇ ಸಾಗಿದ್ದ ತಮಿಳು ಚಿತ್ರರಂಗ ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕ ವಿಷಯಗಳಿಗೆ ತೀವ್ರವಾಗಿ ಸ್ಪಂದಿಸುತ್ತಿದೆ. ಕೆಲವೇ ದಿನಗಳ ಹಿಂದೆ ತೆರೆಕಂಡ ರಜನಿಕಾಂತ್ ಅಭಿನಯದ 'ಕಾಲಾ' ಸಿನಿಮಾ ಇಂದು ರಾಷ್ಟ್ರೀಯತೆ ಕುರಿತ ಹಲವು ಸುಳ್ಳುಗಳಿಗೆ ಉತ್ತರವಾಗಿ ಮೂಡಿಬಂದಿತ್ತು. ಇಂತಹ ಹತ್ತುಹಲವು ಉದಾಹರಣೆಗಳು ತಮಿಳು ಚಿತ್ರರಂಗದಲ್ಲಿವೆ. ತೆಲಗು ಚಿತ್ರರಂಗ ಮನೋರಂಜನೆಯನ್ನೇ ಮುಖ್ಯ ಕೇಂದ್ರವನ್ನಾಗಿ ಹೊಂದಿದ್ದರೂ ವೈವಿಧ್ಯತೆಯ ಕಾರಣದಿಂದಾಗಿ ಕನ್ನಡಕ್ಕಿಂತ ಹೆಚ್ಚು ಯಶಸ್ವಿಯಾಗಿದೆ. ಬಾಲಿವುಡ್ ಎಂಬ ಆಲದ ಮರ ಅಡಿಯಲ್ಲಿ ಯಾವತ್ತೋ ನಿರ್ನಾಮವಾಗಬೇಕಿದ್ದ ಮರಾಠಿ ಚಿತ್ರರಂಗ ಇವತ್ತಿಗೂ ಜೀವಂತಿಕೆ ಉಳಿಸಿಕೊಂಡಿದೆ. ಆದರೆ ಕನ್ನಡ ಚಿತ್ರರಂಗ ಮಾತ್ರ ಮಾರುಕಟ್ಟೆ ಚಿಕ್ಕದೆಂಬ ಸ್ವಯಂ ಹೇರಿಕೊಂಡ ಕೀಳರಿಮೆಯಿಂದ, ನಿರ್ಮಾಪಕರ ಮೇಲರಿಮೆಯಿಂದ ಬಳಲುತ್ತಲೇ ಇದೆ.

ಅಲ್ಲಲ್ಲಿ ಮಿಂಚುಗಳು

ನಿಜ, ಕನ್ನಡ ಚಿತ್ರರಂಗವನ್ನು ಸಾರಾಸಗಾಟಾಗಿ ಪಕ್ಕಕ್ಕೆ ಸರಿಸಲು ಆಗುವುದಿಲ್ಲ. ಅಲ್ಲಲ್ಲಿ, ಆಗಾಗ ಮಿಂಚುಗಳು ಹೊಳೆಯುತ್ತಲೇ ಇವೆ. ಅಂತಹ ಸಿನಿಮಾಗಳನ್ನು ಪ್ರೇಕ್ಷಕರೂ ಗೆಲ್ಲಿಸಿದ್ದಾರೆ. ಆದರೆ ನಂತರದ ದಿನಗಳಲ್ಲಿ ನಿರ್ಮಾಪಕರು ಅವರನ್ನು ಸೋಲಿಸಿದ್ದಾರೆ. ಹೇಳಿಕೇಳಿ ಕನ್ನಡ ಚಿತ್ರರಂಗ ಸೂಪರ್‌ಸ್ಟಾರ್‌ಗಳ ಆಡಂಬೋಲ. ರಾಜ್‌ಕುಮಾರ್ ಕಾಲದ ಸೂಪರ್‌ಸ್ಟಾರ್‌ಗಳಿಗೂ, ಇಂದಿನ ಸೂಪರ್‌ಸ್ಟಾರ್‌ಗಳಿಗೂ ಬಹಳಷ್ಟು ವ್ಯತ್ಯಾಸವಿದೆ. ಅಂದಿನ ಸ್ಟಾರ್‌ಗಳು ನಿರ್ದೇಶಕರಿಗೆ, ಕತೆಗೆ ಹೊಂದಿಕೊಂಡು ನಟಿಸುತ್ತಿದ್ದರು. ೯೦ರ ದಶಕದ ನಂತರ ಪರಿಸ್ಥಿತಿ ಬದಲಾಗುತ್ತಾ ಬಂತು. ಸ್ಟಾರ್‌ಗಳ ಕಾಲ್‌ಶೀಟ್ ಗಿಟ್ಟಿಸಿದ ನಂತರವೇ ಮುಂದಿನ ಕೆಲಸ. ಸ್ಟಾರ್‌ಗಳ ಮುಖ ನೋಡಲು ಪ್ರೇಕ್ಷಕರು ಬರುತ್ತಾರೆ ಎಂದುಕೊಂಡಿದ್ದಾರೆ ನಿರ್ಮಾಪಕರು. ಸ್ಟಾರ್‌ಗಳ ಸುಳಿಗೆ ಸಿಲುಕಿ ಎಷ್ಟೋ ಪ್ರತಿಭಾನ್ವಿತ ನಿರ್ದೇಶಕರು ತಮ್ಮತನವನ್ನು



'ಕಿರಗೂರಿನ ಗಯ್ಯಾಳಿಗಳು' ಚಿತ್ರದ ಒಂದು ಚಿತ್ರಿಕೆ



'ರಾಮರಾಮ ರೇ' ಚಿತ್ರದ ಒಂದು ಚಿತ್ರಿಕೆ

ಕಳೆದುಕೊಂಡು ಈಗಲೂ ಪರಿತಪಿಸುತ್ತಿದ್ದಾರೆ. ಜನ ಮೆಚ್ಚುವಂತ ಸಿನಿಮಾಗಳನ್ನು ಕೊಟ್ಟಿದ್ದ ನಾಗತಿಹಳ್ಳಿ ಚಂದ್ರಶೇಖರ್ ಅವರು ಯಾಕಾದರೂ ಉಪೇಂದ್ರ (ನಾಗರಹಾವು), ವಿಷ್ಣುವರ್ಧನ್ (ಮಾತಾಡ್ ಮಾತಾಡ್ ಮಲ್ಲಿಗೆ) ಅವರ ಸಿನಿಮಾಗಳನ್ನು ನಿರ್ದೇಶಿಸಲು ಒಪ್ಪಿಕೊಂಡರೋ, ಮತ್ತೆ ಹಳೇ ಲಹರಿಗೆ ವಾಪಸ್ ಹೋಗಲು ಸಾಧ್ಯವಾಗಲೇ ಇಲ್ಲ. 'ಮುಂಗಾರು ಮಳೆ' ನಂತರ ಯೋಗರಾಜಭಟ್ಟರು ಕೈಗೆ ಸಿಕ್ಕ ಸಿಕ್ಕ ಪದಗಳನ್ನು ಬಳಸಿ ಹಾಡುಗಳನ್ನು ಬರೆಯುವುದಕ್ಕಷ್ಟೇ ಸೀಮಿತವಾಗಬೇಕಾಯಿತು. ಇದ್ದುದರಲ್ಲಿ ಸೂರಿ ಕತೆಯನ್ನು ಹಸಿಹಸಿಯಾಗಿ ಹೇಳುವ ಮೂಲಕ ಚಾಲ್ತಿಯಲ್ಲಿದ್ದಾರೆ.

ಆದರೆ ಹೊಸ ನಿರ್ದೇಶಕರು ಕನ್ನಡದಲ್ಲಿ ಭರವಸೆ ಮೂಡಿಸಿದ್ದಾರೆ. ಇವರಲ್ಲಿ ಮೇಲ್ಪಂಕ್ತಿಯಲ್ಲಿರುವ ಪವನ್ ಕುಮಾರ್ ಅವರು 'ಲೂಸಿಯಾ' ಸಿನಿಮಾ ಮೂಲಕ *ಕ್ರೌಡ್ ಫಂಡಿಂಗ್* ಮಾದರಿಯನ್ನು ಕನ್ನಡ ಚತ್ರರಂಗಕ್ಕೆ ಪರಿಚಯಿಸಿದ್ದಲ್ಲದೇ ಹೊಸ ರೀತಿಯ ಕತೆಯನ್ನು ಮುಂದಿಟ್ಟರು. ದೊಡ್ಡ ನಟರ ಹಂಗಿಗೆ ಬೀಳದೇ ನೀನಾಸಂ ಸತೀಶ್ ಅವರನ್ನೇ ನಾಯಕರನ್ನಾಗಿಸಿ ಗೆದ್ದರು. 'ಯು ಟರ್ನ್' ಸಿನಿಮಾವನ್ನೂ ಸಹ ವಿಭಿನ್ನ ನಿರೂಪಣೆಯಿದಾಗಿಯೇ ಗೆಲ್ಲಿಸಿಕೊಂಡರು. ಶಿವಮೊಗ್ಗದವರೇ ಆದ ಸತ್ಯಪ್ರಕಾಶ್ ನಿರ್ದೇಶನದ 'ರಾಮ ರಾಮರೇ...' ಹಲವು ಯುವಕರು ಸೇರಿ ಮಾಡಿದ ಚಿತ್ರ. ಅತ್ಯಂತ ಕಡಿಮೆ ಬಜೆಟ್‌ನಲ್ಲಿ ಸಿದ್ಧವಾದ ಈ ಸಿನಿಮಾವನ್ನು ಪ್ರೇಕ್ಷಕರೇ ಗೆಲ್ಲಿಸಿದ್ದರು. ಕಿರುತೆರೆ ಧಾರಾವಾಹಿ 'ಚೌಕಬಾರ'ಕಿರುಚಿತ್ರದ ಮೂಲಕ ಗಮನ ಸೆಳೆದಿದ್ದ ನೀನಾಸಂ ಪದವೀಧರ ಶಿವಮೊಗ್ಗ ರಾಘು ನಿರ್ದೇಶಿಸಿದ 'ಚೂರಿಕಟ್ಟೆ' ಮಲೆನಾಡಿನ ಟಿಂಬರ್ ಮಾಫಿಯಾ ಕಥೆಯನ್ನು ಅಚ್ಚುಕಟ್ಟಾಗಿ ಮುಂದಿಟ್ಟಿತ್ತು.

ಈರೇಗೌಡರ ಚಿತ್ರಕತೆ ಹಾಗೂ ರಾಮರೆಡ್ಡಿ ಅವರ ನಿರ್ದೇಶನದ 'ತಿಥಿ' ಸಿನಿಮಾ ತೆರೆಕಂಡು ಎರಡು ವರ್ಷವಾಯಿತು. ದುರಂತವೆಂದರೆ ಇವರಿಗೆ ಮತ್ತೊಂದು ಸಿನಿಮಾ ಮಾಡಲು ಸಾಧ್ಯವಾಗಿಲ್ಲ. ನಿರ್ಮಾಪಕರ ಬಳಿ ಹೊಸ ಕತೆ ಇಟ್ಟುಕೊಂಡು ಹೋದರೆ ಅದನ್ನು ಒಪ್ಪದ ಅವರು ಸೆಂಚುರಿಗೌಡ, ಗಡ್ಡಪ್ಪರನ್ನು ಇಟ್ಟುಕೊಂಡು ತಿಥಿ ತರದ್ದೇ ಇನ್ನೊಂದು ಕಾಮಿಡಿ ಸಿನಿಮಾ ಮಾಡಿಕೊಡಿ ಎನ್ನುತ್ತಿದ್ದಾರೆಯೇ ಹೊರತು ಹೊಸ ಕತೆಯನ್ನೇ ಕೇಳುತ್ತಿಲ್ಲ. ಇದೇ ಸೆಂಚುರಿಗೌಡ, ಗಡ್ಡಪ್ಪರಂತ ಮುಗ್ಧ ನಟರ ಬಾಯಿಯಿಂದ ಅಶ್ಲೀಲ ಪದಗಳನ್ನೆಲ್ಲೇ ಹೇಳಿಸಿ ಮಾಡಿದ ನಂತರದ ಸಿನಿಮಾಗಳು ಹೇಳಹೆಸರಿಲ್ಲದಂತಾಗಿದ್ದರೂ ಅಂತದ್ದೇ ಸಿನಿಮಾ ಬೇಕಂತೆ ನಿರ್ಮಾಪಕರಿಗೆ!

ಆಲ್ಜಮೈರ್ ಕಾಯಿಲೆಯಿಂದ ಬಳಲುವ ವೃದ್ಧನೊಬ್ಬ ದಾರಿ ತಪ್ಪಿ ಕಾಣೆಯಾಗುವ, ಅಪ್ಪನಿಗಾಗಿ ಮಗ ಹುಡುಕುವ ಕತೆ ಹೊಂದಿದ್ದ, ಹೇಮಂತ ರಾವ್ ನಿರ್ದೇಶನದ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಸಿನಿಮಾ ಎಲ್ಲಾ ಭಾಷೆಯ ನಿರ್ಮಾಪಕರ ಗಮನ ಸೆಳೆದಿತ್ತು. ರಿಮೇಕ್ ಹಕ್ಕುಗಳಿಗಾಗಿ ಭಾರಿ ಪೈಪೋಟಿ ನಡೆದಿತ್ತು. ಹಿಂದಿಯಲ್ಲಿ ಅಮಿತಾಬ್ ಬಚ್ಚನ್ ಅವರು ಕನ್ನಡ ಅವತರಣಿಕೆಯಲ್ಲಿ ಅನಂತನಾಗ್ ಅವರು ನಿರ್ವಹಿಸಿದ್ದ ಪಾತ್ರವನ್ನೇ ಮಾಡುವ ಸಾಧ್ಯತೆ ಇದೆ.

ಕನ್ನಡ ಸಾಹಿತ್ಯದ ಕತೆ-ಕಾದಂಬರಿಗಳನ್ನು ಸಿನಿಮಾ ಮಾಡುವ ಕಾಲ ಯಾವತ್ತೋ ಮುಗಿಯಿತು. ಶಿವರಾಮಕಾರಂತರ ಕಾದಂಬರಿ ಆರಿಸಿ ನಾಗಾಭರಣ ನಿರ್ದೇಶಿಸಿದ 'ಚಿಗುರಿದ ಕನಸು' ಸಿನಿಮಾ ದಿಲ್ಲಿಯಿಂದ ಹಳ್ಳಿಗೆ ಬಂದು ಬದುಕು ಕಟ್ಟಿಕೊಳ್ಳುವ ಯುವಕನೊಬ್ಬನ ಕತೆಯೊಂದಿಗೆ ಗಮನ ಸೆಳೆದಿತ್ತು. ಇತ್ತೀಚಿಗೆ ಸುಮನ್ ಕಿತ್ತೂರು ಅವರ ನಿರ್ದೇಶನದಲ್ಲಿ ಪೂರ್ಣಚಂದ್ರ ತೇಜಸ್ವಿ ಅವರ 'ಕಿರಗೂರಿನ ಗಯ್ಯಾಳಿಗಳು' ತೆರೆ ಕಂಡಿತ್ತು. ಆದರೆ ಕತೆಯಲ್ಲಿ ಸೂಕ್ಷ್ಮವಾಗಿದ್ದ ಪಾತ್ರವೊಂದು ಅನಗತ್ಯವಾಗಿ ವಿಜೃಂಬಿಸಿದ ಕಾರಣ ಕತೆಯೇ ಹಿಂದೆ ಸರಿದಿತ್ತು. 'ಚೂರಿಕಟ್ಟೆ' ಸಿನಿಮಾ ನಿರ್ದೇಶಿಸಿದ ಶಿವಮೊಗ್ಗ ರಾಘು ತನ್ನ ಸಿನಿಮಾವನ್ನು ತೋರಿಸಲು ಊರೂರು ಅಲೆಯಬೇಕಾಯಿತು. ಬಿ.ಎಂ. ಗಿರಿರಾಜ್ ಅವರ 'ಅಮರಾವತಿ' ಸಿನಿಮಾ ಟಾಕೀಸ್‌ನಲ್ಲಿ ಉಳಿಯಲೇ ಇಲ್ಲ. ಎಲ್ಲಾ ಊರುಗಳಲ್ಲೂ ಸಿನಿಮಾ ಸೊಸೈಟಿಯವರಷ್ಟೇಪ್ರದರ್ಶನ ಆಯೋಜನೆ ಮಾಡಬೇಕಾಯಿತು.

ವಾಸ್ತವವಾಗಿ ಒಳ್ಳೆ ಸಿನಿಮಾಗಳನ್ನು ಜನ ನೋಡುವುದಿಲ್ಲ ಎಂದೇನೂ ಇಲ್ಲ. ನಿರ್ಮಾಪಕರ ಲಾಬಿ ಎಷ್ಟು ಪ್ರಬಲವಾಗಿದೆ ಎಂದರೆ ಯಾವುದಾದರೂ ಸಿನಿಮಾ ಜನರ ಮೆಚ್ಚುಗೆ ಗಳಿಸುತ್ತಿದೆ ಎಂದ ಕೂಡಲೇ ಅದನ್ನು ಚಿತ್ರಮಂದಿರಗಳಿಂದ ಕಿತ್ತುಹಾಕಿಸಲಾಗುತ್ತದೆ. ಜಯತೀರ್ಥ ಅವರ 'ಒಲವೇ ಮಂದಾರ' ಸಿನಿಮಾ ಟಾಕೀಸ್‌ನಲ್ಲಿ ಉಳಿಸಿ ಎಂದು ಪ್ರತಿಭಟನೆಯನ್ನೂ ಮಾಡಲಾಗಿತ್ತು. 'ಅಮರಾವತಿ' ಸಿನಿಮಾಕ್ಕಂತೂ ಥಿಯೇಟರ್ ಸಿಗಲೇ ಇಲ್ಲ. ಇನ್ನು ಬಿ.ಎಂ. ಗಿರಿರಾಜ್ ಅವರ 'ಜಟ್ಟ' ಸಿನಿಮಾ ಟಾಕೀಸ್‌ನಲ್ಲಿ ಇದ್ದಿದ್ದರೆ ಜನ ಖಂಡಿತಾ ನೋಡಿರುತ್ತಿದ್ದರು. ಆದರೆ ಸುರಳಿ ಸುತ್ತುವ ನಿರ್ದೇಶಕರು ಇಂತಹ ಸಿನಿಮಾಗಳಿಗೆ ಹೆದರುತ್ತಾರೆ. ಜನರು ಇಂತಹ ಸಿನಿಮಾ ನೋಡುವುದನ್ನೇ ಅಭ್ಯಾಸ ಮಾಡಿಕೊಂಡರೆ ತಮ್ಮ ಹಡಾಹುಡಿ ಸಿನಿಮಾಗಳಿಗೆ ಬರುವುದಿಲ್ಲ ಎಂಬ ಆತಂಕ ಅವರದು! ಇವರೇ ಜನ ನೋಡುವ ಕಮರ್ಷಿಯಲ್ ಸಿನಿಮಾ – ಜನ ನೋಡದ ಆರ್ಟ್ ಸಿನಿಮಾ ಎಂಬ ಕಾಲ್ಪನಿಕ ವಿಭಜನೆಯ ಕಾರಣಕರ್ತರು. ಕಲಾತ್ಮಕ ಸಿನಿಮಾಗಳಿಗೆ ಥಿಯೇಟರ್ ಸಿಗದಂತೆ ಮಾಡುವವರು.

ಬಾಲಿವುಡ್ ಚಿತ್ರರಂಗ ಕಾಲದ ಪರೀಕ್ಷೆಯಲ್ಲಿ ಗೆದ್ದು ಬಹುಮುಂದೆ ಸಾಗಿ ಬಂದಿದೆ. ಅಲ್ಲೀಗ ಸ್ಟಾರ್‌ಗಿರಿಗೆ ಹೆಚ್ಚು ಮನ್ನಣೆ ಸಿಗುತ್ತಿಲ್ಲ. ಸಮಕಾಲೀನ ಕಥೆ, ಸಂವೇದನಾಶೀಲ ನಿರೂಪಣೆಯೇ ಸಿನಿಮಾಗಳನ್ನು ಗೆಲ್ಲಿಸುತ್ತಿವೆ. ರಾಜಕೀಯ ಸಿನಿಮಾಗಳನ್ನೇ ಮಾಡುವ ಪ್ರಕಾಶ್ ಝಾ, ಐತಿಹಾಸಿಕ ಮೆಲೊಡ್ರಾಮ ಸೃಷ್ಟಿಸುವ ಸಂಜಯ್ ಲೀಲ ಬನ್ಸಾಲಿ, ಆಧುನಿಕ ಸಂವೇದನೆಗಳನ್ನು ಚಿತ್ರಿಸುವ ಮಧುರ್ ಭಂಡಾರ್ಕರ್, ದೃಶ್ಯಕಾವ್ಯ ಕಟ್ಟುವ ಅನುರಾಗ್ ಬಸು ಇನ್ನೂ ಗೆಲ್ಲುತ್ತಿದ್ದಾರೆ. ಆದರೆ ಕನ್ನಡ ಚಿತ್ರರಂಗ ಮಾತ್ರ ಹೊಸ ಯೋಚನೆಯವರಿಗೆ ಬೆಳೆಯಲು ಅವಕಾಶ ಕೊಡದೇ, ಹಳೆಯ ಕೋಟೆಇಂದಾಚೆಗೆ ಹಣಕುವ ಪ್ರಯತ್ನವನ್ನೂ ಮಾಡದೇ, ಭ್ರಾಮಕಲೋಕದಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಲೇ ಇದೆ. ಜನರ 'ಪಲ್ಸ್' ಸಿಕ್ತಾ ಇಲ್ಲ ಅಂತ ಜಾಣ ಮಾತುಗಳನ್ನಾಡುತ್ತಾ ಮನಸಿಗೆ ಬಂದ ಸಿನಿಮಾಗಳನ್ನು ಸುತ್ತಿಸುತ್ತಿ ಕೊಡುತ್ತಲೇ ಇದ್ದಾರೆ. ಅನಿವಾರ್ಯವಾಗಿ ಯಾವುದೋ ಒಂದು ಸಿನಿಮಾವನ್ನು ಬಿ ಮತ್ತು ಸಿ ಸೆಂಟರ್‌ನ ಪ್ರೇಕ್ಷಕರು ಗೆಲ್ಲಿಸಿದ ನಂತರ ಅದೇ ಮಾದರಿಯ ಹತ್ತಾರು ಸುರಳಿಗಳನ್ನು ಸುತ್ತಿ ಸೋತು ಸುಣ್ಣವಾಗುತ್ತಾರೆ.

ಸಿನಿಮಾಗಳ ಗೆಲವು ಎಲ್ಲಿದೆ, ಸೋಲು ಎಲ್ಲಿದೆ ಎಂದು ನಿರ್ಮಾಪಕರು ಅರ್ಥ ಮಾಡಿಕೊಳ್ಳುವ ವರೆಗೂ ಕನ್ನಡತನದ ಮೌಲ್ಯಕ್ಕಾಗಿ ಹಪಾಹಪಿಸಬೇಕಿದೆ.



(ಇತ್ತೀಚಿನವರೆಗೆ 'ಕನ್ನಡ ಪ್ರಭ' ಪತ್ರಿಕೆಯ ಶಿವಮೊಗ್ಗ ಜಲ್ಲಾ ವರದಿಗಾರಾಗಿದ್ದ ಹೊನ್ನಾಳಿ ಚಂದ್ರಶೇಖರ್ ಈಗ ಮುಕ್ತ ಪತ್ರಕರ್ತರಾಗಿದ್ದು ಹವ್ಯಾಸಿ ನಾಟಕ ಚಟುವಟಿಕೆಗಳಲ್ಲಿಯೂ ಸಕ್ರಿಯರು)



ಚಿತ್ರ: ರೂಪ ಹಾಸನ

ಕಾದಂಬರಿ ಪುಟಗಳು

ಸಿದ್ಧಿಯ ಕೈ ಚಂದ್ರನತ್ತ

(ಕೃಷ್ಣಮೂರ್ತಿ ಹನೂರು ಅವರ ಹೊಸ ಕಾದಂಬರಿಯ ಕೆಲವು ಪುಟಗಳು)

ಇತ್ತೀಚಿನ ದಿನಗಳಲ್ಲಿ ನಾನು ರಮಾಕಾಂತರಿಗೆ ಸಿಗುವುದಿರಲಿ, ಅವರೇ ನನ್ನ ಬಳಿಗೆ ಬರುವುದರಲ್ಲಿ ತಾತ್ಸಾರ ತೋರುತ್ತಿದ್ದರು. ಹತ್ತು ಹದಿನೈದು ದಿನ ನಾನು ಕೆಲಸ ಮಾಡುವಲ್ಲಿಗೆ ಕರೆದುಕೊಂಡು ಹೋದರೆ ಸಂಬಂಧ ಬಹಿರಂಗವಾಗಿ ಬಿಡಬಹುದೇ ಎಂಬ ಅಳುಕು. ಅದಕ್ಕಿಂತ ರಮಾಕಾಂತ ಬೆಚ್ಚಿ ಬೆವರಿದ್ದು ನಾನೇ ಕುತ್ತಿಗೆಗೆ ತಾಳಿದಾರ ಬಿಗಿದುಕೊಳ್ಳುತ್ತೇನೆಂದದ್ದು. ನನಗೂ ಇಷ್ಟವಿಲ್ಲದ, ರಮಾಕಾಂತರಿಗೂ ಬೇಡವಾಗಿದ್ದ, ಸುಮ್ಮನೆ ನನ್ನ ಕಾಸಿನ ಕಷ್ಟಕ್ಕೆ ಆ ಘಳಿಗೆಯಲ್ಲಿ ಆಡಿದ ಆ ಮಾತು ಅಲ್ಲಿಯೇ ಬರಖಾಸ್ತುಗೊಂಡಿತು. ಆ ಮುಂದಿನ ವರ್ಷ ನನ್ನ ಅನ್ನದ ಭಾಗ್ಯವೋ, ರಮಾಕಾಂತರಿಗೆ ನನ್ನಿಂದ ಬೇಕಾಗಿದ್ದ ಬಿಡುಗಡೆಯ ಭಾಗ್ಯವೋ ಈ ಮೇಷ್ಟ್ರ ಕೆಲಸ ಸಿಕ್ಕಿ ಆರೇಳು ವರ್ಷ ಬೆಂಗಳೂರಿನ ವಠಾರದಲ್ಲಿ ದಿಕ್ಕುಗೆಟ್ಟವಳಾಗಿದ್ದ ನಾನು ಈಗ ಇಲ್ಲಿ ಮಕ್ಕಳಿಗೆ ಪಾಠ ಹೇಳುವವಳಾಗಿಬಿಟ್ಟೆ!

ಸುರೇಂದ್ರ, ಇಲ್ಲಿಯವರೆಗೆ ನನ್ನ ಕಥೆಯನ್ನು ಹೇಗೆ ಹೇಳಿದೆನೋ ಗೊತ್ತಿಲ್ಲ. ನನಗೆ ಕನ್ನಡ ಲೇಖಕರಂತೆ ಕ್ರಮಬದ್ಧ ಕಥೆ ಹೇಳಲು ಬರುವುದಿಲ್ಲ, ನಾನು ಬೆಂಗಳೂರು ಬಿಟ್ಟ ಸಂಗತಿಯನ್ನು ಇನ್ನು ಹತ್ತಿಪ್ಪತ್ತು ನಿಮಿಷದಲ್ಲಿ ಹೇಳಿ ಮುಗಿಸಿಬಿಡುತ್ತೇನೆ ಕೇಳಿ, ಎಂದು ಚಿತ್ರಾ ತಮ್ಮ ಮುಂದಿನ ಕಥೆಯನ್ನು ಆರಂಭಿಸಿದರು.

ಅವರಿವರ ಮನೆಯ ಹೊಸ್ತಿಲ ಈಚೆಯೋ ಆಚೆಯೋ ಬೆಳೆದ ನಾನು ಮಗಳು ಅಪೂರ್ವಿಯನ್ನು ಹೆತ್ತದ್ದು, ಸಾಕಿದ್ದು ನನ್ನ ಬದುಕಿನ ಮೂರನೇ ಪರ್ವ. ಮುರಿದ ಭರವಸೆ, ಮುಚ್ಚಿಹೋದ ಮಾರ್ಗದಲ್ಲಿ ಮತ್ತೊಂದು ಮೋಹವೆಂಬಂತೆ ನನ್ನ ಒಡಲಿನಿಂದಲೆ ಇನ್ನೊಂದು ಜೀವ ಚಿಗುರಿಕೊಂಡಿತು. ಮಗು ಹೆರುತ್ತ ಸಾಯುತ್ತಿದ್ದ ನಾನು ಅದರ ಮುಖಮುದ್ರೆಯನ್ನು ಕಂಡ ಘಳಿಗೆ ಯಲ್ಲಿ ಅದನ್ನು ಉಳಿಸುವ ನಿಮಿತ್ತ ಬದುಕಲೇಬೇಕೆನಿಸಿತು. ನಾನು ಜನ್ಮವೆತ್ತಿದಾಗ ನನ್ನ ತಾಯಿ ಹೀಗೆಯೇ ಅಂದುಕೊಂಡಿರಬೇಕಲ್ಲವೆ? ಇಲ್ಲದೇ ಹೋದರೆ ಅವಳು ಯಾಕೆ ಬಸ್‌ಸ್ಟ್ಯಾಂಡಿನಲ್ಲಿ ಕುಳಿತು ಮೆಣಸಿನಕಾಯಿ ಬೋಂಡ, ಖಾರಮಂಡಕ್ಕಿ ಕಲಸಬೇಕಾಗಿತ್ತು? ತಾಯಂದಿರ ದುಡಿಮೆಯ ಶ್ರಮವನ್ನು, ಎದೆಯೊಳಗಿನ ಸಂಕಟವನ್ನು ಯಾರಿಂದಲೂ ಶಮನಗೊಳಿಸಲು ಸಾಧ್ಯವಿಲ್ಲ ಎನಿಸುತ್ತದೆ.

ಸ್ನಾತಕೋತ್ತರ ಪದವಿ ಮುಗಿದ ಮೇಲೆ ನಾನು ಹಾಸ್ಟೆಲು ಬಿಡಬೇಕಾಯಿತು. ನಿತ್ಯ ರಮಾಕಾಂತನನ್ನು ಭೇಟಿ ಮಾಡುವುದೇನೋ ಸರಿ. ಆದರೆ ಅವರ ಭೇಟಿಯ ನಂತರ ಹೊತ್ತು ಕಳೆಯುವುದು ಕಷ್ಟವಾಯಿತು. ಪೇಪರು ತರಿಸಿಕೊಂಡು ಉದ್ಯೋಗದ ಕಾಲಮ್ ಹುಡುಕಿ ಕಂಡಕಂಡ ಕಡೆಗೆ ಅರ್ಜಿ ಹಾಕುತ್ತಿದ್ದೆ. ದಿನ ಸರಿಯುವಲ್ಲಿ ಪೇಪರು ತರಿಸುವುದು, ಅರ್ಜಿ ಹಾಕುವುದು, ಮನೆ ಬಾಡಿಗೆ ಸಲ್ಲಿಸುವುದು ದುಸ್ತರವೆನಿಸಿತು.

ಸುರೇಂದ್ರ, ನಿಮಗೆ ಗೊತ್ತಲ್ಲಾ ಎಂದಿದ್ದರೂ ಒಡ್ಡುವ ಕೈ ದೈನ್ಯ ಸ್ಥಿತಿಯದೇ. ಯಾರದೋ ಹೆಗಲಿಗೆ ಬಿದ್ದವಳ ಬಗ್ಗೆ ವರ್ಷಗಟ್ಟಲೇ ಪ್ರೀತಿ, ಪ್ರೇಮವೆಂಬುದು ಉಳಿಯುವುದು ಕಷ್ಟ. ಪಾಲಯ್ಯ ಮೇಷ್ಟ್ರು ಮೂರ್‍ನಾಲ್ಕು ವರ್ಷ ಮನೆಯಲ್ಲಿರಿಸಿಕೊಂಡರು, ಊಟ ಹಾಕಿದರು ಅಂದರೆ ಅದೊಂದು ಹಳ್ಳಿ, ಆಮೇಲೆ ಅವರ ಮನೆಯ ಚಾಕರಿಯೆಲ್ಲ ನನ್ನದೇ ಆಗಿತ್ತಲ್ಲ. ಇಷ್ಟಲ್ಲದೆ ಮೇಷ್ಟ್ರಿಗೆ ನನ್ನ ಮೇಲೆ ಅದಾವ ಕರುಣೆ, ಪ್ರೀತಿ, ಹೇಳಿಕೊಳ್ಳಲಾಗದ ಮೋಹವಿತ್ತೊ ನನಗೆ ಈಗಲೂ ಅರ್ಥವಾಗಿಲ್ಲ. ನನಗೂ ಅಂಥದ್ದೇ ಹೇಳಲಾಗದ ಭಾವ ಉಳಿದುಬಿಟ್ಟಿದೆ.

ಈಗ ನಾನಿರುವುದು ಬೆಂಗಳೂರು. ಮಾತಿಗೂ, ನಗುವಿಗೂ, ಅರ್ಧ ಲೋಟ ಕಾಫಿಗೂ ಲೆಕ್ಕಾಚಾರವಿರುವ ಘನಂದಾರಿ ಪಟ್ಟಣ. ಹಾಸ್ಟೆಲು ಬಿಟ್ಟ ಒಂದೆರಡು ವರ್ಷದಲ್ಲಿ ರಮಾಕಾಂತರ ಮುಖ, ಮನಸ್ಸು, ಕೈ, ಜೇಬು ಎಲ್ಲ ಬಿಗಿಯಾಯಿತು. ನನ್ನ ಮೈ ಮೂತಿಯನ್ನೆಲ್ಲ ದಾರಿದ್ರ್ಯ ಭಾವ ಮುಸುಕಿಕೊಂಡಿತು.

ಒಂದು ದಿನ ನಾನು ರಮಾಕಾಂತರ ಮುಂದೆ ಯಾವುದಾದರೂ ಸಣ್ಣಪುಟ್ಟ ಕೆಲಸಕ್ಕೆ ಸೇರಿಕೊಳ್ಳಲೇ ಎಂದೆ. "ಸಣ್ಣ ನೌಕರಿ ಅಂದರೆ ಯಾವುದು, ಒಂದು ಅಟೆಂಡರ್ ಕೆಲಸಕ್ಕೂ ಅರ್ಜಿ, ಸಂದರ್ಶನ, ಶಿಫಾರಸ್ಸು ಎಲ್ಲಾ ಆಗಬೇಕಲ್ಲ. ಎಂ.ಎ. ಓದಿದ ನಿನಗೆ ಸಣ್ಣ ಕೆಲಸ ಅಂದರೆ ಯಾವ ಥರದ್ದು?"

'ಸದ್ಯಕ್ಕೆ ಆ ಥರದ್ದೇನಲ್ಲ. ಯಾವುದಾದರೂ ಸ್ಟಾರ್ ಹೋಟೆಲು, ನರ್ಸಿಂಗ್ ಹೋಂ, ಮಾಲ್‌ನಲ್ಲಿ ಬಣ್ಣದ ಸೀರೆಯುಟ್ಟು, ತಲೆ ಹೆರಳು ಬಿಗಿಕಟ್ಟಿ, ಲಿಪ್‌ಸ್ಟಿಕ್ ಮೆತ್ತಿಕೊಂಡು ಬಂದ ಬಂದವರ, ಮುಂದೆಲ್ಲ ತಲೆಯಾಡಿಸಿ ನಗುನಗುತ್ತ ಗುಡ್‌ಮಾರ್ನಿಂಗ್, ಗುಡ್‌ಈವ್ನಿಂಗ್ ಹೇಳುತ್ತಾ ಕಂಪ್ಯೂಟರ್ ಕೀಲಿಮಣೆಯ ಮೇಲೆ ಕೈಯಾಡಿಸುವಂಥದ್ದು'

"ಕೀಲಿಮಣೆಯ ಮೇಲೆ ನೀನು ಬೆರಳಾಡಿಸುತ್ತೀಯೆ ಸರಿ. ಇಷ್ಟು ಚಂದವಿರುವ ನಿನ್ನ ಮೇಲೆ ಯಾರಾದರೂ ಕೈ ಆಡಿಸಿದರೇನು ಮಾಡುತ್ತೀಯಾ?"

'ನನಗೂ ಈ ಗಂಡಸರ ಸಹವಾಸ ಸಾಕಾಗಿದೆ ಅಂದುಕೊಳ್ಳಿ. ಹೇಗಿದ್ದರೂ ಕೈಯ್ಯಲ್ಲಿ ಮೌಸ್ ಇರುತ್ತದಲ್ಲ. ಬೆರಳಾಡಿಸುವವರ ಮುಖದ ಮೇಲೆ ಎತ್ತಿ ಒಗೆದರಾಯಿತು!'

ಆಮೇಲೆ ರಮಾಕಾಂತನಿಗೆ ನಾನೇ ಕೊಟ್ಟ ಸಲಹೆ ಎಂದರೆ 'ಒಂದು ಕೆಲಸ ಮಾಡಿ. ವಾರವೋ, ಹದಿನೈದು ದಿನವೋ ನೀವು ನಿಮ್ಮ ಕಾರಿನಲ್ಲಿ ನಾನು ಸೇರುವ ಹೋಟೆಲು ಇಲ್ಲ ಮಾಲ್ ಮುಂದೆ ಡ್ರಾಪ್ ಮಾಡಿ ಬಾಗಿಲವರೆಗೆ ಬಿಟ್ಟುಹೋಗಿ, ಜೊತೆಗೆ ಕುತ್ತಿಗೆಗೆ ಒಂದು ತಾಳಿದಾರ ನಾನೇ ಸುತ್ತಿಕೊಳ್ಳುತ್ತೇನೆ. ಗಂಡ ಇದ್ದಾನೆಂದು ನನ್ನ ಕಡೆ ನೋಡುವುದು ಕಡಿಮೆಯಾಗಬಹುದು' ಎಂದೆ.

ರಮಾಕಾಂತರ ಹಣೆಯ ಮೇಲೆ ಬೆವರು ಪೋಣಿಸಿಕೊಂಡಿತು. ಅವರ ಮನದಾಳದಲ್ಲಿ ಇದ್ದಕ್ಕಿದ್ದಂತೆಯೇ ಉದ್ಭವಿಸಿದ ತೀವ್ರ ಭಾವವೇನೆಂದು ನನಗೆ ಅರಿವಾಯಿತು. ಆದರೆ ಬಹಿರಂಗದಲ್ಲೆಂಬಂತೆ, ಆಡಿದ ಮಾತೆಂದರೆ 'ನಿನ್ನ ದಿನಾ ಡ್ರಾಪ್ ಮಾಡುವುದಾ? ಅದು ಇರಲಿ ಬಿಡು. ನೀನು ಮಾಲ್ ಇಲ್ಲ ಹೋಟೆಲಲ್ಲಿ ಎಷ್ಟು ಹೊತ್ತು ಇರಬೇಕು ಗೊತ್ತಾ? ಬಂದವರನ್ನೆಲ್ಲ ವೆಲ್‌ಕಮ್ ಮಾಡಿಕೊಂಡು ದಿನವೆಲ್ಲಾ ಕೂತಲ್ಲೇ ಕೂತಿರಬೇಕಲ್ಲ. ಆಮೇಲೆ ನೀನು ನನ್ನ ಕೈಗೆ ಸಿಗುವುದುಂಟೆ?

ಇತ್ತೀಚಿನ ದಿನಗಳಲ್ಲಿ ನಾನು ರಮಾಕಾಂತರಿಗೆ ಸಿಗುವುದಿರಲಿ, ಅವರೇ ನನ್ನ ಬಳಿಗೆ ಬರುವುದರಲ್ಲಿ ತಾತ್ಸಾರ ತೋರುತ್ತಿದ್ದರು. ಹತ್ತು ಹದಿನೈದು ದಿನ ನಾನು ಕೆಲಸ ಮಾಡುವಲ್ಲಿಗೆ ಕರೆದುಕೊಂಡು ಹೋದರೆ ಸಂಬಂಧ ಬಹಿರಂಗವಾಗಿ ಬಿಡಬಹುದೇ ಎಂಬ ಅಳುಕು. ಅದಕ್ಕಿಂತ ರಮಾಕಾಂತ ಬೆಚ್ಚಿ ಬೆವರಿದ್ದು ನಾನೇ ಕುತ್ತಿಗೆಗೆ ತಾಳಿದಾರ ಬಿಗಿದುಕೊಳ್ಳುತ್ತೇನೆಂದದ್ದು. ನನಗೂ ಇಷ್ಟವಿಲ್ಲದ, ರಮಾಕಾಂತರಿಗೂ ಬೇಡವಾಗಿದ್ದ, ಸುಮ್ಮನೆ ನನ್ನ ಕಾಸಿನ ಕಷ್ಟಕ್ಕೆ ಆ ಘಳಿಗೆಯಲ್ಲಿ ಆಡಿದ ಆ ಮಾತು ಅಲ್ಲಿಯೇ ಬರಖಾಸ್ತುಗೊಂಡಿತು. ಆ ಮುಂದಿನ ವರ್ಷ ನನ್ನ ಅನ್ನದ ಭಾಗ್ಯವೋ, ರಮಾಕಾಂತರಿಗೆ ನನ್ನಿಂದ ಬೇಕಾಗಿದ್ದ ಬಿಡುಗಡೆಯ ಭಾಗ್ಯವೋ ಈ ಮೇಷ್ಟ್ರ ಕೆಲಸ ಸಿಕ್ಕಿ ಆರೇಳು ವರ್ಷ ಬೆಂಗಳೂರಿನ ವಠಾರದಲ್ಲಿ ದಿಕ್ಕುಗೆಟ್ಟವಳಾಗಿದ್ದ ನಾನು ಈಗ ಇಲ್ಲಿ ಮಕ್ಕಳಿಗೆ ಪಾಠ ಹೇಳುವವಳಾಗಿಬಿಟ್ಟೆ!

* * * *

ಅಧ್ಯಾಪಕಿಯಾಗಿ ಇಲ್ಲಿಗೆ ಬರುವುದರ ಒಂದು ವಾರಕ್ಕೆ ಮೊದಲು ರಮಾಕಾಂತರಿಗೆ ಮೊಬೈಲು ಕರೆಮಾಡಿ ನೀವು ಈಗಲೆ ಬರಬೇಕು ಅಂದೆ.

ಮಗಳು ಶಾಲೆಗೆ ಹೋಗಿದ್ದಳು. ಬೆಳಗ್ಗೆ ಒಂಬತ್ತು ಘಂಟೆಗೇ ಕರೆ ಮಾಡಿಬಿಟ್ಟಿದ್ದೆ. ಆಗ ನಾನಿದ್ದದ್ದು ಕಲ್ಹಾರು ಷೀಟಿನ ಒಂದು ವಠಾರದಲ್ಲಿ ಎಂದೆನಲ್ಲ.

ರಮಾಕಾಂತ "ಈಗಲೇ ಬರಬೇಕಾ ಯೂನಿವರ್ಸಿಟಿಗೆ ಹೋಗಬೇಕಲ್ಲ" ಎಂದರು.

'ನಿಮಗೆ ಇಷ್ಟವಾದರೆ ಬನ್ನಿ. ಇಲ್ಲದಿದ್ದರೆ ಇಲ್ಲ'

"ಅದೇನು ಅಂಥ ಅರ್ಜೆಂಟು?"

'ಏನೂ ಕಾರಣವಿಲ್ಲ, ಅರ್ಜೆಂಟೂ ಇಲ್ಲ. ತೊಂದರೆ ಇಲ್ಲದಿದ್ರೆ ಬನ್ನಿ...'

"ಈಗಲೇ ಬನ್ನಿ ಅಂತ ಒತ್ತಿ ಹೇಳಿ, ತೊಂದರೆ ಇಲ್ಲದಿದ್ದರೆ ಅಂದರೆ ಹೇಗೆ. ಈ ಥರದ ಜಾಣ ಮಾತಿನ ವರಸೆ ಎಲ್ಲಿಂದ ಕಲಿತೆ?"

'ನಿಮ್ಮ ಸಹವಾಸದಿಂದಲೇ..'

"ಡಿಪಾರ್ಟ್‌ಮೆಂಟ್‌ಗೆ ಹೋಗಿ ಸೈನ್ ಮಾಡಿ ಬರ್ತೇನೆ ತಡಿ" ಎಂದು ವಠಾರಕ್ಕೆ ಬಂದವರೇ "ಅದೇನು ಇದ್ದಕ್ಕಿದ್ದಂಗೇ ಬರಹೇಳಿದ್ದು. ಈಗ ನಿನಗೆ ಹುಷಾರಿಲ್ಲವಾ ಅಂತ ಕೇಳೋಣ ಅಂದರೆ ಫೋನಿನಲ್ಲಿ ನಿನ್ನ ವಾಯ್ಸ್ ಸರಿಯಾಗೇ ಇತ್ತು. ಬರಹೇಳಿದ್ದು ಯಾಕೀಗ..?"

'ಅರೇ ನೀವು ಈಗ ಐದಾರು ವರ್ಷದ ಹಿಂದೆ ನನ್ನ ಪರಿಚಯವಾದ ಹೊಸದರಲ್ಲಿ ಯಾವಾಗ ಅಂದರೆ ಆವಾಗ ಓಡಿ ಬಂದು ನಿನ್ನ ದಿನವೆಲ್ಲ ನೋಡಬೇಕು ಅಂತನ್ನಿಸುತ್ತೆ ಅಂತಿದ್ರಲ್ಲ. ಈಗ ಮಗು ಹುಟ್ಟಿದ ಮೇಲೆ ನನಗೆ ನಿಮ್ಮನ್ನ ದಿನಾ ನೋಡಬೇಕು ಅನ್ನಿಸ್ತಿದೆ...'

"ಹಳೆಯದೆಲ್ಲ ಯಾಕೆ ಬಿಡು"

ನಾನು ತಲೆ ಬಾಚಿರಲಿಲ್ಲ. ಕಣ್ಣು ಕೆಂಪಾಗಿತ್ತು. ಅದಕ್ಕೆ ರಮಾಕಾಂತರು "ಯಾಕೆ ಕಣ್ಣು ಕೆಂಪಾಗಿದೆಯಲ್ಲ" ಅಂದರು. ಹಿಂದಿನ ಗಂಟೆಯಲ್ಲಿ ಅತ್ತಿದ್ದರ ಸೂಚನೆಯಾಗಿದ್ದರೂ ನಾನು ಅದನ್ನು ಪ್ರಸ್ತಾಪಿಸಲಿಲ್ಲ. ಅವರು ಗೊತ್ತಿದ್ದರೂ ಹಾಗೆ ಪ್ರಶ್ನೆ ಕೇಳಿದ್ದರು. 'ಯಾಕೊ ಗೊತ್ತಿಲ್ಲ' ಎಂದೆ.

ನಾನು ಯಾವುದಾದರೂ ಸುದ್ದಿಯನ್ನು ಸ್ಫೋಟ ಮಾಡಬಹುದೆಂದು ರಮಾಕಾಂತರು, ಮಕ್ಕಳನ್ನು ಹೆತ್ತು ಸಾಕುವ ತಾಯಂದಿರು ಯಾವ ಘಳಿಗೆಯಲ್ಲಾದರೂ ಮಾರಿಯನ್ನು ಆವಾಹಿಸಿಕೊಂಡು ಗದ್ದಲವೆಬ್ಬಿಸಿಬಿಡಬಹುದೇ ಎಂಬಂತೆ ಹೆದರಿ ನಿಂತಿದ್ದರು. ನನ್ನ ವಠಾರದ ಮನೆಯಲ್ಲಿ ಎರಡು ಪ್ಲಾಸ್ಟಿಕ್ ಕುರ್ಚಿಗಳಷ್ಟೇ ಇದ್ದವು. ರಮಾಕಾಂತರಿಗೆ ಕೂತುಕೊಳ್ಳಲು ಹೇಳಿರಲಿಲ್ಲ. ನಾನಾದರೋ ಗೋಡೆಯ ಮೂಲೆಗೆ ಒರಗಿ ಕೂತಿದ್ದೆ. ರಮಾ ಅಲ್ಲೇ ನನಗೆ ತಾಕುವಂತೆ ನಿಂತಿದ್ದರು. ನಾನು ಕೂತೇ, ಅವರು ನಿಂತೇ ಮಾತಾಡುತ್ತಿದ್ದೆವು. ಅವರ ಎರಡೂ ಕಾಲು ಹಿಡಿದು ಕೂತ ಭಂಗಿಯಲ್ಲೇ ಐದು ಹತ್ತು ನಿಮಿಷ ಕೂತೆ. ಮಾತೇ ಇಲ್ಲ.

ರಮಾಕಾಂತರನ್ನು ಬರಹೇಳಿ ಹಾಗೆ ಕಾಲು, ಮಂಡಿ, ತೊಡೆ ತಬ್ಬಿ ಕೂರಬೇಕು ಎಂದೇನೂ ಅನಿಸಿರಲಿಲ್ಲ. ಆ ಘಳಿಗೆಗೆ ಭಾವುಕತೆ ಬಲವಾಗಿ ಕಾಡಿಬಿಟ್ಟಿತೋ ಹೇಗೋ ಗೊತ್ತಾಗಲಿಲ್ಲ. ಎದ್ದು ಹೋಗಿ ಮುಖ ತೊಳೆದು ಬಂದು 'ರಮಾ ಟಿಫಿನ್ ಮಾಡಿದ್ದೀರಾ' ಎಂದೆ. ನಾನು ಗೆಲುವಾದದ್ದನ್ನು ಕಂಡು ಅವರೂ ಮುಖ ಅರಳಿಸಿಕೊಂಡರು. ಕೇಳಿದ ಪ್ರಶ್ನೆಗೆ ವಾಚು ನೋಡಿಕೊಂಡು ಈಗ ಹತ್ತು ಘಂಟೆ. ಇಷ್ಟೊತ್ತಿನ ತಂಕ ನಾಸ್ಟಾ ಮಾಡದೇ ಇರುವುದುಂಟಾ ಎಂದರು.

ಅಪೂರ್ವಿಗೆ ಚಿತ್ರಾನ್ನ ಮಾಡಿ ತಿನ್ನಿಸಿ ಕಳಿಸಿದ್ದೆ. ನಾನು ತಿನ್ನಬೇಕಾದದ್ದುತಟ್ಟೆಯಲ್ಲಿ ಹಾಗೇ ಉಳಿದಿತ್ತು. ನಾಸ್ಟಾ ಮಾಡಿರಬಹುದೆಂದು ತಿಳಿದ ರಮಾ "ನೀನು ತಿಂದೆಯಾ" ಎಂದು ಕೇಳಲಿಲ್ಲ. ಅದರ ಬದಲು "ಏನು ಮಾಡಿದ್ದೀಯಾ" ಎಂದರು.

'ಚಿತ್ರಾನ್ನ'

"ಅಯ್ಯೋ ಚಿತ್ರಾನ್ನನಾ. ಬೇರೇನಾದರೂ ಆಗಿದ್ದರೆ ರುಚಿ ನೋಡುತ್ತಿದ್ದೆ".

'........'

"ಅದು ಸರಿ, ಮೂರು ಘಂಟೆಯ ಮೇಲೆ ಬರಹೇಳಿದ್ದರೆ ಒಂದೆರಡು ಪೀರಿಯಡ್ಡು ಪಾಠ ಮಾಡಿ ಬರುತ್ತಿದ್ದೆನಲ್ಲಾ..." ಎಂದರು.

'ರಾತ್ರಿ ಹತ್ತು ಘಂಟೆಯ ನಂತರ ಕರೆದಿದ್ದರೆ ಇನ್ನೂ ಅನುಕೂಲವಾಗುತ್ತಿತ್ತಲ್ಲವಾ?'

"ಪುರುಷರ ಮೈಮೇಲೆ ಮಾತ್ರವಲ್ಲ, ಮುಖಕ್ಕೆ ತಗುಲುವಂತೆ ಆಡುವ ಮಾತುಗಳೆಲ್ಲ ಹೆಂಗಸರಿಗೆ ಕರಗತವಾಗಿಬಿಟ್ಟಿರುತ್ತದಲ್ಲವಾ?"

'ಹೌದು ಪರಿಚಯ ಮಾಡಿಕೊಳ್ಳುವಾಗ ಮುಖದ ಚಂದ ನೋಡುತ್ತಲೇ ಗಂಡಸರು ಮಾತಾಡುತ್ತಲೇ ಸೋಲಿಸಿಬಿಡುತ್ತಾರಲ್ಲಾ ಹಾಗೆ....'

"ಅದು ಸರಿ ನೀನು ಹೀಗೊಂದು ಪೀಠಿಕೆ ಹಾಕಿ ಜಗಳ ತೆಗೆಯಲು ಬರಹೇಳಿದೆಯೋ ಇಲ್ಲಾ ಬೇರೇನಾದರೂ ಹೇಳಬೇಕಾದದ್ದು ಇದೆಯೋ. ನೀನು ಕರೆದೇ ಅಂತ ಬೆಳ್ಳಂಬೆಳ್ಳಗ್ಗೇನೆ ಈ ನಿನ್ನ ಗಲ್ಲಿ ವಠಾರದ ಮನೆಗೆ ಬಂದಿದ್ದೇನೆ. ಡಿಪಾರ್ಟ್‌ಮೆಂಟಿಗೂ ಹೋಗದೆ..."

'ನಾನು ನಿಮಗೆ ಪರಿಚಯವಾದಾಗ ಹೊರಗೆ ಪಿಕ್‌ನಿಕ್ ಹೋದಾಗಲೆಲ್ಲ ಈ ಹಾಳು ಡಿಪಾರ್ಟ್‌ಮೆಂಟು ಬೇರೆ, ಮೂರು ದಿನ ರಜಾ ಹಾಕಿದ್ದು ಮುಗಿದೇ ಹೋಯಿತಲ್ಲಾ ಅಂತಿದ್ದವರು, ಅದೇನು ಈಗ ವಿಭಾಗದ ಮೇಲೆ ಅಂಥಾ ಮೋಹ ಹುಟ್ಟಿಸಿಕೊಂಡುಬಿಟ್ಟಿದ್ದೀರಲ್ಲ...'

"ದುಡ್ಡು ಗಿಡ್ಡು ಬೇಕಾ. ಇರುವುದನ್ನು ಮುಚ್ಚಿ ಜಗಳ ಮುಂದುವರಿಸುವುದಕ್ಕಾಗಿಯೇ ಇಲ್ಲದ್ದನ್ನು ಅನ್‌ಫೋಲ್ಡ್ ಮಾಡಬೇಡ.."

'ನನ್ನನ್ನ ಅನ್‌ಫೋಲ್ಡ್ ಮಾಡುವವರೆಗೆ ನೀವು ಆಡಿದ್ದನ್ನೆಲ್ಲ ನೆನಪಿಸಿದೆ, ಅಷ್ಟೆ. ಕ್ಷಮಿಸಿ. ನಿಮ್ಮನ್ನು ಯಾಕೋ ನೋಡಬೇಕು ಅಂತ ಅನ್ನಿಸ್ತು. ಅದಕ್ಕೇ ಬರಹೇಳಿದೆ. ಕಾಸು, ದುಡ್ಡಿಗಲ್ಲ. ನಿಮ್ಮನ್ನ ಯಾವತ್ತಾದರೂ ಕಾಸು ಕೇಳಿದ್ದುಂಟಾ? ಯಾವತ್ತಾದರೂ ಜಗಳಾ ಆಡಿದ್ದೀನಾ...'

"ನೀನು ಇದ್ದಕ್ಕಿದ್ದಂತೇ ಬರಹೇಳಿದ್ದು ಕೇಳಿ ಮಗುವಿಗೆ ಏನಾದರೂ ಆಗಿದೆಯೋ ಅಂತ ಅನಿಸಿತು. ನಿನ್ನ ಹೂವಿನ ಮುಖ ಯಾಕೆ ಹೀಗಾಗಿದೆ. ಏನೇನೋ ಅಂದುಬಿಟ್ಟೆ ಕ್ಷಮಿಸು"

ರಮಾಕಾಂತರ ಕೊನೆಯ ಮಾತಿನಿಂದ ನನ್ನ ಮುಖ ಹೂವಿನಂತೆಯೇ ಅರಳಿಬಿಟ್ಟಿತು. ಮಗಳಿಗೆ ಏನೂ ಆಗಿಲ್ಲ, ಬರುತ್ತಾಳೆ. ಕರೆದ ತಕ್ಷಣ ನೀವು ಬಂದದ್ದು ನನಗೆ ಸಂತೋಷವೆನಿಸುತ್ತಿದೆ ಅಂದೆ.

"ಈ ಸಂತೋಷಕ್ಕೆ ಯಾಕೆ ಅಷ್ಟು ರಗಳೆ ಮಾಡಿದೆ."

'ನಿಮ್ಮ ಜತೆಯ ರಗಳೆಯಿಂದ ಆಗಬಹುದಾದ ಇನ್ನಷ್ಟು ಸಂತೋಷಕ್ಕಾಗಿ.'

ರಮಾ ತಲೆ ತಗ್ಗಿಸಿ ಯಾರು ತನ್ನನ್ನು ನೋಡದಿರಲಿ ಎಂಬಂತೆ ಸುತ್ತಮುತ್ತ ಓರೆಗಣ್ಣು ಹಾಯಿಸಿ ಆತಂಕ ಅಳುಕಿನಿಂದಲೇ ಬಾಗಿಲಾಚೆ ನಡೆಯುವಲ್ಲಿ ನಾನು ಅವರನ್ನು ಅಷ್ಟು ಬೇಗ ಬೀಳ್ಕೊಡಲು ಇಷ್ಟವಿಲ್ಲದವಳಂತೆ 'ರಮಾ' ಎಂದೆ. ತಲೆ ತಗ್ಗಿಸಿಕೊಂಡೇ ಆತಂಕ ಇನ್ನಷ್ಟು ಹೆಚ್ಚಿದವರಂತೆ ನನ್ನತ್ತ ತಿರುಗಿದರು. ಮುಖ ಸಣ್ಣಗೆ ಬೆವರುತ್ತಿತ್ತು.

ನಾನು 'ಈ ಪುರುಷ ಪರಾಕ್ರಮಿಗಳು ಆನೆ, ಹುಲಿ, ಸಿಂಹಗಳನ್ನೆಲ್ಲ ಹೊಡೆದದ್ದು ಸುಳ್ಳು' ಎಂದು ನಕ್ಕೆ.

'ಹಾಗೆಂದರೆ'

'ಏನೂ ಇಲ್ಲ. ನನಗೆ ಇನ್ನೂ ಒಂದು ಸಂಗತಿ ನೆನಪಾಗುತ್ತಿದೆ. ಪ್ರಜೆಗಳ ರಕ್ಷಣಾರ್ಥವಾಗಿ ರಾಜ ಮಹಾರಾಜರು ಅರ್ಧ ರಾತ್ರಿಯ ಹೊತ್ತು ಮಾರುವೇಷ ಹಾಕಿ ಬೀದಿ ಗಸ್ತು ತಿರುಗುತ್ತಿದ್ದರಂತಲ್ಲ. ಅವರ ಆ ಕತ್ತಲ ಸಂಚಾರ ತಮ್ಮ ಶರೀರ ಸಂತೋಷಾರ್ಥವೋ ಇಲ್ಲ ನಿಜವಾಗಿಯೂ ಪ್ರಜೆಗಳ ಹಿತಾರ್ಥವೋ...'

'ಇದೇನು ಚರಿತ್ರೆಯ ಪಾಠ ಶುರುಮಾಡಿದೆಯಲ್ಲ'

'ಏನೂ ಮಾಡುವುದು ಮೇಷ್ಟ್ರುಗಳು ನಮಗೆ ಚಿಕ್ಕಂದಿನಿಂದ ಒಂದೇ ಸಮ ಚರಿತ್ರೆಯನ್ನು ಉರು ಹೊಡೆಸಿದ್ದು ಮರೆಯುವುದೇ ಇಲ್ಲವಲ್ಲ.'

'ಈಗ ನಿನ್ನ ಚರಿತ್ರೆಯ ನೆನಪಿನ ಸಾರಾಂಶವೇನು?'

'ಪುರುಷರು ಅಂದರೆ ನೀರತಡಿಯ ಕಲ್ಲು ಸಂಧಿಯಲ್ಲಿ ತೇಲುವ ನೀರೊಳ್ಳೆ ಹಾವುಗಳು. ಅವು ಸುಮ್ಮನೆ ಬಟ್ಟೆ ಒಗೆಯಲು, ಪಾತ್ರೆ ತೊಳೆಯಲು ಹೋಗುವ ಹೆಂಗಸರ ಕೈ, ಕಾಲಿಗೆ, ನಡುವಿಗೆ ಸುತ್ತಿಕೊಳ್ಳುತ್ತವೆ...'

ರಮಾಕಾಂತ ಕಾರಿನಲ್ಲಿ ಕೂತು ಗಾಜು ಏರಿಸಿದರು. ನಾನು ಅವರತ್ತ ಕೈ ಬೀಸಿದೆ. ನನ್ನ ಕಡೆ ದೃಷ್ಟಿ ಹಾಯಿಸಲೇ ಇಲ್ಲ.

ರಮಾಕಾಂತರಿಗೆ ನಾನಿದ್ದಲ್ಲಿಯ ವಠಾರದ ಕಡೆಗೆ ಬರುವುದು ಇಷ್ಟವೇ ಇರಲಿಲ್ಲ. ಆ ಮುಂದಿನ ಒಂದು ತಿಂಗಳಲ್ಲೇ ಈ ಎಡೂರುಮಂಗಲಕ್ಕೆ ಹೊರಟದ್ದು.

* * * *

ಬೆಂಗಳೂರು ಬಿಡುವಾಗ ಮಗುವಿನೊಂದಿಗೆ ಒಮ್ಮೆ ಚಳ್ಳಕೆರೆಗೆ ಹೋಗಿ ಪಾಲಯ್ಯ ಮೇಷ್ಟ್ರನ್ನು ನೋಡಿ ಬರಬೇಕೆನಿಸಿತು. ಒಂದು ಘಳಿಗೆ ಸಂಕೋಚ, ನಾಚಿಕೆಯಾಯಿತು. ರಮಾಕಾಂತರ ಸ್ನೇಹವಾಗಿ ಮಗು ಹುಟ್ಟಿದ ಮೇಲೆ ನಾನು ಅತ್ತ ಹೋಗಿರಲೇ ಇಲ್ಲ. ಅದಕ್ಕೆ ನನ್ನ ಅಂತರಂಗದ ಅಳುಕೇ ಕಾರಣವಿದ್ದಿತೇನೋ? ಅವರವರ ಜೀವನ ಅವರದೇ ಎನ್ನುವ ಪಾಲಯ್ಯ ಮೇಷ್ಟ್ರು ಕೂಡ ನನ್ನ ಸ್ವಂತ ವಿಚಾರಕ್ಕೆ ಕೈ ಹಾಕಲಿಲ್ಲ.

ಮಗುವಿನೊಂದಿಗೆ ಪಾಲಯ್ಯ ಮೇಷ್ಟ್ರಲ್ಲಿಗೆ ಹೋಗಲು ನನಗೆ ನಿಜವಾಗಿಯೂ ನಾಚಿಕೆ ಸಂಕೋಚವಾಯಿತೇ? ಹಾಗೇನೂ ಇಲ್ಲ, ಅವೆಲ್ಲ ಕಳಚಿಹೋಗಿದ್ದವು. ಅಷ್ಟು ದೂರ ಒಬ್ಬಳೇ ಈ ಮಗುವನ್ನು ತಬ್ಬಿಕೊಂಡು ಪ್ರಯಾಣ ಮಾಡುವುದು ಕಷ್ಟವೆಂಬ ಕುಂಟುನೆಪವನ್ನು ನಾನೇ ಮನಸ್ಸಿಗೆ ತಂದುಕೊಂಡು ಬೆಂಗಳೂರಿಂದ

ಚಳ್ಳಕೆರೆಯ ಪಡುವಲದಿಕ್ಕಿಗೆ ಪ್ರಯಾಣ ಮಾಡುವುದು ಬಿಟ್ಟು ಉದ್ಯೋಗ ಸಿಕ್ಕಿದ ಈ ಮೂಡು ದಿಕ್ಕು ಹಿಡಿದೆ.

ಹೊರಡುವ ದಿನ ಒಂದೆರಡು ಗಂಟೆಯ ಹಿಂದೆ ರಮಾಕಾಂತರಿಗೆ ನೌಕರಿ ಸಿಕ್ಕಿದೆ. ಈ ಜಾಗ ಬಿಡುತ್ತಿದ್ದೇನೆಂದೆ. ಮಾತಿಲ್ಲದೆ ಒಂದು ಘಳಿಗೆ ಸುಮ್ಮನಾದರು. ಏನಾದರೂ ಉತ್ತರ ಉಲಿಯಲೇಬೇಕಲ್ಲ ಎಂಬಂತೆ "ಎಲ್ಲಿಗೆ" ಎಂದರು. ನಾನು ಹೇಳಲಿಲ್ಲ. ಅವರ ಮಾತಿನಲ್ಲಿ ಎಲ್ಲಿಗಾದರೂ ದೂರಕ್ಕೆ ಸಿಕ್ಕಿಬಿಟ್ಟಿದ್ದರೆ ಒಳ್ಳೆಯದೇ ಎಂಬ ಭಾವ ಹುಟ್ಟಿಕೊಂಡಿದ್ದಿರಬಹುದೇನೋ? ಹತ್ತಿರವೇ ಆದರೆ ಬೇಡವಾದದ್ದು ನೆರಳಾಗಿಯೇ ಸುಳಿಯುತ್ತದಲ್ಲ ಎನಿಸಿರಬಹುದು. ನನ್ನ ನೌಕರಿ ಎಲ್ಲಿ ಎಂಬುದರ ಅಗತ್ಯ ನಿಮಗಿದೆಯೇ ಎಂದೆ. ಹಾಗಂದದ್ದೆ ರಮಾಕಾಂತ ಹೇಳಿದ ಅಚ್ಚರಿಯ ಮಾತೆಂದರೆ ನನಗೂ ನಿನ್ನೊಂದಿಗೆ ಈ ಸುಡುಗಾಡು ಬೆಂಗಳೂರು ಬಿಟ್ಟು ಬಂದುಬಿಡಬೇಕು ಎನಿಸುತ್ತಿದೆ, ಆಶ್ಚರ್ಯವೆನಿಸಿ ಅವರು ಆರಂಭಕ್ಕೆ ವಹಿಸಿದ ಮೌನವನ್ನು ನಾನು ಧರಿಸಬೇಕಾಯಿತು. ಹಾಗಿದ್ದರೆ ಬಂದುಬಿಡಿ ಎಂದೆ. ಅವರು ಮಾತಿಲ್ಲವಾದರು. ಸುಮ್ಮನೆ ಹಾಗೆಂದೆ. ನೀವು ನಿಮ್ಮ ಹೆಂಡತಿ ಮಕ್ಕಳನ್ನು ಬಿಟ್ಟು ಬರುವುದು ನನಗೆ ಇಷ್ಟವಿಲ್ಲ ಎಂದೆ.

ಕ್ಷಣ ಹೊತ್ತಿನ ಮೇಲೆ ನನಗೆ ಎಲಾ ಇವರು ಇವತ್ತೊಂದು ದಿನದ ಮಟ್ಟಿಗೆ ನನ್ನೊಂದಿಗೆ ಪಿಕ್‌ನಿಕ್ಕಿಗೆ ಬಂದಂತೆ ಮಾಡಿ ನನ್ನನ್ನು ಉದ್ಯೋಗದ ಊರಿನಲ್ಲಿ ಸಂಸ್ಥಾಪಿಸಿ ಆಮೇಲೆ ಒಂದೊಂದು ದಿನದ ರೆಸಾರ್ಟ್ ಸಂತೋಷಕ್ಕಾಗಿ ಭೇಟಿಕೊಟ್ಟು ಹೋಗಬಹುದೆ; ಎದೆಯ ಮೇಲಿನ ಗಂಡಾಂತರ ಎದುರೇ ಇರುವುದಕ್ಕಿಂತ ದೂರವಿದ್ದರೆ ಕ್ಷೇಮ, ಸುಖ ಎಂಬ ಕ್ಷಿಪ್ರ ಯೋಚನೆಯಲ್ಲಿ ನಿನ್ನೊಟ್ಟಿಗೆ ಬರಬೇಕೆನಿಸುತ್ತಿದೆ ಎಂದಿರಬಹುದೆ?

ಮಾತು ಮುಗಿಸುವ ಯೋಚನೆಯಲ್ಲಿ ನೀವು ನನ್ನ ಮೇಲೆ ಇಟ್ಟಿರುವ ಪ್ರೀತಿಗೆ ಧನ್ಯವಾದಗಳು, ನಾನು ಚಿಕ್ಕಂದಿನಿಂದ ನಿಂತಲ್ಲಿ ನಿಲ್ಲದೆ, ಉಳಿದಲ್ಲಿ ಉಳಿಯದೆ ಅಲೆಮಾರಿಯಂತೆ ಇರುವವಳು. ಈಗಲೂ ಅದೇ. ನಿಮಗೆ ನನ್ನ ಜೀವನಗತಿ ಹೊಂದಲಾರದು. ನೀವು ಈಗ ನನ್ನೊಂದಿಗೆ ಬಸ್‌ಸ್ಟ್ಯಾಂಡಿಗೂ ಬರಲಾಗುವುದಿಲ್ಲ. ಬರಬೇಕು ಅಂತ ಕೂತಕಡೆಯೇ ಹೇಳುತ್ತಿದ್ದೀರಿ ಅಷ್ಟೆ. "ನಿನ್ನೊಡನೆ ಬರಬೇಕು ಅನಿಸುತ್ತಿದೆ" ಎಂಬುದು ಇಷ್ಟು ದಿನದವರೆಗೂ ನೀವಾಡಿದ ಸಂತೋಷದ ನೂರಾರು ಮಾತುಗಳಲ್ಲಿ ಒಂದು ಎಂದಷ್ಟೇ ತಿಳಿಯುತ್ತೇನೆ. ಈ ಐದಾರು ವರ್ಷ ನನ್ನನ್ನು ಸಂತೋಷದ ಅಥವಾ ಭ್ರಮೆಯ ಮಾತುಗಳಲ್ಲಿ ತೇಲಿಸಿದಿರಿ. ಎಲ್ಲ ಹೆಣ್ಣು ಮಕ್ಕಳ ತೇಲಾಟದ, ಮೇಲಾಟದ ಸಮಯ ಇಷ್ಟೇ ಇರಬಹುದೇನೋ? ನಿಮಗೆ ಕೇಳಿಸುವ ನನ್ನ ಕಡೆಯ ಮಾತು 'ನಮಸ್ಕಾರ'.

ಸಂಬಂಧಗಳು ನಿರಾಳವಾಗುವುದು ಕೂಡುವುದರಿಂದಲೋ, ಬಿಡುಗಡೆಯಾಗುವುದರಿಂದಲೋ ಗೊತ್ತಾಗಲಿಲ್ಲ...

* * * *

.... ಸುರೇಂದ್ರ,, ಮಗಳು ನಮ್ಮ ಜಗಳ ನೋಡುವುದು ಬೇಡ, ಬೆಂಗಳೂರಿನ ಸುತ್ತಿನಲ್ಲಿದ್ದರೆ ನಾನು ತರಗತಿಯಲ್ಲಿ ಮಕ್ಕಳಿಗೆ ಮಾಡುವ ಮೂರುಕಾಸಿನ ಪಾಠವೂ ಮರೆತುಹೋಗಬಹುದೇನೋ ಅನಿಸಿತು. ಯಾವುದಾದರೂ ಒಂದು ಅರಣ್ಯ ಭಾಗದ ಸಣ್ಣ ಊರಾದರೂ ಸಾಕು ಅಂತ ಬಂದುಬಿಟ್ಟೆ, ಎಲ್ಲರೂ ದೊಡ್ಡ ಪಟ್ಟಣಗಳ ಕಡೆಗೆ ಉದ್ಯೋಗ ಕೇಳಿದರೆ ನಾನು ಹಳ್ಳಿಯನ್ನು ಕೇಳಿದೆ. ಎಲ್ಲರೂ ಅನ್ನಕ್ಕಾಗಿ ಗುಳೆ ಹೊರಟರೆ ನಾನು ಇದ್ದೊಬ್ಬ ಮಗಳನ್ನು ಕಟ್ಟಿಕೊಂಡು ಆದದ್ದನ್ನೆಲ್ಲ ಮರೆಯಲು ದಕ್ಷಿಣದ ಈ ಶ್ರೀಶೈಲಕ್ಕೆ ವಲಸೆ ಬಂದಿದ್ದೇನೆ.

ಎಲ್ಲಾ ಕಳೆದುಕೊಂಡ ನಾನು ಈ ಅರಣ್ಯ ಸುತ್ತಿನಲ್ಲಿ ಏನು ಗಳಿಸಲು ಬಂದಿದ್ದೇನೆ ಗೊತ್ತಾಗುವುದಿಲ್ಲ. ಈಗ ನನ್ನ ಕಷ್ಟ ಎಂದರೆ ಪ್ರೀತಿಸಿದವನ ನೆನಪಲ್ಲ, ನನ್ನ ತಂದೆ ತಾಯಿಗಳಿಗೆ ನಾನು ಕೊಟ್ಟ ಶಿಕ್ಷೆ, ಯಾವ ಪ್ರಮಾಣದ್ದು ಎಂಬುದು. ಅವರನ್ನು ನೆನೆಯುವುದೇ ಕಷ್ಟವಾಗುತ್ತಿದೆ.

ನಾನು ಬೆಳೆದ ನನ್ನ ಊರಿನ ಬೀದಿಯ ಗುಡಿಸಲ ಕಡೆ ಹೋಗಬೇಕೆನಿಸುತ್ತದೆ. ಆದರೆ ಅವ್ವನ ಮುಂದೆ ನಿಂತರೆ ಏನಾಗಬಹುದು? ಎದೆಯ ಚಿಗುರಿನ ಮೊದಲೇ ಕಂಡವನ ಹಿಂದೆ ಓಡಿಹೋದವಳೇ, ಕಂಡಕಂಡವರಿಗೆ ಸೆರಗು ಹಾಸಿದವಳೇ, ಬೆಂಗಳೂರು ಪಟ್ಟಣ ಸೇರಿ ಎದೆ ಕುಣಿಸಿಕೊಂಡು ಓಡಾಡಿದವಳೇ ಅಂದು ಒಲೆಯೊಳಗಣ ಬೆಂಕಿಕೊಳ್ಳಿ ಎತ್ತಿ ನನ್ನ ತಲೆಯ ಮೇಲಿಡಬಹುದೇ? ಅಥವಾ ನನ್ನ ಅಡಾವುಡಿಯನ್ನೆಲ್ಲ ಮರೆತು ಬಾ ನನ್ನ ಕೂಸೇ ಅಂತ ತಬ್ಬಿಕೊಂಡು ತಲೆ ಸವರಿ ಅಳಬಹುದೆ?

ಅವಳು ತಲೆ ಸವರುವುದೇ ಬೇಡ, ಕರುಳು ಕತ್ತರಿಸಿಬಿಡಬಹುದು. ಅದರ ಬದಲು ಅವ್ವ ನನ್ನ ತಲೆಯ ಮೇಲೆ ಬೆಂಕಿ ಕೊಳ್ಳಿ ಮಡಗಿ ಸುಡುವುದೇ ಇಷ್ಟವಾಗುತ್ತಿದೆ. ಎದೆಯೊಳಗಿನ ಭಾವತುಮುಲವನ್ನೆ ಸುಟ್ಟು ನಾನು ಪರಿಶುಧ್ಧವಾಗಬಹುದು.



ಚಿತ್ರ: ರೂಪ ಹಾಸನ

ಇಷ್ಟೆಲ್ಲ ಆಗಲು ನನ್ನ ಅಪ್ಪ ಅವ್ವ ಕಡೆಗಾಲದಲ್ಲಿ ಬಾಯಿಗೂ ನೀರು ಬಿಡುವವರು ಗತಿಯಿಲ್ಲದೆ ತೀರಿಕೊಂಡಿರಬಹುದೇ? ಅವರು ಇದ್ದಾರೋ ಇಲ್ಲವೋ?

ಪಾಲಯ್ಯ ಮೇಷ್ಟ್ರ ಶರಟು, ಸಿರಿಯಕ್ಕನ ಸೀರೆಯೊಂದನ್ನು ತಂದು ಸೂಟ್‌ಕೇಸಿನಲ್ಲಿರಿಸಿದ್ದೇನೆ, ಅದರೊಂದಿಗೆ ಚಿತ್ತಯ್ಯ ಸಂತೆಯಲ್ಲಿ ಕೊಡಿಸಿದ ಸರವೊಂದಿದೆ. ಬಣ್ಣವೆಲ್ಲ ಎದ್ದುಹೋಗಿದೆ. ಆದರೆ ಭದ್ರವಾಗಿದೆ... ಈ ಎಡೂರು ಮಂಗಲಕ್ಕೆ ಬರುವ ದಿನ ಬಸ್‌ಸ್ಟಾಂಡಿಗೆ ನನ್ನನ್ನು ಬೀಳ್ಕೊಡಲು ಬಂದಿದ್ದವರು ವಠಾರದ ಚಿನ್ನಪಳನಿ, ಅವನ ಹೆಂಡತಿ ಕಣ್ಣಾಸೆಲ್ವಿ.

* * * *

ಸುರೇಂದ್ರ ನಾನು ಮಗು ಹೆತ್ತು ವಠಾರದಲ್ಲಿದ್ದಾಗ ತಾಯಿಯಂತೆ ನನ್ನ ಸಲಹಿದ್ದು ಕಣ್ಣಾಸೆಲ್ವಿಯೇ. ಮದರಾಸಿನಿಂದ ಗಂಡ ಚಿನ್ನಪಳನಿಯೊಂದಿಗೆ ಬಂದವಳು.

... ಬೆಂಗಳೂರಿನಲ್ಲಿ ಓದಿದ ನಂತರ ಹಾಸ್ಟೆಲು ಬಿಟ್ಟ ಮೇಲೆ ನಾನು ವಠಾರವೊಂದರಲ್ಲಿ ವಸತಿ ಹೂಡಿದ್ದೆ ಎಂದೆನಲ್ಲ. ಅಲ್ಲಿ ಎದುರು ಬದುರಿನಂತೆ ಐದೈದು ವಪ್ಪಾರೆಗಳಿದ್ದುವು. ಎಲ್ಲ ಕಲ್ನಾರು ಷೀಟಿನವು. ದಿನ ಬೆಳಗಾದರೆ ಪ್ರಾಯದ ಹುಡುಗರು, ಅಪ್ಪಂದಿರು ಜತೆಗೆ ಹೆಂಗಸರು ಡಬ್ಬಿ ಕಟ್ಟಿಕೊಂಡು ಎತ್ತೆತ್ತಲೋ ಮಾಯವಾಗಿಬಿಡುತ್ತಿದ್ದರು. ಕೆಲವು ಹೆಂಗಸರು ಇನ್ನೂ ನಸುಕಿನ ಮೊದಲೇ ಆಚೆ ನಿಲ್ಲಿಸಿದ್ದ ತರಕಾರಿ ಗಾಡಿ ತಳ್ಳಿಕೊಂಡು ನಡೆಯುತ್ತಿದ್ದರು. ವಠಾರದ ಹೆಂಗಸರೆಲ್ಲ ಒಟ್ಟು ಸೇರುತ್ತಿದ್ದ ಜಾಗವೆಂದರೆ ಎರಡು ಸಾಲಿನ ಕಡೆಯಲ್ಲಿ ಇದ್ದ ನಲ್ಲಿಯ ಮುಂದೆ. ನನಗೆ ನೀರು ಜಾಸ್ತಿ ಬೇಕಿರಲಿಲ್ಲ. ಎರಡು ಕೊಡ ಸ್ನಾನಕ್ಕೆ. ಅನ್ನ ಬೇಯಿಸುವುದಕ್ಕೆ, ಕುಡಿಯುವುದಕ್ಕೆ ಮತ್ತೆರಡು ಕೊಡ.

ಎಲ್ಲೆಲ್ಲಿಂದಲೋ ವಲಸೆ ಬಂದ ಹೆಂಗಸರೆಲ್ಲ ತಮಿಳು, ತೆಲುಗು ಮಾತಾಡಿದರೆ ಎಲ್ಲರಿಗೂ ಅರ್ಥವಾಗುತ್ತಿತ್ತು. ನೆಟ್ಟಗೆ ನಿಂತರೆ ತಲೆ ತಾಗುವ ಚಳ್ಳಕೆರೆಯ ಸೀಮೆಯ ಗುಡಿಸಲಿಂದ ಬಂದವಳಾದ್ದರಿಂದ ಆ ವಪ್ಪಾರೆಯೇ ನನಗೆ ಎಂದೂ ಕಾಣದ ಸಿರಿಯಾಗಿದ್ದಿತು. ಒಂದಂಕಣದ ಜಾಗದಲ್ಲಿ ಬಲಬದಿಗೆ ನಡುವಿನೆತ್ತರ ಗೋಡೆ, ಎಡಕ್ಕೆ ಅರ್ಧ ಅಂಕಣದಲ್ಲಿ ಒಂದು ಮಂಚ ತಂದು ಹಾಕಿದ್ದೆ. ನನ್ನ ವಪ್ಪಾರೆಯಲ್ಲಿ ಅಪೂರ್ವಿ, ನಾನು ಇಬ್ಬರೆ. ಆದರೆ ಉಳಿದೆಡೆಗಳಲ್ಲಿ ನಾಲ್ಕು, ಐದು ಇಲ್ಲವೇ ಆರು ಮಂದಿ. ಮುದುಕರಾದರೆ ವಪ್ಪಾರೆ ಚಾಚಿರುವ ಷೀಟಿನಡಿ ಹಗ್ಗದ ಮಂಚದಲ್ಲಿ ಬಿದ್ದಿರುತ್ತಿದ್ದರು. ಅದರ ಕೆಳಗೆ ರಾತ್ರಿಯ ಹೊತ್ತು ಮುದುಕಿಯರು ಚಾಪೆ, ದಿಂಬು ಹಾಸಿ ಪವಡಿಸುತ್ತಿದ್ದರು. ಮೂರ್‍ನಾಲ್ಕು ವರ್ಷದ ಮಕ್ಕಳಿದ್ದರೆ ಅವು ಅಜ್ಜಿಯರ ಕೈಸಂದಿಯಲ್ಲೇ ನಿದ್ದೆಗೆ ಸಲ್ಲುತ್ತಿದ್ದವು.

ನನ್ನ ಎಡಬದಿಯ ವಪ್ಪಾರೆಯ ಕಣ್ಣಾಸೆಲ್ವಿ ನಲ್ಲಿ ಕೆಳಗೆ ಕೊಡ ಇಟ್ಟು ಅಲ್ಲೇ ನಾನು, ಅವಳೂ ಕೂತು ತೂಕಡಿಸಿರುವಲ್ಲಿ, ಒಮ್ಮೆ ಕಿವಿಯಲ್ಲಿ ಮೆಲ್ಲನೆ "ಚಿನ್ನವೀಡಾ..." ಎಂದಳು. ಪ್ರಶ್ನೆ ಕೇಳುವಲ್ಲಿ ಕಣ್ಣರಳಿಸಿ ಮೈಯೆಲ್ಲ ಬೆಚ್ಚಗೆ ಮಾಡಿಕೊಂಡು ಕೇಳಿದ್ದಳು. ಅರೆ ನಿದ್ದೆಯಲ್ಲಿದ್ದ ನಾನೂ ಬೆಚ್ಚಿದಂತೆ ಕಣ್ಣು ಬಿಟ್ಟು ಅವಳತ್ತ ನೋಡಿದೆ. ಅವಳ ಭಾಷೆ ತಮಿಳುಗನ್ನಡವಾಗಿತ್ತು. ನಾನು ಕನ್ನಡದಲ್ಲೇ ಮಾತಾಡುತ್ತಿದ್ದೆ. ಅವಳಿಗೆ ಕನ್ನಡ ಚೆನ್ನಾಗಿಯೇ ಅರ್ಥವಾಗುತ್ತಿತ್ತು. ಅವಳ ಪ್ರಶ್ನೆಗೆ ಏನು ಹೇಳಬೇಕೋ ಗೊತ್ತಾಗದೆ ಒಂದು ಘಳಿಗೆ ಸುಮ್ಮನಾದೆ.

ಕಣ್ಣಾಸೆಲ್ವಿ ಇನ್ನಷ್ಟು ಸಲುಗೆಯಿಂದ "ರಂಡಾವುದಾ..." ಅಂದಳು. ಇದಕ್ಕೂ ನಾನು ಉಸಿರೆತ್ತದಂತಿರಲು ಅವಳು ನನ್ನನ್ನು ಮೆಚ್ಚುವ ಧಾಟಿಯಲ್ಲಿ ತನ್ನ ಕಥೆಯನ್ನು ಅಷ್ಟಿಷ್ಟು ಹೇಳತೊಡಗಿದಳು. ನಲ್ಲಿಯ ನೀರು ಒಂದೊಂದು ದಿನ ಒಂದೊಂದು ಟೈಮಿಗೆ ಬರುತ್ತಿತ್ತು. ಅದರ ಸೂಚನೆಯಂತೆ ನಲ್ಲಿಯಲ್ಲಿ ಹೋಗುವ ಬರುವ ಉಸಿರಾಟದಂತೆ ಆಗಲೋ, ಈಗಲೋ, ಯಾವಾಗಲೋ ಎಂಬಂತೆ ತೊಟ್ಟಿಡುತ್ತಿತ್ತು. ಆ ಸಮಯಕ್ಕಾಗಿ ಕಣ್ಣು ಬಿಟ್ಟು, ಸಮಯ ಕೊಟ್ಟು ನೋಡುತ್ತಲೇ ಇರಬೇಕಿದ್ದಿತು.

ಕಣ್ಣಾಸೆಲ್ವಿ ಮಾತಿಗೆ ಶುರು ಮಾಡಿದಳು. "ಚಿತ್ರಾ, ನಿಂದೇ ನಲ್ಲ ಸಂಸಾರಂ. ನಿನ್ನ ಇಲ್ಲಿ ಇರಿಸಿದವರು ನೋಡು ಯಾವಾಗಲೋ ವರುವಾ. ಯಾವಾಗಲೋ ಪೋವಾ. ಒಂದು ಕೊಂಚಮೂ ಗಲಾಟವಿಲ್ಲಾ. ಅದು ನೋಡಿದರೆ ನನ್ನ ಗಂಡನೂ ತಿಂಗಳಿಕೊಂದು ದಿನ ಬಂದಿದ್ದರೆ ಚಂದವಿತ್ತು. ನಿನಕ್ಕೇ ಗೊತ್ತಲ್ಲ. ದಿನಾ ಕುಡಿದು ವರುವಾ, ನನಕ್ಕಂತೂ ಗಂಟಲ ಗಾಣಂ. ಕಾಸೇ ಕುಡುಮಾಟ್ಟಾ, ವಾರಾ ವಾರಾ ಒಂದು ವಾಟಿ, ರಂಡು ವಾಟಿ ನೂರ್ರುವಾಯಿ, ಇನ್ನೂರ್ರುವಾಯಿ ಕೊಟ್ಟರೆ ಅದೇ ರೊಂಬ ಜಾಸ್ತಿ. ಅವನು ದಿನಾ ಕುಡಿದು ಬರುವುದಕ್ಕೂ, ಕಾಸು ಕೊಡದಿದ್ದಕ್ಕೂ ನನಗೋ ಅವನ ಹೊಡೆದೂ ಹೊಡೆದೂ ಸಾಕಾಗಿ ಬಿಟ್ಟದೆ. ನೀನೇ ನೋಡಿದ್ದೀಯಲ್ಲಾ" ಅಂದಳು.

ಕಣ್ಣಾಸೆಲ್ವಿಯ ಗಂಡ ಚಿನ್ನಪಳನಿಯು ಕುಡಿದು ರಾತ್ರಿ ಹನ್ನೊಂದರ ಮೇಲೆ ಒಂದೊಂದೇ ಹೆಜ್ಜೆಯ ಮೇಲೆ ಸದ್ದಿಲ್ಲದೆ ಸಿನಿಮಾ ಪದ ಗೊಣಗಿಕೊಂಡು ಬರುತ್ತಿದ್ದುದು ನಿಜ. ಸೆಲ್ವಿ ಬಾಗಿಲು ಮುಂದು ಮಾಡಿ, ಒಳ ಬಂದವನ ಕತ್ತುಪಟ್ಟಿ ಹಿಡಿದು ಎದೆ, ಬೆನ್ನಿಗೆಲ್ಲ ಗುದ್ದಿ ಬೀಳಿಸುತ್ತಿದ್ದಳು. "ಅದ್ಯೆ ಪಿಚ್ಚೆಕ್ಕಾರ, ಪೈತ್ಯಕ್ಕಾರ ಪ್ಯೆಯ್ಯಲೇ ಯೇ ಲೇಟಾ ವಂದೆ. ಎಂಗೆ ಸಾಗ ಪೋಯಿರಿಂದೆ, ಸೊಲ್ಲು, ಒಕ್ಕಳವೋಳಿ" ಎಂದು ಸುಮಾರು ಹತ್ತು ಹದಿನೈದು ನಿಮಿಷವಾದರೂ ಸರಿ ಇಲ್ಲಾ ಅವಳ ಕೈಯೇ ಸೋತುಹೋಗುವ ವರೆಗೆ ಏಟಿನ ಮೇಲೆ ಏಟು ಹಾಕಿ ಬಡಿದು ಕೆಡವುತ್ತಿದ್ದಳು.

ಆರಾಮದಿಂದಲೆಂಬಂತೆ ಏಟು ತಿಂದ ಪಳನಿ ಮತ್ತೆ ಏಳಲಾರದವನಾಗಿ, ಕಣ್ಣು ಬಿಡಲಾರದವನಾಗಿ ಅಲ್ಲೇ ನಿದ್ದೆಗೆ ಸಲ್ಲುತ್ತಿದ್ದ. ನಾನು ಅವಳ ವಪ್ಪಾರೆಯ ಬಾಗಿಲ ಬಳಿ ನಿಂತು ಸೆಲ್ವೀ ಸಾಕು ಸುಮ್ಮನಿರು ಅಂದರೆ "ನೀ ಚುಮ್ಮಾ ಇರಕ್ಕ, ಇವನೆ ಇವತ್ತು ದೇವರ ಪಾದ ಸೇರಿಸುತ್ತೀನಿ" ಅಂದು, ನಾನು ನೋಡಲೆಂದೇ ಇನ್ನೆರಡು ಸರ್ತಿ ಒದೆಯುತ್ತಿದ್ದಳು. ಆದರೆ ಭಾರಿ ಬಲಾಢ್ಯನಾಗಿದ್ದ ವಡಪಳನಿಗೆ ಸೆಲ್ವಿಯ ಏಟು ಕುಡಿದ ಮತ್ತಿನಲ್ಲಿ ಹೂವಿನ ಸ್ಪರ್ಶದಂತೆ ತೋರುವಂತಿತ್ತು.

ಎಷ್ಟೋ ಹೊತ್ತಾಗಿ, ಪಳನಿ ಕೊಂಚ ನಿಶೆ ಇಳಿದ ಮೇಲೆ ಸಾವಧಾನವಾಗಿ ಎದ್ದು ನಡೆದದ್ದು ಏನು ಎಂಬುದು ಗೊತ್ತೇ ಆಗದವನಂತೆ ಕೂತು "ಎನ್ನಾ ಸೆಲ್ವಿ ಸೋರು, ಸಾಂಬಾರು ಎದಾವುದು ಇರಕ್ಕಾ" ಎಂದು ಬೇಡುತ್ತಿದ್ದ. "ಇದಾ ಪುಡಿ ಸೋರು ಸಾಂಬಾರು ತಿಂಗಿಟ್ಟು ಕಾಲೆಯಿಲೆ ಸತ್ತುಪೋ" ಎಂದು ತಟ್ಟೆ ತುಂಬ ಅನ್ನ ಸಾಂಬಾರು ಹದವಾಗಿ ಕಲೆಸಿ ಬಾಯಿಗಿಡುತ್ತಿದ್ದಳು. ಆಗಲಾದರೋ ವಡಪಳನಿ ತೇಲುಗಣ್ಣು, ಮಾಲುಗಣ್ಣಿನಲ್ಲಿ ಸ್ವರ್ಗದಿಂದ ಮರ್ತ್ಯಕ್ಕೂ, ಮರ್ತ್ಯದಿಂದ ಸ್ವರ್ಗಕ್ಕೂ ಸಾವಧಾನದಲ್ಲಿ ಚಲಿಸುತ್ತ ವಿಹರಿಸುವಂತಿರುತ್ತಿದ್ದ. ಅತ್ತ ಮಲಗಿದ್ದ ಮಕ್ಕಳನ್ನು ದಿಟ್ಟಿಸಿನೋಡಿ ಸ್ವರ್ಗದಿಂದ ತನ್ನ ವಪ್ಪಾರೆಗೆ ಇಳಿದವನಂತೆ "ಪಿಳ್ಳೆ ತೂಂಗುದಾ" ಎಂದು ಕೇಳುತ್ತ ಅವುಗಳ ತಲೆಯನ್ನೂ ಹಾಗೆಯೇ ಸೆಲ್ವಿಯ ಬೆನ್ನನ್ನೂ ಸವರುತ್ತಿದ್ದ. ಸೆಲ್ವಿ ನಾಚಿಕೆ ಬಿದ್ದವಳಂತೆ ನನ್ನ ಕಡೆ ತಿರುಗಿ ನೋಡಿ ತಂಗಚ್ಚಿ ಇವನು ರೊಂಬ ಒಳ್ಳೆಯವನು ಅನ್ನುತ್ತಿದ್ದಳು.

* * * *

ನಾನು ಈ ಎಡೂರು ಮಂಗಲಕ್ಕೆ ಬರುವ ಹಿಂದಿನ ದಿನ ಬೆಳಿಗ್ಗೆ ನಲ್ಲಿಯ ಮುಂದೆ ನೀರು ಹಿಡಿಯುವಾಗ 'ಕಣ್ಣಾ ರಾತ್ರಿ ನೀನು ಸ್ವಲ್ಪ ಮನೆಗೆ ಬಾ' ಎಂದೆ. ಅವಳು ಕೊಂಚ ಮಾತಿನವಳಲ್ಲಾ; ಅದರಿಂದ ಸುಮ್ಮನಿರಲಾರದೆ "ಎನ್ನ ಸಂತೋಷ ವಾರ್ತೆಯಾ, ರಂಡಾವುದಾ" ಎಂದಳು. ಅವಳು ಪರಿಚಯವಾದಾಗ ಕೇಳಿದ "ರಂಡಾವುದಾ" ಅಂದದ್ದಕ್ಕೂ ಈಗ ಕೇಳುತ್ತಿರುವ "ರಂಡಾವುದಾ ಪದಕ್ಕೂ ಅರ್ಥ ವ್ಯತ್ಯಾಸವಿದ್ದಿತು. ತಿರುಗಿ ಸುಮ್ಮನಿರಲಾರದೆ ನನ್ನ ಹೊಟ್ಟೆಯ ಕಡೆ ದೃಷ್ಟಿಸುತ್ತ "ಈ ಸರ್ತಿಯೂ ನಾನೇ ನಿನ್ನ ಜತೆಗಿರುತ್ತೇನೆ" ಅಂದಳು. ಆಮೇಲೆ ರಂಡೇ ಸಾಕು. ಆಪ್ರೇಸನ್ ಪಣ್ಣ ಸೊಲ್ಲುವೆ. ನಮ್ಮಂಥಾ ಏಳೈಕ್ಕೆಲ್ಲಾ ಪಿಳ್ಳೆ ರೊಂಬ ವೇಂಡಾ. ಆಪ್ರೇಸನ್ ಪಣ್ಣ ಖರ್ಚಿನಿಲ್ಲ. ನಮಗೇ ದುಡ್ಡು ಕೊಟ್ಟು ಕಳಿಸುವರೆಂದಳು. ನಾನು 'ಲೇ ಕಣ್ಣಾ ನೀನು ಏನೇನೋ ಮಾತಾಡಬೇಡ. ರಾತ್ರಿ ನಿನ್ನ ಗಂಡ ಬರುವ ಮೊದಲೇ ಬಾ.' ಅಂದರೆ ತಿರುಗಿ ಅವಳು ಹೇಳಿದ್ದೇ ನಿಜವಿರಬೇಕೆಂದು "ಅಪ್ಪಡಿಯಾ ಖಂಡಿಪ್ಪಾ ವರುವೇ, ಜಾಸ್ತಿ ಸೋರು, ಸಾಂಬಾರು ಪಣ್ಣಿ ನಿಂಗೂ ಕೊಂಡು ವರುವೆ" ಎಂದಳು.

ನಾನು ರಮಾಕಾಂತರಿಗೆ ಕಡೆಯದಾಗಿ ಫೋನು ಮಾಡಿ ನಮಸ್ಕಾರ ಹೇಳಿದ್ದು ಆ ಹೊತ್ತು ಬೆಳಿಗ್ಗೆಯೇ ಕಣ್ಣಾ ರಾತ್ರಿ ಬರುವಲ್ಲಿ ಬಿಮ್ಮಗೆ ಅಪೂರ್ವಿಯನ್ನು ತಬ್ಬಿಕೊಂಡು ಕೂತಿದ್ದ ನನ್ನ ದುಗುಡದ ಮುಖ ರವಷ್ಟು ಸಡಿಲವಾದದ್ದು ಸೆಲ್ವಿ ಬಾಗಿಲು ದೂಡಿಕೊಂಡು ಬಂದಾಗಲೇ.

"ಎನ್ನ ತಂಗಚ್ಚಿ ವುಡಂಬುಕ್ಕು ನಲ್ಲ ಇಲ್ಲೆಯಾ" ಅಂದಳು.

'ಅಂಥದೇನೂ ಇಲ್ಲ. ನಾಳೆ ಈ ಊರು ಬಿಡುತ್ತಿರುವೆ'

"ಎಂಗ ಪೋರೆ"

'ನನಗೆ ಕೆಲಸ ಸಿಕ್ಕಿದೆ'

"ಎಂದ ವೇಲೆ?"

'ಜೂನಿಯರ್ ಕಾಲೇಜು ಮೇಷ್ಟ್ರ ಕೆಲಸ'

"ಓ ವಾದ್ಯಾರ ವೇಲೆಯಾ. ರೊಂಬ ಸಂತೋಸಮ್ ತಂಗಚ್ಚಿ. ಅಡಿ ಅಮ್ಮಾಡಿ ಅವುಳವು ಪಡಿಚ್ಚಿರಿಕ್ಕೆ ಅಂತ ನನಕ್ಕು ಇವಳವು ನಾಳಾ ಸೊಲ್ಲವೇ ಇಲ್ಲೆ. ನೀ ಸರಿಯಾನ ಪೊಣ್ಣು. ಎನ್ನ ಸರಿಯಾ ಯಾಮಾತ್ತಿಟ್ಟೆ, ಅದು ಸರಿ. ಅದಕ್ಕು ನೀ ಏ ಇವಳವು ವರುತ್ತಂ ಪಡರೆ. ಸಂತೋಸಮಾ ಪೋಯಿ ವೇಲೆ ಪಣ್ಣುರುದು ತಾನೇ..."

'ನಿಜ ನೀನು ಹೇಳುವಂತೆ ಸಂತೋಷಪಡಬೇಕಾದದ್ದೇ'

ಕಣ್ಣಾಸೆಲ್ವಿ ಯಾವ ಊರಿಗೆ ಎಂದು ಕೇಳಿದ ಪ್ರಶ್ನೆಗೆ ಮಲೆಯ ಮಾದೇಶ್ವರನ ಬೆಟ್ಟ ಇದೆಯಲ್ಲ ಅದರಿಂದ ಈ ಕಡೆಗೆ ಎಡೂರು ಮಂಗಲ ಅಂತಿದೆಯಲ್ಲ. ಆ ಊರಲ್ಲಿ ಮೇಷ್ಟ್ರು ಕೆಲಸ. ಕಣ್ಣಾಸೆಲ್ವಿಗೆ ಇನ್ನೂ ಸಂತೋಷವೆನಿಸಿ ಆ ಊರು ಅಂಥಾ ದೂರದ್ದೇನೂ ಅಲ್ಲವೆಂಬಂತೆ "ಅರೆ ತಂಗಚ್ಚಿ ಅಂದ ಊರಾ, ನನಕ್ಕು ಗೊತ್ತು" ಅಂದಳು.

'ನೀನು ಯಾವಾಗ ಆ ಊರು ನೋಡಿದ್ದೆ. ನಾನು ಹೋಗುತ್ತಿರುವುದು ಇದೇ ಮೊದಲು'

"ಅಯ್ಯೋ ನಮ್ಮ ವೀಡು ದೈವಂ ಮಲ್ಯೆ ಮಹದೇಸ್ವರ. ನಾನು ಅಪ್ಪನೂ, ಅಮ್ಮನೂ ವರ್ಷ ವರ್ಷಂ ಅಂದ ಸ್ವಾಮಿ ಕೋಯಿಲುಕ್ಕು ಪೋಯಿ ಜಾತ್ರೆಯಿಲೆ ರೊಂಬ ಸಂತೋಷಮಾ ಕುಣಿದು ಬರುತ್ತಿದ್ದೆ"

'ಎಲ್ಲ ಊರು ನಿನ್ನದೇ ಅನ್ನು'

"ಪಿನ್ನೆನ್ನ ತಂಗಚ್ಚಿ, ನಮ್ಮ ಮಾದರಿ ವೀಡಾಡಿಯರ್ಕೆಲ್ಲಾ ಇದ್ದ ಊರೆಲ್ಲ ನಂಬಳದೆ. ಕಾಲು ಎಲ್ಲಿವರಕ್ಕೆ ಗಟ್ಟಿ ಇರುಕ್ಕದೋ ಅದುವರೆ ತಿರುಗುವುದು. ಕೈ ಗಟ್ಟಿ ಇರುವರೆಕ್ಕೂ ವೇಲೆ ಪಣ್ರುದು. ಸೋರು ಸಾಂಬಾರು ಪಾಕ್ಕಿರದು. ನಂಬ ಪಿಳ್ಳೆಗಳುಕ್ಕೂ ನಮ್ಮಂತೆ ಆಗುವುದು ವ್ಯಾಂಡ. ಒಂದು ವೇಲೆ, ಒಂದು ವೀಡು ಅಂತ ಆದರೆ ಪೋದುಂ. ಏನು ಮಾಡದು. ಸ್ಕೂಲೇ ಮೂಡಿ ಪೋಯಿರಕ್ಕಲ್ಲ ವೇರೆ ಸ್ಕೂಲು ಸೇರಿನಾ ಕಾಸು ಇಲ್ಲೆ"

ನಾನು ಒಂದು ನಿಮಿಷ ಸುಮ್ಮನಿದ್ದೆ.

ಅವಳು "ತಂಗಚ್ಚಿ ಒಂದು ಕೆಲಸ. ನೀನು ಹೆಂಗೂ ವೇಲೆಕ್ಕಿ ಸೇರುತ್ತಾ ಇದ್ದಿಯಲ್ಲ ನನಗೆಲ್ಲಾದರೂ ಈ ವೀಡು ಬಿಡಬೇಕಾಗಿ ಬಂದರೆ, ಮಕ್ಕಳಿಗೆ ಶಾಲೆ ಸೇರಿಸುವಪ್ಪೋದು ಕಾಸಿನ ಸಗಾಯ ಪಣ್ಣುವೆಯಾ? ನಾನು ನನ್ನ ಹುಡುಗನ ಕೈಲಿ ನಿನಗೆ ಒಂದು ಕಾರ್ಡು ಬರೆದು ಪೋಸ್ಟು ಪಣ್ಣಿಸುವೆ"

ನಾನು 'ಇಲ್ಲ' ಎನ್ನುವಲ್ಲಿ ಕಣ್ಣಾ ಮುಖ ಸಣ್ಣದು ಮಾಡಿಕೊಂಡಳು. "ಹೋಗಲಿ ವಿಡು. ನಿನ್ನ ಕಷ್ಟ ಎಷ್ಟಿರುತ್ತದೋ. ಬೆಳಗ್ಗೆ ಹೇಳಿದ್ದೆನಲ್ಲ. ಸೋರು ಸಾಂಬಾರು ಜಾಸ್ತಿ ಮಾಡಿದೆ ಅಂತ. ಪೋಗಿ ತರ್ರೆ, ಸಂತೋಷಮಾ ಸಾಪ್ಪಡುವೆಯಾ" ಎಂದಳು.

'ಆಯಿತು ಕೊಂಡು ಬಾ'

ಸೆಲ್ವಿ ಹೋಗಿ ಒಂದು ಡಬರಿ ಅನ್ನ, ಇನ್ನೊಂದು ಕಿರುತಪ್ಪಲೆ ಸಾರು ತಂದಳು. ನಾನು ಅವಳು ಆಗಲೇ ಆಡಿದ ಮಾತು ಹಿಡಿದು 'ಸೆಲ್ವಿ ನೀನು ಕಾರ್ಡು ಬರೆಸಿಬಿಟ್ಟರೆ ಆಯಿತಾ' ಅಂದೆ.

"ಪಿನ್ನೆನ್ನ ತಂಗಚ್ಚಿ"

'ಅದರಲ್ಲಿ ನೀನು ಎಲ್ಲಿ ಹೋಗಿ ಮನೆ, ಸ್ಕೂಲು ಮಾಡುತ್ತೀಯಾ ಅಂತ ಸರಿಯಾಗಿ ಅಡ್ರೆಸ್ ಬರೆಸಬೇಕು ನೋಡು. ಆಗ ನಾನು ನಿನಗೆ ದುಡ್ಡು ಎಂ.ಓ.

ಕಿಟಕಿಯ ಆಚೆ ಗಂಡ ಹೆಂಡತಿ ನಿಂತಿದ್ದರು. ನಾನು ಮೆಲ್ಲಗೆ ಸೆಲ್ವಿಗೆ 'ಕಣ್ಣಾ ನೀನು ಪಳನಿಗೆ ಹೊಡೆಯುವಾಗೆಲ್ಲ ನಾನು ಬಂದು ಬಿಡಿಸುತ್ತಿದ್ದೆ. ಈಗ ನಾನಿಲ್ಲ. ನೀನು ಗಂಡನಿಗೆ ಹೊಡೆಯುವುದಿಲ್ಲ ಅಂತ ಹೇಳು' ಅಂದೆ. ಅದಕ್ಕೆ ಚಿನ್ನಪಳನಿ "ಯೇ ವಿಡು ತಂಗಚ್ಚಿ. ಇವಳು ಎನ್ನೆ ಅಡಿಚ್ಚಾ ಅದು ಯಾವ ಮಹಾ. ದಿನಾವು ಯಾರ‍್ಯಾರಿಂದಲೋ ಯಾರ ಕೈಯ್ಯಲ್ಲೋ ಹೊಡೆಸಿಕೊಂಡು ನಾನೂ ಹೊಡೆದು ಬರುವವನು. ಎಲೆಕ್ಷನ್ ಟೈಮು ವಂದಾ ನಾನು ಚೂರಿ ಏಟು ತಪ್ಪಿಸಿಕೊಂಡು ವೀಡು ಸೇರಿನಾ ಅದೇ ಅದೃಷ್ಟಂ. ಇವಳದು ಯಾವ ಮಹಾ ಅಡಿ. ಏಟು ತಿಂದು ಬರುವ ನನಗೆ ಇವಳು ಅಡಿಕ್ಕಿರದು ಮೈ ಕೈ ಒತ್ತಿದಂತೆ" ಎಂದು ನಕ್ಕ. ಕತ್ತಿನ ಸಂದು, ಭುಜ, ಕೈ ಕಾಲಿಗೆಲ್ಲ ಬಿದ್ದ ಚೂರಿ, ಬ್ಲೇಡಿನ ಏಟೆಲ್ಲಾ ಮಾಯವಾಗಿದ್ದುದರ ಗುರುತು ತೋರಿಸಿದ. ಅದರ ನೋವು, ಯಾತನೆಯು ಪಳನಿಯ ವಿಷಾದ ತುಂಬಿದ ಅನಾಥ ಮುಖದಲ್ಲಿ ರಕ್ತವರ್ಣದ ಕೆನೆಯಾಗಿ ಕಾಣಿಸುತ್ತಿತ್ತು

ಕಳಿಸಬಹುದು. ಇಲ್ಲಾ ನಾನೇ ದುಡ್ಡು ತೆಗೆದುಕೊಂಡು ನೀನಿರುವಲ್ಲಿಗೆ ಬರಬಹುದು'

ಸೆಲ್ವಿ ಕೂತಿದ್ದ ನನ್ನ ಕಾಲು ಮುಟ್ಟಿಬಿಟ್ಟಳು.

'ನೀನು ಯಾಕೆ ಹೀಗೆ ಮಾಡಿದೆ' ಎಂದರೆ ಅವಳು "ತಂಗಚ್ಚಿ ನಾನು ಆಗಲೇ ಹೇಳಿದೆನಲ್ಲ. ನಾವು ನಾಟ್ಟು ಅಲೆಯುವ ಅಲೆಮಾರಿಗಳು. ವಿದ್ಯೆಯಿಲ್ಲ, ಬುದ್ಧಿಯಿಲ್ಲ. ನೀನೇ ಅನ್ನುವ ಜನವಿಲ್ಲ. ನಮುಕ್ಕು ನಮ್ಮ ಕೈ ಕಾಲೇ ಗಟ್ಟಿ. ಪಾದಮೇ ಪವಿತ್ರಮ್. ನಾನು ಚಿಕ್ಕವಳಿದ್ದಾಗ ನಾಮಕ್ಕಲ್ಲ ಗುಡ್ಡದ ಮೇಲೇ ಒಂದು ಜಾಗಕ್ಕೆ ಅಪ್ಪ ಕರೆದುಕೊಂಡು ಹೋಗುತ್ತಿದ್ದ. ಅಲ್ಲಿ ಗುಡಿಯೂ ಇಲ್ಲ, ಗುಂಡಾರವೂ ಇಲ್ಲ. ಬರಿಯ ಎರಡು ಪಾದಗಳಿದ್ದುವಷ್ಟೆ ಅಪ್ಪ ಹೇಳುತ್ತಿದ್ದುದೆಂದರೆ ಇವರು ಯಾರೋ ನಮ್ಮಂಥ ಅಲೆಮಾರಿ ಸಂತರ ಪಾದ ಅಂತ. ನಾವು ಅದಕ್ಕೆ ಗಂಧದ ಕಡ್ಡಿ ಹಚ್ಚಿ ಕೈ ಮುಟ್ಟಿ ನಮಸ್ಕಾರ ಮಾಡಿಬರುತ್ತಿದ್ದವು. ಆಗ ಅಪ್ಪ ಹೇಳುತ್ತಿದ್ದುದು ನಮಗೆ ಈ ಸಂತರ ಥರ ಕಾಲೇ ಗತಿ ಒಡಂಬು ಹೊತ್ತು ತಿರುಗುವ ಕಾಲೇ ದೈವಂ ಎನ್ನುತ್ತಿದ್ದ..." ಎಂದಳು. ಅರೇ ಈ ಸೆಲ್ವಿ ನಮ್ಮಂಥಾ ಲಕ್ಷಾಂತರ ಜನದ ನಿತ್ಯ ಪ್ರಯಾಣದ ಕಥೆಯನ್ನೇ ಹೇಳುತ್ತಿದ್ದಾಳಲ್ಲ ಅನ್ನಿಸಿ ಅವಳು ತಂದಿದ್ದ ಅನ್ನ ಸಾಂಬಾರನ್ನು ಅವಳೂ ಮಕ್ಕಳೂ ಸೇರಿ ತಿಂದೆವು. ಹಾಗೆ ಊಟ ಮಾಡುವಾಗ ಕಣ್ಣಾ ಹೇಳಿದ ಕಷ್ಟದ ಸಂಗತಿ ಎಂದರೆ ಗಂಡನದು.

"ನನ್ನ ಪುರುಷ ದಿನಾ ಹೊರಗೆ ಹೋಗಿ ವಾಪಸುಬರುವ ವರೆಗೆ ನನಗೆ ಉಸಿರೇ ಸರಿಯಾಗಿ ಆಡುವುದಿಲ್ಲ. ಅವನು ಎಂಗೆಂಗೆ ಹೋಗಿ ಬರುತ್ತಾನೆ ಅಂತ ಹೇಳುವುದಿಲ್ಲ. ಅವನಿಗೇ ತೆರಿಯಾದು. ಅವನ ಉದ್ಯೋಗ ಏನು ಅಂತ ನನಗೇ ಗೊತ್ತಿಲ್ಲ. ಯಾರೊಂದಿಗೊ ಜಗಳವಾಡಿ ಕುಡಿದು ಬರುತ್ತಾನಲ್ಲ, ಹೊತ್ತಿಗೆ ಬರುವುದಿಲ್ಲವಲ್ಲ ಅಂತ ಸಿಟ್ಟು ಮಾಡಿ ಹೊಡೆಯುತ್ತೇನೆ. ನಾನು ತರಕಾರಿ ಮಾರುತ್ತೇನೆ. ನೀನು ವೀಟಿಲೆ ಕೂರು ಅಂದರೆ ನನ್ನಂಥಾ ಆಳು ಸುಮ್ಮಾ ಇರುಕ್ಕುರದಾ ಅನ್ನುತ್ತಾನೆ. ನನ್ನ ಮಾತು ಕೇಳುವವನಾ ಅವನು. ಗಂಡಾಗಿ ಬೆಳಗೆದ್ದು ಹೋಗಿ ರಾತ್ರಿ ಬಡಕಲು ನಾಯಂತೆ ತೂರಾಡಿ ಬರುವಾ. ಇವನನ್ನ ಎಷ್ಟು ದಿನಾ ಅಂತ ನಂಬಲಿ, ಪಿಳ್ಳೆಗಳ ಗತಿ ಎನ್ನಾ?"

ಅವಳು ಸಮುದ್ರದಲ್ಲಿ ಒಬ್ಬಳೇ ಪ್ರಯಾಣ ಮಾಡುವವಳಂತೆ ಕಾಣುತ್ತಿದ್ದಳು. ಎದೆಯಲ್ಲಿ ಯಾವಾಗಲೂ ತುಂಬಿರುತ್ತಿದ್ದ ಅವಳ ಧೈರ್ಯ ನಿಜವಾದದ್ದಲ್ಲ ಅನ್ನಿಸಿತು.

* * * *

ಮರುದಿನ ಚಿನ್ನ ಪಳನಿ ನನ್ನ ವಪ್ಪಾರೆಯ ಸಾಮಾನನ್ನೆಲ್ಲ ಒಂದೇ ಮೂಟೆಯಲ್ಲಿ ಕಟ್ಟಿ ಹೊತ್ತುಕೊಂಡು "ನೀವು ಮೂವರು ಬಸ್ಸಿನಲ್ಲಿ ಬನ್ನಿ. ನಾನು ರಿಕ್ಷಾದಲ್ಲಿ ಈ ಚೀಲ ಹಾಕಿಕೊಂಡು ಮೆಜೆಸ್ಟಿಕ್ ಬಸ್‌ಸ್ಟಾಂಡಿಗೆ ವರುವೆ" ಎಂದ. ಹಾಗೆಂದು ನಾವು ಹೊರಡುವ ಒಂದು ಘಂಟೆ ಮೊದಲೇ ಮೂಟೆ ಹೊತ್ತುಕೊಂಡು ಹೋದವನು ಮೆಜೆಸ್ಟಿಕ್‌ವರೆಗೂ ನಡೆದುಕೊಂಡೇ ಬಂದಿದ್ದ. ಮುಖ, ಕತ್ತು, ತೋಳೆಲ್ಲ ಬೆವರು ಇಳಿಯುತ್ತಿತ್ತು. "ರಿಕ್ಷಾವುಕ್ಕು ನೂರು ರೂಪಾಯಿ ಯಾಕೆ ಕುಡುಕ್ಕಣು ತಂಗಚ್ಚಿ" ಅಂದ. ನಾನು ಬಸ್ಸು ಹತ್ತಿ ಕೂರುವಲ್ಲಿ ಸಾಮಾನಿನ ಗೋಣಿ ಚೀಲವನ್ನು ಒಳಗೇ ಇಟ್ಟ. ಬೇಡವೆಂದ ಕಂಡಕ್ಟರೊಂದಿಗೆ ಜಗಳವಾಡಿದ. ಈ ತಂಗಚ್ಚಿ ಎಂಎಲ್‌ಎ ಕಡೆಯವರು, ನನ್ನ ಕೈಲಿ ಹೇಳಿ ಕಳಿಸಿದ್ದಾರೆಂದ. ಕಂಡಕ್ಟರ್ "ಹೋಗೋಗಯ್ಯೊ, ಈ ಬೆಂಗಳೂರಲ್ಲಿರುವರೆಲ್ಲ ಎಂಎಲ್‌ಎ. ಮಿನಿಷ್ಟ್ರು, ಚೀಫ್ ಮಿನಿಷ್ಟ್ರು ಕಡೆಯವ್ರೇ. ಯಾರಲ್ಲ" ಅಂದ. ಬಸ್ಸಿನಲ್ಲಿದ್ದವರೆಲ್ಲ ನನ್ನ ಕಡೆ ನೋಡಿ ನಕ್ಕರು.


ಕಿಟಕಿಯ ಆಚೆ ಗಂಡ ಹೆಂಡತಿ ನಿಂತಿದ್ದರು. ನಾನು ಮೆಲ್ಲಗೆ ಸೆಲ್ವಿಗೆ 'ಕಣ್ಣಾ ನೀನು ಪಳನಿಗೆ ಹೊಡೆಯುವಾಗೆಲ್ಲ ನಾನು ಬಂದು ಬಿಡಿಸುತ್ತಿದ್ದೆ. ಈಗ ನಾನಿಲ್ಲ. ನೀನು ಗಂಡನಿಗೆ ಹೊಡೆಯುವುದಿಲ್ಲ ಅಂತ ಹೇಳು' ಅಂದೆ. ಅದಕ್ಕೆ ಚಿನ್ನಪಳನಿ "ಯೇ ವಿಡು ತಂಗಚ್ಚಿ. ಇವಳು ಎನ್ನೆ ಅಡಿಚ್ಚಾ ಅದು ಯಾವ ಮಹಾ. ದಿನಾವು ಯಾರ‍್ಯಾರಿಂದಲೋ ಯಾರ ಕೈಯ್ಯಲ್ಲೋ ಹೊಡೆಸಿಕೊಂಡು ನಾನೂ ಹೊಡೆದು ಬರುವವನು. ಎಲೆಕ್ಷನ್ ಟೈಮು ವಂದಾ ನಾನು ಚೂರಿ ಏಟು ತಪ್ಪಿಸಿಕೊಂಡು ವೀಡು ಸೇರಿನಾ ಅದೇ ಅದೃಷ್ಟಂ. ಇವಳದು ಯಾವ ಮಹಾ ಅಡಿ. ಏಟು ತಿಂದು ಬರುವ ನನಗೆ ಇವಳು ಅಡಿಕ್ಕಿರದು ಮೈ ಕೈ ಒತ್ತಿದಂತೆ" ಎಂದು ನಕ್ಕ. ಕತ್ತಿನ ಸಂದು, ಭುಜ, ಕೈ ಕಾಲಿಗೆಲ್ಲ ಬಿದ್ದ ಚೂರಿ, ಬ್ಲೇಡಿನ ಏಟೆಲ್ಲಾ ಮಾಯವಾಗಿದ್ದುದರ ಗುರುತು ತೋರಿಸಿದ. ಅದರ ನೋವು, ಯಾತನೆಯು ಪಳನಿಯ ವಿಷಾದ ತುಂಬಿದ ಅನಾಥ ಮುಖದಲ್ಲಿ ರಕ್ತವರ್ಣದ ಕೆನೆಯಾಗಿ ಕಾಣಿಸುತ್ತಿತ್ತು.

ಬಸ್ಸು ಸ್ವಲ್ಪ ಹೊತ್ತು ಕೆಟ್ಟು ನಿಂತರೆ ಈ ಗಂಡ ಹೆಂಡತಿಯರನ್ನು ಇನ್ನಷ್ಟು ಹೊತ್ತು ನೋಡಬಹುದಲ್ಲ ಅಂದುಕೊಳ್ಳುವಲ್ಲಿ ಸೆಲ್ವಿ ನನ್ನ ಕಡೆಗೆ ಆಸೆಯ ಕಣ್ಣುಗಳಿಂದ, ತಂಗಚ್ಚಿ ನಿನಗೆ ಸಂಬಳ ಬಂದ ಮೇಲೆ ನನಗೊಂದು ಮೊಬೈಲ್ ಕೊಡಿಸಿ ಅದರೊಳಗೆ ನಿನ್ನ ಒಂದೇ ಒಂದು ನಂಬರ್ ಹಾಕಿಕೊಡುವೆಯಾ ಎಂದಳು. ಅಷ್ಟು ಹೊತ್ತಿಗೆ ಕಂಡಕ್ಟರ್ ರೈಟ್, ರೈಟ್ ಅಂದ.

* * * *

ನಾನು ಎಡೂರು ಮಂಗಲಕ್ಕೆ ಬಂದ ಮೇಲೆ ಇಷ್ಟು ವರ್ಷಗಳಲ್ಲಿ ಒಂದೆರಡು ಬಾರಿ ಕಣ್ಣಾಸೆಲ್ವಿಯನ್ನೂ, ಪಳನಿಯನ್ನೂ ನೋಡಲು ಹೋದದ್ದುಂಟು. ನಾವು ನಮ್ಮ ಮಕ್ಕಳನ್ನು ಸೇರಿಸಿದ್ದ ಸರ್ಕಾರಿ ಶಾಲೆ ಮುಚ್ಚಿಹೋಗಿತ್ತು. ಸೆಲ್ವಿ ಮಕ್ಕಳನ್ನು ಶಾಲೆ ಬಿಡಿಸಿದ್ದಳು. ವಠಾರದ ಮನೆಯೇನ್ನೇನೂ ಅವಳು ಬದಲಾಯಿಸಿರಲಿಲ್ಲ.

ಅವಳ ವಠಾರಕ್ಕೆ ಹೋದ ಮೊದಲ ಬಾರಿ ಒಮ್ಮೆ ರಮಾಕಾಂತರಿಗೆ ಫೋನು ಮಾಡಿದರೆ ಹೇಗೆ ಅನಿಸಿತು. ನನಗಿಂತ ಅಪೂರ್ವಿಯನ್ನಾದರೂ ನೋಡಲು ಬಯಸಬಹುದೇನೋ? ಎಷ್ಟೋ ದಿನಗಳ ಮೇಲೆ ಈಗ ಬುದ್ಧಿ ಬರುತ್ತಿರುವ ಅಪೂರ್ವಿಗೆ ರಮಾಕಾಂತರನ್ನು ಪರಿಚಯಿಸುವ ಬಗೆ ಹೇಗೆ? ಅಪೂರ್ವಿ ಇವರು ನಿನ್ನ ಅಪ್ಪ ಮಾತಾಡಿಸು ಅಂದರೆ ಅವಳು ಹೇಗೆ ನೋಡುವಳೋ ಏನೋ? ರಮಾ ಕೂಡ ಇವಳನ್ನು ಹೇಗೆ ನೋಡುವರೊ? ನಾನು ಬಂದದ್ದು ಎಡೂರು ಮಂಗಲಕ್ಕೆ ಅಂತ ಅವರಿಗೆ ಹೇಳಲೇ ಇಲ್ಲ. ಅವರು ಕೇಳಲೂ ಇಲ್ಲವಲ್ಲ. ಹೋಗಲಿ ಅವರೇ ನನಗೆ ಒಮ್ಮೆಯಾದರೂ ಕರೆ ಮಾಡಬಹುದಿತ್ತಲ್ಲ. ಈಗ ನಾನು ಯಾವ ದನಿಯಲ್ಲಿ ಕರೆ ಮಾಡಲಿ. ಮಾಡಿದಲ್ಲಿ, ಎಲ್ಲಕ್ಕಿಂತ ಮೊದಲು 'ಚಿತ್ರಾ ನಾನೂ ಬೇಕಂತಲೇ ಸುಮ್ಮನಿದ್ದೆ. ನೀನು ಎಲ್ಲಿಗೆ ಹೋಗುತ್ತೀನಿ ಅಂತ ಹೇಳುವ ಕರ್ಟಸಿಯಾದರೂ ಇರಬಾರದಾ' ಎಂಬ ಆಕ್ಷೇಪಣೆಯ ಧಾಟಿಯಲ್ಲಿ ಮಾತನಾಡಬಹುದೇ? ಇಲ್ಲಾ 'ಚಿತ್ರಾ ನಿನ್ನೊಂದಿಗೆ ಮಾತಾಡಿ, ಕಂಡು ಅದೆಷ್ಟು ದಿನಗಳಾದವು. ನಿನಗಿಂತ ಮೊದಲು ಮಗಳನ್ನು ನೋಡಬೇಕು. ಬೆಂಗಳೂರಿಗೆ ಬಂದಿದ್ದೀಯಾ, ಎಲ್ಲಿದ್ದೀಯಾ ಹೇಳು, ಈಗಲೇ ಬರುತ್ತೇನೆ' ಎನ್ನಬಹುದೇ ಎನಿಸಿ ರಮಾಕಾಂತರ ಮುಖವು ಮನದಲ್ಲಿ ಮೂಡಿ ತುಂಬ ಸಂತೋಷವೆನಿಸಿತು. ಕಣ್ಣಾಸೆಲ್ವಿಯೊಂದಿಗೆ ಮಾತಾಡುತ್ತಲೇ ಮೊಬೈಲ್‌ನಲ್ಲಿ ರಮಾಕಾಂತರ ನಂಬರನ್ನು ಒತ್ತುವುದೇ, ಬಿಡುವುದೇ ಎಂದೆಲ್ಲ ಯೋಚಿಸುತ್ತಿದ್ದೆ. ಕಡೆಗೂ ಅವರ ನಂಬರ್ ಚಿವುಟಿಬಿಟ್ಟೆ, ಕಿವಿಗೆ ಇಟ್ಟುಕೊಳ್ಳಲು ಹೋದರೆ ಎದೆಯ ಉಸಿರು ಜೋರಾಯಿತು. ಅರೆ ಇದೀಗ ಯಾಕೆ ನನಗೆ ಉದ್ವೇಗ ಹೆಚ್ಚಾಗುತ್ತಿದೆ. ನನ್ನ ಉಸಿರೊಂದಿಗೆ ಅವರ ಉಸಿರು ಅದೆಷ್ಟು ದಿನ ಸೇರಿಲ್ಲ, ಮಾತಾಡಿಲ್ಲ, ಊಟ ಮಾಡಿಲ್ಲ, ಈಗ ಯಾಕೆ ಹೀಗೆ? ನಾನು ಅವರೊಂದಿಗೆ ಮಾತಾಡದೇ ಬಿಟ್ಟದ್ದೇ ತಪ್ಪಾಯಿತೇ. ಆ ತಪ್ಪೇ ನನ್ನನ್ನು ಈಗ ಅಳುಕುವಂತೆ ಮಾಡುತ್ತಿದೆಯೇ, ದೇವರೆ, ಯಾಕೆ ನನ್ನ ಎದೆ ಬಡಿದುಕೊಳ್ಳುತ್ತಿದೆ ಎನಿಸಿತು. ಒಂದು ಕ್ಷಣದಲ್ಲಿಯೇ ನನ್ನ ಅದೃಷ್ಟದಿಂದಲೋ, ದುರಾದೃಷ್ಟದಿಂದಲೋ ಮೊಬೈಲಿನಲ್ಲಿ ನೀವು ಕರೆ ಮಾಡುತ್ತಿರುವ ದೂರವಾಣಿ ಸಂಖ್ಯೆಯ ಚಂದಾದಾರರ ಎಲ್ಲಾ ಮಾರ್ಗಗಳೂ ಬಂದ್ ಆಗಿವೆ ಎಂದು ಕೇಳಿಸಿತು. ನನಗೆ ನಿರುಮ್ಮಳವೆನಿಸಿತು. ಜೀವವಿಲ್ಲದ ಯಂತ್ರವೊಂದು ನಮ್ಮಿಬ್ಬರ ಸಂಬಂಧವನ್ನು.




(ಮೈಸೂರಿನಲ್ಲಿ ನೆಲೆಸಿರುವ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಹನೂರು ಕೃಷ್ಣಮೂರ್ತಿಯವರು ಕನ್ನಡದ ಹಿರಿಯ ಸಂಶೋಧಕ ಮತ್ತು ಕಥೆ–ಕಾದಂಬರಿಕಾರರಾಗಿದ್ದಾರೆ)

ಪುಸ್ತಕಾವಲೋಕನ

ಪುಸ್ತಕ: **MK Gandhi: An Autobiography The Story of My Experiments with Truth, Introduced with notes by Tridip Suhrud:** ಪ್ರಕಾಶಕರು: ಪೆಂಗ್ವಿನ್ ಇಂಡಿಯಾ ಪುಟಗಳು : ೭೮೬+೧೪ ಬೆಲೆ : ರೂ. ೪೯೯/-

ಅಂತರ್ಯಾಮಿಯ ಆವಿಷ್ಕಾರ: ಗಾಂಧಿ ಆತ್ಮಕಥನದ ಹೊಸ ಆವೃತ್ತಿ



ಮಹಾತ್ಮ ಗಾಂಧಿ ಅವರನ್ನು ನಮ್ಮ ದೇಶವೂ ನನ್ನಂಥ ಪ್ರಜೆಗಳೂ ಅನುಸರಿಸಿದ್ದು ಅಷ್ಟಕ್ಕಷ್ಟೇ ಆದರೂ ಅವರ ಬದುಕು ಮತ್ತು ಬರಹಗಳ ಸ್ಮೃತಿಯು ನಮ್ಮ ಸಾಮುದಾಯಿಕ ಪ್ರಜ್ಞೆಯೊಳಗೆ ಗಾಢವಾಗಿ ಅಂತರ್ಗತವಾಗಿದೆ ಮತ್ತು ಅವರ ಕೃತಿಗಳು ವ್ಯಾಪಕವಾಗಿ ಪ್ರಚಲಿತವಾಗಿವೆ – ಎಂಬುದರಲ್ಲಿ ಅನುಮಾನವಿಲ್ಲ. ಉದಾಹರಣೆಗೆ, 'ಎನ್ ಆಟೋಬಯಾಗ್ರಫಿ ಆರ್ ಮೈ ಎಕ್ಸ್‌ಪೆರಿಮೆಂಟ್ಸ್ ವಿದ್ ಟ್ರುಥ್' ಎಂಬ ಅವರ ಪ್ರಸಿದ್ಧ ಆತ್ಮಕಥನದ ಹೊತ್ತಿಗೆಯು ಇದುವರೆಗೆ ಭಾರತೀಯ ಭಾಷೆಗಳೆಲ್ಲ ಸೇರಿ ಸುಮಾರು ಐವತ್ತು ಲಕ್ಷ ಪ್ರತಿ ಮಾರಾಟವಾಗಿದೆಯಂತೆ. ಹಾಗಾಗಿ ಕನಿಷ್ಠ ಒಂದು ಕೋಟಿ ಜನರಾದರೂ ಈ ಪುಸ್ತಕವನ್ನು ಓದಿರಬಹುದು ಎಂದು ನಾನು ಊಹಿಸುತ್ತೇನೆ. ಅಂಥ ಹಳೆಯ ಮತ್ತು ಪರಿಚಿತವಾದ ಪುಸ್ತಕವೊಂದರ ವಿಶೇಷವಾದ ಹೊಸ ಆವೃತ್ತಿಯೊಂದು ಈಚೆಗೆ ಪ್ರಕಟವಾಗಿದೆ (ಪೆಂಗ್ವಿನ್ ೨೦೧೮). ಗಾಂಧಿಯವರ ಬದುಕು–ಬರಹಗಳ ಬಗ್ಗೆ ಮಹತ್ವದ ಅಧ್ಯಯನ ಮಾಡಿರುವ ಮತ್ತು ಕೆಲಕಾಲ ಸಬರಮತಿ ಆಶ್ರಮದ ಮುಖ್ಯಸ್ಥರೂ ಆಗಿದ್ದ ತ್ರಿದೀಪ್ ಸುಹೃದ್ ಈ ಹೊಸ ಆವೃತ್ತಿಯನ್ನು ಸಂಪಾದಿಸಿದ್ದಾರೆ.

ಸುಮಾರು ೮೦೦ ಪುಟಗಳ ಈ ಹೊಸ ಆವೃತ್ತಿಯು ಇದುವರೆಗೆ ಮಾಡಿರದ ಎರಡು ಹೊಸ ಕೆಲಸಗಳನ್ನು ಮಾಡಿದೆ – ಮೊದಲನೆಯದಾಗಿ, ಈ ಕೃತಿಯ ಗುಜರಾತಿ ಮೂಲಕ್ಕೂ ಮತ್ತು ಇಂಗ್ಲಿಷ್ ಅನುವಾದಕ್ಕೂ ನಡುವೆ (ಮತ್ತು ಕೆಲವೊಮ್ಮೆ ಈ ಕೃತಿಯ ವಿಭಿನ್ನ ಆವೃತ್ತಿಗಳ ನಡುವೆ) ಇರುವ ವ್ಯತ್ಯಾಸಗಳನ್ನು ಈ ಆವೃತ್ತಿಯ ಎಡಬಲದ ಅಂಚುಗಳಲ್ಲಿ ಸಂಪಾದಕರು ಗುರುತಿಸಿ ಪಟ್ಟಿ ಮಾಡುತ್ತಹೋಗಿದ್ದಾರೆ; ಜತೆಗೆ, ಇವತ್ತಿನ ಹಲವು ಹೊಸ ಓದುಗರಿಗೆ ಅನುಕೂಲವಾಗುವಂತೆ ಉದ್ದಕ್ಕೂ ಪೂರಕ ಮಾಹಿತಿಗಳನ್ನು ಅಡಿಟಿಪ್ಪಣಿಗಳಾಗಿ ಕೊಟ್ಟಿದ್ದಾರೆ. ಎರಡನೆಯದಾಗಿ, ೩೪ ಪುಟಗಳಷ್ಟು ದೀರ್ಘವಾದ ಒಂದು ಉಪಯುಕ್ತ ಪ್ರಸ್ತಾವನೆಯನ್ನು ಕೂಡಾ ಸಂಪಾದಕರು ಈ ಆವೃತ್ತಿಗೆ ಬರೆದಿದ್ದಾರೆ. ಉದಾಹರಣೆಗೆ, ಗಾಂಧಿ ಚಿಂತನೆಯ ಪ್ರಮುಖ ಕಾಳಜಿಗಳು – ಸತ್ಯಾಗ್ರಹ, ಅಹಿಂಸೆ, ಬ್ರಹ್ಮಚರ್ಯ, ಆಹಾರಪಥ್ಯ, ಸ್ವರಾಜ್ಯ ಇತ್ಯಾದಿ ಇತ್ಯಾದಿ – ಹೇಗೆ ಈ ಕೃತಿಯ ಹೆಣಿಗೆಯೊಳಗೆ ಬಿಡಿಸಲಾಗದೆ ಸೇರಿಕೊಂಡಿವೆಯೆಂಬುದನ್ನು ಈ ಪ್ರಸ್ತಾವನೆಯು ಪಾಂಡಿತ್ಯದ ಜಡತೆಯಿಲ್ಲದ ತಿಳಿನುಡಿಯಲ್ಲಿ ವಿವರಿಸುತ್ತದೆ. ಹಾಗಾಗಿ, ಗಾಂಧಿಯನ್ನು ಮೊದಲ ಬಾರಿಗೆ ಓದುವವರಿಗೂ, ಹಲವೊಮ್ಮೆ ಓದಿರುವವರಿಗೂ ಬೇರೆಬೇರೆ ಬಗೆಗಳಿಂದ ಉಪಯುಕ್ತವಾಗಬಲ್ಲ ವೈಶಿಷ್ಟ್ಯ ಈ ಪುಸ್ತಕಕ್ಕಿದೆ. ಈ ಹೊಸ ಆವೃತ್ತಿಯ ವಿವರವಾದ ಸಮೀಕ್ಷೆಯನ್ನು ಮಾಡಲು ಈ ಕಿರುಬರಹದಲ್ಲಿ ಅವಕಾಶವಿಲ್ಲ; ಬದಲು, ನನಗೆ ಗಹನವಾಗಿ ಕಾಡಿದ ಈ ಆತ್ಮಕಥಾನಕಮಾರ್ಗದ ಒಂದೇ ಒಂದು ಪುಟ್ಟ ಎಳೆಯನ್ನು ಪ್ರಸ್ತುತಪಡಿಸುವ ಮೂಲಕ ಇದನ್ನು ಓದಿದ ಸಂತೋಷವನ್ನು ಹಂಚಿಕೊಳ್ಳುತ್ತೇನೆ.

ನಮಗೆಲ್ಲ ಗೊತ್ತಿರುವಂತೆ, ಗಾಂಧಿ ಈ ಆತ್ಮಕಥನವನ್ನು ಒಂದು 'ಪುಸ್ತಕ'ವಾಗಿ ಬರೆದಿದ್ದಲ್ಲ; ೨೫ ನವೆಂಬರ್ ೧೯೨೫ರಿಂದ ೩ ಫೆಬ್ರವರಿ ೧೯೨೯ರವರೆಗೆ ೧೬೬ ಕಂತುಗಳಲ್ಲಿ ಅವರೇ ಹೊರತರುತ್ತಿದ್ದ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟವಾದ 'ಧಾರಾವಾಹಿ' ಇದು. ಇವತ್ತಿನ ಹಲವು ಟಿವಿ ಧಾರಾವಾಹಿಗಳಿಗೂ ಮತ್ತು ಈ ಗಾಂಧಿ–ಧಾರಾವಾಹಿಗೂ ನಡುವೆ ಒಂದು ಕ್ಷುಲ್ಲಕ ಸಾಮ್ಯ ಇದೆ. ನಮ್ಮ ಧಾರಾವಾಹಿಗಳಂತೆಯೇ ಗಾಂಧಿಯವರೂ ಈ ಕಂತುಗಳನ್ನು ಅವತ್ತವತ್ತು ಬರೆಯುತ್ತ ಹೋದರೆ ಹೊರತು, ಮುಂದೆ ಏನು ಬರೆಯಬೇಕೆಂಬುದನ್ನಾಗಲೀ, ಇಡಿಯ ಪುಸ್ತಕ ಹೇಗೆ ರೂಪುಗೊಳ್ಳಬೇಕು ಎಂಬುದನ್ನಾಗಲೀ – ಮಾತ್ರವಲ್ಲ, ಈ ಕಥಾನಕವನ್ನು ಎಲ್ಲಿಗೆ ಕೊಂಡೊಯ್ದು ನಿಲ್ಲಿಸಬೇಕು ಎಂಬುದನ್ನೂ ಕೂಡಾ – ಮೊದಲೇ ಯೋಜಿಸಿ ಬರೆಯಲಿಲ್ಲ. ಮಾತ್ರವಲ್ಲ, ಈ ಬರವಣಿಗೆಯನ್ನು ಆರಂಭಿಸುವ ಸಮಯಕ್ಕಾಗಲೇ ಭಾರತದ ರಾಜಕಾರಣದಲ್ಲಿ ಪೂರ್ಣವಾಗಿ ಮುಳುಗಿಕೊಂಡಿದ್ದ ಗಾಂಧಿ, ತಮ್ಮ ಇತರ ಹತ್ತಾರು ಕೆಲಸಗಳ ನಡುವೆಯೇ ಈ ಬರಹವನ್ನು ಬರೆಯುತ್ತಹೋದರು ಎಂಬುದನ್ನು ಒಂದು ಕಡೆಗೆ ನೆನಪಿಸಿಕೊಳ್ಳಬೇಕು; ಹಾಗಿದ್ದೂ ಈ ಕೃತಿಯನ್ನು ಬರೆಯುವ ಸುಮಾರು ಅರ್ಧದಷ್ಟು ದಿನಗಳು ಅವರು ಸಬರಮತಿ ಆಶ್ರಮದಲ್ಲೇ ನೆಲೆಸಿದ್ದು ಈ ಬರವಣಿಗೆಯ ಕೆಲಸವನ್ನು ಕೂಡಾ ತಮ್ಮ ಹಲವು ಸಾರ್ವಜನಿಕ ಕೆಲಸಗಳಷ್ಟೇ ಮಹತ್ವದ ಮತ್ತು ಗಮನಕೇಂದ್ರೀಕರಣವುಳ್ಳ ಒಂದು 'ಪ್ರಯೋಗ'ವೆಂಬಂತೆ ರೂಪಿಸಿದ್ದನ್ನೂ ನಾವು ಗುರುತಿಸಿಕೊಳ್ಳಬೇಕು.

ಈ ಕೃತಿಯ ರಚನೆಗೆ ತಾನು ಕೈಹಾಕಿದ್ದು ಯಾಕೆ – ಎಂಬುದನ್ನೇನೋ ಗಾಂಧಿಯವರು ಮುನ್ನುಡಿಯಲ್ಲೇ ಹೇಳಿಕೊಂಡಿದ್ದಾರೆ. ಈ ಬರಹವು ತನ್ನ ಪ್ರಯೋಗದ ಯಶಸ್ಸು ಮತ್ತು ಅಪಯಶಸ್ಸುಗಳೆರಡನ್ನೂ ಸಾರ್ವಜನಿಕವಾಗಿ ನಿವೇದಿಸಿಕೊಳ್ಳುತ್ತಿರುವ ಮಾರ್ಗವೆಂಬುದನ್ನೂ ಮತ್ತು, ಇದು ವಿಶೇಷ ಸಾಧನೆಯನ್ನು ಮಾಡಿ ಪ್ರಸಿದ್ಧನಾದ ಒಬ್ಬ 'ಮಹಾತ್ಮ'ನ ಕಥೆಯಲ್ಲ ಎಂಬುದನ್ನೂ, ಬದಲು, 'ನನಗೆ ಯಾವುದು ಸಾಧ್ಯವೋ ಅದು ಒಂದು ಸಣ್ಣ ಮಗುವಿಗೂ ಸಾಧ್ಯ'ವೆಂಬ ನಂಬಿಕೆಯನ್ನು ಸಂವಹಿಸುವ ಮಾರ್ಗವೆಂಬುದನ್ನೂ ಗಾಂಧಿ ಅಲ್ಲಿ ಹೇಳುತ್ತಾರೆ. ಆಮೇಲೆ ಹುಟ್ಟು–ಬಾಲ್ಯಗಳಿಂದ ಶುರುವಾಗಿ, ಸುಮಾರಾಗಿ ಕಾಲಾನುಕ್ರಮದಲ್ಲಿಯೇ ಈ ಕಥನವು ಮುಂದುವರೆಯುತ್ತದೆ.

ಆದರೆ, ಸರಿಸುಮಾರು ಈಗ ಪ್ರಕಟವಾಗಿರುವ ಆ ಇಡೀ ಪುಸ್ತಕದ ನಡುಭಾಗಕ್ಕೆ ಬರುತ್ತಿದ್ದಂತೆ – ನಿಖರವಾಗಿ ಹೇಳುವುದಾದರೆ ಈ ಕೃತಿಯ ೪ನೆಯ ಭಾಗದ ೧೧ನೆಯ 'ಆಂಗ್ಲೇಯರೊಂದಿಗೆ ನಿಕಟ ಪರಿಚಯ' ಎಂಬ ಅಧ್ಯಾಯದಲ್ಲಿ – ಗಾಂಧಿ, ಈ ಬರಹವನ್ನು ತಾನು ಬರೆಯುತ್ತಿರುವ ಕ್ರಮ ಯಾವುದು ಎಂಬ ಅನಿರೀಕ್ಷಿತ ಪ್ರಸ್ತಾಪವನ್ನು ಎತ್ತಿಕೊಂಡಿದ್ದಾರೆ. ಗೋರೂರು ರಾಮಸ್ವಾಮಿ ಅಯ್ಯಂಗಾರರು ಕನ್ನಡೀಕರಿಸಿದ ಆವೃತ್ತಿಯಿಂದ ಗಾಂಧಿ ಮಾತುಗಳನ್ನೇ ಉಲ್ಲೇಖಿಸುವುದಾದರೆ –

ಈ ಕಥೆ ವಾರವಾರವೂ ಹೇಗೆ ಬರೆಯಲ್ಪಡುತ್ತಿದೆ ಎಂಬುದನ್ನು ವಾಚಕರಿಗೆ ವಿವರಿಸುವ ಅವಶ್ಯಕತೆ, ಈ ಅಧ್ಯಾಯವನ್ನು ಬರೆಯುತ್ತ ಉಂಟಾಗಿದೆ. ಇದನ್ನು ಬರೆಯಲು ಪ್ರಾರಂಭಿಸಿದಾಗ, ಇದನ್ನು ಹೇಗೆ ಬರೆಯಬೇಕೆಂಬ ವಿಷಯದಲ್ಲಿ ನನ್ನ ಮುಂದೆ ಯಾವ ಯೋಜನೆಯೂ ಇರಲಿಲ್ಲ. ನನ್ನಲ್ಲಿ, ಈ ಪ್ರಯೋಗಗಳ ಕಥೆಗೆ ಆಧಾರವಾದ ದಿನಚರಿಯಾಗಲೀ ಕಾಗದಪತ್ರಗಳಾಗಲೀ ಇಲ್ಲ. ಬರೆಯಲು ಕುಳಿತಾಗ ಅಂತರಾತ್ಮ ಪ್ರೇರಿಸಿದಂತೆ ನಾನು ಬರೆದಿದ್ದೇನೆ.

ಮೇಲಿನ ಕನ್ನಡ ಅನುವಾದಕ್ಕೂ ಮತ್ತು ಪ್ರಾಯಶಃ ಅದಕ್ಕೆ ಮೂಲವಾಗಿರಬಹುದಾದ ಮಹದೇವ ದೇಸಾಯಿಯಯವರ ಇಂಗ್ಲಿಷ್ ಅನುವಾದಕ್ಕೂ ಮತ್ತು ಗಾಂಧಿಯವರು ಗುಜರಾತಿಯಲ್ಲಿ ಬರೆದ ಆವೃತ್ತಿಗೂ ನಡುವೆ ಒಂದು ಮುಖ್ಯವಾದ ಪದವು ಬೇರೆಯಾಗಿದೆಯೆಂಬುದು ತ್ರಿದೀಪ್ ಸುಹೃದರ ಆವೃತ್ತಿಯನ್ನೋದುವಾಗ ನನ್ನ ಗಮನಕ್ಕೆ ಬಂತು. ಗೋರೂರರು 'ಅಂತರಾತ್ಮ' ಎಂದು ಕರೆದಿರುವುದನ್ನು ದೇಸಾಯಿಯವರು ಇಂಗ್ಲೀಷಿನಲ್ಲಿ 'ಸ್ಪಿರಿಟ್' ಎಂದು ಅನುವಾದಿಸಿದ್ದಾರೆ; ಮೂಲ ಗುಜರಾತಿಯಲ್ಲಿ ಗಾಂಧಿ 'ಅಂತರ್ಯಾಮಿ' ಎಂಬ ಪದವನ್ನು ಬಳಸಿದ್ದಾರೆ. ಈ ಅಂತರ್ಯಾಮಿ ಎಂಬ ಪದವು ಗಾಂಧಿ ಕಥನದೊಳಗೆ ಮಾತ್ರವಲ್ಲ, ಗಾಂಧಿಯವರ ವ್ಯಕ್ತಿತ್ವದೊಳಗೇ ಒಂದು ಮಹತ್ವದ ಸ್ಥಾನ ಪಡೆಯುತ್ತದೆ ಎಂಬುದನ್ನು ತ್ರಿದೀಪ್ ಸುಹೃದ್ ಗುರುತಿಸಿದ್ದಾರೆ. ಉದಾಹರಣೆಗೆ, ತಾನು ಬರೆಯುತ್ತಿರುವುದು 'ಜೀವನ ವೃತ್ತಾಂತ'ವಲ್ಲ, ಬದಲು 'ಆತ್ಮಕಥೆ'; ಆದ್ದರಿಂದ ನಡೆದ ಎಲ್ಲಾ ಘಟನೆಗಳನ್ನೂ ವಿವರಿಸಬೇಕಾದ ಒತ್ತಡ ತನಗಿಲ್ಲವೆಂಬುದನ್ನೂ ಗಾಂಧಿ ಇದೇ ಸಂದರ್ಭದಲ್ಲಿ ಹೇಳಿಕೊಂಡಿದ್ದಾರೆ; ಮತ್ತು ಯಾವುದನ್ನು ಬರೆಯಬೇಕೆಂಬ ಆಯ್ಕೆಗೂ ಕೂಡಾ ಗಾಂಧಿಯ 'ಅಂತರ್ಯಾಮಿ'ಯೇ ಪ್ರಮಾಣವಾಗಿತ್ತು ಎಂದೂ ಸ್ಪಷ್ಟಪಡಿಸಿದ್ದಾರೆ (ಆದ್ದರಿಂದಲೇ ಈ ಪುಸ್ತಕದ ಗುಜರಾತಿ ಹೆಸರು 'ಸತ್ಯಾನಾ ಪ್ರಯೋಗೋ ಅಥವಾ ಆತ್ಮಕಥಾ' ಎಂದಿರುವುದನ್ನು ಸಂಪಾದಕರು ಗುರುತಿಸುತ್ತಾರೆ; ಆದರೆ, ಇಂಗ್ಲಿಷ್ ಮತ್ತು ಕನ್ನಡ ಆವೃತ್ತಿಗಳಲ್ಲಿ ಅದು ಹಿಂದುಮುಂದಾಗಿದೆ).

ಇಷ್ಟರ ಮೇಲೆ, ಗಾಂಧಿಯವರು ಉಲ್ಲೇಖಿಸುವ ಈ 'ಅಂತರ್ಯಾಮಿ'ಯು ಕೇವಲ ಅವರ ಆತ್ಮಕಥನವನ್ನು ನಿರ್ವಹಿಸುವ ಶಕ್ತಿ ಮಾತ್ರವೇ ಆಗಿರಲಿಲ್ಲ; ಅದು ಒಟ್ಟೂ ಗಾಂಧಿ ಬದುಕನ್ನೇ ನಿಯಂತ್ರಿಸುವ ಒಂದು ಚೈತನ್ಯವೂ ಆಗಿತ್ತೆಂಬುದನ್ನು ಗಾಂಧಿಯನ್ನು ಬಲ್ಲವರಿಗೆ ಮತ್ತೆ ವಿವರಿಸಬೇಕಾಗಿಲ್ಲ. ಉದಾಹರಣೆಗೆ, ಮೇಲಿನ ಉಲ್ಲೇಖದ ಮುಂದಿನ ಸಾಲಿನಲ್ಲಿಯೇ ಗಾಂಧಿ – 'ನನ್ನ ಬಾಳಿನಲ್ಲಿ ನಾನು ಎಸಗಿದ ದೊಡ್ಡದೊಡ್ಡ ಕಾರ್ಯಗಳು ಮತ್ತು ಸಣ್ಣಸಣ್ಣ ಕಾರ್ಯಗಳು ನನ್ನ "ಅಂತರ್ಯಾಮಿ"ಯ ಪ್ರೇರಣೆಯಿಂದಲೇ ನಡೆದಿವೆಯೆಂದು ಹೇಳಿದರೆ ಅನುಚಿತವಾಗಲಾರದು' – ಎಂದು ಅಡಿಗೆರೆ ಹಾಕುವ ಮೂಲಕ ಈ ಪದವನ್ನು ಒಂದು ಅವರ ಕಾರ್ಯ-ಕೃತಿಗಳೆರಡರ ವಲಯಕ್ಕೂ ಸಲ್ಲುವ ಪಾರಿಭಾಷಿಕವಾಗಿ ನೋಡುವ ಸಾಧ್ಯತೆಯನ್ನು ತೆರೆಸಿದ್ದಾರೆ.

ಹಾಗಿದ್ದರೆ, ಆ 'ಅಂತರ್ಯಾಮಿ' ಎಂಬುದು ಯಾವುದು? ಅದರ ವ್ಯಾಖ್ಯೆಯೇನು? ಈ ಪರಿಕಲ್ಪನೆಗೆ ಆಕರ ಯಾವುದು? ಮೊದಲಾದ ಪ್ರಶ್ನೆಗಳು ಏಳುತ್ತವೆ. ಗಾಂಧಿಯವರಿಗೆ ಭಗವದ್ಗೀತೆ ಪ್ರಿಯವಾದ ಗ್ರಂಥವಾಗಿತ್ತು ಎಂಬುದು ಚಿರಪರಿಚಿತವಾದ್ದರಿಂದ, ಈ ಪಾರಿಭಾಷಿಕವು ಅವರಿಗೆ ಅಲ್ಲಿಂದ ಸಿಕ್ಕಿರಬಹುದೆಂದು ನಾನು ಮೊದಲಿಗೆ ಊಹಿಸಿದೆ. ಆದರೆ, ಹುಡುಕಿದಾಗ ಈ ಪದಕ್ಕೆ ಸಮೀಪದ ಅರ್ಥವನ್ನು ಕೊಡುವ ನುಡಿಗಟ್ಟುಗಳು ಗೀತೆಯಲ್ಲಿ ಬೇಕಷ್ಟು ಇವೆಯಾದರೂ ಈ ನಿರ್ದಿಷ್ಟ ಪದ ಅಲ್ಲಿಲ್ಲ ಎಂಬ ಸ್ವಾರಸ್ಯ ನನ್ನ ಗಮನಕ್ಕೆ ಬಂತು. ಆದರೆ, ಗೀತೆಯ ಮೇಲೆ ವೈಷ್ಣವ ಸಂಪ್ರದಾಯವು ಬರೆದ ಹಲವು ವ್ಯಾಖ್ಯಾನಗಳಲ್ಲಿ ಈ ಪದವು ತುಂಬ ವ್ಯಾಪಕವಾಗಿ ಬಳಕೆಯಾಗಿರುವುದು ಕಾಣಸಿಗುವುದರಿಂದ ಈ ಪದವು ಗಾಂಧಿಯವರಿಗೆ ಅಲ್ಲಿಂದ ಬಂತೆಂದು ನಾವು ಊಹಿಸಿಕೊಳ್ಳಬಹುದು. ಅದೇನೇ ಇರಲಿ, ಮುಂದೆ ಗಾಂಧಿಯವರು ಈ ಪದಕ್ಕೆ ಕೊಡುತ್ತಹೋಗುವ ಅರ್ಥವಿಸ್ತಾರಗಳು ಭಗವದ್ಗೀತೆಯಲ್ಲಾಗಲೀ ಅಥವಾ ಅದರ ವ್ಯಾಖ್ಯಾನಗಳಲ್ಲಾಗಲೀ ಕಾಣಲಿಕ್ಕೆ ಸಿಗದಂಥವು. ಕಾರಣ, ನಾವು ಇವತ್ತು ಆಧ್ಯಾತ್ಮಿಕ-ಲೌಕಿಕಗಳೆಂದು ಬದುಕನ್ನು ವಿಭಾಗಿಸಿಕೊಂಡಿರುವ ಗೆರೆಯ ಎರಡೂ ಬದಿಗೆ ಹರಡಿಕೊಳ್ಳುವ ಹಾಗೆ ಗಾಂಧಿ ಈ 'ಅಂತರ್ಯಾಮಿ'ಯ ಅರ್ಥವನ್ನು ವಿಸ್ತರಿಸಿಕೊಂಡಿದ್ದಾರೆ. ಮೇಲಿನ ಉಲ್ಲೇಖದ ಬಳಿಕ ಬರುವ ಸಾಲುಗಳಲ್ಲೇ ಗಾಂಧಿ ಹೇಳುತ್ತಾರೆ –

ನಾನು ಪರಮಾತ್ಮನನ್ನು ನೋಡಿಲ್ಲ. ತಿಳಿದೂ ಇಲ್ಲ. ಜಗತ್ತಿಗೆ ಆತನಲ್ಲಿರುವ ಶ್ರದ್ಧೆಯನ್ನು ನನ್ನದನ್ನಾಗಿ ಮಾಡಿಕೊಂಡಿದ್ದೇನೆ. ಈ ಶ್ರದ್ಧೆ ಎಂದಿಗೂ ಅಳಿಸಿಹೋಗುವುದಿಲ್ಲವಾಗಿ, ಇದನ್ನು ಶ್ರದ್ಧೆಯೆಂದು ಗ್ರಹಿಸುವುದರ ಬದಲಾಗಿ ಅದನ್ನೇ ನಾನು ಅನುಭವರೂಪದಲ್ಲಿ ಗುರುತಿಸುತ್ತೇನೆ. ಆದರೆ ಈ ಬಗೆಯಲ್ಲಿ ಅನುಭವರೂಪದಲ್ಲಿ ಅದರ ಪರಿಚಯ ಕೊಡುವುದು ಸಹ ಸತ್ಯಕ್ಕೆ ಅಪಚಾರ ಮಾಡಿದಂತೆ ಎನ್ನಬಹುದಾದುದರಿಂದ ದೇವರಲ್ಲಿರುವ ನನ್ನ ನಂಬಿಕೆಯನ್ನು ವಿವರಿಸಲು ಸರಿಯಾದ ಮಾತು ಇಲ್ಲವೆಂದು ಹೇಳುವುದು ಹೆಚ್ಚು ಸಮಂಜಸವಾದೀತು.

ಅಂದರೆ, ಗಾಂಧಿ ಉಲ್ಲೇಖಿಸುವ ಅಂತರ್ಯಾಮಿಗೆ ಅವರ ಶ್ರದ್ಧೆಯ ಗ್ರಹಿಕೆ ಪ್ರಮಾಣವೆ ಹೊರತು ಬಾಹ್ಯ ಪ್ರಮಾಣಗಳಿಂದ ಅದನ್ನು ಗುರುತಿಸಲಾಗದು ಎಂಬ ಸೂಚನೆ ಈ ಮಾತುಗಳಲ್ಲಿ ಸಿಗುತ್ತದೆ. ಮುಂದೆ, ಈ ಪದವನ್ನು ಗಾಂಧಿ ತಮ್ಮ ಆತ್ಮಕಥನದಲ್ಲಿ (ಮತ್ತು ಬೇರೆ ಬರಹಗಳಲ್ಲಿಯೂ) ಬಳಸುತ್ತ ಅದರ ಅರ್ಥವನ್ನು ಹಿಗ್ಗಿಸುತ್ತಹೋಗಿದ್ದಾರೆ; ಅದರಲ್ಲಿ ನನಗೆ ಮುಖ್ಯವೆಂದು ಕಾಣುವ ಎರಡು ಉದಾಹರಣೆಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸುತ್ತೇನೆ.

ಮೊದಲೇ ಹೇಳಿದಂತೆ, ಗಾಂಧಿ ಆತ್ಮಕಥೆಯು ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದುದರಿಂದ, ಅದಕ್ಕೆ ಪ್ರತಿಕ್ರಿಯೆಗಳೂ ಧಾರಾವಾಹಿಗಳಾಗಿಯೇ ಬರುತ್ತಿದ್ದವು. ಇಂಥ ಪ್ರತಿಕ್ರಿಯೆಗಳನ್ನೆಲ್ಲ – ಅದು ಇತ್ಯಾತ್ಮಕವಿರಲಿ ನೇತ್ಯಾತ್ಮಕವಿರಲಿ – ಗಾಂಧಿ ಆಯಾ ಕಾಲಕ್ಕೇ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಆದರೆ, ಅಂಥ ಪ್ರತಿಸ್ಪಂದನೆಯು ತಮ್ಮ 'ಅಂತರ್ಯಾಮಿ'ಗೂ ಸಹಮತವಾದ ಕಡೆಗಳಲ್ಲಿ ಮಾತ್ರ ಅಂತಿಮವಾಗಿ ಈ ಕಥನವು ಪುಸ್ತಕರೂಪದಲ್ಲಿ ಬರುವ ಮುಂಚೆ ತಿದ್ದುಪಡಿ ಮಾಡಿದರು; ಉಳಿದವನ್ನು ಹಾಗೆಯೇ ಉಳಿಸಿದರು.

ಅಂಥ ಒಂದು ಪುಟ್ಟ ಉದಾಹರಣೆ – ದಕ್ಷಿಣ ಆಫ್ರಿಕಾದಲ್ಲಿ ತಮಗೆ ಸಹಾಯಕಿಯಾಗಿ ಕೆಲಸ ಮಾಡಿದ್ದ ಮಿಸ್ ಸ್ಲೆಸಿನ್ ಎಂಬಾಕೆಯದು. ಅವಳ ಬಗ್ಗೆ ತುಂಬ ಶ್ಲಾಘನೀಯ ದಾಟಿಯಲ್ಲೇ ಬರೆದಿರುವ ಗಾಂಧಿ, ಅದರ ನಡುವೆ 'ಆಕೆ ಹೆಣ್ಣುಮಕ್ಕಳ ಶಾಲೆಯೊಂದರ ಮುಖ್ಯಸ್ಥೆಯಾಗಿದ್ದಳು' ಎಂದು ಉಲ್ಲೇಖಿಸಿದ್ದಕ್ಕೆ ಆಕೆ ತುಂಬ ಕಟುವಾಗಿ ಪ್ರತಿಕ್ರಿಯಿಸಿದಳು. ತಾನು ಯಾವತ್ತೂ ಹೆಣ್ಣುಮಕ್ಕಳ ಶಾಲೆಯಲ್ಲಿ ಕೆಲಸ ಮಾಡಿಲ್ಲವೆಂದೂ ಶಾಲಾಮುಖ್ಯಸ್ಥೆಯಾಗುವ ಅರ್ಹತೆ ತನಗೆ ಈಗಲೂ ಇಲ್ಲವೆಂದೂ ಬರೆಯುತ್ತ, ಆಕೆ – 'ನನ್ನ ಕುರಿತ ಉಲ್ಲೇಖಕ್ಕೆ ಸಂಬಂಧಿಸಿ ತೀರ್ಮಾನಿಸುವುದಾದರೆ ನಿಮ್ಮ ಈ ಕಥನವನ್ನು "ಸತ್ಯದೊಂದಿಗೆ ನಡೆಸಿದ ಪ್ರಯೋಗ" ಎಂಬುದರ ಬದಲು "ಅಸತ್ಯಪ್ರಯೋಗಗಳ ದೃಷ್ಟಾಂತ" ಎಂದು ಕರೆಯಬೇಕು' – ಎಂದು ಬರೆದ ದೀರ್ಘ ಪತ್ರವನ್ನು ಗಾಂಧಿ ಪ್ರಕಟಿಸಿ, ಮರೆವಿನಿಂದ ಆದ ತಪ್ಪಿಗೆ ವಿಷಾದಿಸಿದರು; ಮುಂದಿನ ಆವೃತ್ತಿಯಲ್ಲಿ ಈ ವಾಕ್ಯವು – 'ಈಗ ಆಕೆ ಟ್ರಾನ್ಸ್‌ವಾಲಿನ ಒಂದು ಹೈಸ್ಕೂಲಿನಲ್ಲಿ ಉಪಾಧ್ಯಾಯಿನಿಯಾಗಿದ್ದಾಳೆ' ಎಂದು ತಿದ್ದುಪಡಿಯಾಯಿತು!

ಆದರೆ, ಗಾಂಧಿಯ 'ಅಂತರ್ಯಾಮಿ'ಯು ಇಷ್ಟು ಪಾರದರ್ಶಕವಾಗಿ ವರ್ತಿಸದೆ, ಉಳಿದವರಿಗೆ ನಿಗೂಢವೂ ಗೊಂದಲಯುಕ್ತವೂ ಆಗಿ ಕಂಡ ಬೇಕಷ್ಟು ಉದಾಹರಣೆಗಳು ಗಾಂಧಿಯ ಬದುಕು-ಬರಹಗಳಲ್ಲಿ ಬಂದುಹೋಗಿವೆ. ಅಂಥ ಒಂದು ಮಾರ್ಮಿಕ ಉದಾಹರಣೆಯನ್ನು ತ್ರಿದೀಪ್ ಸುಹೃದರ ಮುನ್ನುಡಿ ಉಲ್ಲೇಖಿಸುತ್ತದೆ. ಅದು ೧೯೩೩ರಲ್ಲಿ ಅವರು ಯರವಾಡಾ ಜೈಲಿನಲ್ಲಿದ್ದಾಗ, ಇದ್ದಕ್ಕಿದ್ದಂತೆ ಒಂದು ದಿನ, ತಾನು ಉಪವಾಸ ಮಾಡುವುದಾಗಿ ಘೋಷಿಸಿದ ಸಂದರ್ಭ. ಈ ನಿರ್ಧಾರಕ್ಕೆ ತನ್ನ ಅಂತರ್ಯಾಮಿಯ ಸೂಚನೆಯೇ ಕಾರಣವೆಂದೂ ಅದಕ್ಕೆ ತಾನು ಬೇರೆ ಕಾರಣ ಕೊಡಲಾರೆನೆಂದೂ ಹೇಳಿದ್ದು ಹಲವರಿಗೆ ತುಂಬ ಅಪಥ್ಯವಾಗಿ ಕಂಡಿತು. ಅವರ ಜತೆಯಲ್ಲಿ ಬಂದಿಗಳಾಗಿದ್ದ ವಲ್ಲಭಭಾಯಿ ಪಟೇಲರಿಗೂ ಕೂಡಾ ಗಾಂಧಿ ಇದನ್ನು ವಿವರಿಸಿ ಹೇಳಲಿಕ್ಕಾಗದೆ – 'ಒಬ್ಬ ವ್ಯಕ್ತಿ ತನ್ನೆಲ್ಲ ಯೋಚನೆಗಳನ್ನೂ ಹೇಳುವುದಾಗಲಿ, ಹೇಳಲಿಕ್ಕೆ ಸಾಧ್ಯವಾಗುವುದಾಗಲೀ ಸಂಭವವೆ?' ಎಂದಷ್ಟೇ ಹೇಳಿ ಸುಮ್ಮನಾದರು. ಆದರೆ, ಈ ಮಾತು ಉಳಿದವರಿಗೆ ಹಾಗಿರಲಿ ಅವರ ಆಪ್ತರಿಗೇ ಸಮರ್ಥನೀಯವಾಗಿ ಕಾಣಲಿಲ್ಲ. ಅವರ ಕಡೆಯ ಮಗ ದೇವದಾಸ ಗಾಂಧಿ ಮತ್ತು ಸಿ. ರಾಜಗೋಪಾಲಾಚಾರಿ ಇಬ್ಬರೂ ಈ ನಿರ್ಧಾರದ ಹಿಂದಿರುವ ತಾರ್ಕಿಕತೆಯನ್ನು ಸಂಶಯಿಸುತ್ತ 'ಇದು ಜೈಲುವಾಸದ ಉಸಿರುಗಟ್ಟಿಸುವ ಒತ್ತಡದಿಂದ ಗಾಂಧಿಯವರ ಮನಸ್ಸಿನೊಳಗೆ ಉಂಟಾದ ವಿಭ್ರಮೆಯ ಫಲ' – ಎಂದೂ ಹೇಳಿದ್ದರು. ಆದರೆ ಗಾಂಧಿ ಮಾತ್ರ, ಇದು ತನ್ನ ಅಂತರ್ಯಾಮಿಯು ತನಗೆ 'ಸ್ಪಷ್ಟವಾದ ಮಾತುಗಳಲ್ಲಿ' ಸೂಚಿಸಿದ ಒಂದು ನಡೆಯೆಂದು ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡರು. ಅವರ ಮಾತುಗಳಲ್ಲೇ ಕೇಳುವುದಾದರೆ –

[ಈ ಉಪವಾಸಕ್ಕೆ] ನನಗೆ ಸ್ಫೂರ್ತಿ ದೊರಕಿದ ಆ ರಾತ್ರಿ, ನನ್ನೊಳಗೆ ಭೀಕರವಾದ ಒಳತೋಟಿ ಸಂಭವಿಸುತ್ತಿತ್ತು. ನನ್ನ ಮನಸ್ಸು ತಳಮಳಗೊಂಡಿತ್ತು. ಯಾವ ದಾರಿಯೂ ನನಗೆ ಕಾಣುತ್ತಿರಲಿಲ್ಲ. ನನ್ನ ಮೇಲಿರುವ ಜವಾಬ್ದಾರಿಯ ಭಾರವು ನನ್ನನ್ನು ಹಿಚುಕುತ್ತಿತ್ತು. ಆದರೆ ಆಗ ನಾನೊಂದು ದನಿ ಕೇಳಿದೆ – ದೂರದಲ್ಲಿದ್ದರೂ ಹತ್ತಿರವೆಂಬಂತೆ ಕೇಳಿದ ದನಿ ಅದು. ಯಾವ ಅನುಮಾನಕ್ಕೂ ಆಸ್ಪದವಿಲ್ಲದಂತೆ ನನ್ನನ್ನೇ ಉದ್ದೇಶಿಸಿ ಆಡಿದಂಥ ಮನುಷ್ಯಧ್ವನಿಯಂತಿದ್ದ ಆ ಮಾತನ್ನು ನಾನು ಕೇಳದೆ ಇರುವುದು ಅಸಾಧ್ಯವಾಗಿತ್ತು. ಈ ಧ್ವನಿಯನ್ನು ಕೇಳುವಾಗ ನಾನು ಕನಸು ಕಾಣುತ್ತಿರಲಿಲ್ಲ. ಇಂಥ ಧ್ವನಿಯೊಂದು ಕೇಳುವ ಮೊದಲು ನನ್ನೊಳಗೆ ಮನೋಸಂಘರ್ಷ ನಡೆದಿತ್ತು; ಆಗ ಇದ್ದಕ್ಕಿದ್ದಂತೆ ಆ ದನಿ ನನ್ನ ಮೇಲೆರೆಗಿ ಬಂತು. ನಾನದನ್ನು ಕೇಳಿದೆ, ಅದು ದನಿಯೆಂಬುದನ್ನು

ಖಚಿತಪಡಿಸಿಕೊಂಡೆ; ಅಲ್ಲಿಗೆ ನನ್ನ ಒಳತೋಟಿ ಮುಕ್ತಾಯಗೊಂಡಿತು. ನಾನು ಸಮಾಧಾನಗೊಂಡಿದ್ದೆ.

ಗಾಂಧಿಯವರು ತಮ್ಮ ಬದುಕಿನ ಹಲವು ಕ್ಲಿಷ್ಟ ಸಂದರ್ಭಗಳಲ್ಲಿ ಕೇಳಿಸಿಕೊಂಡ ಇಂಥ ಅಂತರ್ಯಾಮಿಯ ಮಾತುಗಳು ಅವರ ಒಟ್ಟೂ ಚಿಂತನವಿಧಾನವನ್ನೇ ಕುರಿತು ಮಹತ್ವದ ಸೂಚನೆಗಳನ್ನೇನಾದರೂ ನಮಗೆ ನೀಡುತ್ತವೆಯೆ? – ಎಂಬ ಪ್ರಶ್ನೆಯನ್ನು ತ್ರಿದೀಪ್ ಸುಹೃದ್ ಪರೋಕ್ಷವಾಗಿ ಎತ್ತುತ್ತಾರೆ. ಅದಕ್ಕೆ ಅವರು ತಮ್ಮ ಪ್ರಸ್ತಾವನೆಯಲ್ಲಿ ಸೂಚಿಸುವ ಉತ್ತರ ಮತ್ತು ಆ ಉತ್ತರವು ಓದುಗನಾಗಿ ನನ್ನೊಳಗೆ ವಿಸ್ತರಣೆಗೊಂಡ ಕ್ರಮ – ಎರಡನ್ನೂ ಕೂಡಿಸಿ ಗಾಂಧಿ ಚಿಂತನೆಯ ವಿಧಾನವನ್ನು ಕುರಿತು ನಾನೀಗ ಕೆಲವು ಪ್ರಸ್ತಾಪಗಳನ್ನು ಮುಂದಿಡುತ್ತೇನೆ.

ಸರಳವಾದ ಒಂದು ಪ್ರಶ್ನೆಯಿಂದ ಆರಂಭಿಸೋಣ – ನಮ್ಮೆಲ್ಲರಿಗೂ ಚಿರಪರಿಚಿತವಾದ ಮತ್ತು ಅನುಭವಗಮ್ಯವೂ ಆದ 'ಆಲೋಚನೆ' ಎಂಬ ಪ್ರಕ್ರಿಯೆ ಯಾವ ಬಗೆಯದು? ಉದಾಹರಣೆಗೆ, ನಾನು ಆಲೋಚಿಸುತ್ತಿದ್ದೇನೆ ಎಂಬುದು ನನಗೇ ಸ್ವತಃ ಗೊತ್ತಾಗುವುದು ಹೇಗೆ? ಈಚೆಗೆ ನಡೆದ ಒಂದು ತತ್ವಾಭ್ಯಾಸದ ತರಗತಿಯಲ್ಲಿ ಮಿತ್ರರಾದ ಸುಂದರ್ ಸಾರುಕ್ಕೈ ಇದಕ್ಕೆ ಸ್ವಾರಸ್ಯದ ಉತ್ತರವೊಂದನ್ನು ಕೊಟ್ಟರು – ಆಲೋಚನೆಯೆಂಬುದು ನಿಜವಾಗಿ ಮನಸ್ಸಿನೊಳಗೇ ನಡೆಯುತ್ತಿರುವ ಒಂದು 'ಮೌನ ಸಂಭಾಷಣೆ'. ಮತ್ತು, ಅದು ನಡೆಯುತ್ತಿರುವುದು ನಮ್ಮೊಳಗೇ ಅಡಗಿರುವ ಹಲವು 'ನಾನು'ಗಳ ನಡುವೆ. ಈ ವಿವರಣೆಯನ್ನು ಗಾಂಧಿಯವರಿಗೆ ಅನ್ವಯಿಸಿದರೆ, ಆಗ ಗಾಂಧಿ, ಮೇಲ್ಕಂಡ ಉಲ್ಲೇಖದಲ್ಲಿ ಮನೋಸಂಘರ್ಷವೆಂದು ಸೂಚಿಸಿದ್ದು ಅವರ ಹಲವು 'ಸ್ವ'ಗಳ ನಡುವೆ ನಡೆಯುತ್ತಿದ್ದ ಒಂದು ವಾಗ್ಯುದ್ಧವನ್ನು ಕುರಿತು; ಮತ್ತು ಇಂಥ ಬಹುಧ್ವನಿಗಳ ಗದ್ದಲದಿಂದಾಗಿ ಅವರ ಮನಸ್ಸು ಕ್ಷೋಭೆಗೊಂಡಿತ್ತು. ಆದರೆ, ಈ ನಡುವೆ ಇನ್ನೊಂದು ದನಿ – ಅದನ್ನೇ ಅವರು 'ಅಂತರ್ಯಾಮಿ' ಎಂದು ಕರೆದಿರುವುದು – ಎಲ್ಲಕ್ಕಿಂತ ಸ್ಪಷ್ಟವಾಗಿ ಕೇಳಿಸಿ, ಅವರ ಮನಸ್ಸಿನೊಳಗೆ ನಡೆಯುತ್ತಿದ್ದ ತಾಕಲಾಟಕ್ಕೆ ಪರಿಹಾರವನ್ನು ತಂದುಕೊಟ್ಟಿತು.

ಹಾಗಿದ್ದರೆ, ಈ ಅಂತರ್ಯಾಮಿ ಯಾವುದು? ಇದು ಗಾಂಧಿಯವರಿಗೆ ಮೊದಲು ಕೇಳಿಸಿದ ಹಲವು ಧ್ವನಿಗಳಲ್ಲೇ ಒಂದೋ? ಅಥವಾ ಇವೆಲ್ಲಕ್ಕೂ ಮೇಲೆ ನಿಂತ ಇನ್ನೊಂದು ಹೊಸ ಧ್ವನಿಯೋ? ಅಥವಾ ಹಲವು ಧ್ವನಿಗಳ ನಡುವೆ ಸಂವಾದ ನಡೆಸುತ್ತ ಆಕಾರವನ್ನು ಪಡೆದ ವಿಶಿಷ್ಟ ಧ್ವನಿವಿಶೇಷವೋ? – ಮೊದಲಾಗಿ ಕಾವ್ಯಮೀಮಾಂಸೆಯಲ್ಲೂ ದಾರ್ಶನಿಕ ವಲಯಗಳಲ್ಲೂ ಪರಿಚಿತವಾದ ಹಲವು ಪ್ರಶ್ನೆಗಳು ನಮ್ಮೊಳಗೆ ಏಳುತ್ತವೆ. ನನ್ನ ಪ್ರಕಾರ, ಗಾಂಧಿ ಬಳಸಿದ ಗುಜರಾತಿ ಭಾಷೆಯ ಅಂತರ್ಯಾಮಿ ಎಂಬ ಪದವೇ ಅದನ್ನು ನಾನು ಮೇಲೆ ಸೂಚಿಸಿದ ಮೂರನೆಯ ಸಾಧ್ಯತೆಯ ಕಡೆಗೆ ಬೆರಳು ತೋರಿಸುವಂತಿದೆ; ಮತ್ತು, ಈ ದೃಷ್ಟಿಯಿಂದ ಇಂಗ್ಲಿಷ್ ಅನುವಾದದಲ್ಲಿ ಬಳಕೆಯಾದ 'ಸ್ಪಿರಿಟ್' ಎಂಬ ಪದವಾಗಲೀ ಅಥವಾ ಕನ್ನಡಾನುವಾದದಲ್ಲಿ ಕಾಣುವ 'ಅಂತರಾತ್ಮ'ವಾಗಲಿ ಇದಕ್ಕೆ ನಿಖರ ಪರ್ಯಾಯವಲ್ಲ; ಒಳಚಲನೆ ಅಥವಾ ಒಳಸಂವಾದದ ನಿಯಂತ್ರಕ – ಎಂಬ ಅರ್ಥಗಳನ್ನು ಸೂಚಿಸುವ ಅಂತರ್ಯಾಮಿ ಎಂಬ ಪದವೇ ಇದಕ್ಕೆ ಸೂಕ್ತವಾದ ಆಯ್ಕೆ.

ಇಷ್ಟು ಯೋಚಿಸುತ್ತಿದ್ದಂತೆ, ಇನ್ನೂ ಕಷ್ಟದ ಪ್ರಶ್ನೆಯೊಂದು ನಮ್ಮೆದುರಿಗೆ ಎದ್ದು ನಿಲ್ಲುತ್ತದೆ – ಗಾಂಧಿಗೆ ಕೇಳಿದ ಹಲವು ಧ್ವನಿಗಳಲ್ಲಿ ನಿರ್ದಿಷ್ಟವಾದ ಒಂದು ಧ್ವನಿಯನ್ನೇ ಅವರು ಅಂತರ್ಯಾಮಿಯ ಧ್ವನಿಯೆಂದು ಗುರುತಿಸಿದ್ದು ಹೇಗೆ? ಅಥವಾ ಇದನ್ನು ನಮ್ಮಂಥ ಸಾಧಾರಣ ಮನುಷ್ಯರಿಗೆ ಅನ್ವಯಿಸಿ ಕೇಳಿಕೊಳ್ಳುವುದಾದರೆ, ನಮ್ಮ ಹಲವು ಆಲೋಚನೆಗಳಲ್ಲಿ ನಮ್ಮ ಕ್ರಿಯೆಗೆ ಕಾರಣವಾಗಬಹುದಾದ (ಅಥವಾ ಕಡೆಯ ಪಕ್ಷ ನಮ್ಮ ಒಳತೋಟಿಗಳನ್ನು ನಿಯಂತ್ರಿಸಿ ಸಮಾಧಾನಕ್ಕಾದರೂ ಒಯ್ಯಬಹುದಾದ) ಆಲೋಚನೆಯನ್ನು ಪ್ರತ್ಯೇಕಿಸಿ ಗುರುತಿಸುವುದು ಹೇಗೆ? – ಈ ಪ್ರಶ್ನೆಗೆ ಗಾಂಧಿಯವರು ಕೊಡುವ ಉತ್ತರವೇ ಅವರನ್ನು ಅಪರೂಪದ ವ್ಯಕ್ತಿಯಾಗಿ ಮಾಡಿದೆಯೇ ಹೊರತು, ಅವರ ಯಾವುದೇ ಒಂದು ಉಪದೇಶವೂ ಅಲ್ಲ ಎಂಬುದು ನನ್ನ ನಂಬಿಕೆ.

ಈ ಉತ್ತರವನ್ನು ತ್ರಿದೀಪ್ ಸುಹೃದ್ ಅವರ ಪ್ರಸ್ತಾವನೆ ತುಂಬ ನಿಖರವಾಗಿ ಗುರುತಿಸಿ ಹೇಳಿದೆ – ಅಂತರ್ಯಾಮಿಯ ಇಂಥ ಗುರುತಿಸುವಿಕೆ ಸಾಧ್ಯವಾಗುವುದು, ಗಾಂಧಿಯ ಪ್ರಕಾರ, ಕೇವಲ ಯೋಚನೆಯ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದರಿಂದ ಅಲ್ಲ; ಬದಲು, ಬ್ರಹ್ಮಚರ್ಯ, ಅಸ್ತೇಯ, ಅಪರಿಗ್ರಹ, ಅಸ್ವಾದ – ಇತ್ಯಾದಿ ಬಾಹ್ಯ ಶಿಸ್ತುಗಳನ್ನು ನಿರಂತರವಾಗಿ ರೂಢಿಸಿಕೊಳ್ಳುವ ಮೂಲಕ ಮಾತ್ರ. ಅವರದೇ ರೂಪಕದಲ್ಲಿ ಹೇಳುವುದಾದರೆ – 'ಆಗ ಮಾತ್ರವೇ ಇದು ನಮ್ಮೊಳಗಿಂದ ಬರುತ್ತಿರುವ ರಾಮನ ಧ್ವನಿಯೋ ರಾವಣನ ಧ್ವನಿಯೋ ಎಂದು ಗುರುತಿಸುವುದು ಸಾಧ್ಯ'. ಇಂಥ ಧ್ವನಿಯನ್ನೇ ಅವರು ಸತ್ಯದ ಧ್ವನಿ ಎಂದು ಕರೆದುಕೊಂಡಿದ್ದಾರೆ. ಆದ್ದರಿಂದ – ಸತ್ಯ ಬೇರೆಯಲ್ಲ, ದೇವರು ಬೇರೆಯಲ್ಲ – ಎಂಬ ಗಾಂಧಿಯ ಪ್ರಸಿದ್ಧ ಉಕ್ತಿಯು ಒಂದು ಅನುಭವಗಮ್ಯ ನುಡಿಯೇ ಹೊರತು ಉಪದೇಶವಲ್ಲ; ಸತ್ಯದೊಂದಿಗೆ ನಡೆಸಿದ ಪ್ರಯೋಗ ಎಂದು ಅವರು ಕರೆಯುವುದು ಈ ಅಂತರ್ಯಾಮಿಯ ಸಾಕ್ಷಾತ್ಕಾರದ ಪ್ರಯೋಗವನ್ನೆ ಹೊರತು ಬೇರಾವುದನ್ನೂ ಅಲ್ಲ. ಸ್ವರಾಜ್ಯಸಾಧನೆಯಂಥ ಬೇರೆ ಉದ್ದಿಶ್ಯಗಳು ಈ ಪ್ರಯೋಗದ ಆನುಷಂಗಿಕ ಉತ್ಪನ್ನಗಳೆ ಹೊರತು ಅವೇ ಈ ಪ್ರಯೋಗದ ಆತ್ಯಂತಿಕ ಗುರಿಯಲ್ಲ.

ಗಾಂಧಿಯ ಈ ಚಿಂತನವಿಧಾನವು ಸತ್ಯ ಎಂಬ ಪದಕ್ಕಿರುವ ಅರ್ಥವನ್ನೇ ಹೊಸ ಬಗೆಯಲ್ಲಿ ಅರ್ಥೈಸುತ್ತದೆ. ಉದಾಹರಣೆಗೆ, ಸತ್ಯ ಎಂದರೇನು ಎಂಬ ಕೇಳಲಿಕ್ಕೆ ಸಲೀಸಾದ ಆದರೆ ಉತ್ತರಿಸಲಿಕ್ಕೆ ಅಸಾಧ್ಯವಾದ ಪ್ರಶ್ನೆಯನ್ನು ತುಂಬ ತಾರ್ಕಿಕವಾಗಿ ಜಾಲಾಡಿದ ಹಲವು ಧೀಮಂತರು ಕಡೆಗೂ ಸತ್ಯವೆಂದರೆ 'ಮಾತಿಗೂ ಮತ್ತು ವಾಸ್ತವಕ್ಕೂ ನಡುವೆ ಇರುವ ಐಕ್ಯ' ಮಾತ್ರವೇ ಎಂದಿದ್ದಾರೆ. ಸರಳವಾದ ಉದಾಹರಣೆಯಲ್ಲಿ ಇದನ್ನು ವಿವರಿಸುವುದಾದರೆ, ಅವರ ಪ್ರಕಾರ – 'ಗುಲಾಬಿ ಹೂವು ಕೆಂಪಗಿದೆ' ಎಂಬ ಮಾತು ಯಾವಾಗ ಸತ್ಯವೆಂದರೆ, ಆ ಉಲ್ಲೇಖದ ಚಿಹ್ನೆಯನ್ನು ತೆಗೆದಾಗಲೂ (ಅಂದರೆ ವಾಸ್ತವದಲ್ಲಿ) ಗುಲಾಬಿಯು ಕೆಂಪಗಿದ್ದರೆ ಮಾತ್ರ. ಆದರೆ, ಗಾಂಧಿ ಈ ತಾಳೆಹಾಕುವ ಕ್ರಮವನ್ನು ಅನುಸರಿಸುತ್ತಲೇ ಅದರಲ್ಲೊಂದು ಮಹತ್ವದ ಬದಲಾವಣೆಯನ್ನು ಮಾಡಿದ್ದಾರೆ. ಒಳಗೆ ಹುಟ್ಟುವ ಮಾತು (ಮತ್ತು ಅದರ ಫಲವಾದ ಕ್ರಿಯೆಗಳು) ಹೊರಗೆ ಇರುವ ವಾಸ್ತವಕ್ಕೆ ತಾಳೆಯಾದರೆ ಸತ್ಯ ಎಂಬ ದೃಷ್ಟಿಯನ್ನು ಅವರು ತುಸುವೇ ಬದಲಾಯಿಸಿ, ತಾಳೆ ನೋಡಬೇಕಾಗಿರುವ ವಸ್ತುವನ್ನು ಹೊರಲೋಕದಿಂದ ಒಳಲೋಕಕ್ಕೆ ಪಲ್ಲಟಗೊಳಿಸಿದ್ದಾರೆ. ಮತ್ತು, ಆ ಮೂಲಕ, 'ನಾನು ಎಲ್ಲರೊಳಗೂ ಇದ್ದೇನೆ ಮತ್ತು ಎಲ್ಲರೂ ನನ್ನೊಳಗಿದ್ದಾರೆ' – ಎಂಬ ಗೀತಾವಾಕ್ಯಕ್ಕೆ ಗಾಂಧಿ ಹೊಸ ವ್ಯಾಖ್ಯಾನವನ್ನೇ ಮಾಡಿ, ಅದನ್ನು ಸಮಕಾಲೀನಗೊಳಿಸಿದ್ದಾರೆ. ಮಾತ್ರವಲ್ಲ, ಹೀಗೆ ಒಳಹೊರಗನ್ನು ಒಂದು ಮಾಡುವ ಮೂಲಕ ಅವರು ಸ್ವತಃ ಚಿಂತಕರೋ ಅಥವಾ ಕ್ರಿಯಾವಂತರೋ, ಸೈದ್ಧಾಂತಿಕರೋ ಯಾ ಪ್ರಾಯೋಗಿಕರೋ, ರಾಜಕೀಯ ಕಾರ್ಯಕರ್ತರೋ ಅಥವಾ ಅಧ್ಯಾತ್ಮ ಸಾಧಕರೋ, ಲೌಕಿಕರೋ ಅಥವಾ ಪಾರಮಾರ್ಥಿಕರೋ – ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೇ ಸಾಧ್ಯವಾಗದಿರುವ ಹಾಗೆಯೂ ಮಾಡಿದ್ದಾರೆ. ಆದ್ದರಿಂದ ಸಹಜವಾಗಿಯೇ, ದ್ವಿದಳ ಚಿಂತನೆಗಳಲ್ಲಿ ಮಾತ್ರವೇ ಲೋಕವನ್ನು ಗ್ರಹಿಸಲು ರೂಢಿ ಮಾಡಿಕೊಂಡಿರುವ ಆಧುನಿಕ ಮನಸ್ಸುಗಳಿಗೆ ಗಾಂಧಿ ಅರ್ಥಕ್ಕಿಂತ ಹೆಚ್ಚು ಅಪಾರ್ಥಗಳನ್ನೂ ಸೃಷ್ಟಿಸಿಕೊಳ್ಳಲು ಕಾರಣರಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಇವತ್ತಿನ ಕಾಲದ ನನ್ನಂಥ ಒಬ್ಬ ಮನುಷ್ಯನಿಗೆ ಗಾಂಧಿ ಆತ್ಯಂತಿಕವಾಗಿ ಉಪಯುಕ್ತವಾಗುವುದು ಈ ಕಾರಣಕ್ಕೆ ಎಂಬ ನಂಬಿಕೆಯಿಂದ ಈ ಅಂತರ್ಯಾಮಿಯ ಆವಿಷ್ಕಾರದ ಕಥನವನ್ನು ನಾನಿಲ್ಲಿ ಕಟ್ಟಿದ್ದೇನೆ. ಇವತ್ತು ನಾವಿರುವ ಮಾರುಕಟ್ಟೆಯ ಕಾಲದಲ್ಲಿ 'ನಮ್ಮ ಮನಸ್ಸು' ಎಂದು ನಾವು ತಿಳಿದುಕೊಂಡಿರುವ ಸಂಗತಿಯು ನಿಜವಾಗಿ ಬಹುಪಾಲು ನಮ್ಮದಲ್ಲ; ಅದು ಜಾಹೀರಾತು ಮತ್ತು ಐಡಿಯಾಲಜಿ ಮೊದಲಾದವುಗಳಿಂದ ರೂಪಿತವಾದದ್ದು. ಮತ್ತು, ನಮ್ಮದೆಂಬ ಮನಸ್ಸು ಅಷ್ಟಿಷ್ಟು ಇರುವಾಗಲೂ ಅದನ್ನು ನಮ್ಮದಲ್ಲದ ಮನಸ್ಸಿನಿಂದ ಬೇರ್ಪಡಿಸುವ ಕೌಶಲವಾಗಲೀ, ಅಂಥ ಕೌಶಲಕ್ಕೆ ಅಗತ್ಯವಾಗುವ ಶಿಸ್ತಾಗಲೀ ನಮಗೆ ಇಲ್ಲದಿರುವುದರಿಂದ, ಗಾಂಧಿಯೂ ಸೇರಿದಂತೆ ಎಲ್ಲ ಮಹಾನುಭಾವರೂ ನಮಗೆ ಸಂದೇಶವಾಹಕರು; ಉಪದೇಶಕರು. ನಮ್ಮ ಮಾರುಕಟ್ಟೆ ಯುಗಧರ್ಮಕ್ಕೆ ತಕ್ಕಂತೆ ನಾವು ಅಂಥ ಮಹಾನುಭಾವರು ಮಾಡಿರುವ ಉಪದೇಶಗಳನ್ನೋ ಅಥವಾ ಸಿದ್ಧಾಂತಗಳನ್ನೋ ಬಳಸಲು ಒದ್ದಾಡುವ ಉಪಭೋಗಜೀವಿಗಳು. ಹಾಗಾಗಿ ಸಿದ್ಧ ಆಲೋಚನೆಗಳ ಬಳಕೆಯನ್ನು ಮಾತ್ರ ನಾವು ಮಾಡಬಲ್ಲೆವಾಗಿ ಸ್ವತಃ ಆಲೋಚಿಸುವುದನ್ನು ಮರೆತಿರುವ ವಿಚಿತ್ರ ವಿಪರ್ಯಾಸವೊಂದು ಇವತ್ತು ಉದ್ಭವವಾಗಿದೆಯೆಂದು ನನ್ನ ತಿಳುವಳಿಕೆ.

ಇಂಥ ಕಿಂಚಿತ್ ತಿಳುವಳಿಕೆಯನ್ನು ಉದ್ದೀಪಿಸಲು ಸಹಾಯಕವಾದ ಗಾಂಧಿ ಆತ್ಮಕಥೆಯ ಹೊಸ ಆವೃತ್ತಿಗೂ ಮತ್ತು ಇದನ್ನು ಹಾಗೆ ಉಪಯುಕ್ತವಾಗುವಂತೆ ಸಂಪಾದಿಸಿ ವಿವರಿಸಿರುವ ತ್ರಿದೀಪ್ ಸುಹೃದ್ ಅವರಿಗೂ ನಾನು ಋಣಿಯಾಗಿದ್ದೇನೆ.



(ಹೆಗ್ಗೋಡಿನ 'ನೀನಾಸಂ'ನ ಮುಖ್ಯಸ್ಥರಾದ ಕೆ.ವಿ. ಅಕ್ಷರ ಕನ್ನಡದ ಪ್ರಮುಖ ಸಾಹಿತ್ಯ–ಸಂಸ್ಕೃತಿ ಚಿಂತಕರೂ ಹೌದು)

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ಧರ್ಮ ಅಂದರೆ ಅದು ತತ್ವಗಳಿಗೆ ಸಂಬಂಧಿಸಿದ ವಿಷಯವಾಗಿರಬೇಕೇ ಹೊರತು ನಿಯಮಗಳಿಗೆ ಸಂಬಂಧಿಸಿದ ವಿಷಯವಾಗಿರಬಾರದು. ಅದು ಒಮ್ಮೆ ನಿಯಮಗಳಿಗೆ ಸಂಬಂಧಿಸಿದ ವಿಷಯವಾಗಿ ಅವನತಿ ಹೊಂದಿತೆಂದರೆ, ಅದು ಯಾವುದೇ ಧರ್ಮದ ಪ್ರಾಣಕ್ಕೆ ಸಮನಾದ ಜವಾಬ್ದಾರಿಯನ್ನು ಕೊಲ್ಲುತ್ತದೆ ಆಗ ಅದು ಧರ್ಮವಾಗಿ ಉಳಿಯುವುದಿಲ್ಲ.

–ಡಾ. ಬಿ.ಆರ್. ಅಂಬೇಡ್ಕರ್



–ಎನ್.ಆರ್. ಬಾಲಸುಬ್ರಹ್ಮಣ್ಯ,
ಶ್ರೀಮತಿ ಮೀನಾ
ಕು. ಶ್ರೇಯ
ಕು. ಶ್ರಾವ್ಯ
ಬೆಂಗಳೂರು

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ವಿಸ್ತರಣವೇ ಜೀವನ. ಸಂಕುಚಿತತೆಯೇ ಮರಣ.
ಪ್ರೀತಿಯೇ ವಿಸ್ತರಣ. ಎಲ್ಲ ಸ್ವಾರ್ಥವೂ ಸಂಕುಚಿತವೇ.

-ಸ್ವಾಮಿ ವಿವೇಕಾನಂದ



ಬಿ. ಸುರೇಶ

ಬೆಂಗಳೂರು

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ಮನದಲ್ಲಿ ಕಫ ತುಂಬಿಕೊಂಡು ಬಾಯಿ ಮುಕ್ಕಳಿಸುವರು!
ಸತ್ಯದ ಮೇಲೆ ಮನ ಇಡಿ. ಸತ್ಯದ ಸಾಕ್ಷಾತ್ಕಾರವಾದರೆ ಎಲ್ಲ ಅಂಗಗಳೂ ಸ್ವಚ್ಛವಾಗುವವು

-ಗುರು ನಾನಕ್



ಜಾಕೀರ್‌ಹುಸೇನ್ ಶಿಬಾರಗಟ್ಟಿ

ಗುತ್ತಿಗೆದಾರರು

ಶ್ರೀರಾಮನಗರ, , ಅತ್ತಿಕೊಳ್ಳ

ಧಾರವಾಡ

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

"ಹರ್ಷ ಮತ್ತು ನೆಮ್ಮದಿಯನ್ನು ಪಡೆಯಲು ಪ್ರಯತ್ನಗಳನ್ನು ನಡೆಸಿಯೇ ಮನುಷ್ಯರು ಅವುಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬುದರಲ್ಲಿಯೇ ನೈಸರ್ಗಿಕ ಕೃಷಿಯ ತಿರುಳು ಅಡಗಿದೆ. ಕೃಷಿಯ ಅಂತಿಮ ಗುರಿ, ಬರಿ ಹೊಲ ಗದ್ದೆಗಳಲ್ಲಿ ಬೆಳೆ ಬೆಳೆಯುವುದಲ್ಲ, ಮಾನವತೆಯ ಬೆಳೆ ತೆಗೆಯುವುದೇ ಆಗಿದೆ ಮತ್ತು ಅದನ್ನು ಉತ್ತಮಪಡಿಸುತ್ತಾ ಹೋಗುವುದೇ ಆಗಿದೆ"

-ಫುಕುವೋಕಾ



ಮೈನುದ್ದೀನ್ ನದಾಫ್

ಮಾಲೀಕರು : ಟೀಂ ವರ್ಕ್ ಪೇಂಟಿಂಗ್ಸ್ ಸಲ್ಯೂಷನ್ಸ್

ಸಾರಸ್ವತಪುರ, ಕಲಘಟಗಿ ರಸ್ತೆ,

ಧಾರವಾಡ

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ಕಥನ ಬಿಟ್ಟು ಕಾಯಕದೆಡೆ ಗಮನ ಕೊಡು

ನೀರು ಕುಡಿಯದೆ ನೀರಡಿಕೆ ಹಿಂಗದು.

–ಕಬೀರ

ಹೆಚ್. ಎಂ. ಶಿವಾನಂದ

ಮತ್ತು ಕುಟುಂಬ

ಹಂಸಗಾರು

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ರಾಜಕೀಯ ಉನ್ನತಿಗೆ ಮನಸ್ಸಿನ ಮತ್ತು ಆತ್ಮದ ಉನ್ನತಿ ಪ್ರಾಥಮಿಕ ಅವಶ್ಯಕತೆಗಳಾಗಿವೆ.

-ಡಾ. ಬಿ.ಆರ್. ಅಂಬೇಡ್ಕರ್

ಕೆ.ಪಿ. ಶ್ರೀಪಾಲ್

ವಕೀಲರು

ಶಿವಮೊಗ್ಗ

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ತನ್ನ ಸ್ಥಿತಿ ತಾನರಿದಡೆ ಅದೇ ಪ್ರಳಯ

—ಅಲ್ಲಮ ಪ್ರಭು

ತಾರಿಣಿ ಶುಭದಾಯಿನಿ

ಮತ್ತು ಕುಟುಂಬ,

ಚಿತ್ರದುರ್ಗ

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ನಿಜವಾಗಿಯೂ ಕಷ್ಟದಿಂದ ಲಾಭವೇ ಇದೆ.

—ಕುರಾನ್

ವೆಂ. ವನಜ

ಮತ್ತು ಕಾಳಚನ್ನೇಗೌಡ

ಮೈಸೂರು

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ತನ್ನ ಕುರಿಮಂದೆಗಾಗಿ ಜೀವವನ್ನೇ ಕೊಡಬಲ್ಲವನೇ

ನಿಜವಾದ ಕುರುಬಣ್ಣ.

–ಬೈಬಲ್

ಜಿ.ಎಸ್. ಜಯದೇವ

ದೀನಬಂಧು ಟ್ರಸ್ಟ್

ಚಾಮರಾಜನಗರ

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ಮನುಷ್ಯನ ಒಂದು ತುದಿ ದೇವರು; ದೇವರ ಒಂದು ತುದಿ ಮನುಷ್ಯ. ದೇವರು ಮತ್ತು ಮನುಷ್ಯರು ಇರುವುದು ಒಂದೇ ಸ್ಥಳದಲ್ಲಿ. ಅವರಿಬ್ಬರಿಗೂ ಇರುವುದು ಸಮಾನ ಸಂಕೇತ

– ಸೂಫಿ ಸಂತ ಅಮೀನ್–ಅಲ್–ದಿನಲಾ

ಅವಿರತ ಪ್ರತಿಷ್ಠಾನ

#೭೩., ೩ನೇ ಘಟ್ಟ.

೨ ನೇ ಮುಖ್ಯ ರಸ್ತೆ. ವಿನಾಯಕ ನಗರ

ವಿಜಯನಗರ. ಬೆಂಗಳೂರು – ೫೬೦ ೦೪೦

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ಒಂದು ಅಲೆಯ ಹಿಂದೆ ಒಂದು ಸಮುದ್ರವೇ ಇರುತ್ತದೆ.

– –ಸ್ವಾಮಿ ವಿವೇಕಾನಂದ

ಸಚಿನ್ ಪೈ

ವ್ಯಾಪಾರಿಗಳು, ಹನುಮಂತನಗರ

ಅತ್ತಿಕೊಳ್ಳ, ಧಾರವಾಡ

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ನೀವು ನಿಮ್ಮ ಶತ್ರುಗಳನ್ನು ಪ್ರೀತಿಸಿ. ನಿಮಗೆ ಹಿಂಸೆ ಕೊಟ್ಟವರಿಗೆ ಒಳಿತಾಗಲೆಂದು ಪ್ರಾರ್ಥಿಸಿ. ಹೀಗೆ ಮಾಡಿದಾಗಲೇ ನೀವು ತಂದೆಗೆ ತಕ್ಕ ಮಕ್ಕಳೆನಿಸುವಿರಿ. ಏಕೆಂದರೆ ಆತನು ಒಳ್ಳೆಯವರ ಮೇಲೂ, ಕೆಟ್ಟವರ ಮೇಲೂ ಸೂರ್ಯಪ್ರಕಾಶ ಚೆಲ್ಲುತ್ತಾನೆ. ನೀತಿವಂತರ ಮೇಲೂ, ಅನೀತಿವಂತರ ಮೇಲೂ ಮಳೆ ಸುರಿಸುತ್ತಾನೆ.

–ಬೈಬಲ್

ರವಿ ಸಸಿ ತೋಟ


ಮತ್ತು ಕುಟುಂಬ

ಶಿವಮೊಗ್ಗ

ಹೊಸ ಮನುಷ್ಯ ಓದುಗರೆಲ್ಲರಿಗೂ


ಹಾರ್ದಿಕ ಶುಭಾಶಯಗಳು

ಕೊನೆಯ ಸಾಲುಗಳು...



ಇರುವೆಯ ಕಾಲ ಸಪ್ಪಳವನ್ನೂ ಕೇಳಬಲ್ಲ
ಭಗವಂತನಿಗೆ ಗದ್ದಲವನ್ನು ಮಾಡಿಕೊಂಡೇಕೆ
ಪ್ರಾರ್ಥನೆ ಸಲ್ಲಿಸಬೇಕು?

– ಸಂತ ಕಬೀರ


Way to your Destiny...

Regd. Newspaper RNI No.KARKAN/2012/47568 Rgd. No. KA/SMG-1209/2016-18

"ಹೊಸ ಮನುಷ್ಯ" ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು